ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ವಿದೇಶ ವಿದ್ಯಮಾನ
ಉಕ್ರೇನ್‌ಗಿಲ್ಲ ಅಮೆರಿಕ ಅಭಯ

ಬಿಹಾರದಲ್ಲಿ ಗಂಗಾ ನೀರು ಸ್ನಾನಕ್ಕೆ ಯೋಗ್ಯವಲ್ಲ: ವರದಿ 11

‘ನಟ್ಟು–ಬೋಲ್ಟ್ ಟೈಟ್’ ಮಾತು: ವಿವಾದ 7

ಒಳಬೇಗುದಿ ನಡುವೆ ಸದನಕ್ಕೆ ಸಜ್ಜು

ಇಂದಿನಿಂದ ಬಜೆಟ್ ಅಧಿವೇಶನ • ಪರಸ್ಪರ ಕಟ್ಟಿಹಾಕಲು ಆಡಳಿತ– ಪ್ರತಿಪಕ್ಷ ಬಿರುಸಿನ ತಾಲೀಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರದ ಗದ್ದುಗೆಗಾಗಿ ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳೆರಡರಲ್ಲೂ ಆಂತರಿಕ ಬೇಗುದಿ ಬಲಗೊಳ್ಳುತ್ತಿರುವುದರ ಮಧ್ಯೆಯೇ ವಿಧಾನಮಂಡಲದ ಪ್ರಸಕ್ತ ವರ್ಷದ ಮೊದಲ ಅಧಿವೇಶನ ಸೋಮವಾರ ಆರಂಭವಾಗಲಿದೆ. ಆಂತರಿಕ ಸಂಘರ್ಷವನ್ನೇ ಪ್ರಬಲ ಅಸ್ತ್ರವನ್ನಾಗಿಸಿ ಎದುರಾಳಿಗಳನ್ನು ಸದನದಲ್ಲಿ ಕಟ್ಟಿಹಾಕುವ ಉಮೇದಿನಲ್ಲಿ ಆಡಳಿತ-ವಿರೋಧಪಕ್ಷಗಳ ನಾಯಕರು ಇದ್ದಾರೆ.

ವಿಧಾನಮಂಡಲದ ಬೆಳಗಾವಿ ಅಧಿವೇಶನದ ಬಳಿಕ ರಾಜ್ಯ ರಾಜಕಾರಣದಲ್ಲಿನ ಪರಿಸ್ಥಿತಿ ತುಸು ಬದಲಾಗಿದೆ. ದರ ಏರಿಕೆ, ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ವಿಳಂಬ, ಕಾನೂನು ಸುವ್ಯವಸ್ಥೆ ರಕ್ಷಣೆಯಲ್ಲಿ ವೈಫಲ್ಯ, ಭ್ರಷ್ಟಾಚಾರದ ಆರೋಪಗಳು, ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿ ವಿಷಯಗಳನ್ನು ಪ್ರಸ್ತಾಪಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಸಿದ್ಧತೆ ನಡೆಸಿವೆ.

ಬಿಜೆಪಿ ಮತ್ತು ಜೆಡಿಎಸ್‌ನ ಪ್ರಮುಖ ನಾಯಕರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಜಂಟಿ ಹೋರಾಟದ ಕಾರ್ಯತಂತ್ರ ರೂಪಿಸುವ ತಾಲೀಮು ನಡೆದಿದೆ. ಮೈಸೂರಿನ ಉದಯಗಿರಿಯಲ್ಲಿ ಪೊಲೀಸ್ ಠಾಣೆ ಮೇಲಿನ ಕಲ್ಲು ತೂರಾಟದ ಪ್ರಕರಣವನ್ನು ಸದನದಲ್ಲಿ ಪ್ರಸ್ತಾಪಿಸಿ ಆಡಳಿತಾರೂಢ ಕಾಂಗ್ರೆಸ್ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವ ನಿರ್ಧಾರಕ್ಕೆ ವಿರೋಧ ಪಕ್ಷಗಳು ಬಂದಿವೆ.

ಮೈಕ್ರೊ ಫೈನಾನ್ಸ್ ಕಂಪನಿಗಳು ಸಾಲ ವಸೂಲಿಗಾಗಿ ನಡೆಸಿದ ದೌರ್ಜನ್ಯಕ್ಕೆ ಬೇಸತ್ತು ರಾಜ್ಯದ ವಿವಿಧೆಡೆ ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಿಂದ ಎಚ್ಚೆತ್ತ ರಾಜ್ಯ ಸರ್ಕಾರ ಮೈಕ್ರೊ ಫೈನಾನ್ಸ್ ಕಂಪನಿಗಳು ಮತ್ತು ಅನಧಿಕೃತ ಲೇವಾದೇವಿದಾರರ ನಿಯಂತ್ರಣಕ್ಕೆ ಸುಗ್ರೀವಾಜ್ಞೆ ಹೊರಡಿಸಿದೆ. ಆದರೂ ದೌರ್ಜನ್ಯದ ಪ್ರಕರಣಗಳು ಅಲ್ಲಲ್ಲಿ ವರದಿಯಾಗುತ್ತಲೇ ಇವೆ. ಈ ವಿಷಯವನ್ನೇ ಪ್ರಧಾನವಾಗಿ ವಿಧಾನಮಂಡಲದಲ್ಲಿ ಪ್ರಸ್ತಾಪಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಯೋಜನೆ ವಿರೋಧ ಪಕ್ಷಗಳಲ್ಲಿದೆ.

‘ನಮ್ಮ ಮೆಟ್ರೊ’ ಪ್ರಯಾಣ ದರ ಏರಿಕೆ, ರಾಜ್ಯ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ಏರಿಕೆ ಬೆನ್ನಲ್ಲೇ ವಿದ್ಯುತ್, ನೀರಿನ ದರ ಏರಿಕೆಗೂ ಪ್ರಸ್ತಾವಗಳು ಸಲ್ಲಿಕೆಯಾಗಿವೆ.

11ನೇ ಪುಟ ನೋಡಿ



ವಿಧಾನ ಮಂಡಲದಲ್ಲಿ

- ಮಾರ್ಚ್ 3ರಿಂದ 21ರವರೆಗೆ ಅಧಿವೇಶನ
- ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ವಿರೋಧ ಪಕ್ಷಗಳ ತಂತ್ರಗಾರಿಕೆ
- ಪ್ರತಿಪಕ್ಷಗಳ ವಿರುದ್ಧ ಒಗ್ಗಟ್ಟು ಪ್ರದರ್ಶನಕ್ಕೆ ‘ಕೈ’ ಪಾಳಯದ ಪ್ರತಿತಂತ್ರ

ರಾಜ್ಯಪಾಲರ ಭಾಷಣ ಇಂದು

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ವಿಧಾನ ಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಸೋಮವಾರ ಬೆಳಿಗ್ಗೆ 11ರಿಂದ ಭಾಷಣ ಮಾಡಲಿದ್ದಾರೆ. ವಿಧಾನಸಭೆಯ ಸಭಾಂಗಣದಲ್ಲಿ ಜಂಟಿ ಅಧಿವೇಶನ ನಡೆಯಲಿದೆ.

ಮಾರ್ಚ್ 7ಕ್ಕೆ ಬಜೆಟ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2025–26ನೇ ಸಾಲಿನ ರಾಜ್ಯ ಬಜೆಟ್ ಅನ್ನು ಮಾರ್ಚ್ 7ರಂದು ಮಂಡಿಸಲಿದ್ದಾರೆ. ಇದು ಅವರು ಮಂಡಿಸುತ್ತಿರುವ 16ನೆಯ ಬಜೆಟ್.

ಮತ್ತೆ ಭ್ರಷ್ಟಾಚಾರ ಆರೋಪದ ಸದ್ದು

‘ಕಾಂಗ್ರೆಸ್ ನೇತೃತ್ವದ ಹಾಲಿ ಸರ್ಕಾರದಲ್ಲಿ ಅಧಿಕಾರಿಗಳು ಹಿಂದೆಂದಿಗಿಂತಲೂ ಹೆಚ್ಚು ಕಮಿಷನ್ ಪಡೆಯುತ್ತಿದ್ದಾರೆ’ ಎಂದು ಆರೋಪಿಸಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ಅವರು ಬರೆದಿರುವ ಪತ್ರವು ವಿಧಾನಮಂಡಲದಲ್ಲಿ ವಾಕ್ಸಮರಕ್ಕೆ ಎಡೆಮಾಡುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಗುತ್ತಿಗೆದಾರರ ಸಂಘ, ಭ್ರಷ್ಟಾಚಾರದ ಕುರಿತು ನೇರ ಆರೋಪ ಮಾಡಿದೆ. ಇದು ವಿರೋಧ ಪಕ್ಷಗಳಿಗೆ ಪ್ರಬಲ ಅಸ್ತ್ರವಾಗಿ ಪರಿಣಮಿಸಬಹುದು.

ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಲ್ಲಿ ವಿಳಂಬ, ಗುತ್ತಿಗೆದಾರರ ಬಿಲ್ ಪಾವತಿ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ವಿಧಾನಮಂಡಲದಲ್ಲಿ ಸರ್ಕಾರದ ವಿರುದ್ಧ ಅತೃಪ್ತಿ ಹೊರಹಾಕಲು ಕೆಲವು ಶಾಸಕರು ತಯಾರಿ ಮಾಡಿಕೊಂಡಿದ್ದಾರೆ.

ಸಿಎಲ್‌ಪಿ ಸಭೆ ನಾಳೆ


ಸಿದ್ದರಾಮಯ್ಯ

ವಿಧಾನಮಂಡಲ ಅಧಿವೇಶನದಲ್ಲಿ ಪ್ರಸ್ತಾಪ ಆಗಬಹುದಾದ ವಿಷಯಗಳು, ವಿರೋಧ ಪಕ್ಷಗಳ ಟೀಕೆ- ಆರೋಪಗಳಿಗೆ ಸಮರ್ಥವಾಗಿ ತಿರುಗೇಟು ನೀಡುವ ಕುರಿತಂತೆ ಚರ್ಚಿಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಮಂಗಳವಾರ (ಮಾರ್ಚ್ 4) ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸಂಜೆ 6 ಗಂಟೆಗೆ ನಗರದ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಸಭೆ ನಡೆಯಲಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಪರಿಷತ್ ಸಭಾ ನಾಯಕ ಎನ್.ಎಸ್. ಬೋಸರಾಜು, ಪಕ್ಷದ ಎಲ್ಲ ಕಾರ್ಯಾಧ್ಯಕ್ಷರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಲೋಕಸಭೆ, ರಾಜ್ಯ ಸಭೆ ಸದಸ್ಯರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

11ನೇ ಪುಟ ನೋಡಿ

ಸಿಬ್ಬಂದಿ ಎದುರೇ ಯುವಕರ ಕೃತ್ಯ • ‘ಮಹಾ’ ಸ್ಥಿತಿಗೆ ಕನ್ನಡಿ: ಕಾಂಗ್ರೆಸ್ ಟೀಕೆ

ಕೇಂದ್ರ ಸಚಿವೆಯ ಮಗಳಿಗೆ ಕಿರುಕುಳ

ಜಲಗಾಂವ್ (ಮಹಾರಾಷ್ಟ್ರ) (ಪಿಟಿಐ): ‘ಜಿಲ್ಲೆಯ ಕೋಥಲಿ ಗ್ರಾಮದಲ್ಲಿ ಸಂತ ಮುಕ್ತಾಯಿ ಯಾತ್ರೆಗೆ ತೆರಳಿದ್ದ ನನ್ನ ಪುತ್ರಿ ಮತ್ತು ಆಕೆಯ ಗೆಳತಿಯರಿಗೆ ಯುವಕರ ಗುಂಪೊಂದು ಶುಕ್ರವಾರ ರಾತ್ರಿ ಕಿರುಕುಳ ನೀಡಿದೆ’ ಎಂದು ಕೇಂದ್ರ ಸಚಿವೆ ರಕ್ಷಾ ಖಡಸೆ ಆರೋಪಿಸಿದ್ದು, ಪೊಲೀಸರಿಗೆ ದೂರು ನೀಡಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು, ‘ಆರೋಪಿಗಳು ರಾಜಕೀಯ ಪಕ್ಷವೊಂದಕ್ಕೆ ಸೇರಿದವರು. ಪ್ರಕರಣ ದಾಖಲಿಸಿದ್ದು, ಕೆಲವರನ್ನು ಬಂಧಿಸಲಾಗಿದೆ’ ಎಂದು ಹೇಳಿದ್ದಾರೆ.

‘ಘಟನೆ ಬಗ್ಗೆ ಸ್ಥಳೀಯ ಪೊಲೀಸ್ ಅಧಿಕಾರಿಗಳ ಜೊತೆಗೆ ಚರ್ಚಿಸಿದ್ದೇನೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ನಿಶ್ಚಿತ’ ಎಂದು ರಾಯಗಢದಲ್ಲಿ ಸುದ್ದಿಗಾರರಿಗೆ ಹೇಳಿದ್ದಾರೆ.

> **ಮಹಾಯುತಿ ಸರ್ಕಾರದ ಆಡಳಿತದಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ. ಮಹಿಳೆಯರು, ಹೆಣ್ಣುಮಕ್ಕಳಿಗೆ ರಕ್ಷಣೆ ಇಲ್ಲ ಎಂಬುದು ಕಳವಳಕಾರಿ ಸಂಗತಿ**
> **ಹರ್ಷವರ್ಧನ್ ಸಪ್ಕಾಲ್**
> ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ

> **ಪೊಲೀಸ್ ರಕ್ಷಣೆಯಲ್ಲಿ ಇದ್ದಾಗಲೇ ಕೇಂದ್ರ ಸಚಿವೆಯ ಮಗಳಿಗೆ ಕಿರುಕುಳ ನೀಡಿರುವುದು ರಾಜ್ಯದಲ್ಲಿನ ಈಗಿನ ಪರಿಸ್ಥಿತಿಗೆ ಹಿಡಿದ ಕನ್ನಡಿ**
> **ವಿಜಯ್ ವಡೆಟ್ಟೀವಾರ್**
> ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ

ಘಟನೆ ಕುರಿತು ಪ್ರತಿಕ್ರಿಯಿಸಿರುವ ಕೇಂದ್ರ ಸಚಿವೆ ರಕ್ಷಾ ಖಡಸೆ ಅವರು, ‘ಈ ಬೆಳವಣಿಗೆಯು ದುರದೃಷ್ಟಕರ. ಸಂಸದೆ ಹಾಗೂ ಕೇಂದ್ರ ಸಚಿವೆಯ ಪುತ್ರಿಗೇ ಇಂತಹ ಕೆಟ್ಟ ಅನುಭವ ಆಗುವುದಾದರೆ, ಸಾಮಾನ್ಯ ಜನರ ಪರಿಸ್ಥಿತಿ ಏನು’ ಎಂದು ಪ್ರಶ್ನಿಸಿದ್ದಾರೆ.

‘ನನ್ನ ಪುತ್ರಿ ಮತ್ತು ಅವಳ ಗೆಳತಿಯರು ಯಾತ್ರೆಗೆ ಹೋಗಿದ್ದರು. ಅವರ ಜೊತೆಗೆ ಮೂವರು ಸಿಬ್ಬಂದಿಯೂ ಇದ್ದರು. ಹಿಂಬಾಲಿಸಿದ ಗುಂಪು ಅವರನ್ನು ತಳ್ಳಿ, ಕಿರುಕುಳ ನೀಡಿದೆ. ಅದರ ಫೋಟೊ, ವಿಡಿಯೊ ತೆಗೆದುಕೊಂಡಿದೆ. ಆಕ್ಷೇಪಿಸಿದ ಸಿಬ್ಬಂದಿಯ ಜೊತೆಗೂ ಅನುಚಿತವಾಗಿ ವರ್ತಿಸಿದೆ’ ಎಂದು ವಿವರಿಸಿದ್ದಾರೆ

‘ಇದೇ ಗುಂಪು ಫೆಬ್ರುವರಿ 24ರಂದು ಸಾರ್ವಜನಿಕ ಕಾರ್ಯಕ್ರಮವೊಂದರಲ್ಲೂ ಅನುಚಿತವಾಗಿ ವರ್ತಿಸಿತ್ತು ಎಂದು ನನ್ನ ಪುತ್ರಿ ತಿಳಿಸಿದ್ದಾಳೆ. ತಮ್ಮ ಮಕ್ಕಳು ಶಾಲೆಗೆ ಹೋಗುವಾಗಲೂ ಹಿಂಬಾಲಿಸಿ ಈ ಬಾಲಕರು ಕಿರುಕುಳ ನೀಡಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ’ ಎಂದೂ ಸಚಿವೆ ಹೇಳಿದ್ದಾರೆ.

ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿರುವ ಅವರು, ಈ ಕುರಿತು ಮುಖ್ಯಮಂತ್ರಿ ಮತ್ತು ಡಿವೈಎಸ್‌ಪಿ ಅವರೊಂದಿಗೆ ಮಾತನಾಡಿರುವುದಾಗಿಯೂ ತಿಳಿಸಿದ್ದಾರೆ.

7 ಮಂದಿ ವಿರುದ್ಧ ಎಫ್‌ಐಆರ್: ಕಿರುಕುಳ ಸಂಬಂಧ ಏಳು ಜನರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಸೋಹಂ ಮಾಲಿ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತೆ, ಪೋಕ್ಸೊ, ಹೆಣ್ಣುಮಕ್ಕಳ ಫೋಟೊ, ವಿಡಿಯೊ ತೆಗೆಯಲು ಯತ್ನಿಸಿರುವ ಕಾರಣ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿಯೂ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಸೆಮಿಯಲ್ಲಿ ಭಾರತಕ್ಕೆ ಆಸ್ಟ್ರೇಲಿಯಾ ಎದುರಾಳಿ

ದುಬೈ (ಪಿಟಿಐ): ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಮಾರ್ಚ್ 4ರಂದು ಈ ಪಂದ್ಯ ನಡೆಯಲಿದೆ.

12

ಬುಚ್ ವಿರುದ್ಧ ಎಫ್‌ಐಆರ್‌ಗೆ ನಿರ್ದೇಶನ


ಮಾಧವಿ ಪುರಿ ಬುಚ್

ಮುಂಬೈ (ಪಿಟಿಐ): ಷೇರು ಮಾರುಕಟ್ಟೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ಷೇರು ಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಮಾಜಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಹಾಗೂ ಇತರೆ ಐವರು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಮುಂಬೈನ ವಿಶೇಷ ನ್ಯಾಯಾಲಯವು, ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ನಿರ್ದೇಶನ ನೀಡಿದೆ.


ಬುಚ್ ಹಾಗೂ ಇತರರ ಮೇಲಿರುವ ಆರೋಪ ಸಂಬಂಧ ಸ್ಥಳೀಯ ಪತ್ರಕರ್ತ ಸಪನ್ ಶ್ರೀವಾಸ್ತವ ಎಂಬುವರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಎಸಿಬಿ ಕೋರ್ಟ್ ನ್ಯಾಯಾಧೀಶ ಶಶಿಕಾಂತ್ ಏಕನಾಥರಾವ್ ಬಂಗಾರ್ ಈ ಆದೇಶ ನೀಡಿದ್ದಾರೆ. ಸೆಬಿಯ ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ಹೇಳಿದ್ದಾರೆ.

ಇನ್ನಷ್ಟು ವಿವರ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ









ಹಿಯರ್‌ಜ್ಯಾಪ್™

48 YEARS OF TRUST | 150+ EXPERIENCE CENTRES PAN INDIA

ವಿಶ್ವ ಶ್ರವಣ ದಿನಾಚರಣೆಯ ಪ್ರಯುಕ್ತ

ಉಚಿತ ಹಿಯರಿಂಗ್ ಚೆಕ್ ಅಪ್

ದಿನಾಂಕ: ಮಾರ್ಚ್ 3rd - 15th, 2025

ಸಮಯ: ಬೆಳಗ್ಗೆ 10.00 ರಿಂದ ಸಂಜೆ 7.00



- ಉಚಿತ ಹಿಯರಿಂಗ್ ಏಡ್ ಟ್ರಯಲ್
- ಹೆಚ್ಚಿನ ವಾರಂಟಿ
- ಖಾತರಿಪಡಿಸಿದ ರಿಯಾಯಿತಿ
- 0% EMI ಸೌಲಭ್ಯ

ತಕ್ಷಣ ನಿಮ್ಮ ಮನೆಯಲ್ಲಿ ಶ್ರವಣ ಪರೀಕ್ಷೆಗಾಗಿ ಬುಕ್ ಮಾಡಿ



EXCLUSIVE BRANDS PHILIPS zenaud

ನೇಮಕಾತಿಗಾಗಿ ಕರೆ ಮಾಡಿ **9659 455 455**

SCAN FOR FREE HEARING TEST & TRIAL

ಬೆಂಗಳೂರಿನಲ್ಲಿ ನಮ್ಮ ಶಾಖೆಗಳು:

ಈಸ್ಟ್ ಪಾಯಿಂಟ್ ಹಾಸ್ಪಿಟಲ್ • ಎಚ್‌ಎಸ್‌ಆರ್ ಲೇಔಟ್ • ಇಂದಿರಾ ನಗರ • ಜಯ ನಗರ • ಕಲ್ಯಾಣ ನಗರ
ನಾಗರಬಾವಿ • ಆರ್‌ಆರ್ ನಗರ • ಸದಾಶಿವ ನಗರ • ವಿಜಯನಗರ • ವೈಟ್‌ಫೀಲ್ಡ್ • ಯಲಹಂಕ • ಹೊಸೂರು

ಕರ್ನಾಟಕ | ಮಹಾರಾಷ್ಟ್ರ | ಕೇರಳ | ತಮಿಳುನಾಡು | ಆಂಧ್ರ ಪ್ರದೇಶ | ತೆಲಂಗಾಣ | ಪಶ್ಚಿಮ ಬಂಗಾಳ | ಬಿಹಾರ | ಜಾರ್ಖಂಡ್ | ಛತ್ತೀಸ್ಗಢ

ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೂಲಕ ಹಾದು ಹೋಗುವ ಮಾರ್ಗ ● ಕಾಮಗಾರಿಗೆ ಮರುಜೀವ

ದಶಪಥ ರಸ್ತೆ ನಿರ್ಮಾಣದ ತೊಡಕು ನಿವಾರಣೆ

● ನವೀನ್ ಮಿನೇಜಸ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೂಲಕ ಹಾದು ಹೋಗುವ ದಶ ಪಥ ಎಕ್ಸ್‌ಪ್ರೆಸ್ ರಸ್ತೆ ನಿರ್ಮಾಣ ಕಾಮಗಾರಿ ನನೆಗುದಿಗೆ ಬಿದ್ದು ದಶಕದ ನಂತರ ಮತ್ತೆ ಜೀವ ಪಡೆದಿದೆ. 200 ಶೆಡ್‌ಗಳನ್ನು ತೆರವುಗೊಳಿಸುವ ಮೂಲಕ ಸಂಪರ್ಕ ಕಲ್ಪಿಸಲು ಇದ್ದ ತೊಡಕನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿವಾರಿಸಿದೆ.

ನೈಸ್ ರಸ್ತೆಗೆ ಸಮಾನಾಂತರವಾಗಿ ಈ ರಸ್ತೆಯನ್ನು ನಿರ್ಮಿಸಲಾಗುತ್ತಿದೆ. ಆದರೆ, ಶೆಡ್ ಮತ್ತು ಇತರ ಕಟ್ಟಡಗಳು ಇದ್ದಿದ್ದರಿಂದ ಮಧ್ಯದಲ್ಲಿ ಒಂದು ಕಿ.ಮೀ. ಸಂಪರ್ಕ ಇಲ್ಲದಂತಾಗಿತ್ತು. ತಡೆ ನಿವಾರಣೆಯಾಗಿರುವುದರಿಂದ 10.5 ಕಿ.ಮೀ. ಉದ್ದದ ಟೋಲ್ ರಹಿತ ಎಕ್ಸ್‌ಪ್ರೆಸ್ ಹೈವೆ ನಿರ್ಮಾಣಗೊಳ್ಳಲಿದೆ. ಚಲ್ಲಘಟ್ಟದ ಬಳಿ 250 ಮೀಟರ್ ಉದ್ದದ ಸುರಂಗ ರಸ್ತೆ ನಿರ್ಮಾಣಗೊಳ್ಳಲಿದೆ. ಜೊತೆಗೆ ರೈಲ್ವೆ ಕೆಳಸೇತುವೆ ಕೂಡ ಇರಲಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಲ್ಲ ಒಂಬತ್ತು ಬ್ಲಾಕ್‌ಗಳನ್ನು ಸಂಪರ್ಕಿಸುವ ಈ ರಸ್ತೆಯು ಕಾರ್ಯಾರಂಭಗೊಂಡರೆ ಬಡಾವಣೆಯಲ್ಲಿ ನಿವೇಶನ ಹೊಂದಿರುವವರು ಮನೆಗಳ ನಿರ್ಮಾಣ ಮಾಡಲು ಉತ್ತೇಜನ ದೊರೆಯಲಿದೆ.

ಬಡಾವಣೆಯಲ್ಲಿ ಒಂದು ಕಿಲೋ ಮೀಟರ್ ಹೊರತುಪಡಿಸಿ ಉಳಿದ ಭಾಗಗಳಲ್ಲಿ ಶೇ 80ರಷ್ಟು ಕಾಮಗಾರಿ ನಡೆದಿತ್ತು. ಪ್ರಮುಖ ಪ್ರದೇಶಗಳಾದ ಮಾಚೋಹಳ್ಳಿ, ಸೂಲಿಕೆರೆ, ಕನ್ನಹಳ್ಳಿ ಮತ್ತು ಚಲ್ಲಘಟ್ಟದಲ್ಲಿ ಭೂಸ್ವಾಧೀನ ಸಮಸ್ಯೆಯಿಂದಾಗಿ ಯೋಜನೆಯು ಹಿನ್ನಡೆಯನ್ನು ಅನುಭವಿಸಿತ್ತು.

'ಹತ್ತು ಪಥದ ಎಕ್ಸ್‌ಪ್ರೆಸ್‌ವೇಯಿಂದ ಮಾಗಡಿ ರಸ್ತೆಗೆ ಸಂಪರ್ಕಿಸುವ ಮಾರ್ಗದ ಕಾಮಗಾರಿ ಮುಂದಿನ ಎರಡು ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಹೈಕೋರ್ಟ್ ನಮ್ಮ ಪರವಾಗಿ ತೀರ್ಪು ನೀಡಿದ ನಂತರ, ನಾವು ಕೇವಲ ನಾಲ್ಕು ದಿನಗಳಲ್ಲಿ ಸುಮಾರು 200 ಕಟ್ಟಡಗಳನ್ನು ತೆರವುಗೊಳಿಸಿದ್ದೇವೆ. ಆದರೆ, ಅದಕ್ಕಿಂತ ಮೊದಲು ಕಾನೂನು ಹೋರಾಟದಲ್ಲಿ ಎರಡು ವರ್ಷಗಳು ಕಳೆದುಹೋದವು' ಎಂದು ಬಿಡಿಎ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಬಿಡಿಎ ಇತ್ತೀಚೆಗೆ ಕನ್ನಹಳ್ಳಿ ಬಳಿ ಸುಮಾರು 1 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಂಡಿತ್ತು. ಆದರೂ ಸಮಸ್ಯೆಗಳು ಇನ್ನೂ ಪೂರ್ಣ ದೂರವಾಗಿಲ್ಲ. ಸೂಲಿಕೆರೆಯಲ್ಲಿ ಸುಮಾರು 4 ಎಕರೆ ಅರಣ್ಯ ಜಮೀನು ಪ್ರಾಧಿಕಾರಕ್ಕೆ ಹಸ್ತಾಂತರವಾಗಬೇಕಿದೆ.

₹ 585 ಕೋಟಿ ವೆಚ್ಚದ ಈ ಯೋಜನೆ ಪೂರ್ಣಗೊಳ್ಳಬೇಕಿದ್ದರೆ ಜಮೀನು ಹಸ್ತಾಂತರವಾಗಬೇಕು. ಅರಣ್ಯ ಇಲಾಖೆಯಿಂದ ತಡವಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರ ಗಮನಕ್ಕೆ ತಂದಿದ್ದರು. ಶೀಘ್ರದಲ್ಲಿಯೇ ಅರಣ್ಯ ಜಮೀನು ಹಸ್ತಾಂತರಿಸಲಾಗುವುದು ಎಂದು ಅರಣ್ಯ ಸಚಿವರು ಇತ್ತೀಚೆಗೆ ನಡೆದ ಸಭೆಯಲ್ಲಿ ಭರವಸೆ ನೀಡಿದ್ದರು.

'ಜಮೀನು ಹಸ್ತಾಂತರದ ನಿರೀಕ್ಷೆಯಲ್ಲಿದ್ದೇವೆ' ಎಂದು ಬಿಡಿಎ ಎಂಜಿನಿಯರ್ ತಿಳಿಸಿದ್ದಾರೆ.



ನಾಡಪ್ರಭು ಕೆಂಪೇಗೌಡ ಬಡಾವಣೆ ಮೂಲಕ ಹಾದು ಹೋಗುವ ದಶಪಥ ಮಾರ್ಗ

ಪರಿಹಾರ ನೀಡದೇ ಮನೆ ನೆಲಸಮ !

ಚಲ್ಲಘಟ್ಟದಲ್ಲಿ ರೈಲ್ವೆ ಕೆಳಸೇತುವೆ ಕಾಮಗಾರಿಯನ್ನು ಬಿಡಿಎ ಕೈಗೆತ್ತಿಕೊಂಡಿತ್ತು. ಯಾವುದೇ ಪರಿಹಾರ, ಪರ್ಯಾಯ ಜಮೀನು ನೀಡದೇ ಮೂರು ಮನೆಗಳನ್ನು ನೆಲಸಮ ಮಾಡಿತ್ತು. ಇದರಿಂದ ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದರು. ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಟಿ. ಸೋಮಶೇಖರ್ ಭಾನುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕಟ್ಟಡಗಳನ್ನು ನೆಲಸಮಗೊಳಿಸುವ ಮೊದಲು ಅವರಿಗೆ ಪರ್ಯಾಯ ಜಾಗ ತೋರಿಸಬೇಕು ಎಂದು ಅವರು ಭೂಸ್ವಾಧೀನ ಅಧಿಕಾರಿಗಳಿಗೆ ಸೂಚಿಸಿದರು.

ರೈಲ್ವೆ ಕೆಳಸೇತುವೆಗೆ ನಮ್ಮ ಮೆಟ್ರೊ ಸುರಂಗ ರಸ್ತೆ ಸಂಪರ್ಕವನ್ನು ಕಲ್ಪಿಸುತ್ತಿದೆ. ಸೇತುವೆ ಕಾಮಗಾರಿ ಪೂರ್ಣಗೊಳ್ಳಲು ಸುಮಾರು ಮೂರು ತಿಂಗಳು ಬೇಕಾಗಬಹುದು. ಅದೇ ಸಮಯದಲ್ಲಿ ಮೆಟ್ರೊ ಸುರಂಗ ಮಾರ್ಗವೂ ಪೂರ್ಣಗೊಳ್ಳಬೇಕು. ಆನಂತರ ಮೈಸೂರು ಕಡೆಗೆ ಇದು ಬೈಪಾಸ್ ಆಗಿ ಕಾರ್ಯನಿರ್ವಹಿಸಲಿದೆ ಎಂದು ಎಂಜಿನಿಯರ್ ಮಾಹಿತಿ ನೀಡಿದರು.

'ಸರೋಜಿನಿ ಮಹಿಷಿ ಪರಿಷ್ಕೃತ ವರದಿ ಮಂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರೋಜಿನಿ ಮಹಿಷಿ ಪರಿಷ್ಕೃತ ವರದಿಯನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸಿ, ಕಾನೂನು ಬಲ ತಂದು ಕೊಡಬೇಕು' ಎಂದು ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ಸರ್ಕಾರಕ್ಕೆ ಆಗ್ರಹಿಸಿದೆ.

'ರಾಜ್ಯ ಸರ್ಕಾರವು 'ಕರ್ನಾಟಕ ಕೈಗಾರಿಕಾ ನೀತಿ'ಯಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡುವ ಬಗ್ಗೆ ಷರತ್ತು ವಿಧಿಸಿವುದರಿಂದ ಕನ್ನಡಿಗರಿಗೆ ಹೆಚ್ಚು ಉಪಯೋಗವಿಲ್ಲ. ಉದ್ದಿಮೆಗಳು ಸ್ಥಾಪನೆಯಾಗಿ, ಕೆಲಸ ಪ್ರಾರಂಭಿಸಲು ಕೆಲವು ವರ್ಷಗಳೇ ಬೇಕಾಗುತ್ತವೆ. ರಾಜ್ಯದಲ್ಲಿರುವ ಕೇಂದ್ರ ಸರ್ಕಾರಿ ಸ್ವಾಮ್ಯದ ಮತ್ತು ಖಾಸಗಿ ಉದ್ದಿಮೆ, ಸಂಸ್ಥೆ, ಕಚೇರಿಗಳಲ್ಲಿ ನಿರಂತರ ಉದ್ಯೋಗ ಸೃಷ್ಟಿಯಾಗುತ್ತಿರುತ್ತದೆ. ಅಲ್ಲಿನ ನೇಮಕಾತಿಯಲ್ಲಿ ಕನ್ನಡಿಗರಿಗೆ (ಸ್ಥಳೀಯರಿಗೆ) ನ್ಯಾಯಯುತ ಪಾಲು ದೊರೆಯಲು, ಕನ್ನಡಿಗರ ಉದ್ಯೋಗ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಬೇಕಾದರೆ ಪರಿಷ್ಕೃತ ಮಹಿಷಿ ವರದಿಯನ್ನು ಸದನದಲ್ಲಿ ಮಂಡಿಸಿ, ಕಾಯ್ದೆ ರೂಪಿಸಬೇಕು' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಹಾಗೂ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒತ್ತಾಯಿಸಿದ್ದಾರೆ.

'ಪರಿಷ್ಕೃತ ವರದಿಯು ರಾಜ್ಯ ಸರ್ಕಾರ ಅನುಷ್ಠಾನಗೊಳಿಸಬಹುದಾದ 14 ಅಂಶಗಳನ್ನು ಒಳಗೊಂಡಿದೆ. ಈ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಮಾರ್ಗವನ್ನೂ ಸ್ಪಷ್ಟವಾಗಿ ವರದಿಯಲ್ಲಿ ಉಲ್ಲೇಖಿಸಿದೆ. ಪರಿಷ್ಕೃತ ಮಹಿಷಿ ವರದಿಯನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸಿದರೆ ಇದಕ್ಕೆ ವಿರೋಧ ಪಕ್ಷಗಳೂ ಒಪ್ಪಿಗೆ ಕೊಡುವುದರಲ್ಲಿ ಯಾವುದೇ ಅನುಮಾನವಿಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ವಿಕಸಿತ ಭಾರತಕ್ಕೆ ಕೊಡುಗೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಕಸಿತ ಭಾರತ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಕೊಡುಗೆ ನೀಡಬೇಕು' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಕರೆ ನೀಡಿದರು.

ಕರ್ನಾಟಕ ಆರ್ಯವೈಶ್ಯ ಚಾರಿಟಬಲ್ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ವಾರ್ಷಿಕ ವಿದ್ಯಾರ್ಥಿವೇತನ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪೈಕಿ ಭಾರತ ಮುಂಚೂಣಿಯಲ್ಲಿದೆ. ನಮ್ಮ ದೇಶವು ವಿಶ್ವದ ಮೂರನೇ ದೊಡ್ಡ ಆರ್ಥಿಕತೆಯಾಗಿ ಬೆಳೆಯುತ್ತಿದೆ. ಭಾರತವನ್ನು ವಿಶ್ವ ಗುರುವನ್ನಾಗಿಸುವ ದೃಷ್ಟಿಕೋನದಲ್ಲಿ ಎಲ್ಲರೂ ಜೊತೆಯಾಗಿ ಕೆಲಸ ಮಾಡಬೇಕು. ಏಕ ಭಾರತ, ವಿಕಸಿತ ಭಾರತ ಎಂಬ ಕನಸು ಸಾಕಾರಗೊಳ್ಳುತ್ತಿದೆ. ಇದರಲ್ಲಿ ಯುವಕರ ಪಾತ್ರ ಮುಖ್ಯ' ಎಂದು ಹೇಳಿದರು.

'ಸಮುದಾಯದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತವಾಗಬಾರದು ಎಂಬ ಉದ್ದೇಶದಿಂದ ಆರ್ಯವೈಶ್ಯ ಚಾರಿಟಬಲ್ ಟ್ರಸ್ಟ್ ವಿದ್ಯಾರ್ಥಿವೇತನ ನೀಡುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳು ಶಿಕ್ಷಣದಿಂದ ಜ್ಞಾನ ಸಂಪಾದಿಸುವುದರ ಜೊತೆಗೆ ಆತ್ಮನಿರ್ಭರ ಆಗುವುದಕ್ಕೆ ಸಹಕಾರಿ ಆಗಿದೆ. ಶಿಕ್ಷಣದ ಉದ್ದೇಶ ವೈಯಕ್ತಿಕ ಯಶಸ್ಸಿನ ಜೊತೆಗೆ ದೇಶ ಹಾಗೂ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಕೊಡುಗೆ ನೀಡುವುದು ಕೂಡ ಆಗಿದೆ' ಎಂದರು.

ಇದೇ ಸಂದರ್ಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಒಂದು ಸಾವಿರಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ₹1 ಕೋಟಿ ಮೊತ್ತದ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು.

ವಾಸವಿ ಪೀಠದ ಪೀಠಾಧಿಪತಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಪ್ರತಿಭಾ ಎಂ. ಸಿಂಗ್, ಟ್ರಸ್ಟ್‌ನ ಅಧ್ಯಕ್ಷ ಐ.ಎಸ್. ಪ್ರಸಾದ್, ಹಿರಿಯ ಉಪಾಧ್ಯಕ್ಷರಾದ ಕೆ.ಆರ್. ಪ್ರದೀಪ್, ಎಸ್.ವಿ.ಎಸ್. ಗುಪ್ತಾ ಉಪಸ್ಥಿತರಿದ್ದರು.



ಕರ್ನಾಟಕ ಆರ್ಯವೈಶ್ಯ ಚಾರಿಟಬಲ್ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ವಾರ್ಷಿಕ ವಿದ್ಯಾರ್ಥಿವೇತನ ವಿತರಣಾ ಸಮಾರಂಭದಲ್ಲಿ ಥಾವರಚಂದ್ ಗೆಹಲೋತ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಚೆಕ್ ವಿತರಿಸಿದರು. ಪ್ರತಿಭಾ ಸಿಂಗ್, ಐ.ಎಸ್. ಪ್ರಸಾದ್, ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಆಶಯ

'ಶೂದ್ರ ಪತ್ರಿಕೆ ಡಿಜಿಟಲ್ ಸ್ವರೂಪದಲ್ಲಿ ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯದ ಚಳವಳಿಗೆ ಸಾಕ್ಷಿಯಾದ 'ಶೂದ್ರ' ಪತ್ರಿಕೆಯನ್ನು ಡಿಜಿಟಲ್ ಸ್ವರೂಪದಲ್ಲಾದರೂ ಪುನರ್ ಆರಂಭಿಸಬೇಕು' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಆಶಯ ವ್ಯಕ್ತಪಡಿಸಿದರು.

ಶೂದ್ರ ಶ್ರೀನಿವಾಸ್ ನೆಲದಮಾತು ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶೂದ್ರ ಶ್ರೀನಿವಾಸ್ ಅವರ 'ಎತ್ತಣ ಮಾಮರ...' ಹಾಗೂ 'ಲಂಕೇಶ್' ಪುಸ್ತಕ ಬಿಡುಗಡೆ ಮಾಡಿದ ಅವರು, ಪ್ರತಿಷ್ಠಾನ ನೀಡುವ 'ಪ್ರೊ.ಕಿ.ರಂ. ನಾಗರಾಜ ಮತ್ತು ಡಾ. ಸಿದ್ಧಲಿಂಗಯ್ಯ ಸಾಹಿತ್ಯ ಪ್ರಶಸ್ತಿ'ಯನ್ನು ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್, 'ಡಾ.ಕೆ.ಮರುಳಸಿದ್ದಪ್ಪ ರಂಗಭೂಮಿ ಪ್ರಶಸ್ತಿ'ಯನ್ನು ರಂಗಕರ್ಮಿ ಬಿ. ಜಯಶ್ರೀ, 'ಕೋಟೆ ನಂಜಪ್ಪರೆಡ್ಡಿ ಪ್ರಗತಿಪರ ರೈತ ಪ್ರಶಸ್ತಿ'ಯನ್ನು ರೈತ ನಾರಾಯಣಪ್ಪ ಹಾಗೂ 'ಡಾ.ಜಿ.ಎಸ್. ಶಿವರುದ್ರಪ್ಪ ಕಾವ್ಯ ಪ್ರಶಸ್ತಿ'ಯನ್ನು ಕವಿ ಚಿದಾನಂದ ಸಾಲಿ ಅವರಿಗೆ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, 'ಕನ್ನಡ ಸಾಹಿತ್ಯ ಲೋಕವನ್ನು ಜಾಗೃತವಾಗಿ ಇರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಶೂದ್ರ ಪತ್ರಿಕೆಯ ಪ್ರಕಟಣೆ ನಿಲ್ಲಿಸಲಾಗಿದೆ. ಲೇಖಕ ಶೂದ್ರ ಶ್ರೀನಿವಾಸ್ ಅವರು ನಾಡಿನ ಪ್ರಜ್ಞಾವಂತ ಸಾಹಿತಿಗಳಿಂದ ಲೇಖನಗಳನ್ನು ಬರೆಸಿ, ಪತ್ರಿಕೆ ಮುನ್ನಡೆಸಿರುವುದು ವಿಶೇಷ. ಈ ಪತ್ರಿಕೆ ಮುದ್ರಣ ಆವೃತ್ತಿ ಪ್ರಕಟಣೆ ಸಾಧ್ಯವಾಗದಿದ್ದರೂ, ಆನ್‌ಲೈನ್ ಆವೃತ್ತಿಯಾದರೂ ಹೊರತರಬೇಕು. ಶೂದ್ರ ಶ್ರೀನಿವಾಸ್ ಅವರ ಬರಹದ ಶೈಲಿ ವಿಭಿನ್ನವಾಗಿದ್ದು, ಪತ್ರಿಕೆಯ ಮೂಲಕ ಅವರು ಬರಹವನ್ನೂ ಮುಂದುವರಿಸಬೇಕು. ಈ ಮೂಲಕ ಸಮಾಜವನ್ನು ಜಾಗೃತಗೊಳಿಸಬೇಕು' ಎಂದರು.

ಪ್ರಶಸ್ತಿ ಪುರಸ್ಕೃತ ಎಚ್.ಎಸ್. ರಾಘವೇಂದ್ರ ರಾವ್, 'ಗ್ರಾಮೀಣ ಪ್ರದೇಶದಿಂದ ನಗರಕ್ಕೆ ಬಂದ ಶೂದ್ರ ಶ್ರೀನಿವಾಸ್, ಸವಾಲುಗಳನ್ನು ಮೀರಿ ಹಲವರಿಗೆ ಮಾದರಿಯಾದರು. ಅವರು ಪತ್ರಿಕೆಯ ಮೂಲಕ ಕರ್ನಾಟಕದ ಮೂಲೆ ಮೂಲೆಗೆ ತಲುಪಿದರು. ಅವರು 50 ವರ್ಷಗಳ ಹಿಂದೆ ಕಂಡ ದೊಡ್ಡ ದೊಡ್ಡ ಕನಸುಗಳು ತಕ್ಕ ಮಟ್ಟಿಗೆ ನನಸಾಗಿವೆ' ಎಂದು ಹೇಳಿದರು.

ಸಾಹಿತಿ ಕೆ.ಮರುಳಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮೊದಲು ಉಮೇಶ್ ಎಚ್.ಸಿ. ಅವರಿಂದ ವಚನ ಗಾಯನ ನಡೆಯಿತು.



ಕಾರ್ಯಕ್ರಮದಲ್ಲಿ ಚಿದಾನಂದ ಸಾಲಿ, ನಾರಾಯಣಪ್ಪ, ಎಚ್.ಎಸ್.ರಾಘವೇಂದ್ರ ರಾವ್ ಮತ್ತು ಬಿ.ಜಯಶ್ರೀ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜೇನುಗೂಡು ಮಹೇಶ್, ಮೋಹನ್ ಕುಮಾರ್ ಕೊಂಡಜ್ಜಿ, ಶೂದ್ರ ಶ್ರೀನಿವಾಸ್, ಕೆ.ಮರುಳಸಿದ್ದಪ್ಪ, ಎಚ್.ಶಶಿಕಲಾ, ಎಲ್.ಎನ್.ಮುಕುಂದರಾಜ್, ಅನಿಲ್ ಎಸ್.ರೆಡ್ಡಿ, ಎಚ್.ದಂಡಪ್ಪ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ



ಪ್ರಭಾತ್ ಕಲಾವಿದರು 'ಕಥಾಸ್ತ್ರ' ನೃತ್ಯರೂಪಕ ಪ್ರಸ್ತುತಪಡಿಸಿದರು

ಯಲಹಂಕ: 'ಮಹಾಶಿವೋತ್ಸವ' ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಕೆಬಿಜಿ ಸ್ವಯಂಸೇವಕರು ಹಾಗೂ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಆಶ್ರಯದಲ್ಲಿ ವಿದ್ಯಾರಣ್ಯಪುರದ ಎನ್‌ಟಿಐ ಮೈದಾನದಲ್ಲಿ ಶಿವರಾತ್ರಿ ಪ್ರಯುಕ್ತ 'ಮಹಾ ಶಿವೋತ್ಸವ' ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಶಾಸ್ತ್ರೀಯ ನೃತ್ಯ ಸ್ಪರ್ಧೆ, ಕಸ್ತೂರಿ ಪುಲಕೇಶಿ ತಂಡದಿಂದ ಭರತನಾಟ್ಯ, ರುದ್ರವೇದಪಾರಾಯಣ, ಶಿವತಾಂಡವ ನೃತ್ಯ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಒಂದು ಸಾವಿರಕ್ಕೂ ಹೆಚ್ಚು ಕಲಾವಿದರು ಕಲೆ ಮತ್ತು ಸಂಸ್ಕೃತಿಯನ್ನು ಅನಾವರಣಗೊಳಿಸಿದರು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. 'ಪ್ರಭಾತ್ ಆರ್ಟ್ಸ್ ಇಂಟರ್ ನ್ಯಾಷನಲ್' ತಂಡದವರು ಶಿವನ ಕುರಿತ 'ಕಥಾಸ್ತ್ರ' ನೃತ್ಯರೂಪಕ ಪ್ರಸ್ತುತಪಡಿಸಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿ, 'ನಾಡಿನ ಕಲೆ ಮತ್ತು ಸಂಸ್ಕೃತಿ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಕ್ಷೇತ್ರದಲ್ಲಿ ಹಬ್ಬಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಈ ಉದ್ದೇಶದಿಂದ ಪ್ರತಿ ಹಬ್ಬಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ' ಎಂದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣಬೈರೇಗೌಡ, ಪಾಲಿಕೆ ಮಾಜಿ ಸದಸ್ಯ ಪಾರ್ತಿಬರಾಜನ್, ಕಾಂಗ್ರೆಸ್ ಮುಖಂಡರಾದ ಟಿ.ಜಿ.ಚಂದ್ರು, ವಿ.ಹರಿ, ಎನ್.ಎನ್.ಶ್ರೀನಿವಾಸಯ್ಯ, ಎನ್.ಕೆ.ಮಹೇಶ್ ಕುಮಾರ್, ಆರ್.ಎಂ.ಶ್ರೀನಿವಾಸ್, ಬಿ.ಎಸ್. ಗೋಪಾಲಕೃಷ್ಣ, ಜನಾರ್ದನ್, ಲಕ್ಮೀಹರಿ ಮತ್ತಿತರರು ಉಪಸ್ಥಿತರಿದ್ದರು.

ವಸ್ತುಪ್ರದರ್ಶನ: ಗೃಹಪಯೋಗಿ ವಸ್ತುಗಳು, ಬಟ್ಟೆ, ಸಿರಿಧಾನ್ಯ, ಮಣ್ಣಿನ ಮಡಕೆ, ಪಿಒಪಿ ಬೊಂಬೆಗಳು, ಕೃತಕ ಅಭರಣಗಳು, ಅಲಂಕಾರಿಕ ವಸ್ತುಗಳು, ತಿಂಡಿ-ತಿನಿಸುಗಳು, ಸಿರಿಧಾನ್ಯಗಳು, ಸಾವಯವ ಪದಾರ್ಥಗಳೂ ಸೇರಿ ವೈವಿಧ್ಯಮಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಆಯೋಜಿಸಲಾಗಿತ್ತು.

ಉಚಿತ ನಿವೇಶನ: ಹಕ್ಕು ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಇಲ್ಲಿನ ಚಳ್ಳೇಘಟ್ಟ ಗ್ರಾಮದಲ್ಲಿ 216 ಅಂಗವಿಕಲರಿಗೆ ಉಚಿತ ನಿವೇಶನ ಹಂಚಿಕೆ ಮಾಡಿ ಹಕ್ಕು ಪತ್ರಗಳನ್ನು ವಿತರಿಸಲಾಯಿತು.

ತಾಲ್ಲೂಕು ಪಂಚಾಯಿತಿ, ರಾಮೋಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಎಸ್.ಟಿ.ಸೋಮಶೇಖರ್ ಅವರು ಹಕ್ಕುಪತ್ರಗಳನ್ನು ವಿತರಿಸಿದರು. ನಂತರ ಮಾತನಾಡಿದ ಅವರು, 'ರಾಮೋಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲ ವರ್ಗದ ಕಡುಬಡವರಿಗೂ ಶೀಘ್ರ ಹಕ್ಕುಪತ್ರ ನೀಡಲಾಗುವುದು' ಎಂದರು.

'ಕ್ಷೇತ್ರದ ಎಲ್ಲ ಬಡವರ್ಗದವರಿಗೆ ಸೂರು ನೀಡಲು ರಾಜ್ಯ ಸರ್ಕಾರ 1500 ಮನೆಗಳನ್ನು ಮಂಜೂರು ಮಾಡಿದೆ. ಇದರಲ್ಲಿ ಅಂಗವಿಕಲರಿಗೆ ಬಸವ ಯೋಜನೆಯಡಿ 100 ಮನೆ ಮೀಸಲಿಡಲಾಗಿದೆ' ಎಂದು ವಿವರಿಸಿದರು.

ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ವಿ.ವೇಣುಗೋಪಾಲ್, 'ಕಾವೇರಿ ನೀರು ಮತ್ತು ಮಂಚನಬೆಲೆ ಜಲಾಶಯದ ನೀರನ್ನು ಪೂರೈಕೆ ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ' ಎಂದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಚ್.ಪ್ರಭು ಮಾತನಾಡಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಕೃಷ್ಣಪ್ಪ, ಕಾರ್ಯನಿರ್ವಾಹಣಾಧಿಕಾರಿ ಬಿಂದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಭಾರತಿ, ಸದಸ್ಯರಾದ ಮಂಜುನಾಥ್, ಗೋವಿಂದರಾಜು, ಯಲ್ಲಪ್ಪ, ಚಂದ್ರಪ್ಪ ಮಾತನಾಡಿದರು.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ಸ್ಕೈ ವಾಕ್ ಲಿಫ್ಟ್ ದುರಸ್ತಿಗೊಳಿಸಿ'

ಕೆಂಗಲ್ ಹನುಮಂತಯ್ಯ ಸಾರಿಗೆ ಸಂಕೀರ್ಣದಿಂದ ಕೆಂಗೇರಿ ಬಸ್ ತಂಗುದಾಣಕ್ಕೆ ಸಂಪರ್ಕ ಕಲ್ಪಿಸುವ ಸ್ಕೈವಾಕ್‌ನ ಲಿಫ್ಟ್ ಮೂರು ತಿಂಗಳಿಂದ ಕೆಟ್ಟು ನಿಂತಿದೆ. ಇದರಿಂದ ಬಸ್ ತಂಗುದಾಣದಿಂದ ಮೆಟ್ರೊ ನಿಲ್ದಾಣಕ್ಕೆ ಹೋಗಲು ತೊಂದರೆ ಆಗುತ್ತಿದೆ. ನಿತ್ಯ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಸ್ಕೈವಾಕ್ ಹತ್ತಿ, ಇಳಿಯಲು ಪರದಾಡುತ್ತಿದ್ದಾರೆ. ಸಂಬಂಧಪಟ್ಟವರು ಕೂಡಲೇ ಲಿಫ್ಟ್ ದುರಸ್ತಿಗೆ ಕ್ರಮ ವಹಿಸಬೇಕು.

ಲಕ್ಷ್ಮಿ ಶ್ರೀನಿವಾಸ, ಲಕ್ಷಣನಗರ ಸುಂಕದಕಟ್ಟೆ



ಕೆಂಗೇರಿ ಬಸ್ ತಂಗುದಾಣದಿಂದ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಸ್ಕೈವಾಕ್

'ವಿದ್ಯುತ್ ಕಂಬ ಬದಲಿಸಿ'



ದಾಬಸ್‌ಪೇಟೆಯ ಬಳಿ ಶಿಥಿಲವಾದ ವಿದ್ಯುತ್ ಕಂಬ

ದಾಬಸ್‌ಪೇಟೆ: ಇಮಚೇನಹಳ್ಳಿ, ಕರಿಮಣ್ಣ, ತಟ್ಟೆಕೆರೆ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಬದಿಯಲ್ಲಿರುವ ವಿದ್ಯುತ್ ಕಂಬವೊಂದು ಶಿಥಿಲಗೊಂಡಿದೆ. ಯಾವ ಸಮಯದಲ್ಲಾದರೂ ಮುರಿದು ಬೀಳುವ ಸಾಧ್ಯತೆ ಇದೆ. ವಿದ್ಯುತ್ ಕಂಬದೊಳಗಿರುವ ಕಬ್ಬಿಣದ ಸರಳುಗಳು ಹೊರಕ್ಕೆ ಕಾಣುತ್ತಿದ್ದು, ಅಪಾಯಕ್ಕೆ ಆಹ್ವಾನ ನೀಡುವಂತಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ವಿದ್ಯುತ್ ಕಂಬ ಮುರಿದು ಬಿದ್ದರೆ ದೊಡ್ಡ ಅನಾಹುತ ಆಗುವ ಸಾಧ್ಯತೆ ಇದೆ. ಬೆಸ್ಕಾಂ ಸಿಬ್ಬಂದಿ ಕೂಡಲೇ ಈ ವಿದ್ಯುತ್ ಕಂಬವನ್ನು ಬದಲಿಸಬೇಕು.

ರವಿಕುಮಾರ್, ಉಮೇಶ್, ದಾಬಸ್‌ಪೇಟೆ

'ರಸ್ತೆ ಗುಂಡಿ ಮುಚ್ಚಿ'

ಬಿಬಿಎಂಪಿ ವ್ಯಾಪ್ತಿಯ ವಿದ್ಯಾರಣ್ಯಪುರ ಹತ್ತಿರದ ಸಿಂಗಾಪುರ ಗ್ರಾಮದ ಮುಖ್ಯ ರಸ್ತೆಯಲ್ಲಿ ಬೆಂಗಳೂರು ಜಲಮಂಡಳಿ ಕುಡಿಯುವ ನೀರಿನ ಕೊಳವೆ ಅಳವಡಿಸಲು ಗುಂಡಿ ತೆಗೆದು ಹಾಗೆಯೇ ಬಿಟ್ಟಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಈ ರಸ್ತೆಯ ಪಕ್ಕದಲ್ಲಿಯೇ ಖಾಸಗಿ ಶಾಲೆ ಇದ್ದು, ಮಕ್ಕಳು ಈ ಗುಂಡಿ ಬಿದ್ದಿರುವ ರಸ್ತೆಯ ಮೂಲಕವೇ ಶಾಲೆಗೆ ಪ್ರವೇಶಿಸಬೇಕಿದೆ. ಏನಾದರೂ ಅನಾಹುತ ಸಂಭವಿಸುವ ಮುನ್ನ ಗುಂಡಿ ಮುಚ್ಚುವ ಕೆಲಸ ಆಗಬೇಕಿದೆ.

ರಮೇಶ್, ಸಿಂಗಾಪುರ



ಸಿಂಗಾಪುರ ಮುಖ್ಯ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು




ಬ್ಯಾಟರಾಯನಪುರ ಪಾದಚಾರಿ ಮಾರ್ಗದ ದುಃಸ್ಥಿತಿ

'ಪಾದಚಾರಿ ಮಾರ್ಗ ಸರಿಪಡಿಸಿ'

ಬ್ಯಾಟರಾಯನಪುರ ವಾರ್ಡ್ ಸಂಖ್ಯೆ 7ರ ಪಾದಚಾರಿ ಮಾರ್ಗಕ್ಕೆ ಹಾಕಿದ್ದ ಸಿಮೆಂಟ್‌ನ ಸ್ಲ್ಯಾಬ್‌ಗಳು ಕಿತ್ತು ಹೋಗಿದ್ದು, ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದೆ. ಎರಡು ವರ್ಷಗಳಿಂದ ಈ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಬಿಬಿಎಂಪಿ ಕೂಡಲೇ ಇಲ್ಲಿನ ಪಾದಚಾರಿ ಮಾರ್ಗ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ನಾಗೇಂದ್ರ ಕುಮಾರ್, ಬ್ಯಾಟರಾಯನಪುರ

'ಬೆಳಗದ ವಿದ್ಯುತ್ ದೀಪ'



ಪಶ್ಚಿಮ ಕಾರ್ಡ್ ರಸ್ತೆಯ ಮೇಲ್ಸೇತುವೆಯಲ್ಲಿ ಬೆಳಗದ ವಿದ್ಯುತ್ ದೀಪ


ರಾಜಾಜಿನಗರದ ಪಶ್ಚಿಮ ಕಾರ್ಡ್ ರಸ್ತೆಯ ಶಿವನಗರದ ಮೇಲ್ಸೇತುವೆಯಲ್ಲಿ ಇರುವ 37 ವಿದ್ಯುತ್ ಕಂಬಗಳಲ್ಲಿರುವ ದೀಪಗಳು ಕೆಟ್ಟು ಹೋಗಿವೆ. ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಭಯದಲ್ಲಿ ಓಡಾಡಬೇಕಾದ ಪರಿಸ್ಥಿತಿ ಇದೆ. ಪ್ರತಿನಿತ್ಯ ನೂರಾರು ವಾಹನಗಳು ಚಲಿಸುತ್ತವೆ. ನಾಗರಿಕರು ಕತ್ತಲಿನಲ್ಲಿಯೇ ಓಡಾಡುವ ಪರಿಸ್ಥಿತಿ ಇದೆ. ಅಪಘಾತಗಳು ಸಂಭವಿಸುವ ಮುನ್ನ ಅಧಿಕಾರಿಗಳು ಇಲ್ಲಿ ಬೀದಿ ದೀಪಗಳನ್ನು ಸರಿಪಡಿಸಬೇಕು.

ಆರ್. ದೇವರಾಜ್, ರಾಜಾಜಿನಗರ

'ವಿದ್ಯುತ್ ಪರಿವರ್ತಕ ಸ್ಥಳಾಂತರಿಸಿ'

ರಾಜಾಜಿನಗರದ ಎರಡನೇ ಹಂತದ ಎ ಬ್ಲಾಕ್‌ನ ಎಂಟನೇ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸಬೇಕು. ಇದರ ಪಕ್ಕದಲ್ಲಿ ನಮ್ಮ ಮನೆ ಇದ್ದು, ವಿದ್ಯುತ್ ಪರಿವರ್ತಕ ಹತ್ತಿರದಲ್ಲಿ ಇರುವುದರಿಂದ ಅಪಾಯ ಸಂಭವಿಸುವ ಸಾಧ್ಯತೆ ಇದೆ. ಈ ಪರಿವರ್ತಕ ಸ್ಥಳಾಂತರಿಸುವಂತೆ 15 ವರ್ಷಗಳಿಂದ ಬೆಸ್ಕಾಂ ಅಧಿಕಾರಿಗಳಿಗೆ, ಇಂಧನ ಸಚಿವರಿಗೆ, ಸ್ಥಳೀಯ ಶಾಸಕರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೆಇಆರ್‌ಸಿ ನಿಯಮಗಳ ಪ್ರಕಾರ ಮನೆಯಿಂದ 2.5 ಮೀಟರ್ ದೂರದಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಬೇಕು. ಆದರೆ, ಇಲ್ಲಿ ಈ ನಿಯಮಗಳನ್ನೇ ಉಲ್ಲಂಘನೆ ಮಾಡಲಾಗಿದೆ. ಕೂಡಲೇ ಇಲ್ಲಿನ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸಬೇಕು.

ರಾಜ್ ಗೋಪಾಲ್, ರಾಜಾಜಿನಗರ



ರಾಜಾಜಿನಗರದ ಪಾದಚಾರಿ ಮಾರ್ಗದಲ್ಲಿರುವ ವಿದ್ಯುತ್ ಪರಿವರ್ತಕ

ಅಂಬೇಡ್ಕರ್ ಪ್ರತಿಮೆಗೆ ಒತ್ತಾಯಿಸಿ ಕಾಲ್ನಡಿಗೆ ಜಾಥಾ

ಕೆ.ಆರ್.ಪುರ: ಡಾ.ಬಿ.ಆರ್. ಅಂಬೇಡ್ಕರ್ ಅವರ 200 ಮೀಟರ್ ಎತ್ತರದ ಕಂಚಿನ ಪುತ್ಥಳಿ ನಿರ್ಮಿಸುವಂತೆ ಒತ್ತಾಯಿಸಿ ಸ್ವಾಭಿಮಾನಿ ಬಳಗದಿಂದ ಬೀದರ್‌ನಿಂದ ಬೆಂಗಳೂರಿಗೆ 40 ದಿನ 760 ಕಿ.ಮೀ. ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಭೀಮ್ ಪ್ರಜಾ ಸಂಘದ ರಾಜ್ಯಾಧ್ಯಕ್ಷ ವೈಟ್‌ಫಿಲ್ಡ್ ಮುರುಗೇಶ್ ಹೇಳಿದರು.

'ಗುಜರಾತ್‌ನಲ್ಲಿರುವ 182 ಮೀಟರ್ ಎತ್ತರದ ಸರ್ದಾರ್ ವಲ್ಲಭ ಭಾಯಿ ಪಟೇಲ್ ಪ್ರತಿಮೆಯ ಮಾದರಿಯಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ಹೊಸ ಕೋಟೆ ಭಾಗದಲ್ಲಿ ನಿರ್ಮಿಸುವಂತೆ ಒತ್ತಾಯಿಸಿ ಜಾಥಾ ಹಮ್ಮಿಕೊಳ್ಳಲಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾರ್ಚ್ 6 ರಂದು ಬೀದರ್‌ನಿಂದ ಆರಂಭಗೊಳ್ಳುವ ಜಾಥಾ, ಬೀದರ್, ಕಲಬುರ್ಗಿ, ರಾಯಚೂರು, ಕೊಪ್ಪಳ, ವಿಜಯನಗರ, ಚಿತ್ರದುರ್ಗ, ತುಮಕೂರು ಮಾರ್ಗವಾಗಿ ಏಪ್ರಿಲ್ 14 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ತಲುಪಲಿದೆ ಎಂದರು. ಬೊಮ್ಮಸಂದ್ರ ಮುನಿರಾಜು, ಜಬಿವುಲ್ಲಾ, ಹಸೇನ್, ನಾಗರಾಜ್, ನಿಖಿಲ್, ಕಿರಣ್ ಇದ್ದರು.

ನಗರದಲ್ಲಿ ಇಂದು

ಬೀಜಿಂಗ್ + 30 ಪ್ರತಿಬಿಂಬ ಮತ್ತು ಭವಿಷ್ಯಮುಖಿ ತಂತ್ರಗಳು ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಉದ್ಘಾಟನೆ: ಎಚ್.ಸಿ. ಮಹದೇವಪ್ಪ, ಭಾಷಣಕಾರರು: ನಯನಾ ಮೋಟಮ್ಮ, ಅಶ್ವಿನಿ ಕೆ.ಪಿ., ಆಯೋಜನೆ: ನ್ಯಾಷನಲ್ ಫೆಡರೇಷನ್ ಆಫ್ ದಲಿತ್ ವುಮೆನ್ ಆ್ಯಂಡ್ ವುಮೆನ್ಸ್ ವಾಯ್ಸ್, ಸ್ಥಳ: ದಿ ಕ್ಯಾಪಿಟಲ್ ಹೋಟೆಲ್, ರಾಜಭವನ ರಸ್ತೆ, ಬೆಳಿಗ್ಗೆ 9

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬೇಕಾಗಿದ್ದಾರೆ

ದಿ ಮೈಸೂರು ಡಯೋಸಿಸನ್ ಎಜ್ಯುಕೇಷನಲ್ ಸೊಸೈಟಿ, ಮೈಸೂರು ಈ ಆಡಳಿತ ಮಂಡಳಿಗೆ ಸೇರಿದ ಅನುದಾನಿತ **ಸೈಂಟ್ ಮೇರಿಸ್ ಪ್ರೌಢಶಾಲೆ ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ** ಇಲ್ಲಿ ಒಂದು ಕನ್ನಡ ಶಿಕ್ಷಕರ ಹುದ್ದೆ ಖಾಲಿ ಇದ್ದು ಈ ಹುದ್ದೆಯನ್ನು ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿಸಿದ ಶೈಕ್ಷಣಿಕ ದಾಖಲೆಗಳೊಂದಿಗೆ ರೂ. 1000/– (ಒಂದು ಸಾವಿರ ರೂ) ಡಿಡಿಯನ್ನು ಕಾರ್ಯದರ್ಶಿಗಳು, ದಿ ಮೈಸೂರು ಡಯೋಸಿಸನ್ ಎಜ್ಯುಕೇಷನಲ್ ಸೊಸೈಟಿಯ ಹೆಸರಿಗೆ ಪಡೆದು ಅರ್ಜಿಯೊಂದಿಗೆ ಈ ಕೆಳಗಿನ ವಿಳಾಸಕ್ಕೆ ಇಂದಿನಿಂದ 21 ದಿನಗಳೊಳಗೆ ಸಲ್ಲಿಸಲು ತಿಳಿಸಲಾಗಿದೆ.

ಅರ್ಜಿ ಸಲ್ಲಿಸುವ ವಿಳಾಸ : ಕಾರ್ಯದರ್ಶಿಗಳು
ದಿ ಮೈಸೂರು ಡಯೋಸಿಸನ್ ಎಜ್ಯುಕೇಷನಲ್ ಸೊಸೈಟಿ
ಸೈಂಟ್ ಜೋಸೆಫ್ಸ್ ಕಾಂಪ್ಲೆಕ್ಸ್, ಜಯಲಕ್ಷ್ಮೀಪುರಂ, ಮೈಸೂರು–570 012

PUBLIC NOTICE

NOTICE IS HEREBY GIVEN THAT my client has entered into negotiations and intending to purchase the immovable agricultural land situated at Shetterhalli Village, Kasaba Hobli, Devanahalli Taluk, Bengaluru Rural from the prospective owners, the following prospective owners have represented to my client that they are the absolute owners and are in possession of the properties more particularly described in the Schedule hereunder:
Wherefore all person/ persons claiming or having any claim against or to the schedule properties or any part thereof by way of inheritance. Mortgage, sale, conveyance, MOU, agreement to sell, transfer, lease deed , tenancy, license, lien, charge, trust, maintenance, easement, gift, exchange, possession, adverse possession or otherwise howsoever are hereby required to submit the same in writing along with documentary proof to the undersigned **within 15 days** from the date of publication hereof failing which my client shall proceed to register the sale deeds without any reference to such claim and the same, if any, will be considered as waived.

Sl. No.	Village	Name of Land Owners	Sy. No.	Extent
1	Shetterhalli Village, Kasaba Hobli, Devanahalli Taluk, Bengaluru Rural	**R.K Properties**	118/2	1 A 05.12 G
2			118/3	1 A 05.12 G
3			119/7	0Acre 23.12 G
4			111/3	0 A 21 G
5		**G. Rekha W/o Venugopal** R/o Ganigara Street, Ward No 6, Devanahalli Town and Taluk, Bengaluru Rural	110/1	0 A 33 G
6			110/3	1 Acre
7			110/4	1 Acre
8			110/7	0 A 10 G
9		**G V. Vivek** R/o Ganigara Street, Ward No 6, Devanahalli Town and Taluk, Bengaluru Rural	112/3	0 A 26 G
10			110/6	0A 20 G
11			115/3	0 A 21.12 G
12			115/7	0 A 21.12 G
13		**G N Venugopal** Son of Late Narayanswamy R/o Ganigara Street, Ward No 6, Devanahalli Town and Taluk, Bengaluru Rural	114/4	1A08.08G
14			111/1	0 A 22 G
15			111/7	0 A 22 G
16			111/8	0 A 22 G
17			111/9	0 A 21 G
18			117/4	0 A 20 G
19		**D.S Anitha** Wife of D M Mallikarjuna R/o Manju Nilla, Holalkere Road, Neelakanteshwara Street, Chitradurga	111/4	0 A 21 G

Dated this 01 day of March 2025.

AMBRISH B N , Advocate
4708, 7th Floor, High Point- IV, Palace Road, Bengaluru 560001
Email: ambbyr@gmail.com

ಸಂಚಾರ ನಿಯಮ ಉಲ್ಲಂಘನೆ: ಇ–ಕಾಮರ್ಸ್ ವಾಹನ ಸವಾರರ ವಿರುದ್ಧ ಕಾರ್ಯಾಚರಣೆ

1,859 ಪ್ರಕರಣ, ₹9.65 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವ ಇ-ಕಾಮರ್ಸ್ ಹಾಗೂ ಆ್ಯಪ್ ಆಧಾರಿತ ಆಹಾರ ಪದಾರ್ಥಗಳನ್ನು ಡೆಲಿವರಿ ಮಾಡುವ ವಾಹನ ಸವಾರರ ವಿರುದ್ಧ ವಿಶೇಷ ಕಾರ್ಯಾಚರಣೆ ಕೈಗೊಂಡ ಸಂಚಾರ ಪೊಲೀಸರು, ಒಂದೇ ದಿನ 1,859 ಪ್ರಕರಣ ದಾಖಲಿಸಿ, ₹9.65 ಲಕ್ಷ ದಂಡ ವಸೂಲಿ ಮಾಡಿದ್ದಾರೆ.

ಪಾದಚಾರಿ ಮಾರ್ಗದಲ್ಲಿ, ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಸಂಚಾರ, ಸಿಗ್ನಲ್ ಜಂಪ್, ಹೆಲ್ಮೆಟ್ ರಹಿತ ವಾಹನ ಚಾಲನೆ ಸೇರಿದಂತೆ ವಿವಿಧ ನಿಯಮ ಉಲ್ಲಂಘನೆಗೆ ಪ್ರಕರಣ ದಾಖಲಿಸಿಕೊಂಡು ದಂಡ ವಿಧಿಸಲಾಗಿದೆ. ನೋಂದಣಿ ಸಂಖ್ಯೆ ಇಲ್ಲದ ಎಲೆಕ್ಟ್ರಿಕ್ ಬೈಕ್ ಬಳಸುವ ಡೆಲಿವರಿ ಬಾಯ್‌ಗಳಿಗೂ ದಂಡ ವಿಧಿಸಲಾಗಿದೆ.

ಹುಳಿಮಾವು ಸಂಚಾರ ಠಾಣೆ ವ್ಯಾಪ್ತಿಯಲ್ಲಿ 250 ಮತ್ತು ಮೈಕೋ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 210 ಪ್ರಕರಣ ದಾಖಲಿಸಲಾಗಿದೆ.



'ಹಳದಿ ನೋಂದಣಿ ಫಲಕ (ಬಾಡಿಗೆ ಮೀಸಲಾದ) ಹಾಗೂ ಇ-ಕಾಮರ್ಸ್' ವಾಹನಗಳನ್ನು ಜಪ್ತಿ ಮಾಡಲಾಗುತ್ತಿದೆ' ಎಂಬ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಸಂಚಾರ ವಿಭಾಗದ ಪೊಲೀಸರು, ಕಾರ್ಯಾಚರಣೆ ಮಾಹಿತಿ ಒದಗಿಸಿದ್ದಾರೆ.

'ನಂಬರ್ ಪ್ಲೇಟ್ ಆಧರಿಸಿ ಕಾರ್ಯಾಚರಣೆ ನಡೆಸಲಾಗಿಲ್ಲ. ಇ-ಕಾಮರ್ಸ್ ಸೇರಿದಂತೆ ಎಲ್ಲ ರೀತಿಯ ವಾಹನಗಳ ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಕಾರ್ಯಾಚರಣೆ ಕೈಗೊಂಡು ಪ್ರಕರಣ ದಾಖಲಿಸಲಾಗಿದೆ. ಇ-ಕಾಮರ್ಸ್ ವಿತರಕ ಏಜೆಂಟ್‌ಗಳಿಗೆ ದಂಡದ ನಂತರ, ಸಂಚಾರ ನಿಯಮಗಳು ಮತ್ತು ಸುರಕ್ಷತೆಯನ್ನು ಪಾಲಿಸುವ ಬಗ್ಗೆ ಸೂಚನೆ ನೀಡಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ. ಎನ್. ಅನುಚೇತ್ ಅವರು ತಿಳಿಸಿದ್ದಾರೆ.

ನಿಯಮ ಉಲ್ಲಂಘನೆ	ಪ್ರಕರಣ	ದಂಡ (ರೂಪಾಯಿಗಳಲ್ಲಿ)
ಫುಟ್‌ಪಾತ್‌ನಲ್ಲಿ ವಾಹನ ಚಾಲನೆ	79	39,500
ಪ್ರವೇಶ ನಿಷಿದ್ಧ ಮಾರ್ಗದಲ್ಲಿ ಚಾಲನೆ	389	1,79,000
ಏಕಮುಖ ಸಂಚಾರದಲ್ಲಿ ಚಾಲನೆ	354	1,77,500
ಸಿಗ್ನಲ್ ಜಂಪ್	2,091	4,500
ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ	98	49,000
ಹೆಲ್ಮೆಟ್ ರಹಿತ ಚಾಲನೆ	582	2,91,000
ಸಂಚಾರಕ್ಕೆ ಅಡಚಣೆ	148	1,05,500

ಉದ್ಯಮಿ ಶವ ಕಾರಿನಲ್ಲಿ ಪತ್ತೆ

ಬೆಂಗಳೂರು: ನಗರದ ಖಾಸಗಿ ಕಂಪನಿಯ ಉದ್ಯಮಿಯೊಬ್ಬರು ಕಾರಿನಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ಕೊಡಿಗೇಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮುತ್ಯಾಲ ನಗರದ ನಿವಾಸಿ ಅಶ್ವಿನ್ ಕುಮಾರ್ (42) ಮೃತ ವ್ಯಕ್ತಿ ಎಂದು ಗುರುತಿಸಲಾಗಿದೆ. ಶನಿವಾರ ರಾತ್ರಿ 9 ಗಂಟೆಗೆ ಮನೆಯಿಂದ ಕಾರಿನಲ್ಲಿ ಹೊರಟ್ಟಿದ್ದ ಅಶ್ವಿನ್ ಕುಮಾರ್ ಅವರು ವಾಪಸ್ ಆಗಿರಲಿಲ್ಲ. ಆತಂಕಗೊಂಡ ಕುಟುಂಬಸ್ಥರು ಅವರ ಮೊಬೈಲ್‌ಗೆ ಕರೆ ಮಾಡಿದರೂ ಸ್ವೀಕರಿಸದಿದ್ದಾಗ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಬಳಿಕ ಅವರ ಮೊಬೈಲ್ ಲೊಕೇಷನ್ ಆಧಾರದ ಮೇಲೆ ಕೊಡಿಗೇಹಳ್ಳಿ ಸೇತುವೆ ಬಳಿಯ ಖಾಸಗಿ ಆಸ್ಪತ್ರೆ ಮುಂಭಾಗ ರಸ್ತೆಬದಿ ಇರುವುದು ಗೊತ್ತಾಗಿ, ಅಲ್ಲಿಗೆ ಹೋಗಿದ್ದಾರೆ. ಕಾರಿನ ಗಾಜು ಒಡೆದು ಪರಿಶೀಲಿಸಿದಾಗ, ಅವರು ಮೃತಪಟ್ಟಿರುವುದು ಗೊತ್ತಾಗಿದೆ. ಶವವನ್ನು ಆಸ್ಪತ್ರೆಗೆ ಸಾಗಿಸಲಾಯಿತು, ಪರಿಶೀಲಿಸಿದ ವೈದ್ಯರು, ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಸ್ಥಳಕ್ಕೆ ಕೊಡಿಗೇಹಳ್ಳಿ ಪೊಲೀಸರು ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

'ಅಶ್ವಿನ್ ಕುಮಾರ್ ಕೈ ಮೇಲೆ ಸುಟ್ಟುಗಾಯ ಕಂಡು ಬಂದಿರುವುದರಿಂದ ಸಾವಿನ ಬಗ್ಗೆ ಕುಟುಂಬದವರು ಅನುಮಾನ ವ್ಯಕ್ತಪಡಿಸಿದ್ದಾರೆ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಕಾರಣ ಗೊತ್ತಾಗಲಿದೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಚಿನ್ನಾಭರಣ ಕಳವು

ಬೆಂಗಳೂರು: ಮನೆಯ ಬೀಗ ಮುರಿದು ಒಳನುಗ್ಗಿದ ಕಳ್ಳರು ಸುಮಾರು ₹2 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ದೋಚಿ ಪರಾರಿಯಾಗಿರುವ ಘಟನೆ ಯಶವಂತಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಯಶವಂತಪುರ ಮಾರ್ಕೆಟ್‌ನಲ್ಲಿ ಕೆಲಸ ಮಾಡುವ ಷರೀಫ್ ನಗರ ನಿವಾಸಿ, ಜಮೀರ್ ಎಂಬುವವರ ಮನೆಯಲ್ಲಿ ಕಳ್ಳತನ ನಡೆದಿದೆ.

'ರಾತ್ರಿ ಮನೆಗೆ ಬಂದು ಊಟವಾದ ಬಳಿಕ ಕೆಳ ಮಹಡಿಯಲ್ಲಿರುವ ಮನೆಗೆ ಬೀಗ ಹಾಕಿ, ಒಂದನೇ ಮಹಡಿಯ ಮನೆಯಲ್ಲಿ ಜಮೀರ್ ಮಲಗಿದ್ದರು. ತಡರಾತ್ರಿ 1 ಗಂಟೆಗೆ ಬಂದ ಕಳ್ಳರು ಬೀಗ ಮುರಿದು ಒಳನುಗ್ಗಿ ಬೀರುವಿನಲ್ಲಿಟ್ಟಿದ್ದ 25 ಗ್ರಾಂ. ಚಿನ್ನಾಭರಣ ದೋಚಿದ್ದಾರೆ. ಶಬ್ದ ಕೇಳಿ ಜಮೀರ್ ಕುಟುಂಬದವರು ಎದ್ದು ಬಂದು ನೋಡುವಷ್ಟರಲ್ಲಿ ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದರು. ಯಶವಂತಪುರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸುದ್ದಿ 2 ನಿಮಿಷ

ಐಜಿಪಿ ರೂಪಾ ವಿರುದ್ಧ ಡಿಐಜಿ ವರ್ತಿಕಾ ಕಟಿಯಾರ್ ದೂರು

ಬೆಂಗಳೂರು: 'ಕೆಳಹಂತದ ಸಿಬ್ಬಂದಿಯನ್ನು ಬಳಸಿಕೊಂಡು ನನ್ನ ಕೊಠಡಿಯಲ್ಲಿ ದಾಖಲೆಗಳನ್ನು ಇರಿಸಿದ್ದಾರೆ' ಎಂದು ಆರೋಪಿಸಿ ಆಂತರಿಕಾ ಭದ್ರತಾ ದಳದ (ಐಎಸ್‌ಡಿ) ಐಜಿಪಿ ಡಿ. ರೂಪಾ ವಿರುದ್ಧ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಐಎಸ್‌ಡಿ ಡಿಐಜಿ ವರ್ತಿಕಾ ಕಟಿಯಾರ್ ದೂರು ನೀಡಿದ್ದಾರೆ.

'ಐಜಿಪಿ ರೂಪಾ ಅವರ ಆದೇಶದಂತೆ, 2024ರ ಸೆಪ್ಟೆಂಬರ್ 6ರಂದು ಹೆಡ್‌ಕಾನ್‌ಸ್ಟೆಬಲ್ ಟಿ.ಎಸ್. ಮಂಜುನಾಥ್, ಗೃಹರಕ್ಷಕ ದಳದ ಸಿಬ್ಬಂದಿ ಮಲ್ಲಿಕಾರ್ಜುನ್ ಅವರು ನಿಯಂತ್ರಣ ಕೊಠಡಿಯಿಂದ ಕೀಯನ್ನು ತೆಗೆದುಕೊಂಡು ಬಂದು, ನನ್ನ ಅನುಮತಿ ಇಲ್ಲದೆ, ಕಚೇರಿಯ ಬಾಗಿಲು ತೆರೆದಿದ್ದಾರೆ. ಅಲ್ಲದೆ, ಮಲ್ಲಿಕಾರ್ಜುನ್ ಕೆಲವೊಂದು ಕಡತಗಳನ್ನು ನನ್ನ ಕಚೇರಿಯಲ್ಲಿ ಇರಿಸಿ, ಕಚೇರಿಯ ಫೋಟೋಗಳನ್ನು ತೆಗೆದು ಐಜಿಪಿ ರೂಪಾ ಅವರಿಗೆ ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಅದಕ್ಕೂ ಮೊದಲು ನನ್ನ ಆಪ್ತ ಸಹಾಯಕ ಕಿರಣ್ ಕುಮಾರ್ ಅವರು ಮಂಜುನಾಥ್ ಅವರಿಗೆ ಡಿಐಜಿ ಅವರ ಅನುಮತಿ ಇಲ್ಲದೆ ಕಚೇರಿ ಬಾಗಿಲು ತೆರೆಯುವಂತಿಲ್ಲ ಎಂದು ಎಚ್ಚರಿಕೆ ನೀಡಿದರೂ ಕಡತಗಳನ್ನು ಇರಿಸಿ ಫೋಟೊ ಕಳುಹಿಸಿದ್ದಾರೆ' ಎಂದು ವರ್ತಿಕಾ ದೂರಿನಲ್ಲಿ ಆರೋಪಿಸಿದ್ದಾರೆ.

'ಈ ವಿಚಾರ ನನ್ನ ಗಮನಕ್ಕೆ ಬಂದ ಕೂಡಲೇ ಕಚೇರಿ ಆಪ್ತ ಸಹಾಯಕ ಕಿರಣ್ ಕುಮಾರ್, ಮಂಜುನಾಥ್, ಮಲ್ಲಿಕಾರ್ಜುನ್ ಅವರನ್ನು ಕರೆದು ವಿಚಾರಿಸಿದಾಗ, ಡಿ.ರೂಪಾ ಅವರ ಸೂಚನೆ ಮೇರೆಗೆ ಕಚೇರಿ ಬಾಗಿಲು ತೆರೆದು, ಕಡತ ಇರಿಸಿದ್ದೇವೆ ಎಂದು ಒಪ್ಪಿಕೊಂಡಿದ್ದಾರೆ' ಎಂದು ಹೇಳಿದ್ದಾರೆ.

ಪೊಲೀಸ್ ಮಹಾನಿರ್ದೇಶಕ ಮತ್ತು ಐಎಸ್‌ಡಿ ಡಿಜಿಪಿಗೂ ವರ್ತಿಕಾ ದೂರು ನೀಡಿದ್ದಾರೆ.



ಉಪ ತಹಶೀಲ್ದಾರ್ ಮೇಲೆ ಹಲ್ಲೆ

ಕುಂದಾಣ (ದೇವನಹಳ್ಳಿ): ತಾಲ್ಲೂಕಿನ ಕುಂದಾಣ ಹೋಬಳಿಯ ಬ್ಯಾಡರಹಳ್ಳಿ ಗ್ರಾಮದ ರಾಜಕಾಲುವೆ ತೆರವು ಕಾರ್ಯಾಚರಣೆಗೆ ಹೋಗಿದ್ದ ಕುಂದಾಣ ಹೋಬಳಿ ಉಪ ತಹಶೀಲ್ದಾರ್ ಮೇಲೆ ಒತ್ತುವರಿದಾರರು ಶನಿವಾರ ಹಲ್ಲೆ ನಡೆಸಿದ್ದಾರೆ.

ಉಪ ತಹಶೀಲ್ದಾರ್ ಬಿ.ಎ. ಚೈತ್ರಾ ಅವರು ಬ್ಯಾಡರಹಳ್ಳಿ ಗ್ರಾಮದ ಆಂಜಿನಮ್ಮ ಎಂಬ ಮಹಿಳೆ ವಿರುದ್ಧ ವಿಶ್ವನಾಥಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಶನಿವಾರ ಬೆಳಿಗ್ಗೆ ಬಿ.ಎ. ಚೈತ್ರಾ ಅವರ ಉಪಸ್ಥಿತಿಯಲ್ಲಿ ಕಂದಾಯ ಇಲಾಖೆ ಸಿಬ್ಬಂದಿ ಹಾಗೂ ಭೂ ಮಾಪಕರು ರಾಜಕಾಲುವೆ ತೆರವು ಕಾರ್ಯಾಚರಣೆ ಆರಂಭಿಸಿದ್ದರು.

'ನನ್ನ ಜಮೀನಿನಲ್ಲಿ ಅಳತೆ ಮಾಡಲು ನಿಮಗೆ ಅನುಮತಿ ನೀಡಿದ್ದು ಯಾರು ಎಂದು ಕಾರ್ಯಾಚರಣೆಗೆ ಅಡ್ಡಪಡಿಸಿದ ಆಂಜಿನಮ್ಮ, ಅಡಿಕೆ ಕುಟ್ಟುವ ಕುಟ್ಟಾಣಿಯಿಂದ ನನ್ನ ಮೇಲೆ ಹಲ್ಲೆ ನಡೆಸಿದರು' ಎಂದು ಚೈತ್ರಾ ದೂರಿನಲ್ಲಿ ತಿಳಿಸಿದ್ದಾರೆ.



ಜುಗಲ್‌ಬಂದಿ

ವಿವಿಡ್ ಆರ್ಟ್ಸ್ ಮತ್ತು ಪಯೋನೀರ್ ಆರ್ಟ್ಸ್ ಎಜುಕೇಶನ್ ಸೊಸೈಟಿಯು ಚೌಡಯ್ಯ ಸ್ಮಾರಕ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 14ನೇ ಆವೃತ್ತಿಯ 'ಉತ್ತರ–ದಕ್ಷಿಣ ಸರಣಿ'ಯ ಜುಗಲ್‌ಬಂದಿಯಲ್ಲಿ ಸಂದೀಪ್ ನಾರಾಯಣ್ ಮತ್ತು ಜಯತೀರ್ಥ ಮೇವುಂಡಿ ಗಾಯನ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದ ಪೊಲೀಸರು

ಚಿನ್ನದ ಆಮಿಷ: ಮಹಿಳೆಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರಿಗೆ ₹4,000ಕ್ಕೆ 1 ಗ್ರಾಂ. ಚಿನ್ನ ಕೊಡುವುದಾಗಿ ನಂಬಿಸಿ ₹1 ಕೋಟಿ ಪಡೆದು ವಂಚನೆ ಮಾಡಿದ ಆರೋಪದ ಮೇರೆಗೆ ನಾಲ್ವರ ವಿರುದ್ಧ ಸಿಸಿಬಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸಾಯಿ ಬಡಾವಣೆ ನಿವಾಸಿ ಅಮರಾವತಿ ಅವರ ದೂರಿನ ಮೇರೆಗೆ ಎಂ.ಕೆ.ಗೋಪಾಲ ಕೃಷ್ಣ, ರಾಕೇಶ್ ರೆಡ್ಡಿ, ಯಶವಂತ್ ಕುಮಾರ್ ಮತ್ತು ರೂಪಾ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಕಳೆದ ವರ್ಷ ಮಾರ್ಚ್‌ನಲ್ಲಿ ಅಮರಾವತಿ ಅವರು ತಮ್ಮ ಮನೆಯಲ್ಲಿ ಶಾಂತಿ ಪೂಜೆ ಮಾಡಿಸಲು ಗೋಪಾಲಕೃಷ್ಣ ಅವರನ್ನು ಕರೆಸಿದ್ದರು. ಆಗ ರಾಕೇಶ್ ರೆಡ್ಡಿ ಎಂಬಾತ ಅಮರಾವತಿ ಅವರ ಮನೆಗೆ ಬಂದು ಗೋಪಾಲಕೃಷ್ಣಗೆ ನಮಸ್ಕರಿಸಿ, 'ನಿಮ್ಮ ಪೂಜೆಯ ಫಲದಿಂದ ಶ್ರೀಮಂತನಾಗಿದ್ದೇನೆ ಎಂದು ಹೇಳಿ 15 ಚಿನ್ನದ ಬಿಸ್ಕೆಟ್ ಕೊಟ್ಟಿದ್ದ. ಕಷ್ಟದಲ್ಲಿರುವ ಅಮರಾವತಿಗೆ ಸಹಾಯ ಮಾಡುವಂತೆ ರಾಕೇಶ್‌ಗೆ ಗೋಪಾಲಕೃಷ್ಣ ಹೇಳಿದ್ದರು' ಎಂದು ಪೊಲೀಸರು ತಿಳಿಸಿದರು.

'ಕೆಲ ದಿನದ ಬಳಿಕ ಸ್ನೇಹಿತನ ಜತೆ ಮಹಿಳೆಯ ಮನೆಗೆ ಬಂದ ರಾಕೇಶ್ ರೆಡ್ಡಿ, 'ನಾವು ಚಿನ್ನದ ವ್ಯವಹಾರ ಮಾಡುತ್ತಿದ್ದೇವೆ. ಇದರಿಂದ ₹100 ಕೋಟಿ ಸಂಪಾದನೆ ಮಾಡಿದ್ದು, ಕೆ.ಜಿ.ಗಟ್ಟಲೇ ಚಿನ್ನ ದೊರೆಯುತ್ತದೆ. ಪ್ರತಿ ಗ್ರಾಂ ಚಿನ್ನವನ್ನು ₹4 ಸಾವಿರಕ್ಕೆ ಮಾರಾಟ ಮಾಡುತ್ತಿದ್ದೇವೆ. ಈ ವ್ಯವಹಾರದಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಸಿಗಲಿದೆ ಎಂದು ನಂಬಿಸಿದ್ದರು' ಎಂದು ಹೇಳಿದರು.

'ವಂಚಕರ ಮಾತು ನಂಬಿದ್ದ ಸಂತ್ರಸ್ತೆ ಹಂತ ಹಂತವಾಗಿ ₹60 ಲಕ್ಷ ಹೂಡಿಕೆ ಮಾಡಿದ್ದರು. ಇದೇ ರೀತಿ ಸಂತ್ರಸ್ತೆಯ ಸಂಬಂಧಿಕರಿಂದ ವಂಚಕರು ಹಂತ ಹಂತವಾಗಿ ₹1 ಕೋಟಿ ಹೂಡಿಕೆ ಮಾಡಿಸಿಕೊಂಡಿದ್ದಾರೆ. ಪಡೆದುಕೊಂಡಿರುವ ಹಣಕ್ಕೆ ಚಿನ್ನ ನೀಡುವಂತೆ ಕೇಳಿದಾಗ, 'ಕಸ್ಟಮ್ಸ್ ಅಧಿಕಾರಿಗಳು ಚಿನ್ನ ಜಪ್ತಿ ಮಾಡಿದ್ದಾರೆ' ಎಂದು ಆರೋಪಿಗಳಾದ ಗೋಪಾಲಕೃಷ್ಣ, ರಾಕೇಶ್ ರೆಡ್ಡಿ ನೆಪ ಹೇಳುತ್ತಿದ್ದರು ಎಂದು ದೂರಿನಲ್ಲಿ ಅಮರಾವತಿ ಆರೋಪಿಸಿದ್ದಾರೆ' ಎಂದು ವಿವರಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE

This is to inform the general public that our client proposes to purchase from **Mr. Michael Floyd Eshwer,** S/o late B.S. Eshwer, residing at No.8/1, N6/1, Hyderali Road Old Road, abba Road, Opp. Police Training Academy, Nazarbad, Ittigegud, Mysore-570010, the residential immoveable property bearing 1/1, Banaswadi Road, Civil Station, Bangalore, measuring East to West 14.478029 sq. meters and North to South 14.325629 sq. Meters), in all measuring 207.40594750 sq. meters, alongwith built up area built up area of 167.2254 sq.ft in the ground floor, 167.2254 sq.ft. in the first floor and 167.2254 sq.ft in the second floor, which is morefully described in the schedule hereunder.
Anyone having any claim/objection to the aforesaid transaction in respect of the schedule property, may convey the same in writing alongwith documentary proof of their claim/claims/objections to the undersigned WITHIN FIFTEEN DAYS from today. If no objections/claims are received within the stipulated time, our client shall proceed further with the transaction and no claims shall be entertained thereafter.

SCHEDULE PROPERTY

All that piece and parcel of residential immovable property bearing 1/1, Banaswadi Road, Civil Station, Bangalore, measuring East to West 14.478029 sq. meters and North to South 14.325629 sq. meters), in all measuring 207.40594750 sq. meters, along with built up area of 167.2254 sq. ft. in the ground floor, 167.2254 sq. ft. in the first floor and 167.2254 sq. ft. in the second floor and bounded on: East by: Site No. 1/2 Banaswadi Road formerly belonging to Satyanarayana Swamy Naidu, presently belonging to Mrs. Gayathri Rajan. West by: Site No. 1/3 Banaswadi Road belonging to Mr. P.N. Nathan. North by: Property belonging to Mr. Chinnappa. South by: Road. The Schedule Property presently bears PID No, 86-33-1/1 and Khatha 1/1.

Sd/- M. Arun Ponappa,
Advocate
Address for communication
M. Arun Ponappa,
2nd Floor, Kasturi Complex,
No. 76, Mission Road,
Bengaluru-560 027.
e-mail: arunponappa@gmail.com

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 9845579620

BUSINESS

Business to Business

Finance

URGENT LOAN AVAIL @ 3.5% PER ANNUM PERSONAL BUSINESS HOUSING TAKE OVER ALL TYPES LOAN SHIVGANGA FINANCE. PH: 8826494700.

PERSONAL

Change of Name

CHANGE OF NAME

I, **NARAYANAMURTHY R** residing at NO.34, Rochi, Hanumakka Hanumanthappa Layout, Bangalore, Karnataka-560056, solemnly affirm that my daughter **B N HITHANKSHI** since minor rep me her natural guardianfatherI change my daughter namefrom **B N HITHANKSHI** to **HIMA MURTHY B N** as per numerologythrough vide affidavit dated 21/02/2025 before **K C SHASHIKALA** Notary, Bengaluru

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ

RECRUITMENT

BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY

@ 2481/-* FOR 15 WORDS

*Conditions apply

www.dhclassifieds.com BOOK NOW

For more details contact:
+91 9901641752 | +91 9845114560 | +91 9900428036

ಕಿರುಕುಳ: ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕನಕಪುರ: ಮೈಕ್ರೊ ಫೈನಾನ್ಸ್ ಕಿರುಕುಳದಿಂದ ಮನನೊಂದು ಶುಕ್ರವಾರ ರಾತ್ರಿ ವಿಷ ಸೇವಿಸಿದ್ದ ಗೌಡಹಳ್ಳಿ ಗ್ರಾಮದ ಯುವಕ ಅರುಣ್ ಜೆ.(28) ಶನಿವಾರ ಮೃತಪಟ್ಟಿದ್ದಾನೆ.

ಅರುಣ್ ಕನಕಪುರದ ಮುತ್ತೂಟ್ ಫಿನ್‌ಕಾರ್ಪ್ ಕಂಪನಿಯಲ್ಲಿ ತಾಯಿ ಹೆಸರಲ್ಲಿ ₹5 ಲಕ್ಷ ಸಾಲ ಪಡೆದಿದ್ದ ಎಂದು ಹೇಳಲಾಗಿದೆ.

'ಮಗನ ಸಾವಿಗೆ ಮೈಕ್ರೊ ಫೈನಾನ್ಸ್ ಕಂಪನಿ ಸಿಬ್ಬಂದಿ ಕಿರುಕುಳವೇ ಕಾರಣ' ಎಂದು ಅರುಣ್ ತಾಯಿ ರತ್ನಮ್ಮ ಕನಕಪುರ ಗ್ರಾಮಾಂತರ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಮುತ್ತೂಟ್ ಫಿನ್‌ಕಾರ್ಪ್ ಫೈನಾನ್ಸ್ ಕಂಪನಿಯ ಮ್ಯಾನೇಜರ್ ಮತ್ತು ಸಾಲ ವಸೂಲಿ ಸಿಬ್ಬಂದಿ ವಿರುದ್ಧ ಕನಕಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರುಣ್ ಎರಡು-ಮೂರು ತಿಂಗಳಿನಿಂದ ಸರಿಯಾಗಿ ಸಾಲದ ಕಂತು ಮರುಪಾವತಿಸಿರಲಿಲ್ಲ. ಫೈನಾನ್ಸ್ ಸಾಲ ವಸೂಲಿ ಸಿಬ್ಬಂದಿ ಶುಕ್ರವಾರ ಅರುಣ್ ಮನೆಗೆ ಹೋಗಿ ಕಂತಿನ ಹಣ ನೀಡುವಂತೆ ಒತ್ತಾಯಿಸಿದ್ದಾರೆ.



ಅರುಣ್ ಜೆ

'ಸಾಲದ ಕಂತು ಪಾವತಿಸುವವರೆಗೂ ಮನೆ ಬಿಟ್ಟು ಕದಲುವುದಿಲ್ಲ. ಹಣ ಪಡೆದೇ ಇಲ್ಲಿಂದ ಹೋಗುತ್ತೇವೆ' ಎಂದು ಸಿಬ್ಬಂದಿ ರಾತ್ರಿ 8 ಗಂಟೆವರೆಗೂ ಅರುಣ್ ಮನೆಯಲ್ಲಿ ಉಳಿದಿದ್ದಾರೆ.

ಇದರಿಂದ ಬೇಸತ್ತ ಅರುಣ್ ಪೋಷಕರು, 'ಗ್ರಾಮದಲ್ಲಿ ನಿನ್ನಿಂದಾಗಿ ನಮ್ಮ ಮರ್ಯಾದೆ ಹೋಯಿತು. ಏಕೆ ಇಂಥ ಕೆಲಸ ಮಾಡಿದೆ' ಎಂದು ಮಗನನ್ನು ತರಾಟೆಗೆ ತೆಗೆದುಕೊಂಡಿದ್ದರು.

ಬಳಿಕ ಅರುಣ್ ತೋಟಕ್ಕೆ ಹೋಗಿ ಕಳೆನಾಶಕ ಔಷಧಿ ಕುಡಿದಿದ್ದಾನೆ. ಅದಕ್ಕೂ ಮೊದಲು ತನ್ನ ಸ್ನೇಹಿತರಿಗೆ ಫೋನ್ ಮಾಡಿ ಆತ್ಮಹತ್ಯೆಯ ಸುಳಿವು ನೀಡಿದ್ದ. ಅನುಮಾನಗೊಂಡ ಸ್ನೇಹಿತರು ತೋಟಕ್ಕೆ ಹೋಗಿ ನೋಡಿದಾಗ ಅದಾಗಲೇ ವಿಷ ಕುಡಿದು ಅಸ್ವಸ್ಥನಾಗಿದ್ದ. ಕೂಡಲೇ ಆತನನ್ನು ಸ್ನೇಹಿತರು ಕನಕಪುರ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿದ್ದಾರೆ.

ನಂತರ ವೈದ್ಯರ ಶಿಫಾರಸ್ಸಿನಂತೆ ದಯಾನಂದ ಸಾಗರ ಆಸ್ಪತ್ರೆ ಹಾಗೂ ಬೆಂಗಳೂರಿನ ಕೆಂಪೇಗೌಡ ಆಸ್ಪತ್ರೆಗೆ ಸೇರಿಸಿದ್ದರು. ಶನಿವಾರ ಮಧ್ಯಾಹ್ನ ಅರುಣ್ ಮೃತಪಟ್ಟಿದ್ದಾಗಿ ವೈದ್ಯರು ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: B/TRD.2024-25/32
ದಿನಾಂಕ: 24.02.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
(1) ಮಾರಂಡಹಳ್ಳಿ – ರಾಯಕೋಟ್ಟೈ (ಎಂಝುಡ್‌ಯು–ಆರ್‌ವೈಸಿ) ನಡುವೆ ಕಿಮೀ. 118/000 – 100 ರಲ್ಲಿ ಪ್ರಸ್ತಾವಿತ ಆರ್‌ಒಬಿ ನಂ. 286ಎ ನಿರ್ಮಾಣಕ್ಕೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕಾಮಗಾರಿಗಳು. (2) ರಾಯಕೋಟ್ಟೈ – ಪೆರಿಯನಾಗತುಣ್ಣೈ (ಆರ್‌ವೈಸಿ – ಪಿಆರ್‌ಎನ್‌ಟಿ) ನಡುವೆ ಕಿಮೀ. 120/000 – 100 ರಲ್ಲಿ ಪ್ರಸ್ತಾವಿತ ಆರ್‌ಒಬಿ ನಂ. 291ಎ ನಿರ್ಮಾಣಕ್ಕೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕಾಮಗಾರಿಗಳು.	ರೂ. 19,50,345.76

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.03.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ವಿನಿಯೋಗ/ ಬೆಂಗಳೂರು

PUB/814/AAMO/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: E-GSU-ELE-2024-25-OT-14
ದಿನಾಂಕ: 24.02.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹೂಡಿ ಹಾಲ್ಟ್ ನಿಲ್ದಾಣದ ಹತ್ತಿರ ಚೈ. ನಂ. 337/800 – 337/900 ನಡುವೆ ಪ್ರಸ್ತಾವಿತ ಟ್ರ್ಯಾಕ್‌ನ ಚತುಷ್ಪಥೀಕರಣವನ್ನು ಉಲ್ಲಂಘಿಸಿರುವ ಈಗಿರುವ 66 ಕೆವಿ. ಡಿಸಿ ಹೂಡಿ ಲಿಲೊ ಲೈನ್ ಅನ್ನು ಪ್ರಸ್ತಾವಿತ 132ಕೆವಿ ಕ್ಲಾಸ್ 1000 ಚ.ಮಿಮೀ. ಯುಜಿ. ಕೇಬಲ್‌ಗಳನ್ನಾಗಿ ಪರಿವರ್ತನೆಗೊಳಿಸುವ ಕಾಮಗಾರಿ.	ರೂ. 12,39,00,011.20

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.03.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಗತಿ ಶಕ್ತಿ ಘಟಕ/ ಬೆಂಗಳೂರು

PUB/813/AAMO/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: 05/2025, ದಿನಾಂಕ: 25.02.2025

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಕೇವಲ ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರು ಮುಕ್ತಾಯದ ಸಮಯ: 10.30 ಗಂಟೆ.

ಕ್ರ.ಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರು ದಿನಾಂಕ
01	29251717	ಮೋಟರ್ ಒಳಗೊಂಡಂತೆ ಮೌಂಟಿಂಗ್ ಬಿಡಿಭಾಗಗಳು ಸೇರಿದಂತೆ ಮೈನ್ ಕಂಪ್ರೆಸ್ಸರ್	11 ನಂ.	08.03.2025
02	33241291ಎ	ಫ್ಲೆಕ್ಸ್ ಬಾಲ್ ಕೇಬಲ್ – ಚಿಕ್ಕದು (ಎಲ್–2333 ಎಂಎಂ)	102 ನಂ.	17.03.2025
03	29242037	ಡಬ್ಲ್ಯೂಎಪಿ7 ಟಿಎಂ ಟೈಪ್ 6ಎಫ್‌ಆರ್‌ಎ 6098 (ಎ) ಗಾಗಿ ಲಾಬಿರಿಂಥ್ ಮತ್ತು ಬಿಯರಿಂಗ್ ಕ್ಯಾಪ್ ಡ್ರೈವಿಂಗ್ ಎಂಡ್ (ಡಿಇ) ಸೆಟ್	151 ಸೆಟ್‌ಗಳು	18.03.2025
04	29251076	ಮೋಟರ್ ಒಳಗೊಂಡಂತೆ ಟ್ರ್ಯಾಕ್ಷನ್ ಮೋಟರ್ ಬ್ಲೋವರ್	48 ನಂ.	19.03.2025
05	65245003ಎ	ಈ ಕೆಳಗಿನವುಗಳ ವಿನ್ಯಾಸ, ಪೂರೈಕೆ ಮತ್ತು ಸ್ಥಾಪನೆ: ಎ) ಹೆವಿ ಡ್ಯೂಟಿ ಪ್ಯಾಲೆಟ್ ರ್‍ಯಾಕಿಂಗ್ ಸಿಸ್ಟಂ	1 ಸೆಟ್	25.03.2025
		ಬಿ) ಕೇಜ್ ಪ್ಯಾಲೆಟ್	350 ನಂ.	
		ಸಿ) ಮೆಟಲ್ ಪ್ಯಾಲೆಟ್	150 ನಂ.	

ಸೂಚನೆ ಸಂ. 04/2024ರ ಟೆಂಡರು ಸಂ. 33251354 ರಲ್ಲಿ ಸೂಚಿಸಲಾದ ಕೊನೆಯ ದಿನಾಂಕವು 07.04.2025 ರಿಂದ 10.03.2025 ಕ್ಕೆ ಬದಲಾವಣೆಯಾಗಿದೆ.

ಸೂಚನೆ ಸಂ. 03/2024ರ ಟೆಂಡರು ಸಂ. 45251078 ರಲ್ಲಿ ಸೂಚಿಸಲಾದ ಕೊನೆಯ ದಿನಾಂಕವು 24.02.2025 ರಿಂದ 13.03.2025 ಕ್ಕೆ ಬದಲಾವಣೆಯಾಗಿದೆ.

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/816/AAMO/PRB/SWR/2024-25 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

South Western Railway - SWR | SWRRLY | SWRRLY

ನೌಕರಿ ಹೆಸರಲ್ಲಿ ಮೋಸ ವೈದ್ಯ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆ ಕೊಡಿಸುವುದಾಗಿ ವ್ಯಕ್ತಿಯೊಬ್ಬರಿಂದ ₹ 45 ಲಕ್ಷ ಪಡೆದು ವಂಚನೆ ಮಾಡಿದ ಆರೋಪದ ಮೇರೆಗೆ ವೈದ್ಯ ಸೇರಿ ಇಬ್ಬರನ್ನು ದಾಬಸ್‌ಪೇಟೆ ಪೊಲೀಸರು ಬಂಧಿಸಿದ್ದಾರೆ.

ನೆಲಮಂಗಲ ತಾಲ್ಲೂಕಿನ ಬಿಲ್ಲನಕೋಟೆ ನಿವಾಸಿ ಬಿ.ಎಸ್. ಅನಿಲ್ ಕುಮಾರ್ ಅವರ ದೂರಿನ ಮೇರೆಗೆ ಆರೋಗ್ಯ ಭಾರತಿ ಆಸ್ಪತ್ರೆಯ ವೈದ್ಯ ಚಂದ್ರಶೇಖರ್ ಹಾಗೂ ಅವರ ಸ್ನೇಹಿತ ಮಾಚನಹಳ್ಳಿ ಗ್ರಾಮದ ಯೋಗೇಂದ್ರ ಅವರನ್ನು ಬಂಧಿಸಿ, ಪರಪ್ಪನ ಅಗ್ರಹಾರದ ಜೈಲಿಗೆ ಕಳುಹಿಸಿದ್ದಾರೆ.

'ಅನಾರೋಗ್ಯದ ಕಾರಣ ಚಿಕಿತ್ಸೆ ಪಡೆಯಲು ಪಟ್ಟಣದ ಆರೋಗ್ಯ ಭಾರತಿ ಆಸ್ಪತ್ರೆಗೆ ಭೇಟಿ ನೀಡಿದ್ದ ವೇಳೆ ಡಾ. ಚಂದ್ರಶೇಖರ್ ಅವರ ಪರಿಚಯವಾಯಿತು. ಯಾರಿಗಾದರೂ ಸರ್ಕಾರಿ ಉದ್ಯೋಗ ಬೇಕಾದರೆ ಕೊಡಿಸುತ್ತೇನೆ. ಈಗಾಗಲೇ ಹಲವರಿಗೆ ಕೆಲಸ ಕೊಡಿಸಿದ್ದೇನೆ ಎಂದು ನಕಲಿ ನೇಮಕಾತಿ ಆದೇಶ ಪ್ರತಿಗಳನ್ನು ವೈದ್ಯರು ತೋರಿಸಿದರು. ನನ್ನ ಪತ್ನಿಯ ತಮ್ಮ ಪಿಎಸ್‌ಐ ಪರೀಕ್ಷೆ ಬರೆದಿರುವುದನ್ನು ಹೇಳಿದಾಗ, ಸರ್ಕಾರದ ಉನ್ನತ ಹುದ್ದೆಯಲ್ಲಿರುವ ಸ್ನೇಹಿತ ಯೋಗೇಂದ್ರ ಮೂಲಕ ಸರ್ಕಾರಿ ಉದ್ಯೋಗ ಕೊಡಿಸುತ್ತೇನೆ. ಅದಕ್ಕೆ ₹45 ಲಕ್ಷ ನೀಡಬೇಕೆಂದರು' ಎಂದು ಅನಿಲ್ ಕುಮಾರ್ ಅವರು ದೂರಿನಲ್ಲಿ ತಿಳಿಸಿದ್ದಾರೆ.



ಯೋಗೇಂದ್ರ



ಚಂದ್ರಶೇಖರ್

'2021ರ ಅಕ್ಟೋಬರ್ 17ರಂದು ಆರೋಪಿಗಳಾದ ಡಾ.ಚಂದ್ರಶೇಖರ್ ಹಾಗೂ ಯೋಗೇಂದ್ರ ಸಮೀಪದ ಹೋಟೆಲ್‌ಗೆ ನನ್ನನ್ನು ಕರೆಸಿಕೊಂಡು ಪಿಎಸ್‌ಐ ಹುದ್ದೆ ಕೊಡಿಸುವ ವಿಚಾರವನ್ನು ಯಾರಿಗೂ ಹೇಳಬಾರದು ಎಂದು ತಾಕೀತು ಮಾಡಿದರು. ಅವರು ಸೂಚಿಸಿದ ಕರೂರ್ ವೈಶ್ಯ ಹಾಗೂ ಐಸಿಐಸಿಐ ಬ್ಯಾಂಕ್ ಖಾತೆಗಳಿಗೆ ₹45 ಲಕ್ಷ ನಗದು ಅನ್ನು ಆರ್‌ಟಿಜಿಎಸ್ ಮೂಲಕ ವರ್ಗಾವಣೆ ಮಾಡಿದೆ' ಎಂದು ಹೇಳಿದ್ದಾರೆ.

'ಕೆಲ ದಿನಗಳ ನಂತರ ಚಂದ್ರಶೇಖರ್ ಕರೆ ಮಾಡಿ, ನನ್ನ ಬಾಮೈದನಿಗೆ ಪಿಎಸ್‌ಐ ಹುದ್ದೆ ನೇಮಕಾತಿ ಆಗಿದೆ ಎಂದು ತಾತ್ಕಾಲಿಕ ಆಯ್ಕೆ ಪಟ್ಟಿ ತೋರಿಸಿದರು. ಹಲವು ದಿನಗಳು ಕಳೆದರೂ ಪರಿಶೀಲನೆಗೆ ಬಾರದೇ ಇದ್ದಾಗ ಅನುಮಾನಗೊಂಡು ಪ್ರಶ್ನಿಸಿದಾಗ ಸರಿಯಾದ ಉತ್ತರ ನೀಡಲಿಲ್ಲ. ವಾಪಸ್ ಹಣ ಕೇಳಿದಾಗ ₹15 ಲಕ್ಷವನ್ನು ನನ್ನ ಬ್ಯಾಂಕ್ ಖಾತೆಗೆ ವರ್ಗಾಯಿಸಿದರು. ಉಳಿದ ಹಣ ಕೇಳಿದಾಗ, ಜಾತಿ ನಿಂದನೆ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುತ್ತೇನೆಂದು ಬೆದರಿಸಿ, ಹಲ್ಲೆ ನಡೆಸಿದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಯೋಗೇಂದ್ರ ವಿರುದ್ಧ ಪ್ರಕರಣಗಳು: ಚಿನ್ನದ ವ್ಯಾಪಾರ ಹಾಗೂ ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಹೇಳಿ ಮೋಸ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಯೋಗೇಂದ್ರ ವಿರುದ್ಧ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ, ಯಲಹಂಕ ನ್ಯೂಟೌನ್, ವಿಶ್ವೇಶ್ವರಪುರ, ಹಿರಿಯೂರು, ಚಿತ್ರದುರ್ಗ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

ಯಲ್ಲಾಪುರದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಅವರನ್ನು ವಜಾ ಮಾಡಲಾಗಿದೆ. ಒಂದೂವರೆ ವರ್ಷದಿಂದ ದುಬೈನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಇತ್ತೀಚೆಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದರು.



ವಿಭಜಕಕ್ಕೆ ಡಿಕ್ಕಿ ಹೊಡೆದ ಕಾರು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ದಾಬಸ್‌ಪೇಟೆ-ದೊಡ್ಡಬಳ್ಳಾಪುರ ರಾಷ್ಟ್ರೀಯ ಹೆದ್ದಾರಿ–648ರ ರಾಮೇಶ್ವರ ಗೇಟ್‌ನಲ್ಲಿ ಭಾನುವಾರ ಚಾಲಕನ ನಿಯಂತ್ರಣ ತಪ್ಪಿದ ಕಾರು ಹೆದ್ದಾರಿಯ ವಿಭಜಕಕ್ಕೆ ಗುದ್ದಿ, ಪಕ್ಕದ ರಸ್ತೆಯಲ್ಲಿ ಬರುತ್ತಿದ್ದ ಡೀಸೆಲ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ.

ಕಾರಿನಲ್ಲಿದ್ದ ಐವರು ಗಂಭೀರವಾಗಿ ಗಾಯಗೊಂಡಿದ್ದು, ಒಬ್ಬರ ಕೈ ತುಂಡಾಗಿದೆ. ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದು, ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಚಂದ್ರಶೇಖರ್, ನರೇಂದ್ರನಾಥ್, ನಾಗರಾಜ್, ಶಶಿಕುಮಾರ್, ಮಲ್ಲಿಕಾರ್ಜುನ್ ಅವರು ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ನಡೆದ ಮದುವೆಯಲ್ಲಿ ಪಾಲ್ಗೊಂಡು ಹಿಂದಿರುಗುವ ವೇಳೆ ಅಪಘಾತ ನಡೆದಿದೆ.

ಡೀಸೆಲ್ ಸೋರಿಕೆಯಾಗಿ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಕೆಲ ಸಮಯ ಅಡ್ಡಿಯಾಗಿತ್ತು. ಪೊಲೀಸರು ನೀರಿನ ಟ್ಯಾಂಕರ್ ಮೂಲಕ ರಸ್ತೆ ಸ್ವಚ್ಛಗೊಳಿಸಿದರು. ದೊಡ್ಡಬೆಳವಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಕೆಪಿಎಸ್‌ಸಿ ಅನ್ಯಾಯ'

ಸಿ.ಎಂಗೆ ರಕ್ತದಲ್ಲಿ ಪತ್ರ ಬರೆದ ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ ಅಭ್ಯರ್ಥಿಗಳಿಗೆ ಅನ್ಯಾಯ ಆಗಿದೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣ-ಗೌಡ ಅವರ ನೇತೃತ್ವದಲ್ಲಿ ಪ್ರತಿಭಟನಾ ರೂಪದಲ್ಲಿ ರಕ್ತದಲ್ಲಿ ಪತ್ರ ಬರೆದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಳುಹಿಸಲಾಯಿತು.

'ಮಾನ್ಯ ಮುಖ್ಯಮಂತ್ರಿಗಳೇ, ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಅನ್ಯಾಯಕ್ಕೊಳಗಾದ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿ' ಎಂದು ವಿದ್ಯಾರ್ಥಿಗಳು, ವೇದಿಕೆ ಮುಖಂಡರು ರಕ್ತದಲ್ಲಿ ಭಾನುವಾರ ಪತ್ರ ಬರೆದರು.

ಟಿ.ಎ.ನಾರಾಯಣಗೌಡ ಮಾತನಾಡಿ, 'ಒಂದು ಲಕ್ಷಕ್ಕೂ ಹೆಚ್ಚು ಪತ್ರಗಳನ್ನು ವಿದ್ಯಾರ್ಥಿಗಳು, ಪೋಷಕರು ಮತ್ತು ವೇದಿಕೆ ಕಾರ್ಯಕರ್ತರು ಬರೆಯಲಿದ್ದಾರೆ. ಈ ರಕ್ತ ಪತ್ರಗಳನ್ನು ನೋಡಿಯಾದರೂ ಮುಖ್ಯ-ಮಂತ್ರಿಯವರ ಮನಸು ಕರಗಿ ನ್ಯಾಯ ಒದಗಿಸುವರೆಂಬ ನಂಬಿಕೆ ಇದೆ' ಎಂದು ಹೇಳಿದರು.



ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ ಅಭ್ಯರ್ಥಿಗಳಿಗೆ ಅನ್ಯಾಯ ಆಗಿದೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭ್ಯರ್ಥಿಗಳು ರಕ್ತದಲ್ಲಿ ಪತ್ರ ಬರೆದು ಕಳುಹಿಸಿದರು

'ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಅನ್ಯಾಯ ಆಗಿರುವುದನ್ನು ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರನ್ನು ಕರೆಸಿ, ಮಾತನಾಡಿ ಪರಿಹಾರ ಒದಗಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಅವರ ಭರವಸೆ ಹುಸಿಯಾಗಿದೆ. ಅವರನ್ನು ತಡೆಯುತ್ತಿರುವ, ದಾರಿ ತಪ್ಪಿಸುತ್ತಿರುವ ಶಕ್ತಿಗಳಾದರೂ ಯಾವುವು' ಎಂದು ಪ್ರಶ್ನಿಸಿದರು.

'ಮಾರ್ಚ್ 3ರಿಂದ ವಿಧಾನಮಂಡಲದ ಬಜೆಟ್ ಅಧಿವೇಶನ ಆರಂಭವಾಗುತ್ತಿದೆ. ಪರೀಕ್ಷೆ ಬರೆದ ಕನ್ನಡ ಮಾಧ್ಯಮದ ಸಾವಿರಾರು ವಿದ್ಯಾರ್ಥಿಗಳು, ಪೋಷಕರು ವಿಧಾನಸೌಧಕ್ಕೆ ಬರುತ್ತಾರೆ. ಅವರನ್ನು ಹೇಗೆ ತಡೆಯುತ್ತೀರಿ? ನ್ಯಾಯ ದೊರೆಯದಿದ್ದರೆ ವಿಷ ಕುಡಿದು ಸಾಯುವುದಾಗಿ ಹೇಳುತ್ತಿದ್ದಾರೆ. ಅದಕ್ಕೆ ಅವಕಾಶ ಮಾಡಿಕೊಡಬಾರದು' ಎಂದು ಅವರು ಒತ್ತಾಯಿಸಿದರು.

ADVERTORIAL




॥ ಶ್ರೀ ರಾಮಕೃಷ್ಣಾ ಯತೇ ನಮಃ ॥

ಶ್ರೀ ರಾಮಕೃಷ್ಣ ಗುರುಕುಲಾಶ್ರಮ ಟ್ರಸ್ಟ್(ರಿ).,



ಶ್ರೀ ರಾಮಕೃಷ್ಣ ವಸತಿ ವಿದ್ಯಾಲಯ



ಶ್ರೀಮತಿ ಸರಿತಾ ಡಿ.ಎಸ್.
ಪ್ರಾಂಶುಪಾಲರು

M.L. ಹಳ್ಳಿ (ಮಡಸೂರು-ಲಿಂಗದಹಳ್ಳಿ), ಸೊರಬ ರಸ್ತೆ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಶ್ರೀ ಡಿ ಎಂ ದೇವರಾಜ್
ಸಂಸ್ಥಾಪಕರು

"ಆಧುನಿಕ ವೈಜ್ಞಾನಿಕ ಶಿಕ್ಷಣವನ್ನು ಸಂಸ್ಕಾರದ ಹಿನ್ನೆಲೆಯಲ್ಲಿ ಗುರುಕುಲ ಮಾದರಿಯಲ್ಲಿ ನೀಡುತ್ತಿರುವ ಏಕೈಕ ವಿದ್ಯಾ ಸಂಸ್ಥೆ"

ಸಂಸ್ಥೆಯ ಶೈಕ್ಷಣಿಕ ಹಿನ್ನೆಲೆ:

"ಎಲ್ಲಾ ಧರ್ಮಗಳ ಹಿಂದೆ ಇರುವುದೊಂದೇ ಸತ್ಯ" ಎಂದು ಧರ್ಮದ ತಿರುಳನ್ನು ಜಗತ್ತಿಗೆ ಸಾರಿ ಮಾನವನಲ್ಲಿ ಅಡಗಿರುವ ಅಜ್ಞಾನ, ಅಂಧಕಾರಗಳನ್ನು ಹೋಗಲಾಡಿಸಿ ಸುಜ್ಞಾನದ ಬೆಳಕನ್ನು ನೀಡಿದ ಆಧ್ಯಾತ್ಮಿಕ ಅನುಭೂತಿಯ ಯತಿಶ್ರೇಷ್ಠರು ರಾಮಕೃಷ್ಣ ಪರಮಹಂಸರು.

ಇವರ ತಪೋಸೂರ್ಯದ ಪ್ರತಿಬಿಂಬದಂತಿರುವ ಶ್ರೀಮಾತೆ ಶಾರದಾದೇವಿಯವರ ಸರಳ, ಸುಂದರ, ಪವಿತ್ರ ಜೀವನ ಹಾಗೂ ಶಾಂತಿ, ಸಹನೆ, ಮಾತೃಪ್ರೇಮ, ವಾತ್ಸಲ್ಯ ಇಂದಿಗೂ ಎಲ್ಲರ ಜೀವನದ ಬೆಳದಿಂಗಳಾಗಿವೆ.

ಸ್ವಾಮಿ ವಿವೇಕಾನಂದರು ತಮ್ಮ ವಿಚಾರ ವೈವಿಧ್ಯತೆಯಿಂದ ಸ್ಫೂರ್ತಿದಾಯಕ ವಾಣಿಯಿಂದ, ತೇಜಸ್ಸಿನಿಂದ ಜಗತ್ತಿಗೆ ಜ್ಞಾನದ ಜೊತೆಗೆ ಹೊಸ ಚಿಂತನೆಯ ಬೆಳಕು ನೀಡಿದ ಅದಮ್ಯ ಉತ್ಸಾಹಿಗಳು. ಕಾರ್ಯಪ್ರವೀಣತೆ, ನಿಸ್ವಾರ್ಥ ತ್ಯಾಗ ಮನೋಭಾವನೆಗಳಿಂದ ಜಗತ್ತಿನಾದ್ಯಂತ ಪ್ರಸರಿಸಿ ಸನಾತನ ಭಾರತೀಯ ಸಂಸ್ಕೃತಿಯ ಮುಕುಟವನ್ನು ಉತ್ತುಂಗ ಶಿಖರಕ್ಕೇರಿಸಿದ ಮರೆಯಲಾಗದ ಸಂತ ಚೇತನ. " ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯಚ " ಇದು ಪ್ರತಿಯೊಬ್ಬರ ಜೀವನದ ಗುರಿಯಾಗಬೇಕು ಎಂದು ಸಾರಿದ ಚೇತನದ ಚಿಲುಮೆ.

ಇಂತಹ ಮಹಾತ್ಮರ ಜೀವನದ ಆದರ್ಶಗಳನ್ನು ಆಧಾರವಾಗಿಟ್ಟುಕೊಂಡು ಭಾರತೀಯ ಸಂಸ್ಕೃತಿಯ ಗುರುಕುಲ ಮಾದರಿಯ ಶಿಕ್ಷಣ ನೀಡುವ ಮಹತ್ವದ ಉದ್ದೇಶ ಇಟ್ಟುಕೊಂಡ ಸಂಸ್ಥೆಯೇ ಶ್ರೀ ರಾಮಕೃಷ್ಣ ವಿದ್ಯಾ ಸಂಸ್ಥೆ.

ಸಂಸ್ಥೆಯ ಧ್ಯೇಯೋದ್ದೇಶಗಳು:

ಮಲೆನಾಡಿನ ನಿಸರ್ಗ ಸೊಬಗಿನಲ್ಲಿ ಸುಂದರ ರಮಣೀಯ ಶಾಂತ ವಾತಾವರಣದಲ್ಲಿ ಮಕ್ಕಳಿಗೆ ಜೀವನದ ಸಂಸ್ಕಾರದ ಜತೆಗೆ ವಿನಯವಂತರು, ಹೃದಯವಂತರು, ಧೈರ್ಯವಂತರು ಪ್ರಜ್ಞಾವಂತರನ್ನಾಗಿ ರೂಪಿಸುವ ಧ್ಯೇಯವಿಟ್ಟುಕೊಂಡು ನಾಡಿನ ಮಕ್ಕಳಿಗೆ ಸೇವೆ ಸಲ್ಲಿಸುತ್ತಿದೆ.

ಕಲಿಯುವ ಮನಸ್ಸುಗಳಿಗೆ ಉಲ್ಲಾಸ, ಉತ್ಸಾಹ, ಸ್ಫೂರ್ತಿ ನೀಡುವ ಪ್ರಶಾಂತ ವಾತಾವರಣದಲ್ಲಿ ಆಧುನಿಕ ರೀತಿಯ ಎಲ್ಲ ಸೌಲಭ್ಯಗಳನ್ನು ಹೊಂದಿರುವ ಏಕೈಕ ಶಿಕ್ಷಣ ಸಂಸ್ಥೆಯಾಗಿದೆ.

ಶಾಲೆಗೆ ಸೇರುವ ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ ಪುರಸ್ಕರಿಸುವುದರೊಂದಿಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪ್ರತಿಭಾವಂತರನ್ನಾಗಿ ಮಾಡುವಲ್ಲಿ ಶ್ರೀ ರಾಮಕೃಷ್ಣ ಸಂಸ್ಥೆಗೆ ತನ್ನದೇ ಆದ ಹೆಸರಿದೆ. ಹಾಗಾಗಿ ನಮ್ಮ ವಿದ್ಯಾಸಂಸ್ಥೆಗಳಲ್ಲಿ ಅಧ್ಯಯನ ಮಾಡಿದ ಅನೇಕ ವಿದ್ಯಾರ್ಥಿಗಳು ಸಮಾಜದ ಉನ್ನತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದೇ ಸಾಕ್ಷಿಯಾಗಿದೆ.

ಬಾಲ್ಯದಲ್ಲಿಯೇ ಸರಳ ಸಜ್ಜನಿಕೆ ಜೀವನಕ್ಕೆ ಒತ್ತುಕೊಟ್ಟು ಪ್ರಾರ್ಥನೆ, ಭಜನೆ, ಧ್ಯಾನ, ಯೋಗಾಭ್ಯಾಸಗಳ ಮೂಲಕ ಏಕಾಗ್ರತೆಯನ್ನು ಹೆಚ್ಚಿಸಿ ಕಲಿಕೆಯಲ್ಲಿ ಅದಮ್ಯ ಉತ್ಸಾಹ ಮೂಡಿಸುವುದು ನಮ್ಮ ಸಂಸ್ಥೆಯ ವಿಶೇಷತೆ. ದೇಶ, ಧರ್ಮ, ಗುರು ಹಿರಿಯರಲ್ಲಿ ಪೂಜ್ಯ ಮತ್ತು ಗೌರವ ಭಾವನೆಯನ್ನು ಮೂಡಿಸಿ ಸುಸಂಸ್ಕೃತ, ತ್ಯಾಗಶೀಲ, ದಕ್ಷ ಮತ್ತು ಪ್ರಾಮಾಣಿಕತೆಯ ಜವಾಬ್ದಾರಿಯುತ ಸತ್ಪ್ರಜೆಯಾಗಿ ನಿರ್ಮಾಣ ಮಾಡುವುದು ಬಹುಮುಖ್ಯವೆಂದು ಭಾವಿಸಿದ್ದೇವೆ,

30 ವರ್ಷಗಳಿಂದ ಸಂಸ್ಕಾರ ಕಲಿಸುವ ಗುರುಕುಲ ಶಿಕ್ಷಣ:



ನಮ್ಮ ದೇಶದಲ್ಲಿ ಶಿಕ್ಷಣ ಪದ್ಧತಿ ಆರಂಭವಾಗಿದ್ದು ಗುರುಕುಲಗಳಿಂದ. ಈ ಪದ್ಧತಿಯಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕ ಒಂದೆಡೆ ನೆಲೆಸಿ ಪಾಠ, ಪ್ರವಚನಗಳನ್ನು ಮಾಡುವುದಾಗಿದೆ. ಅಲ್ಲದೆ ಈ ಪದ್ಧತಿಗೆ ಸಾಕಷ್ಟು ಮಾನ್ಯತೆಯಿದೆ. ಗುರುಕುಲದಲ್ಲಿ ಶಿಕ್ಷಕರು ಮಕ್ಕಳ ಜೊತೆ ಇರುವ ಕಾರಣ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸೂಕ್ಷ್ಮವಾಗಿ ಗಮನಿಸಿ ಅವರಲ್ಲಿರುವ ಒಳ್ಳೆಯ ಗುಣಗಳಿಗೆ ಮತ್ತಷ್ಟು ಪ್ರೋತ್ಸಾಹ ನೀಡುವುದು, ಕೊರತೆಗಳಿಗೆ ಅಗತ್ಯವಾದ ತರಬೇತಿ ನೀಡಲಾಗುತ್ತದೆ. ಈ ಕ್ರಮದಿಂದ ವಿದ್ಯಾರ್ಥಿಯೊಬ್ಬನ ಸರ್ವಾಂಗೀಣ ಬೆಳವಣಿಗೆ ಸಾಧ್ಯವಾಗುತ್ತದೆ. ಪ್ರತಿಯೊಂದು ಗುಂಪಿನಲ್ಲಿ 25 ವಿದ್ಯಾರ್ಥಿಗಳು ಇರುವ ಕಾರಣ ಅವರ ಕುರಿತು ಸಾಕಷ್ಟು ಕಾಳಜಿ ತೆಗೆದುಕೊಳ್ಳಲಾಗುತ್ತದೆ. ಜೊತೆಗೆ ಈ ಪದ್ಧತಿಯ ವಿಶೇಷತೆ ಎಂದರೆ 'ಸರಳ ಜೀವನ ಉನ್ನತ ವಿಚಾರಧಾರೆ'ಎಂಬುದನ್ನು ಮಕ್ಕಳ ಮನಸ್ಸಿನಲ್ಲಿ ಬಾಲ್ಯದಲ್ಲಿಯೇ ಬೆಳೆಸುವುದಾಗಿದೆ.

ಮಕ್ಕಳಿಗೆ ಶಾರೀರಿಕ ಮತ್ತು ಬೌದ್ಧಿಕ ಶಿಕ್ಷಣ:

ಪ್ರತಿಯೊಬ್ಬ ಪೋಷಕ ತನ್ನ ಮಕ್ಕಳು ಜ್ಞಾನವಂತರಾಗಲು, ಸುಸಂಸ್ಕೃತರಾಗಲು, ಚಿಂತನಶೀಲರಾಗುವ ಮೂಲಕ ಶಿಸ್ತಿನ ಸಿಪಾಯಿಗಳಾಗಬೇಕು ಎಂದು ಬಯಸುತ್ತಾನೆ. ಪೋಷಕರ ಆಸೆಗೆ ಅನುಗುಣವಾಗಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡಲಾಗುತ್ತಿದೆ. ಅದರ ಜೊತೆಗೆ ಪೂರಕವಾಗಿ ಪ್ರಾರ್ಥನೆ, ಭಜನೆ, ಧ್ಯಾನ, ಪ್ರಾಣಾಯಾಮ, ಲಘು ವ್ಯಾಯಾಮ, ಸೂರ್ಯ ನಮಸ್ಕಾರ, ಯೋಗಾಸನಗಳನ್ನು ಹೇಳಿಕೊಡಲಾಗುತ್ತಿದೆ.

ವಿವಿಧ ರಾಷ್ಟ್ರೀಯ ಹಬ್ಬಗಳ ಆಚರಣೆ, ದೇಶದ ಮಹಾತ್ಮರ, ಸಂತರ ಮತ್ತು ದಾರ್ಶನಿಕರ ಬಗ್ಗೆ ಆಗಾಗ್ಗೆ ಪ್ರವಚನಗಳನ್ನು ಏರ್ಪಡಿಸಿ ಅವರ ಜೀವನದ ಸತ್ಯದರ್ಶನ ಮಾಡಿಸುವ ಮೂಲಕ ಸದಾ ಕಾರ್ಯಶೀಲರಾಗುವಂತೆ ಮಾರ್ಗದರ್ಶನ ನೀಡಲಾಗುತ್ತಿದೆ.

ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳು:

ಮಕ್ಕಳ ಬೌದ್ಧಿಕ ಮತ್ತು ಮಾನಸಿಕ ವಿಕಾಸಕ್ಕೆ ಹಾಗೂ ಕಲಿಕೆಯಲ್ಲಿ ಆಸಕ್ತಿ ಹೆಚ್ಚಿಸಲು ಸಹಪಠ್ಯ ಚಟುವಟಿಕೆಗಳು ಅವಶ್ಯಕ. ಇವು ಮಕ್ಕಳಿಗೆ ಧೈರ್ಯ, ಸಾಹಸ ಮನೋಭಾವ ಮೂಡಿಸುವುದಲ್ಲದೆ, ಪ್ರತಿಭಾವಂತ ವ್ಯಕ್ತಿಗಳಾಗಿ ರೂಪಿಸುವ ವೇದಿಕೆಗಳಾಗಿದ್ದು, ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಈ ಕೆಳಗಿನ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡಲಾಗುತ್ತಿದೆ.

ಸಂಗೀತ, ನೃತ್ಯ, ಚಿತ್ರಕಲೆ, ಭಾಷಣ, ಚರ್ಚೆ, ಪ್ರಬಂಧ, ರಸಪ್ರಶ್ನೆಗಳ ಕಾರ್ಯಕ್ರಮಗಳು, ವೇದ-ಉಪನಿಷತ್, ಗೀತಾಶ್ಲೋಕಗಳ ಅಭ್ಯಾಸ, ಸಾಹಿತ್ಯ, ವಿಜ್ಞಾನ ಸೇರಿದಂತೆ ವಿವಿಧ ವೇದಿಕೆಗಳ ಅವಕಾಶ, ನಾಟಕ, ಯಕ್ಷಗಾನ ಕಲೆಗಳ ಸಾಂಸ್ಕೃತಿಕ ಕಲೆಗಳ ಅಭ್ಯಾಸ, ಸೇವೆ ಮತ್ತು ಶ್ರಮದಾನ ಮಾಡಿಸುವುದು, ಭಾರತ ಸೇವಾದಳ, ವೈವಿಧ್ಯಮಯ ಆಟೋಟಗಳಿಗೆ ಆದ್ಯತೆ, ಮಾಡೆಲ್ ಮೇಕಿಂಗ್ ಮತ್ತು ಕುಶಲಕಲೆಗಳಿಗೆ ಪ್ರೋತ್ಸಾಹ, ಶೈಕ್ಷಣಿಕ ಪ್ರವಾಸ ಹಾಗೂ ಪಿಕ್‌ನಿಕ್‌ಗಳಿಂದ ಮಕ್ಕಳ ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳು. ಪರಿಣಿತ ವ್ಯಕ್ತಿಗಳಿಂದ ವಿವಿಧ ಕಲೆಗಳ ಪರಿಚಯ ಮುಂತಾದ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸುವುದು.

ನಮ್ಮ ಸಂಸ್ಥೆಯಲ್ಲಿರುವ ಹೆಮ್ಮೆಯ ಸೌಲಭ್ಯಗಳು:

ಶ್ರೀ ರಾಮಕೃಷ್ಣ ವಿದ್ಯಾಸಂಸ್ಥೆ ಎಲ್ಲ ರೀತಿಯ ಆಧುನಿಕ ಸೌಲಭ್ಯಗಳನ್ನು ಅಳವಡಿಸಿಕೊಂಡಿದ್ದು, ಮಕ್ಕಳಿಗೆ ಗುಣಮಟ್ಟದ ಸೇವೆ ನೀಡುತ್ತಿದೆ.

ಮಕ್ಕಳ ಕ್ರೀಡಾ ಚಟುವಟಕೆಗಳಿಗೆ ವಿಶಾಲವಾದ ಆಟದ ಮೈದಾನ, ಪುಸ್ತಕಗಳ ಪರಾಮರ್ಶೆಗೆ ಮತ್ತು ಹೆಚ್ಚಿನ ಜ್ಞಾನಾರ್ಜನೆಗಾಗಿ ಸಾವಿರಾರು ಪುಸ್ತಕಗಳ ಗ್ರಂಥಾಲಯ, ಮಕ್ಕಳಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸಲು ವಿಜ್ಞಾನ ಪ್ರಯೋಗಾಲಯ, ಕಂಪ್ಯೂಟರ್ ಶಿಕ್ಷಣಕ್ಕೆ ಆದ್ಯತೆ ಮತ್ತು ಸುಸಜ್ಜಿತ ಕಂಪ್ಯೂಟರ್ ಕೇಂದ್ರ, ಐಐಟಿ. ಐಎಎಸ್, ಐಐಎಸ್‌ಸಿ, ಐಐಎಂ ನಂಥ ಉನ್ನತ ಸಂಸ್ಥೆಗಳ ಕುರಿತು 8 ನೇ ತರಗತಿಯಿಂದ ಮಾಹಿತಿ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಕನಸುಗಳ ಬಿತ್ತುವಿಕೆ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ವೀಕ್ಷಣೆಗೆ ಟಿವಿ ವ್ಯವಸ್ಥೆ, ಮಕ್ಕಳ ಆರೋಗ್ಯ ರಕ್ಷಣೆಯಲ್ಲಿ ಅಧ್ಯಾಪಕರೇ ಪೋಷಕರಾಗಿ ಕಾರ್ಯನಿರ್ವಹಣೆ, ಶುಚಿ ಮತ್ತು ರುಚಿಯಾದ ಪೌಷ್ಟಿಕಾಂಶಯುಳ್ಳ ಸಸ್ಯಾಹಾರಿ ಭೋಜನ ವ್ಯವಸ್ಥೆ, ಮಕ್ಕಳ ಸ್ನಾನಕ್ಕೆ ಬಿಸಿ ನೀರಿನ ಸೌಕರ್ಯ,ಶುದ್ಧ ಕುಡಿಯುವ ನೀರು, ನಿರಂತರ ವಿದ್ಯುತ್ ಸಂಪರ್ಕ ಮತ್ತು 24 ಗಂಟೆಗಳ ಸಿಸಿ ಟಿವಿ ರಕ್ಷಣಾ ವ್ಯವಸ್ಥೆ ಮಾಡಿದ್ದು, ಮಕ್ಕಳ ಬಗ್ಗೆ ವಿಶೇಷ ಮುತುವರ್ಜಿ ವಹಿಸಲಾಗುತ್ತಿದೆ.

ಸಂಸ್ಥೆಯ ಶೈಕ್ಷಣಿಕ ಸಾಧನೆಗಳು:

ಸಂಸ್ಥೆಯು ಮಕ್ಕಳ ಮೂಲಭೂತ ಕ್ಷಣಕ್ಕೆ ಒತ್ತು ನೀಡಿ ಶುದ್ಧವಾದ ಬರವಣಿಗೆ ಮತ್ತು ಸ್ಪಷ್ಟ ಓದುವಿಕೆಗೆ ಆದ್ಯತೆ ನೀಡಿದೆ. ಶಿಕ್ಷಕರ ಅವಿರತ ಪ್ರಯತ್ನ, ಶ್ರಮ, ಹೋರಾಟದ ಫಲವಾಗಿ ಪ್ರತಿ ವರ್ಷ SSLC ಯಲ್ಲಿ ಶೇ100 ಫಲಿತಾಂಶ ವನ್ನು ಪಡೆಯಲಾಗುತ್ತಿದೆ. ಹಲವಾರು ವರ್ಷಗಳಿಂದ ಪರೀಕ್ಷೆಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ, ದ್ವಿತೀಯ ಸ್ಥಾನ ಪಡೆದು ವಿದ್ಯಾರ್ಥಿಗಳು ಶಾಲೆಯ ಕೀರ್ತಿಯನ್ನು ಹೆಚ್ಚಿಸಿರುವುದು ಸ್ಮರಣೀಯ.

ಹಿಂದಿನ ವರ್ಷಗಳ ಶೈಕ್ಷಣಿಕ (SSLC) ಸಾಧಕರು



ಅಭಿಜ್ಞಾ ಭಟ್	ವಿಕಾಸ್	ಸುವಿಧಾ ಹೆಚ್.	ರೋಹನ್ ಎಂ. ಪಾಟೀಲ್
625/625	625/625	624/625	97%




ಸ್ಪೋರ್ಟ್ಸ್ ಅಚೀವ್ಮೆಂಟ್



ಧ್ಯಾನ ಪ್ರಾರ್ಥನೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳು





ವಸತಿ ಶಾಲೆಯ ವಿಶೇಷತೆಗಳು

* ಹಚ್ಚ ಹಸಿರಿನ ಪ್ರಕೃತಿ ಮಧ್ಯದಲ್ಲಿ ಶಿಸ್ತುಬದ್ಧ ಸುಸಂಸ್ಕೃತ, ಗುಣಮಟ್ಟದ ಶಿಕ್ಷಣ
* ಯೋಗ, ಧ್ಯಾನ, ನೃತ್ಯ, ಭಜನೆ ಹಾಗೂ ಆತ್ಮಜಾಗೃತಿ
* ಸಕಲ ಸೌಲಭ್ಯಗಳುಳ್ಳ ವಿಶಾಲವಾದ ನೂತನ ಶೈಕ್ಷಣಿಕ ಕೇಂದ್ರ ಮತ್ತು ವಸತಿ ಕಟ್ಟಡ
* ಪ್ರತಿಯೊಬ್ಬ ಪ್ರತಿಭೆಗೂ ಪೂರಕ ಅವಕಾಶ ಮತ್ತು ಅಗತ್ಯ ತರಬೇತಿ
* ಕನ್ನಡ ಮತ್ತು ಇಂಗ್ಲೀಷ್ ಮತ್ತು & ಹಿಂದಿ ಭಾಷೆಗಳ ಕಲಿಕೆ & ವ್ಯಾಕರಣಕ್ಕೆ ಸಮಾನ ಅವಕಾಶ
* ಪಾಠಗಳ ಪರಿಣಾಮಕಾರಿ ಅರ್ಥೈಸುವಿಕೆ SMART CLASS, VISUAL ಬಳಕೆ
* ಸದೃಢ ದೇಹದಲ್ಲಿಯ ಸದೃಢ ಮನಸ್ಸಿಗಾಗಿ ಆಟ, ನಾಟಕ, ಯಕ್ಷಗಾನ, ಚಿತ್ರಕಲೆ ಸಂಗೀತ
* ಶುಚಿ-ರುಚಿಯಾದ ಪೌಷ್ಟಿಕಾಂಶವುಳ್ಳ ಊಟದ ವ್ಯವಸ್ಥೆ
* ಮಕ್ಕಳಿಂದಲೇ ವಿಜ್ಞಾನ ಪ್ರಯೋಗಗಳ ಮಾದರಿಗಳ ರಚನೆ
* ನಿಧಾನ ಕಲಿಕೆಯ (Slow learners) ಮಕ್ಕಳಿಗೆ ವಿಶೇಷ ತರಗತಿಗಳು
* ಪಠ್ಯದ ಜೊತೆಗೆ ಕಂಪ್ಯೂಟರ್ ಟ್ರೈನಿಂಗ್ ನೀಡುವ ವಿಶೇಷತೆಗಳು ನಮ್ಮ ಸಂಸ್ಥೆಯ ಹೆಚ್ಚುಗಾರಿಕೆಗಳು.



ಗುರುಕುಲ ಸಂಸ್ಕೃತಿ, ಸಂಸ್ಕಾರದ ಅಡಿಪಾಯದಲ್ಲಿ ಕಟ್ಟಿದ ಹೆಮ್ಮೆಯ ಶೈಕ್ಷಣಿಕ ಸಂಸ್ಥೆ



Separate Hostel facility for Girls & Boys



ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :

ಸಂಸ್ಥೆಯು 2025-26ನೇ ಸಾಲಿಗೆ ಪ್ರವೇಶ ಪ್ರಾರಂಭಿಸಿದೆ

SRI RAMAKRISHNA VIDYALAYA
EDUCATION IS POWER

ಪ್ರವೇಶಕ್ಕಿರುವ ತರಗತಿಗಳು:

ತರಗತಿ 5ರಿಂದ 10ರವರೆಗೆ

ಸಿಲೆಬಸ್: State ಮತ್ತು CBSE



ಆಯ್ಕೆ ವಿಧಾನ

ಪ್ರವೇಶ ಪರೀಕ್ಷೆ ಮತ್ತು ಸಂದರ್ಶನದ ಆಧಾರದ ಮೇಲೆ
ಮೊದಲನೆ ಪ್ರವೇಶ ಪರೀಕ್ಷೆ : ದಿನಾಂಕ 9-3-2025 ಭಾನುವಾರ
ಎರಡನೆ ಪ್ರವೇಶ ಪರೀಕ್ಷೆ : ದಿನಾಂಕ 6-4-2025 ಭಾನುವಾರ
ಸಮಯ : ಬೆಳಿಗ್ಗೆ 10-30 ಕ್ಕೆ
ಸಂದರ್ಶನ : ಇದೇ ದಿನದಂದು ಮಧ್ಯಾಹ್ನ 2-00 ಗಂಟೆಗೆ
ಸ್ಥಳ: ಶಾಲಾ ಆವರಣ, M L ಹಳ್ಳಿ, ಸಾಗರ ತಾ॥

Specialities of Our Institution

* Experienced and Dedicated Teachers
* Spacious & Ventilated class rooms
* Well-equipped science Laboratories
* Well-stacked library and journals Periodical Examinations
* Importance to character building and personality Development
* Growth into a Complete Human being and Responsible citizen
* Exclusive session on effective communication In English
* Smart classes for effective teaching
* Information for IAS, IIT, IISC, IISER & IIM By experts
* Well-equipped sports Rooms & wide play Ground
* All modern facilities are being made available at our School
* Round the clock CCTV surveillance

ಅರ್ಜಿ ಮತ್ತು ಪ್ರಾಸ್ಪೆಕ್ಟಸ್ ಶಾಲೆಯಲ್ಲಿ ಲಭ್ಯ

ಮಕ್ಕಳನ್ನು ಸೇರಿಸ ಬಯಸುವ ಪೋಷಕರು ರೂ.300/- ನ್ನು ಕೆಳಕಂಡ ಅಕೌಂಟ್ ನಂಬರಗೆ ಕಳುಹಿಸಿ ಪಡೆಯಬಹುದು.

Sri Ramakrishna Gurukulasharama Trust (R).
A/C NO. 0574101030268
• IFSC Code : CNRB0000574
Canara Bank Or Google Pay : 6361467191
E-mail: Srkvvmlhalli123@gmail.com
Website: Ramakrishnagurukulashramasag.in

• 9449774451 • 9449921950 • 9483312141 • 6361464798

– ಆಡಳಿತ ಮಂಡಳಿ

ಭಾನುವಾರದ ರಜಾದಿನವನ್ನು ಸದುಪಯೋಗಪಡಿಸಿಕೊಂಡ ಜನರು

ಜನಜಾತ್ರೆಯಾದ ಪುಸ್ತಕಮೇಳ

ಪ್ರಜಾವಾಣಿ ವಾರ್ತೆ



ವಿಧಾನಸೌಧದ ಆವರಣದಲ್ಲಿ ನಡೆಯುತ್ತಿರುವ 'ಪುಸ್ತಕ ಮೇಳ'ದ ಸಂದರ್ಭದಲ್ಲಿ ವಿಧಾನಸಭೆ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿದ್ದು, ರಜಾದಿನವಾದ ಭಾನುವಾರ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು ಚಿತ್ರ: ಎಂ.ಎಸ್.ಮಂಜುನಾಥ್

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಹಮ್ಮಿಕೊಂಡಿರುವ ಕರ್ನಾಟಕ ವಿಧಾನಸಭೆ 'ಪುಸ್ತಕ ಮೇಳ-2025' ಭಾನುವಾರ ಜನಜಾತ್ರೆಯಾಗಿ ಪರಿವರ್ತನೆಗೊಂಡಿತು. ಭಾನುವಾರದ ರಜಾದಿನವನ್ನು ಸದುಪಯೋಗಪಡಿಸಿಕೊಳ್ಳಲು ಭಾರಿ ಸಂಖ್ಯೆಯಲ್ಲಿ ಜನರು ದಾಂಗುಡಿ ಇಟ್ಟಿದ್ದು ಇದಕ್ಕೆ ಕಾರಣವಾಯಿತು.

ಇಲ್ಲಿವರೆಗೆ ವಿಧಾನಸೌಧದ ಒಳಗೆ ಪ್ರವೇಶಿಸಲು ಅವಕಾಶ ಸಿಗದ ಜನರು ಬಂದು ಸಂಭ್ರಮಪಟ್ಟರು. ಬೆಳಿಗ್ಗೆಯೇ ಭಾರಿ ಸಂಖ್ಯೆಯಲ್ಲಿ ಬಂದು ಗೇಟ್ ಮುಂದೆ ಸರದಿಯಲ್ಲಿ ನಿಂತು ಒಳಬರಲು ಗಂಟೆಗಟ್ಟಲೆ ಕಾದರು. ಹಿರಿಯರು ಕಾದು ಸುಸ್ತಾಗಿ ಪೊಲೀಸರಿಗೆ, ಸಿಬ್ಬಂದಿಗೆ ಬೈದರು. ನಾಲ್ಕು ಗೇಟ್‌ಗಳಲ್ಲಿ ಒಳಬರಲು ಅವಕಾಶ ಇದ್ದರೂ ಭದ್ರತೆಯ ಕಾರಣದಿಂದ ಎಲ್ಲರನ್ನೂ ತಪಾಸಣೆ ಮಾಡಿ ಒಳಗೆ ಬಿಡಬೇಕಿರುವುದರಿಂದ ಪೊಲೀಸರು, ಭದ್ರತಾ ಸಿಬ್ಬಂದಿ ಸುಸ್ತಾಗಿ ಹೋದರು.

ವಿಧಾನಸೌಧದ ಆವರಣದ ಒಳಗೆ ಬಂದವರು ವಿಧಾನಸಭೆ ನೋಡಲು ಸರದಿಯಲ್ಲಿ ನಿಂತಿದ್ದರಿಂದ ಅಲ್ಲೂ ಜನಜಂಗುಳಿ ಉಂಟಾಯಿತು. ಶಕ್ತಿ ಸೌಧ ನೋಡಿದ ಸಾಕ್ಷಿಗಾಗಿ ಪ್ರತಿಮೆಗಳ ಮುಂದೆ, ವಿಧಾನಸೌಧದ ಮುಂದೆ ನಿಂತು ಫೋಟೊ, ಸೆಲ್ಫಿ ತೆಗೆದುಕೊಂಡು ಸಡಗರಪಟ್ಟರು.

ವಿಧಾನಸಭೆಯ ಒಳಗೆ ಯಾರಿಗೂ ಫೋಟೊ ತೆಗೆಯಲು ಅವಕಾಶ ಇರಲಿಲ್ಲ. ಯಾರದ್ದೇ ಕೈಯಲ್ಲಿ ಮೊಬೈಲ್ ಕಂಡ ಕೂಡಲೇ, 'ಮೊಬೈಲ್ ಜೇಬಲ್ಲಿ ಹಾಕಿಕೊಳ್ಳಿ. ಬ್ಯಾಗಲ್ಲಿ ಹಾಕಿಕೊಳ್ಳಿ' ಎಂದು ಸಿಬ್ಬಂದಿ ಎಚ್ಚರಿಸಿದರು. ಇದು ಮುಖ್ಯಮಂತ್ರಿ ಕುಳಿತುಕೊಳ್ಳುವ ಕುರ್ಚಿ, ಇದು ಸ್ಪೀಕರ್ ಕುಳಿತುಕೊಳ್ಳುವ ಆಸನ, ಇದು ಅಧಿವೇಶನದ ಚರ್ಚೆಗಳನ್ನು ದಾಖಲಿಸುವ ಜಾಗ ಎಂದೆಲ್ಲ ಸಿಬ್ಬಂದಿ ನೋಡುಗರಿಗೆ ವಿವರ ನೀಡಿದರು.

ಮಳಿಗೆಗಳಿಗೆ ಭಾರಿ ಸಂಖ್ಯೆಯಲ್ಲಿ ಭೇಟಿ ನೀಡಿ ತಮಗಿಷ್ಟದ ಕಥೆ, ಕಾದಂಬರಿ ಇನ್ನಿತರ ಪುಸ್ತಕಗಳನ್ನು ಖರೀದಿಸಿದರು. ಯುವಜನರು ಮುಂದಿನ ಸ್ಪರ್ಧಾತ್ಮಕ ಪರೀಕ್ಷೆಗೆ ಪೂರಕವಾದ ಪುಸ್ತಕಗಳನ್ನು ಹೆಚ್ಚು ಖರೀದಿಸಿದರು. ಪುಸ್ತಕಗಳಿಗೆ ಒಳ್ಳೆಯ ಮಾರುಕಟ್ಟೆ ಕಂಡು ಪ್ರಕಾಶಕರು ಸಂತಸಗೊಂಡರು. ಸರ್ಕಾರಿ ಸ್ವಾಮ್ಯದ ಮಳಿಗೆಗಳ ಕಡೆಗೆ ಮಾತ್ರ ಪುಸ್ತಕ ಪ್ರೇಮಿಗಳ ಗಮನ ಕಡಿಮೆಯಾಗಿತ್ತು.

ಜಿಲ್ಲೆ, ತಾಲ್ಲೂಕಿಗೂ 'ಪುಸ್ತಕ ಹಬ್ಬ' ಹಬ್ಬಿಸಿ

'ಪುಸ್ತಕ ಮೇಳ'ದಲ್ಲಿ 'ಹೊಸತು' ಪತ್ರಿಕೆ ಸಂಪಾದಕ ಸಿದ್ದನಗೌಡ ಪಾಟೀಲ

ಪ್ರಜಾವಾಣಿ ವಾರ್ತೆ



'ಓದಿನ ಸುಖ' ಸಂವಾದ ಗೋಷ್ಠಿಯಲ್ಲಿ ಸಿದ್ದನಗೌಡ ಪಾಟೀಲ ಮಾತನಾಡಿದರು. ಎಚ್.ಎಲ್.ಪುಷ್ಪ ಮತ್ತು ನರಹಳ್ಳಿ ಬಾಲಸುಬ್ರಹ್ಮಣ್ಯ ಉಪಸ್ಥಿತರಿದ್ದರು

ಬೆಂಗಳೂರು: ಜಿಲ್ಲೆ, ತಾಲ್ಲೂಕು ಸೇರಿದಂತೆ ಸ್ಥಳೀಯ ಆಡಳಿತ ಕಚೇರಿಗಳ ಆವರಣದಲ್ಲಿ ಸರ್ಕಾರ ಪ್ರತಿ ವರ್ಷ ಒಂದು ದಿನ ಪುಸ್ತಕ ಮೇಳವನ್ನು ಆಯೋಜಿಸಬೇಕು ಎಂದು 'ಹೊಸತು' ಪತ್ರಿಕೆ ಸಂಪಾದಕ ಸಿದ್ದನಗೌಡ ಪಾಟೀಲ ಸಲಹೆ ನೀಡಿದರು.

ವಿಧಾನಸೌಧದ ಆವರಣದಲ್ಲಿ ನಡೆಯುತ್ತಿರುವ ಪುಸ್ತಕ ಮೇಳದ ಭಾಗವಾಗಿ ಭಾನುವಾರ ಆಯೋಜಿಸಿದ್ದ 'ಓದಿನ ಸುಖ' ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

'ಪುಸ್ತಕ ಮೇಳದ ನೆಪದಲ್ಲಿ ಸರ್ಕಾರ ಪ್ರಭುತ್ವದ ಆವರಣಕ್ಕೆ ಪ್ರಜೆಗಳನ್ನು ಮತ್ತು ಅರಿವನ್ನೂ ಆಹ್ವಾನಿಸಿದೆ. ಇದೊಂದು ಸ್ವಾಗತಾರ್ಹ ಕಾರ್ಯ. ಇದೇ ರೀತಿ ರಾಜ್ಯದ ಜಿಲ್ಲೆ, ತಾಲ್ಲೂಕು ಮತ್ತು ಪಾಲಿಕೆಗಳ ಪ್ರಭುತ್ವದ ಅಂಗಳಕ್ಕೂ ಇಂಥ ಪುಸ್ತಕ ಹಬ್ಬವನ್ನು ವಿಸ್ತರಿಸಿದರೆ, ಅಲ್ಲಿನವರಿಗೂ ಪುಸ್ತಕಗಳು ತಲುಪುತ್ತವೆ' ಎಂದು ಆಶಿಸಿದರು.

'ಪಠ್ಯದ ಓದು ಪರೀಕ್ಷೆಗಾದರೆ, ಪಠ್ಯೇತರ ಓದು ಬದುಕಿಗೆ ದಾರಿ ತೋರುತ್ತದೆ. ಓದು, ಶಿಕ್ಷಣ ವಿಧಾನ ಬದಲಾಗಿರುವ ಕಾಲದಲ್ಲಿ ಯಾವ ರೀತಿಯ ಶಿಕ್ಷಣ ಅಥವಾ ಪಠ್ಯೇತರ ಶಿಕ್ಷಣ ಪರಿಕರಗಳನ್ನು ರೂಪಿಸಬೇಕು ಎಂಬುದರ ಬಗ್ಗೆಯೂ ಸರ್ಕಾರ, ಶಿಕ್ಷಣ ತಜ್ಞರು ಚಿಂತಿಸಬೇಕಿದೆ' ಎಂದರು.

ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, 'ಇಲ್ಲಿರುವವರೆಲ್ಲ ಬಹುಪಾಲು ಓದಿನ ಶತ್ರುಗಳು. ಅವರೆಲ್ಲ ಓದಿನಿಂದ ದೂರವಾಗಿ ಎಷ್ಟೋ ವರ್ಷಗಳಾಯಿತು. ಇಂಥ ಕಾಲಘಟ್ಟದಲ್ಲಿ ವಿಧಾನಸೌಧದ ಅಂಗಳದಲ್ಲಿ ಪುಸ್ತಕ ಮೇಳ ಆಯೋಜಿಸಿರುವುದು ಸಾರ್ಥಕವಾದ ಕೆಲಸ. ಇದು, ವಿಧಾನಸೌಧದ ಇತಿಹಾಸದಲ್ಲೇ ಒಂದು ಅತ್ಯುತ್ತಮವಾದ ಕಾರ್ಯ' ಎಂದು ಪ್ರಶಂಸಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಮಾತನಾಡಿ, 'ಓದು, ಜಗತ್ತಿನ ವಿಚಾರಗಳನ್ನೆಲ್ಲ ತಿಳಿಸುತ್ತದೆ. ಹೊರ ಜಗತ್ತಿನೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ನಮ್ಮ ಆಲೋಚನಾ ವಿಧಾನವನ್ನು ಬದಲಾಯಿಸುತ್ತದೆ. ನಮ್ಮ ಕಲ್ಪನೆಯನ್ನು ವಿಸ್ತರಿಸುತ್ತದೆ' ಎಂದರು.

ಕಾರ್ಯಕ್ರಮದಲ್ಲಿ 'ಓದಿನ ಸುಖ' ಕುರಿತು ಪ್ರೇಕ್ಷಕರೊಂದಿಗೆ ಸಂವಾದ ನಡೆಯಿತು.



ಪುಸ್ತಕ ಮೇಳದಲ್ಲಿದ್ದ ಮಳಿಗೆಯೊಂದರಲ್ಲಿ ಪುಸ್ತಕ ವೀಕ್ಷಿಸುತ್ತಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರೊಂದಿಗೆ ಯು.ಟಿ. ಖಾದರ್, ಬಸವರಾಜ ಹೊರಟ್ಟಿ

ಪುಸ್ತಕ ಮೇಳಕ್ಕೆ ರಾಜ್ಯಪಾಲರ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ವಿಧಾನಸಭೆ ಸಚಿವಾಲಯ ಆಯೋಜಿಸಿರುವ ಪುಸ್ತಕ ಮೇಳಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಭಾನುವಾರ ಸಂಜೆ ಭೇಟಿ ನೀಡಿದರು.

ಮೇಳದಲ್ಲಿದ್ದ ವಿವಿಧ ಪ್ರಕಾಶನ ಮಳಿಗೆಗಳಿಗೆ ಭೇಟಿ ನೀಡಿ, ಪುಸ್ತಕಗಳನ್ನು ವೀಕ್ಷಿಸಿದರು. ಮೇಳದಲ್ಲಿ ಭಾಗವಹಿಸಿದವರೊಂದಿಗೆ ಸಂವಾದ ನಡೆಸಿದರು.

ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರು ರಾಜ್ಯಪಾಲರಿಗೆ ಪುಸ್ತಕ ಮೇಳದ ಹಿಂದಿನ ಉದ್ದೇಶವನ್ನು ವಿವರಿಸಿದರು. ಓದು ಮತ್ತು ಜ್ಞಾನ ಪ್ರಸರಣ ಉತ್ತೇಜಿಸುವ ಗುರಿಯೊಂದಿಗೆ ಮೇಳ ಆಯೋಜಿಸಿರುವುದಾಗಿ ತಿಳಿಸಿದರು.

ಪುಸ್ತಕ ಮೇಳ ವೀಕ್ಷಿಸಲು ಬಂದಿದ್ದ ಕೆಲವು ಮಕ್ಕಳೊಂದಿಗೆ ರಾಜ್ಯಪಾಲರು ಕನ್ನಡದಲ್ಲಿ ಮಾತನಾಡಿದ್ದು, ನೆರೆದಿದ್ದವರ ಗಮನ ಸೆಳೆಯಿತು.

ಜನ ಏನಂತಾರೆ?



ವಿಧಾನಸೌಧದ ಒಳಗೆ ಒಮ್ಮೆಯೂ ಬಂದಿರಲಿಲ್ಲ. ಜೊತೆಗೆ ಒಂದೇ ಕಡೆ ಇಷ್ಟೊಂದು ಮಳಿಗೆಗಳನ್ನು ನೋಡುವ ಅವಕಾಶವೂ ಸಿಕ್ಕಿರಲಿಲ್ಲ. ಸ್ನೇಹಿತರೊಂದಿಗೆ ಬಂದು ವಿಧಾನಸೌಧ ನೋಡಿ ಪುಸ್ತಕ ಮಳಿಗೆಗಳಿಗೆ ಭೇಟಿ ನೀಡಿದ್ದೇವೆ. ಪುಸ್ತಕ ಖರೀದಿಸಿದ್ದೇವೆ.

ನಂದಿನಿ ಎಸ್., ವಿದ್ಯಾರ್ಥಿನಿ, ಎಚ್‌ಎಸ್‌ಆರ್ ಬಡಾವಣೆ



ನಮ್ಮ ಪುಸ್ತಕ ಮಳಿಗೆ ಹಿಂಭಾಗದಲ್ಲಿ ಇರುವುದರಿಂದ ಜನರು ನೇರವಾಗಿ ಇಲ್ಲಿಗೆ ಬರುವುದಿಲ್ಲ. ಬೇರೆ ಮಳಿಗೆ ನೋಡಿಕೊಂಡು ಆನಂತರ ಇಲ್ಲಿಗೆ ಬರುತ್ತಿದ್ದಾರೆ. ಆದರೂ ವ್ಯಾಪಾರ ಚೆನ್ನಾಗಿದೆ.

ಮಹೇಶ ನಾಯಕ, 'ಅಭಿವ್ಯಕ್ತಿ' ಸಾಂಸ್ಕೃತಿಕ ವೇದಿಕೆ ಮಳಿಗೆ



ನನಗೆ ಕನ್ನಡ ಪುಸ್ತಕ ಅಂದರೆ ಬಹಳ ಪ್ರೀತಿ. ಅದಕ್ಕೆ ಹೆಚ್ಚು ಪುಸ್ತಕ ಖರೀದಿ ಮಾಡಿದ್ದೇನೆ. ಇದೇ ಮೊದಲ ಬಾರಿಗೆ ವಿಧಾನಸೌಧದ ಒಳಗೆ ಬಂದಿದ್ದೇನೆ. ಪ್ರತಿ ವರ್ಷ ಪುಸ್ತಕ ಮೇಳ ಮಾಡುವ ಮೂಲಕ ಜನರು ಇಲ್ಲಿಗೆ ಬರುವಂತೆ ಮಾಡಬೇಕು.

ದರ್ಶಿನಿ ಶೆಟ್ಟಿ ಸಾಗರ, ಸಿ.ಎ. ವಿದ್ಯಾರ್ಥಿನಿ, ಪದ್ಮನಾಭನಗರ

ಪುಸ್ತಕ ಖರೀದಿಯಲ್ಲಿ 'ಯುವೋತ್ಸಾಹ'

ಪ್ರಜಾವಾಣಿ ವಾರ್ತೆ



ಮೇಳದಲ್ಲಿ ವಿದ್ಯಾರ್ಥಿಗಳು ಪುಸ್ತಕ ಖರೀದಿಸಿದರು

ಬೆಂಗಳೂರು: ಪೋಷಕರ ಕೈಯಲ್ಲಿ ಕನ್ನಡ ಹೊತ್ತಿಗೆಗಳು, ಮಕ್ಕಳ ಕೈಯಲ್ಲಿ ಇಂಗ್ಲಿಷ್ ಪುಸ್ತಕಗಳು, ಯುವಕ-ಯುವತಿಯರ ಕೈಯಲ್ಲಿ ತೇಜಸ್ವಿ, ಕಾರಂತ, ಕುವೆಂಪು, ಭೈರಪ್ಪ ಸೇರಿದಂತೆ ಹೊಸ ತಲೆಮಾರಿನ ಬರಹಗಾರರ ಪುಸ್ತಕಗಳು.. ಸರತಿಯಲ್ಲಿ ಇದ್ದವರಿಗೆ ಸೌಧದ ವೀಕ್ಷಣೆಯ ಕಾತರ, ಮಳಿಗೆಯಲ್ಲಿದ್ದವರಿಗೆ ಪುಸ್ತಕಗಳ ಆಯ್ಕೆಯ ಸಂಭ್ರಮ..!

ವಿಧಾನಸೌಧದ ಅಂಗಳದಲ್ಲಿ ವಿಧಾನ ಸಭೆಯ ಸಚಿವಾಲಯ ಆಯೋಜಿಸಿರುವ 'ಪುಸ್ತಕ ಮೇಳ'ದ ಮೂರನೆಯ ದಿನವಾದ ಭಾನುವಾರ ಮಧ್ಯಾಹ್ನ ಉರಿಬಿಸಿಲಲ್ಲಿ ಕಂಡು ಬಂದ ದೃಶ್ಯಗಳಿವು.

ವಿಧಾನಸೌಧದ ಸುತ್ತ ಪುಸ್ತಕ ಮಳಿಗೆಗಳ ರಂಗವಲ್ಲಿ. ಪ್ರತಿ ಮಳಿಗೆಯ ಎದುರು ಪುಸ್ತಕ ಪ್ರೇಮಿಗಳ ಸಾಲು. ಯುವ ಸಮೂಹ ಉತ್ಸಾಹದಿಂದ ಪುಸ್ತಕ ಖರೀದಿಸುತ್ತಿದ್ದರೆ, ಸೌಧ ವೀಕ್ಷಣೆಗಾಗಿ ಜನರು ರಾಜಭವನದ ತುದಿಯಿಂದ ವಿಧಾನಸೌಧದ ಪೂರ್ವದ್ವಾರದವರೆಗೆ ಸರತಿಯಲ್ಲಿ ನಿಂತಿದ್ದರು.

ಪೋಷಕರು, ಮಕ್ಕಳಿಗೆ ಪುಸ್ತಕಗಳನ್ನು ಆಯ್ಕೆ ಮಾಡಿಕೊಡುತ್ತಿದ್ದರು. ಕೆಲವರು ತಮ್ಮ ಮೆಚ್ಚಿನ ಲೇಖಕರ ಪುಸ್ತಕಗಳನ್ನು ಹುಡುಕಿಕೊಂಡು ಹೋಗಿ ಖರೀದಿಸುತ್ತಿದ್ದರು. ಪ್ರತಿಯೊಬ್ಬರ ಕೈಯ ತೆಕ್ಕೆಯಲ್ಲೂ ಪುಸ್ತಕಗಳ ರಾಶಿ.

'ಪುಸ್ತಕ ವ್ಯಾಪಾರ ಚೆನ್ನಾಗಿದೆ. ಅದಕ್ಕಿಂತ ಹೆಚ್ಚಾಗಿ ಪುಸ್ತಕ ಖರೀದಿಗೆ ಹೊಸ ಓದುಗರು ಬರುತ್ತಿದ್ದಾರೆ' ಎಂದು ಮೇಳದಲ್ಲಿ ಭಾಗವಹಿಸಿದ್ದ ಹಲವು ಪ್ರಕಾಶಕರು ಪ್ರತಿಕ್ರಿಯಿಸಿದರು.

'ಯುವ ಸಮೂಹ ಪುಸ್ತಕ ಖರೀದಿಸುತ್ತಿದೆ. ತೇಜಸ್ವಿ ಅವರ ಕೃತಿಗಳು ಹೆಚ್ಚು ಮಾರಾಟವಾಗಿವೆ. ಮೇಳ ಹೊಸ ಓದುಗರನ್ನು ಸೆಳೆಯುತ್ತಿದೆ. ಇದು ವಿಶೇಷ' ಎಂದು ಅಭಿರುಚಿ ಪ್ರಕಾಶನದ ಗಣೇಶ್ ಹೇಳಿದರು.

'ಹೊಸ ಲೇಖಕರ ಪುಸ್ತಕಗಳಿಗೆ ಹೆಚ್ಚು ಬೇಡಿಕೆ ಇದೆ. 3ನೇ ದಿನಕ್ಕೆ ಕೆಲವು ಕೃತಿಗಳು ಮುಗಿದು ಹೋದವು. ಯುವಕ ಯುವತಿಯರು ಹೆಚ್ಚಾಗಿ ಪುಸ್ತಕ ಖರೀದಿಸುತ್ತಿದ್ದಾರೆ. ಇದೊಂದು ಹೊಸ ಬೆಳವಣಿಗೆ' ಎಂದು 'ಬಹುರೂಪಿ' ಪ್ರಕಾಶನದ ಶ್ರೀಜಾ ಹೇಳಿದರು.

ಜರ್ಮನಿಯ 'ಕನ್ನಡ ಶಾಲೆ' ಜೊತೆ ಶಿಕ್ಷಣ ಇಲಾಖೆ ಒಪ್ಪಂದ

ವಿದೇಶದಲ್ಲಿ ಕನ್ನಡ ಕಲರವ

• ಕೃಷ್ಣಿ ಶಿರೂರ

ಹುಬ್ಬಳ್ಳಿ: ಜರ್ಮನಿಯ ಮ್ಯೂನಿಕ್ ನಗರದಲ್ಲಿ ಆರಂಭಗೊಂಡಿರುವ 'ನಮ್ಮ ಕನ್ನಡ ಶಾಲೆ ಜರ್ಮನಿ' ಮತ್ತು ರಾಜ್ಯ ಸರ್ಕಾರದ ಶಾಲಾ ಶಿಕ್ಷಣ ಇಲಾಖೆ ನಡುವೆ ಒಪ್ಪಂದವಾಗಿದ್ದು, ಕನ್ನಡ ಕಲಿಕೆ ಇನ್ನಷ್ಟು ವಿಸ್ತಾರ ಆಗಲಿದೆ.

> ರಾಜ್ಯ ಸರ್ಕಾರದ ಜೊತೆಗಿನ ಒಪ್ಪಂದವು ನಮ್ಮ ಕನ್ನಡ ಶಾಲೆಯ ಚಟುವಟಿಕೆಗಳನ್ನು ಜರ್ಮನಿಯಲ್ಲಿ ವಿಸ್ತರಿಸಲು ಮತ್ತು ಕನ್ನಡ ಕಲಿಸಲು ಪ್ರೇರಣೆ ನೀಡಿದೆ
> **ರಶ್ಮಿ ನಾಗರಾಜ,** ಸಂಚಾಲಕಿ, ಆಡಳಿತಾಧಿಕಾರಿ, ನಮ್ಮ ಕನ್ನಡ ಶಾಲೆ, ಜರ್ಮನಿ

> ಇದೇ ಮೊದಲ ಬಾರಿಗೆ ಹೊರದೇಶದಲ್ಲಿ ಕನ್ನಡ ಕಲಿಕೆಗೆ ಕರ್ನಾಟಕ ಶಿಕ್ಷಣ ಇಲಾಖೆ ವತಿಯಿಂದ ನಮ್ಮ ಕನ್ನಡ ಶಾಲೆ ಜರ್ಮನಿ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ
> **ಕೆ.ವಿ.ತ್ರಿಲೋಕಚಂದ್ರ,** ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ



'ನಮ್ಮ ಕನ್ನಡ ಶಾಲೆ ಜರ್ಮನಿ' ಮತ್ತು ಶಾಲಾ ಶಿಕ್ಷಣ ಇಲಾಖೆ ನಡುವೆ ಒಪ್ಪಂದ ಪ್ರಕ್ರಿಯೆ ಈಚೆಗೆ ಪೂರ್ಣಗೊಂಡಿದ್ದು, ನಲಿ-ಕಲಿ ಪಠ್ಯ ಕ್ರಮದ ಜೊತೆಗೆ ಇತರ ಹಂತದ ಕನ್ನಡ ಕಲಿಕೆಗೂ ಇದು ಪೂರಕವಾಗಲಿದೆ.

'ಹೊರದೇಶದಲ್ಲಿ ನಲಿ-ಕಲಿ ಪಠ್ಯ ಕ್ರಮವನ್ನು ಪರಿಣಾಮಕಾರಿ ಸ್ವರೂಪದಲ್ಲಿ ಅನುಷ್ಠಾನಕ್ಕೆ ತರುವುದಕ್ಕಾಗಿ ನಮ್ಮ ಶಾಲೆಯನ್ನು ಪರಿಗಣಿಸಿರುವುದು ಖುಷಿಯ ಸಂಗತಿ. ಸಂಸದ ತೇಜಸ್ವಿಸೂರ್ಯ, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ರಿತೇಶ್ ಕುಮಾರ್ ಸಿಂಗ್ ಈ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸಿದರು' ಎಂದು ಜರ್ಮನಿ ಶಾಲೆಯ ಆಡಳಿತಾಧಿಕಾರಿ ರಶ್ಮಿ ನಾಗರಾಜ್ ವಿವರಿಸಿದರು.

ಒಪ್ಪಂದದ ಪ್ರಕಾರ, ಇಲಾಖೆಯು ಪಠ್ಯಕ್ರಮ ಒದಗಿಸುವುದರ ಜೊತೆಗೆ ಪರಿಶೀಲನೆಯನ್ನೂ ನಡೆಸಲಿದೆ. ಶಿಕ್ಷಕರಿಗೆ ಕಾರ್ಯಾಗಾರ, ಕ್ರಿಯಾ ಚಟುವಟಿಕೆ ಮತ್ತು ಮಕ್ಕಳ ಪ್ರಗತಿಯನ್ನೂ ಪರಿಶೀಲಿಸಲಾಗುವುದು. ಯುರೋಪ್‌ನ ಶಾಲೆಗಳಲ್ಲಿ ಕನ್ನಡವನ್ನು ಒಂದು ಕಲಿಕಾ ಭಾಷೆಯಾಗಿ ಸೇರಿಸಲು ರಾಜ್ಯ ಸರ್ಕಾರ ನೆರವಾಗಲಿದೆ.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಾಣ ಆಗುತ್ತಿರುವುದು ಹೆಮ್ಮೆಯ ಸಂಗತಿ' ಎಂದು ಶಿಕ್ಷಕಿ ಲತಾ ವೆಂಕಟಸ್ವಾಮಿ ತಿಳಿಸಿದರು.

2022ರಲ್ಲಿ ಆರಂಭಗೊಂಡ ಜರ್ಮನಿಯ ಶಾಲೆಯಲ್ಲಿ ಮಕ್ಕಳಿಗೆ ಆನ್‌ಲೈನ್‌ನಲ್ಲೂ ಪಾಠ ಮಾಡಲಾಗುತ್ತದೆ. ವಾರಕ್ಕೊಮ್ಮೆ ನಡೆಯುವ ತರಗತಿಯಲ್ಲಿ ಕನ್ನಡದ ಜೊತೆಗೆ ಆಟ, ಕರಕುಶಲ ಕಲೆ, ಕಥೆ, ಪದ್ಯ ಹಾಗೂ ನಾಟಕಗಳನ್ನು ಹೇಳಿಕೊಡಲಾಗುತ್ತದೆ. 90ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ. ಕರ್ನಾಟಕದಿಂದ ಉದ್ಯೋಗಕ್ಕಾಗಿ ಜರ್ಮನಿಯಲ್ಲಿ ನೆಲೆನಿಂತವರು ಉಚಿತವಾಗಿ ಪಾಠ ಮಾಡುತ್ತಾರೆ' ಎಂದು ಶಿಕ್ಷಕಿ ಹೇಮಾ ಮಹಾದೇವಪ್ಪ ತಿಳಿಸಿದರು.

ನಮ್ಮ ಕನ್ನಡ ಶಾಲೆ ಜರ್ಮನಿ ಇ-ಮೇಲ್ ವಿಳಾಸ: nammakannadashaale.germany@gmail.com

ಚರ್ಮದ ಆರೋಗ್ಯದ ಬಗ್ಗೆ ಜಾಗೃತಿ

ಪ್ರಜಾವಾಣಿ ವಾರ್ತೆ



ಓಟದಲ್ಲಿ ಭಾಗವಹಿಸಿದ್ದ ವೈದ್ಯರಿಗೆ ಪದಕ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು

ಬೆಂಗಳೂರು: ಭಾರತೀಯ ಚರ್ಮ ರೋಗ ತಜ್ಞರ ಸಂಘದ ಕರ್ನಾಟಕ ಶಾಖೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಸ್ಕಿನ್ನಥಾನ್' ಓಟದಲ್ಲಿ ಚರ್ಮದ ಆರೈಕೆ, ರೋಗಗಳಿಗೆ ಚಿಕಿತ್ಸೆ ಹಾಗೂ ನಕಲಿ ವೈದ್ಯರ ಬಗ್ಗೆ ಜಾಗೃತಿ ಮೂಡಿಸಲಾಯಿತು.

ನಗರದ ಎಚ್.ಎಸ್.ಆರ್. ಬಡಾವಣೆಯ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಬೆಳಿಗ್ಗೆ 5.30ಕ್ಕೆ ಚಾಲನೆ ದೊರೆತ ಈ ಓಟದಲ್ಲಿ, ವೈದ್ಯರು, ವಿದ್ಯಾರ್ಥಿಗಳು ಸೇರಿ 6 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು. 10 ಕಿ.ಮೀ., 5 ಕಿ.ಮೀ. ಮತ್ತು 3 ಕಿ.ಮೀ. ಓಟದಲ್ಲಿ ಚರ್ಮದ ಆರೋಗ್ಯದ ಬಗ್ಗೆ ಭಿತ್ತಿ ಪತ್ರ ಪ್ರದರ್ಶಿಸಲಾಯಿತು.

ಬಳಿಕ ಮಾತನಾಡಿದ ಸಂಘದ ಕರ್ನಾಟಕ ಶಾಖೆಯ ಅಧ್ಯಕ್ಷ ಡಾ.ಎಸ್. ಸಚ್ಚಿದಾನಂದ, 'ಚರ್ಮ ಮನುಷ್ಯನ ಆರೋಗ್ಯದ ಸೂಚಕ. ಆದ್ದರಿಂದ ಚರ್ಮದ ಆರೋಗ್ಯ ಕಡೆಗಣಿಸಬಾರದು. ಒಳ್ಳೆಯ ಆಹಾರ ಸೇವನೆ ಹಾಗೂ ವ್ಯಾಯಾಮದಿಂದ ಚರ್ಮದ ಆರೋಗ್ಯ ಕಾಪಾಡಲು ಸಾಧ್ಯ. ಚರ್ಮ ರೋಗದ ಬಗ್ಗೆ ಇರುವ ಮೂಢನಂಬಿಕೆಯನ್ನು ಹೋಗಲಾಡಿಸಬೇಕಿದೆ. ಪ್ರತಿ ವರ್ಷ ಇದೇ ರೀತಿ ಅಭಿಯಾನ ನಡೆಸಲಾಗುವುದು' ಎಂದು ಹೇಳಿದರು.

ಇದೇ ವೇಳೆ ಚರ್ಮ ರೋಗಗಳ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು. ಚರ್ಮ ಸಂಬಂಧಿ ಸಮಸ್ಯೆಗಳಿಗೆ ಜನರು ತಪಾಸಣೆ ಮಾಡಿಸಿಕೊಂಡರು. ಚರ್ಮ ರೋಗ ತಜ್ಞರಾದ ಡಾ. ರಘುನಾಥ್ ರೆಡ್ಡಿ, ಡಾ. ವೆಂಕಟರಾಮ್ ಮೈಸೂರ್, ಡಾ. ಶಶಿಕುಮಾರ್, ಡಾ. ಮಹೇಶ್, ಓಟದ ಮುಖ್ಯ ಸಮನ್ವಯಕಾರರಾದ ಡಾ.ಪಿ. ಜಗದೀಶ್, ಡಾ.ಎಂ.ಎಸ್. ಗಿರೀಶ್ ಉಪಸ್ಥಿತರಿದ್ದರು.

ಕ್ಯಾನ್ಸರ್ ಪೀಡಿತ ವ್ಯಕ್ತಿಗೆ ಹೈಕೋರ್ಟ್ ಕೈಯಾಸರೆ

ಬೆಂಗಳೂರು: ಕೇಂದ್ರ ಅಬಕಾರಿ, ಸೀಮಾ ಮತ್ತು ಸೇವಾ ತೆರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ 73 ವರ್ಷದ ಕ್ಯಾನ್ಸರ್ ರೋಗಿಯೊಬ್ಬರ ಅಳಲಿಗೆ ಕಿವಿಯಾಗಿರುವ ಹೈಕೋರ್ಟ್, ಇಲಾಖೆ ವತಿಯಿಂದ ಅವರಿಗೆ ಸೇರಬೇಕಾಗಿದ್ದ ಶೇ 100ರಷ್ಟು ಗ್ರ್ಯಾಚ್ಯುಟಿ ಹಾಗೂ ಪಿಂಚಣಿ ತಡೆ ಹಿಡಿದಿದ್ದ ಆದೇಶವನ್ನು ರದ್ದುಗೊಳಿಸಿದೆ.

ಈ ಸಂಬಂಧ ಧಾರವಾಡದ ಸಪ್ತಾಪುರ ನಿವಾಸಿ ಹೇಮಂತ್ ಎನ್. ಕಾರಕೂನ (73) ಅವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) 'ಅರ್ಜಿದಾರರಿಗೆ ಸಲ್ಲಬೇಕಿರುವ ಗ್ರ್ಯಾಚ್ಯುಟಿ ಹಾಗೂ ಬಾಕಿ ಪಿಂಚಣಿ ಮೊತ್ತವನ್ನು ನಾಲ್ಕು ವಾರಗಳ ಒಳಗಾಗಿ ಪಾವತಿಸಬೇಕು' ಎಂದು ಸಕ್ಷಮ ಪ್ರಾಧಿಕಾರಕ್ಕೆ ತಾಕೀತು ಮಾಡಿದೆ.

'ಅರ್ಜಿದಾರರ ವಿರುದ್ಧದ ಆರೋಪ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, 'ಅರ್ಜಿದಾರರು ನಿವೃತ್ತಿಯಾಗಿ 13 ವರ್ಷ ಕಳೆದರೂ ಅವರಿಗೆ ಯಾವುದೇ ನಿವೃತ್ತಿ ಭತ್ಯೆ ಹಾಗೂ ಪಿಂಚಣಿ ದೊರೆತಿಲ್ಲ. ಅವರು ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದು, ಅನಗತ್ಯ ತೊಂದರೆಗೆ ಸಿಲುಕಿ, ಸಾಕಷ್ಟು ನೋವು ಅನುಭವಿಸಿದ್ದಾರೆ. ಹಾಗಾಗಿ, ಕೂಡಲೇ ಅವರಿಗೆ ಸಲ್ಲಬೇಕಾದ ಗ್ರ್ಯಾಚ್ಯುಟಿ ಹಾಗೂ ಪಿಂಚಣಿ ಹಣವನ್ನು ಪಾವತಿಸಬೇಕು. ಅವರನ್ನು ಪುನಃ ನ್ಯಾಯಾಲಯದ ಮೆಟ್ಟಿಲು ತುಳಿಯುವಂತೆ ಮಾಡಬಾರದು' ಎಂದು ಆದೇಶಿಸಿದೆ.

ನಾಗವಾರಪಾಳ್ಯ: ಪುನರ್ವಸತಿ ಕಲ್ಪಿಸಲು ಮನವಿ

ಕೆ.ಆರ್.ಪುರ: ನಾಗವಾರಪಾಳ್ಯ ಕೊಳಚೆ ಪ್ರದೇಶದ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವಂತೆ ಕರ್ನಾಟಕ ಸಾಮರಸ್ಯ ಸಮಿತಿ ಹಾಗೂ ಕರ್ನಾಟಕ ಜನಾಂದೋಲನ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿ ಜಗದೀಶ್‌ಗೆ ಮನವಿ ಸಲ್ಲಿಸಿದರು.

'ಬೆಂಗಳೂರು ಪೂರ್ವ ತಾಲ್ಲೂಕಿನ ಬೆನ್ನಿಗಾನಹಳ್ಳಿ ಚೇತನ್ ಚಿತ್ರಮಂದಿರದ ಬಳಿಯ ಸರ್ವೆ ನಂಬರ್ 193ರ ಸರ್ಕಾರಿ ಜಮೀನು ಇದೆ. ಇದಕ್ಕೆ ಸಂಬಂಧಿಸಿದಂತೆ ಕೊಳೆಗೇರಿ ಅಭಿವೃದ್ಧಿ ಮಂಡಳಿ ಸೂಚನೆಯಂತೆ ನಾಗವಾರಪಾಳ್ಯ ಕೊಳೆಗೇರಿಯ 650 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಬೇಕು' ಎಂದು ಕರ್ನಾಟಕ ಸಾಮರಸ್ಯ ಸಮಿತಿ ಅಧ್ಯಕ್ಷ ಕನ್ನಲ್ಲಿ ಕೃಷ್ಣಪ್ಪ ಒತ್ತಾಯಿಸಿದರು.

'ಸದರಿ ಪ್ರದೇಶವನ್ನು ಅಂತಿಮವಾಗಿ ಕೊಳಚೆ ಪ್ರದೇಶವೆಂದು ಘೋಷಿಸಬೇಕು' ಎಂದು ಆಗ್ರಹಿಸಿದರು.

ಕರ್ನಾಟಕ ಜನಾಂದೋಲನ ಸಮಿತಿ ಅಧ್ಯಕ್ಷ ಕೆ.ಮರಿಯಪ್ಪ, ಬಾಲಪ್ಪ, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಹಿಳಾ ಸಬಲೀಕರಣಕ್ಕಾಗಿ ಕನ್ಯಾಥಾನ್

ಬೊಮ್ಮನಹಳ್ಳಿ: ಹೆಣ್ಣು ಮಕ್ಕಳ ಮೇಲಿನ ಶೋಷಣೆ ತಡೆಗಟ್ಟಲು ಹಾಗೂ ಹೆಣ್ಣು ಮಕ್ಕಳ ರಕ್ಷಣೆ ಮತ್ತು ವಿದ್ಯಾಭ್ಯಾಸಕ್ಕಾಗಿ 'ಕನ್ಯಾಥಾನ್' ಶೀರ್ಷಿಕೆಯಡಿ 'ರನ್ ಫಾರ್ ಹರ್' ಎಂಬ ಓಟವನ್ನು ಆಯೋಜಿಸಲಾಗಿತ್ತು.

ಐಎಫ್‌ಐಎಂ ಕಾಲೇಜು, ಜಾಕ್ಸಾನ್ ಬಿ ಸ್ಕೂಲ್ ಹಾಗೂ ವಿಜಯ್ ಭೂಮಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಎಲೆಕ್ಟ್ರಾನಿಕ್ ಸಿಟಿಯ ಇನ್ಫೋಸಿಸ್ ಮೈದಾನದಲ್ಲಿ ಭಾನುವಾರ ಈ ಓಟವನ್ನು ಆಯೋಜಿಸಲಾಗಿತ್ತು. 10 ಕಿ.ಮೀ. ವರೆಗಿನ ಓಟದಲ್ಲಿ 2 ವರ್ಷದ ಮಕ್ಕಳಿಂದ 80 ವರ್ಷದ ವಯೋವೃದ್ಧರವರೆಗೂ ನೂರಾರು ಮಂದಿ ಭಾಗಿಯಾಗಿದ್ದರು.

ಬೆಳಿಗ್ಗೆ 6 ಗಂಟೆಗೆ ಆರಂಭವಾದ ಓಟ, ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತಲ ಪ್ರದೇಶಗಳಲ್ಲಿ ಮುಂದುವರಿಯಿತು. ಐಟಿಬಿಟಿ ಉದ್ಯೋಗಿಗಳು, ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು. ದಾರಿಯುದ್ದಕ್ಕೂ ನೀರು, ತಂಪು ಪಾನೀಯ ವಿತರಿಸಲಾಯಿತು. ಸಂಚಾರ ದಟ್ಟಣೆಯಾಗದಂತೆ ಸ್ವಯಂಸೇವಕರು ಕಾರ್ಯನಿರ್ವಹಿಸಿದರು.

ಐಎಫ್‌ಐಎಂ ಕಾಲೇಜಿನ ಪ್ರೊ. ಬಿ.ವಿ.ವೆಂಕಟೇಶ್ ಕಾರ್ಯಕ್ರಮದ ಮೂಲಕ ಸಂಗ್ರಹವಾಗುವ ಹಣದಲ್ಲಿ ಐದು ಸರ್ಕಾರಿ ಶಾಲೆಗಳಲ್ಲಿ 'ಕನ್ಯಾಥಾನ್' ಶಿಕ್ಷಾ ಕೇಂದ್ರ ಶಾಖೆ ತೆರೆದು, ಸರ್ಕಾರಿ ಶಾಲೆಯ 300 ಹೆಣ್ಣು ಮಕ್ಕಳಿಗೆ ಕಂಪ್ಯೂಟರ್ ಮತ್ತು ಇಂಗ್ಲಿಷ್ ಕೌಶಲ ತರಬೇತಿ ನೀಡಲಾಗುವುದು. ಬಡ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನ ಹಾಗೂ ಲೈಂಗಿಕ ಕಾರ್ಯಕರ್ತರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡುವ ಗುರಿಯನ್ನೂ ಹೊಂದಲಾಗಿದೆ' ಎಂದರು.

ವಿದ್ಯಾರ್ಥಿನಿ ಮುತ್ತಾನಲ್ಲೂರು ರಕ್ಷಿತಾ ಮಾತನಾಡಿ ನಾನು ಇದೇ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ಪ್ರತಿ ವರ್ಷ ವಿದ್ಯಾರ್ಥಿ ವೇತನದ ಮೂಲಕ ನನ್ನ ಶಿಕ್ಷಣಕ್ಕೆ ಸಹಾಯ ಮಾಡಲಾಗುತ್ತಿದೆ. ವಿದ್ಯಾರ್ಥಿನಿಯರಿಗಾಗಿ ಪ್ರತಿ ವರ್ಷ ಈ ಓಟವನ್ನು ಆಯೋಜಿಸಿ, ಇದರಿಂದ ಸಂಗ್ರಹವಾಗುವ ಹಣವನ್ನು ನಮ್ಮಂತಹ ವಿದ್ಯಾರ್ಥಿಗಳಿಗೆ ಕ್ಷೇಮಾಭಿವೃದ್ಧಿಗೆ ನೀಡುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

10 ಕಿ.ಮೀ ಹಾಗೂ 5 ಕಿ.ಮೀ, ಕುಟುಂಬದ ಜೊತೆಗೆ 3 ಕಿ.ಮೀ ಓಟ, ಫನ್ ರನ್ ವಿಭಾಗಗಳಲ್ಲಿ ಭಾಗವಹಿಸಿ, ವೇಗವಾಗಿ ಗುರಿ ಮುಟ್ಟಿದ ಸ್ಪರ್ಧಿಗಳಿಗೆ ವಿಶೇಷ ಬಹುಮಾನ ನೀಡಲಾಯಿತು. ಓಟದಲ್ಲಿ ಗಣನೀಯ ಸಂಖ್ಯೆಯಲ್ಲಿ ಪುರುಷರು ಪಾಲ್ಗೊಂಡಿದ್ದರು.

ಒಲಿಂಪಿಕ್ ಆಟಗಾರ್ತಿ ಈಜುಪಟು ಧಿನಿಧಿ ದೇಸಿಂಗು, ಐ.ಎಫ್.ಐ.ಎಂ ಕಾಲೇಜಿನ ಕಾರ್ಯದರ್ಶಿ ಕಲ್ಪನಾ ಪಡೋಡೆ, ನಿರ್ದೇಶಕಿ ವಿ.ಶ್ರೀದೇವಿ ಭಾಗವಹಿಸಿದ್ದರು.


ಆಹಾರ ಸಂಸ್ಕರಣೆ ಕ್ಷೇತ್ರದಲ್ಲಿ ಕಿರು ಉದ್ಯಮ ಪ್ರಾರಂಭ • ಮೌಲ್ಯವರ್ಧಿತ ಉತ್ಪನ್ನಗಳು ವಿದೇಶಕ್ಕೆ ರಫ್ತು

ಸ್ಥಳೀಯ ಉತ್ಪನ್ನಗಳಿಗೆ ಬಲ ತುಂಬಿದ ಪಿಎಂಎಫ್‌ಎಂಇ

• ಖಲೀಲಅಹ್ಮದ ಶೇಖ

ಬೆಂಗಳೂರು: ಆಹಾರ ಸಂಸ್ಕರಣೆ ಉದ್ಯಮ ಕ್ಷೇತ್ರದಲ್ಲಿ ಸ್ಥಳೀಯವಾಗಿ ಆರಂಭವಾದ ಕಿರು ಉದ್ಯಮಗಳು ಈಗ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆದಿವೆ. ಸ್ಥಳೀಯ ಉತ್ಪನ್ನಗಳಿಗೆ ಉತ್ತಮ ಬ್ರ್ಯಾಂಡಿಂಗ್ ಮಾಡುವ ಮೂಲಕ ದೇಶ-ವಿದೇಶಗಳಿಗೆ ರಫ್ತು ಮಾಡಿ ಉದ್ಯಮಿಗಳಾಗಿ ಬೆಳೆದವರ ಯಶೋಗಾಥೆಗಳಿವು...

'₹650 ಕೋಟಿ ಹೂಡಿಕೆ'



ಎಚ್.ಕೆ. ಶಿವಕುಮಾರ್

'ಪಿಎಂಎಫ್‌ಎಂಇ ಯೋಜನೆಯಡಿ ರಾಜ್ಯದಲ್ಲಿ ಆರು ಸಾವಿರ ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ನೆರವು ಒದಗಿಸಲಾಗಿದೆ. ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ₹650 ಕೋಟಿ ಹೂಡಿಕೆ ಆಗಿದೆ. ಇದರಿಂದಾಗಿ ರೈತರು ಬೆಳೆದ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಸಿಕ್ಕಿದೆ. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಗೆ ನೆರವಾಗಿದೆ. ಮಹಿಳಾ ಉದ್ಯಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ' ಎಂದು ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಎಚ್.ಕೆ. ಶಿವಕುಮಾರ್ ತಿಳಿಸಿದರು.

ವರ್ಷ	ಸಹಾಯಧನ ಪಡೆದವರು
2021-22	259
2022-23	1,815
2023-24	1,994
2024-25	1,886
ಒಟ್ಟು	5,954

ಹಾವೇರಿ ಜಿಲ್ಲೆಯ ಶಿಗ್ಗಾಂವಿಯ ಶಿಲ್ಪಾ ಎಸ್. ಮಂಟಗಾಣಿ ಅವರು 'ಆತ್ಮನಿರ್ಭರ ಭಾರತ' ಅಭಿಯಾನದಡಿ ಪ್ರಾರಂಭವಾಗಿರುವ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆ (ಪಿಎಂಎಫ್‌ಎಂಇ) ಅಡಿಯಲ್ಲಿ ₹ 30 ಲಕ್ಷ ಸಹಾಯಧನ ಪಡೆದುಕೊಂಡು, 'ಜವಾರಿ' ಬ್ರ್ಯಾಂಡ್ ಹೆಸರಿನಲ್ಲಿ ಕಿರು ಆಹಾರ ಸಂಸ್ಕರಣಾ ಉದ್ಯಮವನ್ನು ಪ್ರಾರಂಭಿಸಿದ್ದರು. ಅದು ಈಗ ಯಶಸ್ಸಿನ ಹಾದಿಯಲ್ಲಿದೆ.

'ನಾವು ಉತ್ತರ ಕರ್ನಾಟಕದ ಸ್ಥಳೀಯ ಆಹಾರ ಉತ್ಪನ್ನಗಳಾದ ಜೋಳ ಹಾಗೂ ಸಜ್ಜೆ ರೊಟ್ಟಿ, ವಿವಿಧ ಬಗೆಯ ಚಟ್ನಿ ಪುಡಿಗಳು, ರೆಡಿ ಟು ಈಟ್, ರೆಡಿ ಟು ಕುಕ್ ಉತ್ಪನ್ನಗಳನ್ನು ತಯಾರಿಸಿ ಆಸ್ಟ್ರಿಯಾ, ಸಿಂಗಪುರ, ಬ್ರಿಟನ್, ಸಂಯುಕ್ತ ಅರಬ್ ಸಂಸ್ಥಾನದ (ಯುಎಇ) ದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ವಾರ್ಷಿಕ ₹1.5 ಕೋಟಿ ವಹಿವಾಟು ಆಗುತ್ತಿದೆ. ನಮ್ಮ ಉತ್ಪನ್ನಗಳಿಗೆ ಬೇಡಿಕೆ ಇದ್ದು, ಉತ್ತಮ ಆದಾಯವೂ ಸಿಗುತ್ತಿದೆ' ಎಂದು ಶಿಲ್ಪಾ ತಿಳಿಸಿದರು.

'ಅಭಯ ನ್ಯಾಚುರಲ್ಸ್ ಹೆಸರಿನಲ್ಲಿ ಸ್ವಂತ ಉದ್ಯಮವನ್ನು ಪ್ರಾರಂಭಿಸಿದ್ದೇನೆ. ಬಾಳೆ ಹಣ್ಣಿನ ಪುಡಿ, ರಾಗಿ ಉತ್ಪನ್ನಗಳು, ವ್ಯಾಕ್ಯೂಮ್ ಫ್ರೈಡ್ ಚಿಪ್ಸ್‌ಗಳನ್ನು ಬಾಕಾಹು ಬ್ರ್ಯಾಂಡ್‌ನ ಹೆಸರಿನಲ್ಲಿ ಅಮೆರಿಕ, ಬ್ರಿಟನ್, ಯುಎಇ ದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ವಾರ್ಷಿಕ ₹85 ಲಕ್ಷ ವಹಿವಾಟು ನಡೆಯುತ್ತಿದೆ' ಎಂದು ಮೈಸೂರು ಜಿಲ್ಲೆಯ ಹುಣಸೂರಿನ ನವೀನ್ ಅನುಭವ ಹಂಚಿಕೊಂಡರು.

ಪಿಎಂಎಫ್‌ಎಂಇ ಯೋಜನೆಯಡಿ ಗರಿಷ್ಠ ₹15 ಲಕ್ಷ ಸಹಾಯ ಧನ ಸಿಗುತ್ತದೆ. ಇದರಲ್ಲಿ ಕೇಂದ್ರ ಸರ್ಕಾರ ₹6 ಲಕ್ಷ ನೀಡಿದರೆ, ರಾಜ್ಯ ಸರ್ಕಾರ ₹9 ಲಕ್ಷ ನೀಡುತ್ತದೆ. ಐದು ವರ್ಷದಲ್ಲಿ ರಾಜ್ಯದಾದ್ಯಂತ 5,962 ಜನ ಸಹಾಯಧನ ಪಡೆದುಕೊಂಡು ಕಿರು ಆಹಾರ ಸಂಸ್ಕರಣಾ ಉದ್ಯಮಗಳನ್ನು ಪ್ರಾರಂಭಿಸಿದ್ದಾರೆ.

ಈ ಯೋಜನೆಯಡಿ ಸಿರಿಧಾನ್ಯಗಳ ಸಂಸ್ಕರಣೆ, ಬೆಲ್ಲ, ನಿಂಬೆ, ಬೇಕರಿ ಉತ್ಪನ್ನಗಳು, ಗಾಣದ ಮೂಲಕ ಎಣ್ಣೆ ಉತ್ಪಾದನೆ, ಮೆಣಸಿನ ಪುಡಿ, ಶುಂಠಿ ಸಂಸ್ಕರಣಾ ಘಟಕಗಳು, ಅನಾನಸ್ ಸಂಸ್ಕರಣೆಯ ಕಿರು ಉದ್ಯಮ, ಮಸಾಲಾ ಉತ್ಪನ್ನಗಳ ಘಟಕಗಳು, ತೆಂಗಿನ ಮೌಲ್ಯವರ್ಧಿತ ಉತ್ಪನ್ನಗಳು, ಕುಕ್ಕುಟ, ಸಮುದ್ರದ ಉತ್ಪನ್ನಗಳು, ವಿವಿಧ ಹಣ್ಣು ಮತ್ತು ತರಕಾರಿಗಳ ಮೌಲ್ಯವರ್ಧಿತ ಉತ್ಪನ್ನಗಳಿಗೆ ಸಂಬಂಧಿಸಿದ ಕಿರು ಉದ್ಯಮಗಳನ್ನು ಪ್ರಾರಂಭಿಸಬಹುದು.

'ರಾಜ್ಯದ ಬೆಳಗಾವಿಯಲ್ಲಿ 718, ಬೆಂಗಳೂರು ನಗರದಲ್ಲಿ 355 ಮಂದಿ, ಹಾವೇರಿಯಲ್ಲಿ 356, ಧಾರವಾಡದಲ್ಲಿ 314, ಶಿವಮೊಗ್ಗದಲ್ಲಿ 289, ವಿಜಯಪುರದಲ್ಲಿ 262, ಉಡುಪಿ267, ಬಾಗಲಕೋಟೆಯಲ್ಲಿ 258 ಮಂದಿ ಪಿಎಂಎಫ್‌ಎಂಇ ಯೋಜನೆಯಲ್ಲಿ ಧನ ಸಹಾಯ ಪಡೆದುಕೊಂಡಿದ್ದಾರೆ' ಎಂದು ಎಂದು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್.ಕೆ. ಶಿವಕುಮಾರ್ ತಿಳಿಸಿದರು.



ಬ್ರಾಹ್ಮಣ ಸಭಾ ಭವನಕ್ಕೆ ಶಾಸಕ ಎನ್.ಶ್ರೀನಿವಾಸ್ ಭೂಮಿಪೂಜೆ ನೇರವೇರಿಸಿದರು

ಬ್ರಾಹ್ಮಣ ಸಭಾ ಭವನಕ್ಕೆ ಭೂಮಿ ಪೂಜೆ

ನೆಲಮಂಗಲ: ಬ್ರಾಹ್ಮಣ ಸಭಾ ಭವನ ನಿರ್ಮಾಣಕ್ಕೆ ವೈಯಕ್ತಿಕವಾಗಿ ಆರ್ಥಿಕ ನೆರವು ನೀಡುತ್ತೇನೆ ಎಂದು ಶಾಸಕ ಎನ್. ಶ್ರೀನಿವಾಸ್ ತಿಳಿಸಿದರು.

ಜಕ್ಕಸಂದ್ರದಲ್ಲಿ ತಾಲೂಕು ಬ್ರಾಹ್ಮಣ ಸಭಾದಿಂದ ಅಯೋಜಿಸಿದ್ದ ಸಭಾ ಭವನದ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಭವನ ನಿರ್ಮಾಣಕ್ಕೆ ಸಹಕಾರ ನೀಡಲಾಗುವುದು ಎಂದರು.

ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ ಮಾತನಾಡಿ, '₹5 ಕೋಟಿ ವೆಚ್ಚದಲ್ಲಿ ಸಭಾ ಭವನ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಎಲ್ಲರೂ ನೆರವು ನೀಡಬೇಕು' ಎಂದು ಮನವಿ ಮಾಡಿದರು.

ತಹಸೀಲ್ದಾರ್ ಅಮೃತ್ ಆತ್ರೇಶ್, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣ ಗೌಡ, ಮಾಜಿ ಅಧ್ಯಕ್ಷ ಎನ್.ಪಿ.ಹೇಮಂತ್‌ಕುಮಾರ್, ನಗರಸಭೆ ಅಧ್ಯಕ್ಷ ಎನ್.ಗಣೇಶ್ ಬ್ರಾಹ್ಮಣ ಸಭಾದ ಕೇಶವ್, ನಟರಾಜು, ಮಂಜುನಾಥ್, ಸುಬ್ಬಣ್ಣ ಮತ್ತಿತರರು ಉಪಸ್ಥಿತರಿದ್ದರು.

ಹೊರಾಂಗಣದಲ್ಲಿ ದುಡಿಯುವ ಕಾರ್ಮಿಕರು ಎಚ್ಚರ ವಹಿಸಿ: ಆರೋಗ್ಯ ಇಲಾಖೆ ಸಲಹೆ

ಮೇವರೆಗೆ ಕೆಲ ದಿನ ಬಿಸಿ ಗಾಳಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ತಾಪಮಾನ ಹಾಗೂ ಮಾರ್ಚ್–ಮೇ ಅವಧಿಯಲ್ಲಿ ಕೆಲ ದಿನಗಳು ಬಿಸಿ ಗಾಳಿ ಬೀಸುವ ಸಾಧ್ಯತೆ ಇರುವ ಕಾರಣ ಮಕ್ಕಳು, ಕಾರ್ಮಿಕರು ಸೇರಿ ವಿವಿಧ ವರ್ಗದವರು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯು ಸಾರ್ವಜನಿಕ ಆರೋಗ್ಯ ಮಾರ್ಗದರ್ಶಿಯನ್ನು ಬಿಡುಗಡೆ ಮಾಡಿದೆ. ಈ ಅವಧಿಯಲ್ಲಿ ಒಳಾಂಗಣ ಹಾಗೂ ಹೊರಾಂಗಣ ಪ್ರದೇಶಗಳಲ್ಲಿ ಹೆಚ್ಚಿನ ಉಷ್ಣತೆಯಿಂದಾಗಿ ಮತ್ತು ಉಷ್ಣತೆಯ ಒತ್ತಡದಿಂದಾಗಿ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ. ಜ್ವರ, ತಲೆನೋವು, ಊತಗಳು, ಸ್ನಾಯು ಸೆಳೆತ, ಪ್ರಜ್ಞೆ ತಪ್ಪುವಿಕೆ, ಸುಸ್ತು, ಪಾರ್ಶ್ವವಾಯು ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ತೀವ್ರ ಉಷ್ಣತೆಯಿಂದ ಹೃದ್ರೋಗ, ಉಸಿರಾಟ, ಮೂತ್ರಪಿಂಡದ ಸಮಸ್ಯೆಯೂ ಹೆಚ್ಚುತ್ತದೆ ಎಂದು ತಿಳಿಸಿದೆ.

ಬಿಸಿಲಿನ ಶಾಖದಿಂದ ಅತಿಯಾದ ಬಾಯಾರಿಕೆ, ವಾಕರಿಕೆ ಅಥವಾ ವಾಂತಿ, ಮೂತ್ರ ವಿಸರ್ಜನೆ ಸಮಸ್ಯೆ, ಏರುಗತಿ ಉಸಿರಾಟ ಸೇರಿ ವಿವಿಧ ಸಮಸ್ಯೆಗಳು ಸಹ ಕಾಣಿಸಿಕೊಳ್ಳಲಿವೆ. ತಾಪಾಘಾತವು ವೈದ್ಯಕೀಯ ತುರ್ತು ಸಂದರ್ಭವಾಗಿದೆ. ದೇಹದ ಉಷ್ಣಾಂಶ ಹೆಚ್ಚಳ, ಪ್ರಜ್ಞೆ ತಪ್ಪುವುದು, ಬೆವರುವಿಕೆ ಸಮಸ್ಯೆಗಳು ಕಾಣಿಸಿದಲ್ಲಿ ತಕ್ಷಣವೇ ಸಹಾಯವಾಣಿ 108 ಅಥವಾ 102ಕ್ಕೆ ಕರೆ ಮಾಡಬಹುದು ಎಂದು ಇಲಾಖೆ ಸೂಚಿಸಿದೆ.



ಇಲಾಖೆ ನೀಡಿದ ಪ್ರಮುಖ ಸಲಹೆಗಳು

- ಬಾಯಾರಿಕೆ ಇಲ್ಲದಿದ್ದರೂ ಹೆಚ್ಚು ನೀರನ್ನು ಆಗಾಗ ಸೇವಿಸಬೇಕು. ಬಾಯಾರಿಕೆ ನಿರ್ಜಲೀಕರಣದ ಲಕ್ಷಣ
- ಪ್ರಯಾಣದ ಅವಧಿಯಲ್ಲಿ ಕುಡಿಯಲು ನೀರನ್ನು ಜತೆಗೆ ತೆಗೆದುಕೊಂಡು ಹೋಗಬೇಕು
- ಒಆರ್‌ಎಸ್ (ಬಾಯಿ ಮುಖಾಂತರ ನೀಡುವ ಮರುಜಲೀಕರಣ ದ್ರಾವಣ) ಹಾಗೂ ನಿಂಬೆ ನೀರು, ಮಜ್ಜಿಗೆಯಂತಹ ಪಾನೀಯ ಸೇವಿಸಬೇಕು
- ಋತುವಿನಲ್ಲಿ ಲಭ್ಯವಿರುವ, ಹೆಚ್ಚು ನೀರಿನ ಅಂಶವಿರುವ ಹಣ್ಣು ಮತ್ತು ತರಕಾರಿಗಳನ್ನು ಸೇವಿಸಬೇಕು
- ಹಗುರ ಹಾಗೂ ಸಡಿಲವಾದ ಹತ್ತಿ ಬಟ್ಟೆಯನ್ನು ಧರಿಸಬೇಕು
- ಬಿಸಿಲಿನಲ್ಲಿ ಹೊರಗಡೆ ಹೋಗುವುದು ಅನಿವಾರ್ಯವಾದರೆ, ಟೋಪಿ, ಕೊಡೆಯಿಂದ ರಕ್ಷಣೆ ಪಡೆಯಬೇಕು

ಹೊರಾಂಗಣ ಚಟುವಟಿಕೆಗಳಿಗೆ ಸಲಹೆ

- ಹೊರಾಂಗಣ ಚಟುವಟಿಕೆಗಳನ್ನು ಆದಷ್ಟು ಬೆಳಿಗ್ಗೆ ಅಥವಾ ಸಂಜೆ ಅವಧಿಗೆ ಸೀಮಿತಗೊಳಿಸಬೇಕು
- ಸಭೆ, ಸಮಾರಂಭಗಳಿದ್ದಲ್ಲಿ ಬಿಸಿಲಿನಿಂದ ರಕ್ಷಣೆಗೆ ಶಾಮಿಯಾನ, ಪೆಂಡಾಲ್ ವ್ಯವಸ್ಥೆ ಮಾಡಬೇಕು
- ಉತ್ತಮ ಗಾಳಿಯ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಬೇಕು
- ಸಭಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಯನ್ನು ಕಡ್ಡಾಯವಾಗಿ ಮಾಡಬೇಕು

ಹೆಚ್ಚಿನ ಅಪಾಯ ಎದುರಿಸುವ ವರ್ಗ

- ನವಜಾತ ಶಿಶುಗಳು, ಮಕ್ಕಳು, ಗರ್ಭಿಣಿಯರು
- ಹೊರಾಂಗಣದಲ್ಲಿ ಕೆಲಸ ನಿರ್ವಹಿಸುವವರು
- ಮಾನಸಿಕ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರು
- ಹೃದ್ರೋಗ, ಅಧಿಕ ರಕ್ತದೊತ್ತಡ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆ ಇರುವವರು

ಏನು ಮಾಡಬಾರದು?

- ಮಧ್ಯಾಹ್ನ 12 ಗಂಟೆಯಿಂದ 3 ಗಂಟೆಯವರೆಗೆ ಬಿಸಿಲಿನಲ್ಲಿ ಹೋಗುವುದನ್ನು ತಪ್ಪಿಸಬೇಕು
- ಮಧ್ಯಾಹ್ನದ ಅವಧಿಯಲ್ಲಿ ಶ್ರಮದಾಯಕ ಹೊರಾಂಗಣ ಚಟುವಟಿಕೆ ಕೈಗೊಳ್ಳಬಾರದು
- ಮಧ್ಯಾಹ್ನ ಅಡುಗೆ ಮಾಡುವುದು ತಪ್ಪಿಸಿ. ಅಡುಗೆ ಸಿದ್ಧಪಡಿಸುವ ಪ್ರದೇಶದಲ್ಲಿ ಕಿಟಕಿ ಹಾಗೂ ಬಾಗಿಲು ತೆರೆದಿಡಬೇಕು
- ಮದ್ಯಪಾನ, ಚಹಾ, ಕಾಫಿ, ಕಾರ್ಬೊನೇಟೆಡ್ ಪಾನೀಯಗಳು ಅಥವಾ ಹೆಚ್ಚು ಸಕ್ಕರೆ ಅಂಶ ಹೊಂದಿದ ಪಾನೀಯಗಳಿಂದ ದೂರವಿರಬೇಕು. ಇಂತಹ ಪಾನೀಯಗಳು ದೇಹವನ್ನು ನಿರ್ಜಲೀಕರಣಗೊಳಿಸುತ್ತವೆ
- ಪ್ರೊಟೀನ್‌ಯುಕ್ತ ಆಹಾರವನ್ನು ಆದಷ್ಟು ಕಡಿಮೆ ಸೇವಿಸಿ
- ಹಳೆಯದಾದ ಆಹಾರ ಪದಾರ್ಥಗಳನ್ನು ಸೇವಿಸಬಾರದು
- ನಿಲುಗಡೆ ಮಾಡಿರುವ ವಾಹನಗಳ ಒಳಗೆ ಮಕ್ಕಳು ಮತ್ತು ಸಾಕು ಪ್ರಾಣಿಗಳನ್ನು ಬಿಡಬಾರದು. ವಾಹನಗಳ ಒಳಾಂಗಣದಲ್ಲಿನ ಹೆಚ್ಚಿನ ತಾಪಮಾನವು ಅಪಾಯಕಾರಿ ಆಗಬಹುದು

ಮಾಲೀಕರು ಹಾಗೂ ಕೆಲಸಗಾರರಿಗೆ ಸಲಹೆ

- ಕೆಲಸದ ಸ್ಥಳದಲ್ಲಿ ಕೆಲಸಗಾರರಿಗೆ ಕುಡಿಯಲು ತಣ್ಣನೆ ನೀರಿನ ವ್ಯವಸ್ಥೆ ಮಾಡಬೇಕು. 20 ನಿಮಿಷಗಳಿಗೊಮ್ಮೆ ಒಂದು ಲೋಟ ಅಥವಾ ಅದಕ್ಕಿಂತ ಹೆಚ್ಚು ನೀರು ಕುಡಿಯುವಂತೆ ಗಮನ ವಹಿಸಬೇಕು
- ಸೂರ್ಯನ ಕಿರಣಗಳು ನೇರವಾಗಿ ಮೈಮೇಲೆ ಬೀಳದಂತೆ ಕೆಲಸಗಾರರು ಎಚ್ಚರವಹಿಸಬೇಕು
- ಕೆಲಸಗಾರರಿಗೆ ನೆರಳಿನಲ್ಲಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ, ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಬೇಕು
- ಶ್ರಮದಾಯಕ, ಹೊರಾಂಗಣ ಚಟುವಟಿಕೆಗಳನ್ನು ತಾಪಮಾನ ಕಡಿಮೆ ಇರುವಾಗ ಅಂದರೆ, ಬೆಳಿಗ್ಗೆ ಅಥವಾ ಸಂಜೆಯ ಸಮಯದಲ್ಲಿ ನಿರ್ವಹಿಸುವಂತೆ ವೇಳಾ ಪಟ್ಟಿಯನ್ನು ಸಿದ್ಧಗೊಳಿಸಬೇಕು
- ಹೊರಾಂಗಣ ಚಟುವಟಿಕೆಗಳಲ್ಲಿ ಕೆಲಸಗಾರರಿಗೆ, ಪ್ರತಿ ಗಂಟೆಗೆ 5 ನಿಮಿಷಗಳ ಬಿಡುವು ನೀಡಬೇಕು
- ಗರ್ಭಿಣಿಯರು, ನಿಗದಿತ ಅನಾರೋಗ್ಯ ಸಮಸ್ಯೆಗೆ ಔಷಧೋಪಚಾರ ಪಡೆಯುತ್ತಿರುವವರು ಬಿಸಿಲಿನಲ್ಲಿ ಕಾರ್ಯನಿರ್ವಹಿಸುವ ಮೊದಲು ವೈದ್ಯರ ಸಲಹೆ ಪಡೆಯಬೇಕು.

7 ಸಾವಿರ ಕೋಳಿಗಳ ವಧೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನಗರದ ಹೊರವಲಯದ ಕಪ್ಪಗಲ್ಲು ಗ್ರಾಮದಲ್ಲಿನ ಖಾಸಗಿ ಫಾರಂನಲ್ಲಿದ್ದ ಇತರ ಏಳು ಸಾವಿರ ಕೋಳಿಗಳನ್ನೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಅಧಿಕಾರಿಗಳು ವಧೆ ಮಾಡಿದ್ದಾರೆ.

ರವಿ ಫಾರಂನಲ್ಲಿದ್ದ ಒಟ್ಟು 15 ಸಾವಿರ ಕೋಳಿಗಳ ಪೈಕಿ ಶನಿವಾರ 8 ಸಾವಿರ ಕೋಳಿಗಳು ಸಾವಿಗೀಡಾಗಿದ್ದವು. ಅದೇ ದಿನ ಫಾರಂಗೆ ಬಂದು ಪರಿಶೀಲಿಸಿದ ಅಧಿಕಾರಿಗಳು, ಎಲ್ಲ ಕೋಳಿಗಳನ್ನೂ ವೈಜ್ಞಾನಿಕವಾಗಿ ವಿಲೇವಾರಿ ಮಾಡಿದ್ದಾರೆ.

‘ನಾಲ್ಕೈದು ದಿನದ ಹಿಂದೆ ಮೊದಲಿಗೆ 300 ಕೋಳಿಗಳು ಸತ್ತವು. ಬಳಿಕ ಸಾವಿರಗಳ ಸಂಖ್ಯೆಯಲ್ಲಿ ಸಾಯಲಾರಂಭಿಸಿದವು. ಮೂರೇ ದಿನಗಳಲ್ಲಿ 8 ಸಾವಿರ ಕೋಳಿಗಳು ಸತ್ತವು. ವಿಷಯ ತಿಳಿಯುತ್ತಲೇ ಅಧಿಕಾರಿಗಳು ಉಳಿದ ಏಳು ಸಾವಿರ ಕೋಳಿಗಳನ್ನು ವಧಿಸಿ, ಗುಂಡಿ ತೆಗೆದು ಮುಚ್ಚಿದರು’ ಎಂದು ಫಾರಂ ಮಾಲೀಕ ರವಿ ಬಾಬು ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ನಾನು ಕೋಳಿಗಳನ್ನು ಸಾಕಲಾರಂಭಿಸಿದ್ದೆ. ನನಗೆ ವೈಯಕ್ತಿಕವಾಗಿ ₹2 ಲಕ್ಷದಿಂದ ₹2.50 ಲಕ್ಷದವರೆಗೆ ನಷ್ಟವಾಗಿದೆ. ನನ್ನಿಂದ ಕೋಳಿ ಖರೀದಿ ಮಾಡಿಕೊಳ್ಳುವುದಾಗಿ ಕರಾರು ಮಾಡಿಕೊಂಡಿದ್ದ ಕಂಪನಿಗೆ ₹30 ಲಕ್ಷದವರೆಗೆ ನಷ್ಟವಾಗಿರುವ ಸಾಧ್ಯತೆಗಳಿವೆ’ ಎಂದು ರವಿ ಹೇಳಿದರು.

‘ನಮ್ಮ ಫಾರಂಗೆ ಹೊರಗಿನ ಕೋಳಿಗಳನ್ನು ತರಲು ಸಾಧ್ಯವೇ ಇಲ್ಲ. ಗ್ರಾಮದ ಕೋಳಿ ಅಂಗಡಿಗಳಿಗೆ ಹೊರಗಿನಿಂದ ಕೋಳಿಗಳನ್ನು ತರಲಾಗುತ್ತದೆ. ಅಲ್ಲಿಂದಲೇ ನಮ್ಮ ಫಾರಂಗೂ ಸೋಂಕು ಹರಡಿರಬಹುದು’ ಎಂದರು.

‘ಜಿಲ್ಲೆಯಲ್ಲಿ ಬೇರೆ ಯಾವ ಕಡೆಯೂ ಕೋಳಿ ಜ್ವರ ಪ್ರಕರಣಗಳು ಕಾಣಿಸಿಕೊಂಡಿಲ್ಲ. ಗಡಿಯಲ್ಲಿ ಪರಿಶೀಲನೆಗೆ ಆರು ತಂಡ ಸಿದ್ಧವಾಗಿದೆ. ಬಿಸಿಲು ಹೆಚ್ಚಾದಂತೆ ಕಾಯಿಲೆ ಕಡಿಮೆಯಾಗುವ ವಿಶ್ವಾಸವಿದೆ. ಪರೀಕ್ಷೆಗೆ ಕಳುಹಿಸಿರುವ ಕೋಳಿಗಳ ಮಾದರಿಯ ವರದಿಯು ಸೋಮವಾರ ಮಧ್ಯಾಹ್ನ ಸಿಗಲಿದೆ’ ಎಂದು ಇಲಾಖೆಯ ಉಪ ನಿರ್ದೇಶಕ ಹನುಮಂತ ನಾಯ್ಕ ಕಾರಬಾರಿ ತಿಳಿಸಿದ್ದಾರೆ.

ಫಾರಂಗೆ ದಿಗ್ಬಂಧನ: ಫಾರಂನಲ್ಲಿ ಕೋಳಿಗಳು ಸಾಮೂಹಿಕವಾಗಿ ಸಾವಿಗೀಡಾದ ಕಾರಣ ಇಡೀ ಕಪ್ಪಗಲ್ಲಿನಲ್ಲಿ ಬ್ಲೀಚಿಂಗ್ ಪುಡಿ ಸಿಂಪಡಿಸಲಾಗಿದೆ. ಕೋಳಿ ಅಂಗಡಿಗಳನ್ನು ಮುಚ್ಚಿಸಲಾಗಿದೆ. ಕೋಳಿ ಫಾರಂ ಅನ್ನು ಸಂಪರ್ಕಿಸುವ ರಸ್ತೆಗಳನ್ನು ಮುಚ್ಚಲಾಗಿದ್ದು, ದಿಗ್ಬಂಧನ ವಿಧಿಸಲಾಗಿದೆ.

ಗ್ರಾಮದಲ್ಲಿ ಆಶಾ ಸರ್ವೆ: ಭಾನುವಾರ ಇಡೀ ದಿನ ಆಶಾ ಕಾರ್ಯಕರ್ತೆಯರು ಕಪ್ಪಗಲ್ಲು ಗ್ರಾಮದಲ್ಲಿ ಜನರ ಆರೋಗ್ಯದ ಸರ್ವೆ ನಡೆಸಿದರು. ಕೆಲವರಿಗೆ ಕೆಮ್ಮು, ನೆಗಡಿ ಇದೆಯಾದರೂ ಯಾರಿಗೂ ಜ್ವರದಂಥ ಲಕ್ಷಣ ಕಾಣಿಸಿಕೊಂಡಿಲ್ಲ ಎಂದು ಕಾರ್ಯಕರ್ತೆಯರು ತಿಳಿಸಿದರು.



ಬಳ್ಳಾರಿ ನಗರದ ಹೊರವಲಯದ ಕಪ್ಪಗಲ್ಲು ಗ್ರಾಮದಲ್ಲಿ ಶಂಕಿತ ಕೋಳಿ ಜ್ವರ ಕಾಣಿಸಿಕೊಂಡಿದ್ದರಿಂದ ಆಶಾ ಕಾರ್ಯಕರ್ತರು ಗ್ರಾಮದ ಮನೆ ಮನೆಗಳಿಗೆ ತೆರಳಿ ಜನರ ಆರೋಗ್ಯ ಪರಿಶೀಲಿಸಿದರು ಚಿತ್ರ: ಮುರಳಿಕಾಂತರಾವ್

ತೆಕ್ಕಲಕೋಟೆ: ನಾಟಿ ಕೋಳಿಗಳ ಸಾವು

ತೆಕ್ಕಲಕೋಟೆ (ಸಿರುಗುಪ್ಪ): ಪಟ್ಟಣ ಸೇರಿದಂತೆ ಹೋಬಳಿ ವ್ಯಾಪ್ತಿಯ ಹಳ್ಳಿಗಳಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದ್ದು, ಪ್ರತಿ ದಿನ ಸರಾಸರಿ 40ಕ್ಕೂ ಹೆಚ್ಚು ನಾಟಿ ಕೋಳಿಗಳು ಸಾವಿಗೀಡಾಗುತ್ತಿವೆ.

ಜ.31ರಿಂದ ಫೆ. 28ರ ನಡುವಿನ ಅವಧಿಯಲ್ಲಿ 830 ನಾಟಿಕೋಳಿಗಳು ಸಾವಿಗೀಡಾಗಿವೆ ಎಂಬುದು ಪಶುಆಸ್ಪತ್ರೆಯ ದತ್ತಾಂಶಗಳಿಂದ ಗೊತ್ತಾಗಿದೆ. ಕೋಳಿಗಳು ಸಾಯುತ್ತಿರುವುದು ಜನರಲ್ಲಿ ಆತಂಕ ಮೂಡಿಸಿದೆ.

ಕಂಪ್ಲಿ ತಾಲ್ಲೂಕಿನಲ್ಲೂ ಕಳೆದ ಐದು ದಿನಗಳಿಂದ 86ನಾಟಿ ಕೋಳಿ ಸಾವಿಗೀಡಾಗಿವೆ ಎಂದು ಗೊತ್ತಾಗಿದೆ.

ಭಾಷೆಯ ಉಳಿವಿಗೆ ನಿರ್ದಿಷ್ಟ ಕಾರ್ಯಸೂಚಿ ಅಗತ್ಯ: ಬಿಳಿಮಲೆ

ಪ್ರಜಾವಾಣಿ ವಾರ್ತೆ

ಕುಶಾಲನಗರ (ಕೊಡಗು ಜಿಲ್ಲೆ): ‘ಇಂದು ಭಾಷೆಗಳು ಸಾಯುತ್ತಿದ್ದು, ನಾವೆಲ್ಲರೂ ಅದಕ್ಕೆ ಸಾಕ್ಷಿಗಳಾಗುತ್ತಿದ್ದೇವೆ. ಭಾಷೆಗಳ ಸಾವಿನ ಕುರಿತು ಪ್ರತಿಕ್ರಿಯಿಸದೇ ಇರುವುದು ಜನಾಂಗದ ಹತ್ಯೆಗೆ ಸಮ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಭಾನುವಾರ ಇಲ್ಲಿ ಹೇಳಿದರು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ನಡೆದ ‘ಅರೆಭಾಷೆ ಗಡಿನಾಡ ಉತ್ಸವ’ದಲ್ಲಿ ಅವರು ಮಾತನಾಡಿದರು.

‘ಮುಂದಿನ 50 ವರ್ಷಗಳಲ್ಲಿ 172 ಭಾಷೆ ಅಳಿಯಲಿದ್ದು, ಅವುಗಳಲ್ಲಿ 72 ಭಾಷೆಗಳು 30 ವರ್ಷದಲ್ಲೇ ಅಳಿಯುತ್ತವೆ ಎಂದು ವರದಿಯೊಂದು ತಿಳಿಸಿದೆ. 1881ರಲ್ಲಿ ಕೊರಗ ಭಾಷೆಯನ್ನಾಡುವ 55 ಸಾವಿರ ಮಂದಿ ಇದ್ದರು. 2011ರಲ್ಲಿ ಇವರ ಸಂಖ್ಯೆ ಕೇವಲ ಎರಡು ಸಾವಿರಕ್ಕೆ ಇಳಿಕೆಯಾಯಿತು. ಭಾಷೆ ಉಳಿಸಲು ನಿರ್ದಿಷ್ಟ ಕಾರ್ಯಸೂಚಿಯ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

‘ಹಿಂದಿ ಶೇ 66ರಷ್ಟು ವೇಗದಲ್ಲಿ ಬೆಳೆಯುತ್ತಿದ್ದರೆ, ಒರಿಯಾ, ಮರಾಠಿ ಮೊದಲಾದ ಭಾಷೆಗಳು ಶೇ 12ರಿಂದ 13ರ ವೇಗದಲ್ಲಿ ಬೆಳವಣಿಗೆ ಕಾಣುತ್ತಿವೆ. ಆದರೆ, ಕನ್ನಡದ ಬೆಳವಣಿಗೆ ಗತಿ ಕೇವಲ ಶೇ 3.7ರಷ್ಟಿದೆ. ಕೊಡವ, ಅರೆಭಾಷೆ ಸೇರಿದಂತೆ ಇನ್ನಿತರ ಭಾಷೆಗಳನ್ನಾಡುವ ಜನರ ಸಂಖ್ಯೆಯೂ ಇಳಿಕೆಯಾಗುತ್ತಿದೆ. 2001ರಲ್ಲಿ 1.60 ಲಕ್ಷ ಮಂದಿ ಕೊಡವ ಭಾಷೆಯನ್ನಾಡುತ್ತಿದ್ದರು. 2011ರಲ್ಲಿ ಇವರ ಸಂಖ್ಯೆ 1.36 ಲಕ್ಷಕ್ಕೆ ಇಳಿಕೆಯಾಯಿತು. ಇದು ನಿಜಕ್ಕೂ ಒಳ್ಳೆಯ ಲಕ್ಷಣವಲ್ಲ’ ಎಂದು ಹೇಳಿದರು.

ಬೆಳಗಾವಿಯ ಭಾಷಾ ಸಮಸ್ಯೆ ಬಗ್ಗೆ ಪ್ರಸ್ತಾಪಿಸಿದ ಅವರು, ‘ಇಂತಹ ಸಮಯದಲ್ಲಿ ನಿಯಮದಂತೆ ರಾಷ್ಟ್ರಪತಿ, ಭಾಷೆಯ ಕಮಿಷನ್ ಕಳುಹಿಸಿ ವರದಿ ತರಿಸಿಕೊಂಡು ಶಾಸನಸಭೆಗಳಿಗೆ ಕಳುಹಿಸಿ ಕೊಡಬೇಕು. ಈ ಕಾರ್ಯ ಮಾಡುವಂತೆ ರಾಷ್ಟ್ರಪತಿಯವರಿಗೆ ಪತ್ರ ಬರೆದಿರುವೆ’ ಎಂದರು.

ಆಳ್ವಾಸ್ ಪರೀಕ್ಷೆಗೆ 18,634 ವಿದ್ಯಾರ್ಥಿಗಳು ಹಾಜರು

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ 2025– 26ನೇ ಸಾಲಿನ 6ರಿಂದ 9ನೇ ತರಗತಿವರೆಗೆ ಉಚಿತ ಶಿಕ್ಷಣಕ್ಕಾಗಿ ಭಾನುವಾರ ಪ್ರವೇಶ ಪರೀಕ್ಷೆ ನಡೆಯಿತು.

ವಿವಿಧ ಜಿಲ್ಲೆಗಳಿಂದ ಬಂದಿದ್ದ 18,634 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಒಟ್ಟು 20,134 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು.

ಕಲಿಕಾ ಸಾಮರ್ಥ್ಯ, ಭಾಷಾ ಸಾಮರ್ಥ್ಯ ಮತ್ತು ಆಳ್ವಾಸ್ ವ್ಯವಸ್ಥೆಗಳಿಗೆ ಪೂರಕರಾಗಿರುವವರನ್ನು ಆಯ್ಕೆ ಮಾಡಲಾಗುತ್ತದೆ. ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಾಲಕರ ಮಕ್ಕಳು, ತಂದೆ– ತಾಯಿಯನ್ನು ಕಳೆದುಕೊಂಡವರು, ಹಿಂದುಳಿದ ವರ್ಗದವರ ಮಕ್ಕಳಿಗೆ ಇಲ್ಲಿ ವಿಶೇಷ ಆದ್ಯತೆ ನೀಡಲಾಗುತ್ತದೆ.

ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ತಲುಪುವ ಉದ್ದೇಶದಿಂದ ಇದೇ ಪ್ರಥಮ ಬಾರಿಗೆ ಆನ್‌ಲೈನ್‌ನಲ್ಲಿ ಅರ್ಜಿ ನಮೂನೆಯನ್ನು ಕ್ಯು ಆರ್ ಕೋಡ್ ಸಹಿತ ಒದಗಿಸಲಾಗಿತ್ತು.

‘ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯಲ್ಲಿ ಪ್ರಸ್ತುತ 640 ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಪ್ರತಿಷ್ಠಾನವು ಪ್ರತಿ ವಿದ್ಯಾರ್ಥಿಗೆ ವಾರ್ಷಿಕವಾಗಿ ₹1.30 ಲಕ್ಷದಂತೆ ಒಟ್ಟು ₹8 ಕೋಟಿ ವಿನಿಯೋಗಿಸುತ್ತಿದೆ’ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಮೋಹನ ಆಳ್ವ ತಿಳಿಸಿದರು.

ವಿದ್ಯಾರ್ಥಿನಿ ಆತ್ಮಹತ್ಯೆ

ಮುಧೋಳ (ಬಾಗಲಕೋಟೆ ಜಿಲ್ಲೆ): ‘ಇಲ್ಲಿನ ಹಿರೇಕೆರಿಗಲ್ಲಿ ನಿವಾಸಿ, ಪಟ್ಟಣದ ಶಾರದಾ ಕಾಲೇಜು ಪಿ.ಯು.ಸಿ ವಿಜ್ಞಾನ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿನಿ ತೇಜಸ್ವಿನಿ ಸುಂದರ ದೊಡಮನಿ (16 ವರ್ಷ) ಆತ್ಮಹತ್ಯೆ ಮಾಡಿಕೊಂಡಿದ್ದಾಳೆ’ ಎಂದು ವಿದ್ಯಾರ್ಥಿನಿಯ ತಾಯಿ ದೂರು ನೀಡಿದ್ದಾರೆ.

‘ಫೆ.28ರಂದು ಶಾರದಾ ಕಾಲೇಜಿನಿಂದ ಬೆಳಿಗ್ಗೆ 11.30ಕ್ಕೆ ಕಾಣೆಯಾಗಿರುವ ಬಗ್ಗೆ ವಿದ್ಯಾರ್ಥಿನಿ ತಾಯಿ ಮೀನಾಕ್ಷಿ ದೊಡಮನಿ ಶನಿವಾರ ದೂರು ದಾಖಲಿಸಿದ್ದರು. ಬಳಿಕ, ಭಾನುವಾರ ಬೆಳಿಗ್ಗೆ ಪಟ್ಟಣದ ಮಹಾರಾಣಿ ಕೆರೆಯಲ್ಲಿ ವಿದ್ಯಾರ್ಥಿನಿ ಶವ ಪತ್ತೆ ಆಗಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡಿದ್ದಾಳೆ ಎಂದು ಶಿಕ್ಷಕರು, ಆಡಳಿತ ಮಂಡಳಿಯವರು ಮಾಡಿದ ನಿಂದನೆಯಿಂದ ಮನನೊಂದು ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ಅವರು ದೂರು ನೀಡಿದ್ದಾರೆ’ ಎಂದು ಮುಧೋಳ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಬಾಲ್ಯ ವಿವಾಹ ಮಾಡಿಸಿಲ್ಲ’

ಬೆಳಗಾವಿ: ‘ಜಿಲ್ಲೆಯ ಅಥಣಿ ತಾಲ್ಲೂಕಿನ ಗ್ರಾಮವೊಂದರಲ್ಲಿ 2023ರ ಅ.10ರಂದು ನಡೆದ ಮದುವೆಗೆ ನಾನು ಹೋಗಿದ್ದು ನಿಜ. ಆದರೆ, ಮದುವೆಯಾದ ಬಾಲಕಿ ವಯಸ್ಸು ಕೇಳಿಲ್ಲ. ನಾನೇ ಮುಂದೆ ನಿಂತು ಈ ಮದುವೆ ಮಾಡಿಸಿಲ್ಲ’ ಎಂದು ಬೆಳಗಾವಿ ವಿಭಾಗದ ಮಾನವ ಹಕ್ಕುಗಳ ಜಾರಿ ನಿರ್ದೇಶನಾಲಯದ ಎಸ್‌ಪಿ ರವೀಂದ್ರ ಗಡಾದಿ ಹೇಳಿದ್ದಾರೆ.

‘ಬಾಲ್ಯ ವಿವಾಹ’ ಮಾಡಿಸಿದ ಆರೋಪ ಕೇಳಿಬಂದಿರುವುದರಿಂದ ಭಾನುವಾರ ವಿಡಿಯೊ ಹೇಳಿಕೆ ಬಿಡುಗಡೆಗೊಳಿಸಿರುವ ಅವರು, ‘ಸಂಬಂಧಿಯೊಬ್ಬರು ಮೃತಪಟ್ಟಿದ್ದರಿಂದ ನನ್ನ ಊರಿಗೆ ಹೋಗಿದ್ದೆ. ಆಗ ಈ ಮದುವೆಗೂ ಹೋಗಿದ್ದೆ. ಆದರೆ, ಮದುವೆಯಲ್ಲಿ ವಧುವಿನ ವಯಸ್ಸು ಕೇಳಲು ಆಗುವುದಿಲ್ಲ. ಬಾಲಕಿಯ ತಾಯಿ ನನ್ನ ವಿರುದ್ಧ ಮಾಡುತ್ತಿರುವ ಆರೋಪ ನಿರಾಧಾರ. ಈ ಪ್ರಕರಣದಲ್ಲಿ ನನ್ನ ಹೆಸರು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

‘ಮದುವೆಯಾದ ಬಾಲಕಿಯ ಆಧಾರ್ ಗುರುತಿನ ಚೀಟಿಯಲ್ಲಿ ವಯಸ್ಸು ತಿದ್ದುಪಡಿ ಮಾಡಿದ ಆರೋಪದ ಕುರಿತಾಗಿ ತನಿಖೆಯಾಗಲಿ. ತಪ್ಪು ಮಾಡಿದವರ ವಿರುದ್ಧ ಕ್ರಮವಾಗಲಿ. ತನಿಖೆಗೆ ಎಲ್ಲ ರೀತಿಯಿಂದ ಸಹಕಾರ ನೀಡುತ್ತೇನೆ’ ಎಂದು ಹೇಳಿದ್ದಾರೆ.

‘ಬಾಲಕಿಯನ್ನು ಮದುವೆಯಾಗಿ, ಅತ್ಯಾಚಾರ ಎಸಗಿ, ಗರ್ಭಿಣಿ ಮಾಡಿ, ಮಗು ಜನಿಸಲು ಕಾರಣನಾದ ವ್ಯಕ್ತಿ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯ ಮೇಲ್ವಿಚಾರಕಿ ಶೋಭಾ ಮಗದುಮ್ಮ ಅವರು ಐಗಳಿ ಠಾಣೆಯಲ್ಲಿ ಶನಿವಾರ ದೂರು ದಾಖಲಿಸಿದ್ದರು.

‘ಈ ಬಾಲ್ಯ ವಿವಾಹವನ್ನು ರವೀಂದ್ರ ಗಡಾದಿ ಅವರೇ ಮುಂದೆ ನಿಂತು ಮಾಡಿಸಿದ್ದಾರೆ’ ಎಂದು ಸಂತ್ರಸ್ತೆ ಹಾಗೂ ಆಕೆಯ ತಾಯಿ ಆರೋಪಿಸಿದ್ದರು.

ಇಸ್ಲಾಮೀಕರಣ ಯುದ್ಧ ಆರಂಭ: ಜಗದೀಶ ಕಾರಂತ

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ‘ದೇಶದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚುತ್ತಿದೆ. 2047ರಲ್ಲಿ ಭಾರತವನ್ನೂ ಮುಸ್ಲಿಂ ರಾಷ್ಟ್ರವನ್ನಾಗಿಸಲು ಇಸ್ಲಾಮೀಕರಣ ಯುದ್ಧ ಆರಂಭಗೊಂಡಿದೆ’ ಎಂದು ಹಿಂದೂ ಮುಖಂಡ ಜಗದೀಶ ಕಾರಂತ ಹೇಳಿದರು.

ಇಲ್ಲಿನ ಬಿ.ಸಿ.ರೋಡಿನಲ್ಲಿ ಹಿಂದೂ ಜಾಗರಣ ವೇದಿಕೆಯಿಂದ ಭಾನುವಾರ ನಡೆದ ‘ಹಿಂದೂ ಯುವ ಸಮಾವೇಶ’ದಲ್ಲಿ ಅವರು ಮಾತನಾಡಿದರು.

‘ಕೆ.ಜೆ. ಹಳ್ಳಿ, ಡಿ.ಜೆ. ಹಳ್ಳಿ ಮತ್ತು ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಗೆ ಪುಂಡರು ನಡೆಸಿದ ದಾಳಿ ಇದಕ್ಕೆ ಸ್ಪಷ್ಟ ನಿದರ್ಶನ. ಪ್ಯಾಲೆಸ್ಟೀನ್ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದವರನ್ನೂ ಆಡಳಿತ ನಡೆಸುತ್ತಿರುವವರು ಬೆಂಬಲಿಸುತ್ತಿರುವುದು ದುರ್ದೈವ’ ಎಂದರು.

ಪೊಳಲಿ ರಾಮಕೃಷ್ಣ ತಪೋವನದ ವಿವೇಕ ಚೈತನ್ಯಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ–5/ಟೆಂಡರ/2024–25/4705 ದಿನಾಂಕ: 01/03/2025

:: ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ::

ದ್ವಿ–ಲಕೋಟೆ ಪದ್ಧತಿಯಲ್ಲಿ–2ನೇ ಕರೆ

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 1. ಅಫಜಲಪೂರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 4 ವಿವಿಧ ಗ್ರಾಮೀಣ ರಸ್ತೆಗಳ ಸುಧಾರಣೆ ಕಾಮಗಾರಿಗಳ ಇಂಡೆಂಟ್ ಸಂಖ್ಯೆ : **(1) 13199 (2) 13198 (3) 13200 (4) 13201**, 2. ಕಲಬುರಗಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 1 ಗ್ರಾಮೀಣ ರಸ್ತೆಯ ಸುಧಾರಣೆ ಕಾಮಗಾರಿಗಳ ಇಂಡೆಂಟ್ ಸಂಖ್ಯೆ : **9496/2ನೇ ಕರೆ**, 3. ಕಲಬುರಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 1 ಗ್ರಾಮೀಣ ರಸ್ತೆಯ ಸುಧಾರಣೆ ಕಾಮಗಾರಿಗಳ ಇಂಡೆಂಟ್ ಸಂಖ್ಯೆ : **7666/2ನೇ ಕರೆ**, 4. ಜೇವರ್ಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 4 ವಿವಿಧ ಗ್ರಾಮೀಣ ರಸ್ತೆಗಳ ಸುಧಾರಣೆ ಕಾಮಗಾರಿಗಳ ಇಂಡೆಂಟ್ ಸಂಖ್ಯೆ : **(1) 1368/2ನೇ ಕರೆ**, 2) ಲೆಕ್ಕ ಶೀರ್ಷಿಕೆ: **2022–23 & 2023–24 ನೇ ಸಾಲಿನ 5054 ರಸ್ತೆ**, 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ. **50,84,169.03**, ಗರಿಷ್ಠ ರೂ. **1,61,21,367.21**, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 50 ಟೆಂಡರ ಫಾರಂ ಪಡೆಯುವ ದಿನಾಂಕ : **01–03–2025 ರಿಂದ 13–03–2025 ಸಾಯಂಕಾಲ 4:00 ಗಂಟೆವರೆಗೆ**, 6) ಟೆಂಡರ ಅರ್ಜಿ ಬೆಲೆ: ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ. : **ಕನಿಷ್ಠ ರೂ. 1,02,000.00, ಗರಿಷ್ಠ ರೂ. 2,42,000.00** 8) ಟೆಂಡರ ಸಲ್ಲಿಸುವ ದಿನಾಂಕ: **01–03–2025 ರಿಂದ 13–03–2025 ಸಾಯಂಕಾಲ 4:00 ಗಂಟೆವರೆಗೆ**, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **14–03–2025 ಸಾಯಂಕಾಲ 4:00 ಗಂಟೆ ನಂತರ**, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **17–03–2025 ಬೆಳಿಗ್ಗೆ 11:00 ಗಂಟೆ ನಂತರ**, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1026/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್ ಅಂಬೇಡ್ಕರ್ ಭವನ, ಹಾಸನ
ದೂರವಾಣಿ:08172–268960,
email:dswohassan@gmail.com
ಸಂ/ಉನಿಸಕಇಹಾ/ಡಿ3/ಸಿಬ್ಬಂದಿ/ಸಿಆರ್36/2024–25
ದಿನಾಂಕ:28.02.2025

ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಹಾಸನ ಜಿಲ್ಲೆ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ವ್ಯಾಪ್ತಿಯ ಕಛೇರಿ/ವಿದ್ಯಾರ್ಥಿ ನಿಲಯಗಳು/ಆಶ್ರಮ/ವಸತಿ ಶಾಲೆಗಳು ಮತ್ತು ಮೊರಾರ್ಜಿ ದೇಸಾಯಿ/ಕಿ.ರಾ.ಚನ್ನಮ್ಮ/ಡಾ.ಬಿ.ಆರ್.ಅಂಬೇಡ್ಕರ್/ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಸಿ ಮತ್ತು ಡಿ ವೃಂದದ ಹುದ್ದೆಗಳಿಗೆ ಮಾನವಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.1089.66 ಲಕ್ಷ ಟೆಂಡರ್ ಪ್ರಕಟಣೆ ದಿನಾಂಕ:28–2–2025 ಫ್ರೀ ಬಿಡ್ ಮೀಟಿಂಗ್: ದಿನಾಂಕ 5–3–2025 ರಂದು ಬೆಳಗ್ಗೆ 11.00 ಗಂಟೆಗೆ ಸ್ಥಳ:–ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಹಾಸನ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 15–3–2025 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: www.eproc.karnataka.gov.in ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಹಾಸನ ದೂರವಾಣಿ ಸಂ: 08172–268960

ಸಹಿ/–ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ

ವಾಸಾಸಂಇ/ಹಿಸನಿ/ಹಾಸನ/1004/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ನಂ.ಸಿಎ–15:17, ಮೊದಲನೇ ಮಹಡಿ, ಅಂಜನಾದ್ರಿ ಮುಖ್ಯ ರಸ್ತೆ, 2ನೇ ಘಟ್ಟ, 4ನೇ ಹಂತ, ವಿಜಯನಗರ, ಮೈಸೂರು–32
ದೂ.ಸಂ.: 0821–2543003 Email: dcpumysore@gmail.com
ಸಂಖ್ಯೆ: ಜಿಮರಘಮೈ/ಬಾ.ಮೂ.ಮಾ/ಸಂ.ಸೇ/ಟೆಂ.ಪ್ರ–2/2024–25/
ದಿನಾಂಕ: 28.02.2025

ಟೆಂಡರ್ ಅಧಿಸೂಚನೆ (ಪ್ರಕಟಣೆ–2)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–ನಿಯಮ 2000ರಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳು ಮತ್ತು ಮಕ್ಕಳ ಸಹಾಯವಾಣಿ ಘಟಕಕ್ಕೆ ಹೊರಗುತ್ತಿಗೆ ಸಿಬ್ಬಂದಿಯ ಸೇವೆಯನ್ನು ಪಡೆಯಲು 2024–25ನೇ ಸಾಲಿಗೆ (ಒಂದು ವರ್ಷದ ಅವಧಿಗೆ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮುಖಾಂತರ ದಿ: 03.03.2025 ರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.1.00 ಕೋಟಿ 92.00 ಲಕ್ಷಗಳು. ಇಎಂಡಿ ಮೊತ್ತ ರೂ.1.92 ಲಕ್ಷಗಳನ್ನು ಪಾವತಿಸಿ ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿ: 18.03.2025ರ ಸಂಜೆ 5.00 ಗಂಟೆ ಆಗಿರುತ್ತದೆ. ಟೆಕ್ನಿಕಲ್ ಬಿಡ್ ತೆರೆಯುವ ದಿ: 20.03.2025ರ ಬೆಳಿಗ್ಗೆ 11.00ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿ: 26.03.2025ರ ಬೆಳಿಗ್ಗೆ 11.00ಗಂಟೆಯಾಗಿರುತ್ತದೆ. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು ಜಿಲ್ಲೆ, ದೂರವಾಣಿ ಸಂಖ್ಯೆ:0821–2543003 ಹಾಗೂ ಮೇಲ್ಕಂಡ ವೆಬ್‌ಸೈಟ್‌ನ್ನು ಸಂಪರ್ಕಿಸಬಹುದಾಗಿದೆ. ದಿನಾಂಕದಲ್ಲಿ ಯಾವುದೇ ಬದಲಾವಣೆಗಳಿದ್ದರೆ, ಅದನ್ನು ಇ–ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು, ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು

DIPR/DDMYS/1376/KSMCA/998/2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ–2
ಆಲಮೇಲ–586202.ದೂರವಾಣಿ ಸಂ:08488–232298. ಇ–ಮೇಲ್:kbjnleealmel@gmail.com
ಸಂಖ್ಯೆ:ಕೃಭಾಜನಿನಿ/ಐಬಿಸಿವಿ–2/ಟಿಬಿ/2024–25/1083 ದಿನಾಂಕ:27.02.2025

ತಿದ್ದುಪಡಿ ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂ: 1064 ದಿನಾಂಕ: 17.02.2025

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಭಾಜನಿನಿ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ:2 ಆಲಮೇಲ ಇವರ ಕಚೇರಿಯಿಂದ ಈ ಕೆಳಗೆ ಪಟ್ಟಿಕರಿಸಿದ ಕಾಮಗಾರಿಗಳಿಗೆ ದ್ವಿ–ಲಕೋಟಿ ಪದ್ಧತಿಯಡಿ ಶೇಕಡಾವಾರು ಟೆಂಡರ್ ಅನ್ನು ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆಯಡಿ ನೊಂದಾಯಿತ ಫರ್ಮ/ಏಜೆನ್ಸಿಗಳಿಂದ ಅರ್ಹ ಉಲ್ಲೇಖ ರಡಿಯಲ್ಲಿ ಆಹ್ವಾನಿಸಲಾಗಿತ್ತು.

ಮುಂದುವರೆದು ಕೆಲವು ತಾಂತ್ರಿಕ ಕಾರಣಗಳಿಂದ ಟೆಂಡರ್ ಪ್ರಕಟಣೆಯ ದಿನಾಂಕಗಳನ್ನು ಈ ಕೆಳಗಿನಂತೆ ಮಾರ್ಪಾಡುಗೊಳಿಸಲಾಗಿದೆ.

ಕ್ರ.ಸಂ	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ವಿಷಯ	ಈ ಹಿಂದೆ ಪ್ರಕಟಿಸಿರುವ ದಿನಾಂಕ	ಮಾರ್ಪಾಡುಗೊಳಿಸಿದ ದಿನಾಂಕ
1	Indent No. KBJNL/2024-25/ SE 0144 & KBJNL/2024-25/ SE0145	* ರೂ: 26.40 ಲಕ್ಷಗಳು (02 ಕಾಮಗಾರಿಗಳು) * ಗರಿಷ್ಠ ಇ.ಎಂ.ಡಿ ರೂ: 22,400/– * ಕನಿಷ್ಠ ಇ.ಎಂ.ಡಿ. ರೂ.18,100/–	ಕೆಪಿಪಿಪಿ ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೇ ದಿನಾಂಕ	21.02.2025 ರಿಂದ 07.03.2025 ಸಂಜೆ 4.30 ರ ವರೆಗೆ	28.02.2025 ರಿಂದ 15.03.2025 ಸಂಜೆ 4.30 ರ ವರೆಗೆ
			ಪೂರ್ಣಗೊಂಡ ಬಿಡ್ಡುಗಳನ್ನು ಸಲ್ಲಿಸುವ ದಿನಾಂಕ	21.02.2025 ರಿಂದ 07.03.2025 ಸಂಜೆ 4.30 ರವರೆಗೆ	28.02.2025 ರಿಂದ 15.03.2025 ಸಂಜೆ 4.30 ರವರೆಗೆ
			ಬಿಡ್ಡನ್ನು ತೆರೆಯುವ ದಿನಾಂಕ	10.03.2025 ಬೆಳಿಗ್ಗೆ 11.00 ಗಂಟೆಗೆ	17.03.2025 ಬೆಳಿಗ್ಗೆ 11.00 ಗಂಟೆಗೆ

ಗುತ್ತಿಗೆದಾರರು ದಾಖಲೆಗಳನ್ನು ಇ–ಟೆಂಡರಿಂಗ್ ಮೂಲಕ http:www.kppp.kar.gov.in ಅಂತರ್ಜಾಲದಲ್ಲಿ ತಾಂತ್ರಿಕ ವಿವರಗಳನ್ನು ಪಡೆಯಬಹುದಾಗಿದೆ. ಬಿಡ್ಡನ್ನು ತೆರೆಯುವ ಸ್ಥಳ ಕಾರ್ಯನಿರ್ವಾಹಕ ಇಂಜಿನೀಯರರು ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ:2, ಆಲಮೇಲ ಇವರ ಕಚೇರಿಯಲ್ಲಿ ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಕೆಳ ಸಹಿದಾರರ ಕಾರ್ಯಾಲಯಕ್ಕೆ (08488–232298) ಸಂಪರ್ಕಿಸಬಹುದಾಗಿದೆ. ಮತ್ತು ಷರತ್ತುಬದ್ಧ ಟೆಂಡರಗಳನ್ನು ತಿರಸ್ಕರಿಸಲಾಗುವುದು. ಯಾವುದೇ ಕಾಮಗಾರಿಗಳ ಒಪ್ಪಿಗೆ/ತಿರಸ್ಕರಿಸುವ, ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ:2, ಆಲಮೇಲ

ವಾಸಾಸಂಇ/ವಿಜಯಪುರ/739/ಕೆಎಸ್‌ಎಂಸಿಎ/2024–25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರವರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ನಂ: ಬೆಂಜಮಂ/ಮುಅ(ಪೂ)/ಅಮುಅ(ಪೂ)–II/ಉಮುಅ(ನಿ)-I/ತಾಂಸ(ಪೂ)/12577/2024–25 ದಿನಾಂಕ: 01.03.2025	
1	ಸಕಾನಿಅ(ದಪೂ–5) ಉಪ ವಿಭಾಗದ ಬೆಳ್ಳಂದೂರು ಸೇವಾಠಾಣೆ ವ್ಯಾಪ್ತಿಯಡಿ ಬರುವ ಇಬ್ಬಲೂರು ಗ್ರಾಮದಲ್ಲಿ 150 ಮಿಮೀ ವ್ಯಾಸದ ಎಸ್‌ಡಬ್ಲ್ಯು ಮಾರ್ಗದ ಬದಲಾಗಿ 230 ಮಿಮೀ ವ್ಯಾಸದ ಎಸ್‌ಡಬ್ಲ್ಯು ಮಾರ್ಗ ಮತ್ತು 300 ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ದರ್ಜೆಯ ಕೊಳವೆಮಾರ್ಗವನ್ನು ಅಳವಡಿಸುವ ಕಾಮಗಾರಿ	ರೂ. 120.99 ಲಕ್ಷಗಳು / ರೂ. 2,00,000/-

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **18.03.2025ರ ಸಂಜೆ 4.00 ಗಂಟೆವರೆಗೆ**. ಬಿಡ್‌ಗಳನ್ನು ತೆರೆಯುವ ದಿನಾಂಕ: **19.03.2025ರ ಸಂಜೆ 4.00 ಗಂಟೆಗೆ.**

ಸಹಿ/–
ಮುಖ್ಯ ಅಭಿಯಂತರರು (ಪೂರ್ವ)

ಮುಖ್ಯ ಅಭಿಯಂತರರವರ ಕಚೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ನಂ: ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ.&ಡಿಸಿಡಬ್ಲ್ಯೂ)/2321/2024–25 ದಿನಾಂಕ: 01.03.2025	
2	5 ವರ್ಷಗಳ ಯಂತ್ರದ ನಿರ್ವಹಣೆ + 1 ವರ್ಷ ವಾರಂಟಿ ಅವಧಿಯೊಂದಿಗೆ ಮಂಡಳಿಯಿಂದ ನೀಡಲಾಗುವ ಬಿಎಸ್–VI ಚಾಸಿಸ್‌ಗೆ ತತ್ಸಮಾನವಾದ ಮೌಂಟ್ ಆಗಿರುವ 6000 ಲೀಟರ್ ಸಾಮರ್ಥ್ಯದ (4000 ಲೀಟರ್ ನೀರು ಮತ್ತು 2000 ಲೀಟರ್ ತ್ಯಾಜ್ಯ ನೀರನ್ನು ಒಯ್ಯುವ) 8 ಸಂಖ್ಯೆ ಸಕ್ಷನ್ ಕಂ ಜೆಟ್ಟಿಂಗ್ ಯಂತ್ರಗಳನ್ನು ಖರೀದಿ ಮಾಡುವುದು.	ರೂ. 4,43,13,240/- / ರೂ. 6,65,000/-
	ಐಎಫ್‌ಟಿ ನಂ: ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ.&ಡಿಸಿಡಬ್ಲ್ಯೂ)/2322/2024–25 ದಿನಾಂಕ: 01.03.2025	
3	6000 ಲೀಟರ್ ಸಾಮರ್ಥ್ಯದ ಕಾಂಬಿನೇಷನ್ ಮೆಷಿನ್‌ಗಳಿಗೆ (4000 ಲೀಟರ್ ನೀರು ಮತ್ತು 2000 ಲೀಟರ್ ತ್ಯಾಜ್ಯ ನೀರನ್ನು ಒಯ್ಯುವ ಸಕ್ಷನ್ ಕಂ ಜೆಟ್ಟಿಂಗ್) ತತ್ಸಮಾನವಾಗಿ ಮೌಂಟ್ ಆಗಿರುವ 11 ಟನ್‌ಗಿಂತ ಕಡಿಮೆ ಇಲ್ಲದ ಬಿಎಸ್–VI ಚಾಸಿಸ್‌ವುಳ್ಳ 8 ಸಂಖ್ಯೆ ಗ್ರಾಸ್ ವೆಹಿಕಲ್ ವೇಟ್ (ಜಿವಿಡಬ್ಲ್ಯೂ) ಯಂತ್ರಗಳನ್ನು ಖರೀದಿ ಮಾಡುವುದು.	ರೂ. 1,71,84,000/- / ರೂ. 2,58,000/-
	ಐಎಫ್‌ಟಿ ನಂ: ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ.&ಡಿಸಿಡಬ್ಲ್ಯೂ)/2323/2024–25 ದಿನಾಂಕ: 01.03.2025	
4	5 ವರ್ಷಗಳ ಯಂತ್ರದ ನಿರ್ವಹಣೆ + 1 ವರ್ಷ ವಾರಂಟಿ ಅವಧಿಯೊಂದಿಗೆ ಮಂಡಳಿಯಿಂದ ನೀಡಲಾಗುವ ಬಿಎಸ್–VI ಚಾಸಿಸ್‌ಗೆ ತತ್ಸಮಾನವಾದ ಮೌಂಟ್ ಆಗಿರುವ 8000 ಲೀಟರ್ ಸಾಮರ್ಥ್ಯದ (6000 ಲೀಟರ್ ನೀರು ಮತ್ತು 2000 ಲೀಟರ್ ತ್ಯಾಜ್ಯ ನೀರನ್ನು ಒಯ್ಯುವ) 7ಸಂಖ್ಯೆ ಸಕ್ಷನ್ ಕಂ ಜೆಟ್ಟಿಂಗ್ ಯಂತ್ರಗಳನ್ನು ಖರೀದಿ ಮಾಡುವುದು.	ರೂ. 4,72,50,000/- / ರೂ. 7,09,000/-
	ಐಎಫ್‌ಟಿ ನಂ: ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ.&ಡಿಸಿಡಬ್ಲ್ಯೂ)/2324/2024–25 ದಿನಾಂಕ: 01.03.2025	
5	8000 ಲೀಟರ್ ಸಾಮರ್ಥ್ಯದ ಕಾಂಬಿನೇಷನ್ ಮೆಷಿನ್‌ಗಳಿಗೆ (6000 ಲೀಟರ್ ನೀರು ಮತ್ತು 2000 ಲೀಟರ್ ತ್ಯಾಜ್ಯ ನೀರನ್ನು ಒಯ್ಯುವ ಸಕ್ಷನ್ ಕಂ ಜೆಟ್ಟಿಂಗ್) ತತ್ಸಮಾನವಾಗಿ ಮೌಂಟ್ ಆಗಿರುವ 16 ಟನ್‌ಗಿಂತ ಕಡಿಮೆ ಇಲ್ಲದ ಬಿಎಸ್–VI ಚಾಸಿಸ್‌ವುಳ್ಳ 7 ಸಂಖ್ಯೆ ಗ್ರಾಸ್ ವೆಹಿಕಲ್ ವೇಟ್ (ಜಿವಿಡಬ್ಲ್ಯೂ) ಯಂತ್ರಗಳನ್ನು ಖರೀದಿ ಮಾಡುವುದು.	ರೂ. 1,75,08,141/- / ರೂ. 2,63,000/-
	ಐಎಫ್‌ಟಿ ನಂ: ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ.&ಡಿಸಿಡಬ್ಲ್ಯೂ)/2325/2024–25 ದಿನಾಂಕ: 01.03.2025	
6	5 ವರ್ಷಗಳ ಯಂತ್ರದ ನಿರ್ವಹಣೆ + 1 ವರ್ಷ ವಾರಂಟಿ ಅವಧಿಯೊಂದಿಗೆ ಮಂಡಳಿಯಿಂದ ನೀಡಲಾಗುವ ಬಿಎಸ್–VI ಚಾಸಿಸ್‌ಗೆ ತತ್ಸಮಾನವಾದ ಮೌಂಟ್ ಆಗಿರುವ 6000 ಲೀಟರ್ ಸಾಮರ್ಥ್ಯದ (4000 ಲೀಟರ್ ನೀರು ಮತ್ತು 2000 ಲೀಟರ್ ತ್ಯಾಜ್ಯ ನೀರನ್ನು ಒಯ್ಯುವ) 8 ಸಂಖ್ಯೆ ಸಕ್ಷನ್ ಕಂ ಜೆಟ್ಟಿಂಗ್ ಯಂತ್ರಗಳನ್ನು ಖರೀದಿ ಮಾಡುವುದು.	ರೂ. 4,43,13,240/- / ರೂ. 6,65,000/-

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **13.03.2025ರ ಸಂಜೆ 4.00 ಗಂಟೆಗೆ ಮುಂಚಿತವಾಗಿ.** ಬಿಡ್‌ಗಳನ್ನು ತೆರೆಯುವ ದಿನಾಂಕ: **14.03.2025ರ ಸಂಜೆ 5.00 ಗಂಟೆಗೆ.**

ಸಹಿ/–
ಮುಖ್ಯ ಅಭಿಯಂತರರು (ಯೋಜನೆ)

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲ್ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/YC/5380/2024-25



ಡೆವೊಪ್ಸ್ ಎಂಜಿನಿಯರ್ ಹೆಚ್ಚಿದ ಬೇಡಿಕೆ

ರವಿಚಂದ್ರ ಎಂ.

ಸಾಫ್ಟ್‌ವೇರ್(ತಂತ್ರಾಂಶ) ಅಭಿವೃದ್ಧಿಪಡಿಸುವ ಕ್ಷೇತ್ರ ಹಲವು ಬದಲಾವಣೆಗಳನ್ನು ಕಂಡಿದೆ. ತಂತ್ರಾಂಶ ಅಭಿವೃದ್ಧಿ ಮಾಡುವ ಸಂಸ್ಥೆಗಳು ಗ್ರಾಹಕಸ್ನೇಹಿ ಆಗಲು, ಸಾಫ್ಟ್‌ವೇರ್ ಡೆವಲಪರ್ಸ್ ಮತ್ತು ಐ.ಟಿ. ಆಪರೇಷನ್ಸ್ ತಂಡಗಳ ನಡುವೆ ಸಮನ್ವಯ ಸಾಧಿಸುವ ಪ್ರಯತ್ನವಾಗಿ ಡೆವೊಪ್ಸ್ ಎಂಜಿನಿಯರ್ ಇರುತ್ತಾರೆ. ಡೆವೊಪ್ಸ್ ಎಂದರೆ ಡೆವ್‌ಲೆಪ್‌ಮೆಂಟ್ + ಆಪರೇಷನ್.

ಡೆವೊಪ್ಸ್‌ನ ರೂಪುರೇಷೆ: ಮೊದಲೆಲ್ಲ ಒಂದು ತಂತ್ರಾಂಶ ಸಂಪೂರ್ಣವಾಗಿ ಅಭಿವೃದ್ಧಿಗೊಂಡ ನಂತರ ಅದು ಹೇಗೆ ಕಾರ್ಯನಿರ್ವಹಿಸುತ್ತದೆ ಎಂದು ಪರೀಕ್ಷೆ ಮಾಡಲಾಗುತ್ತಿತ್ತು. ಇದರಿಂದ ತಂತ್ರಾಂಶದಲ್ಲಿರುವ ದೋಷ (ಬಗ್ಸ್)ಗಳನ್ನು ಹೆಕ್ಕಿ ತೆಗೆಯುವುದು ಪ್ರಯಾಸದಾಯಕ ಎನಿಸಿತ್ತು. ಆದರೆ ಈಗ ಹಾಗಲ್ಲ. ಡೆವೊಪ್ಸ್ ಸಿದ್ಧಾಂತವು ಅಭಿವೃದ್ಧಿ ಮಾದರಿಯನ್ನು ಅನುಸರಿಸುವುದರಿಂದ ತಂತ್ರಾಂಶ ಅಭಿವೃದ್ಧಿ ಹಂತದಲ್ಲಿ ಇರುವಾಗಲೇ ಅದನ್ನು ಪರೀಕ್ಷೆ ಒಳಪಡಿಸುತ್ತದೆ. ಇದರಿಂದ ತಂತ್ರಾಂಶದಲ್ಲಿನ ದೋಷಗಳನ್ನು ಶೀಘ್ರ ಪತ್ತೆ ಹಚ್ಚಿ, ನಿವಾರಣೆ ಮಾಡುವುದು ಸಾಧ್ಯ.

ಕ್ಷಿಪ್ರ ಬದಲಾವಣೆ ಸಾಮಾನ್ಯವಾಗಿರುವ ಈ ಕಾಲಘಟ್ಟದಲ್ಲಿ ಗ್ರಾಹಕರು ತಂತ್ರಾಂಶ ಅಭಿವೃದ್ಧಿ ಸಂಸ್ಥೆಗಳಿಂದ ಶೀಘ್ರ ಹಾಗೂ ಗುಣಮಟ್ಟದ ಸೇವೆಯನ್ನು ಬಯಸುತ್ತಾರೆ. ಡೆವೊಪ್ಸ್ ವೃತ್ತಿಯ ಸಿದ್ಧಾಂತವೇ ನಿರಂತರ ಸಂಯೋಜನೆ ಮತ್ತು ನಿರಂತರ ವಿಲೇವಾರಿ (Continuous Integration / Continuous ಡೆಲಿವರಿ). ಈ ವಿಧಾನದಿಂದ ಗ್ರಾಹಕರಿಗೆ ವೇಗವಾಗಿ ಪ್ರಾಡಕ್ಟ್ ವಿಲೇವಾರಿ ಮಾಡಲು ಸಹಕಾರಿಯಾಗುತ್ತದೆ. ಮುಖ್ಯವಾಗಿ ಆಟೋಮೇಷನ್ ಮೂಲಕ ಸಾಫ್ಟ್‌ವೇರ್ ಅಭಿವೃದ್ಧಿ ಸರಪಳಿಯಲ್ಲಿ ವೇಗ ಮತ್ತು ಕ್ಷಮತೆ ತರಬಹುದು.

ಡೆವೊಪ್ಸ್ ಆಗುವುದು ಹೇಗೆ?

ಡೆವೊಪ್ಸ್ ಕ್ಷೇತ್ರದಲ್ಲಿ ಕ್ಷಮತೆ ಹಾಗೂ ಕೌಶಲ ಗಳಿಸಲು ಮೂರು ಪ್ರಮುಖ ದಾರಿಗಳಿವೆ.

- ನೀವು ಈಗತಾನೇ ಪದವಿ ಪೂರೈಸಿ ಔದ್ಯೋಗಿಕ ಮಾರುಕಟ್ಟೆಗೆ ಪ್ರವೇಶ ಮಾಡುತ್ತಿದ್ದರೆ, ಪ್ರಾರಂಭಿಕ ಹಂತದ ಡೆವೊಪ್ಸ್ ಕೋರ್ಸ್‌ಗಳನ್ನು ಮಾಡಬಹುದು
- ನೀವು ಈಗಾಗಲೇ ಐ. ಟಿ ಕ್ಷೇತ್ರದಲ್ಲಿ ಅನುಭವ ಹೊಂದಿದ್ದು, ಡೆವೊಪ್ಸ್ ಕ್ಷೇತ್ರವನ್ನು ಅನ್ವೇಷಿಸಲು ಬಯಸಿದ್ದೆ ಆದರೆ, ಅನೇಕ ಮುಂದುವರಿದ(advanced) ಕೋರ್ಸ್‌ಗಳನ್ನು ಮಾಡಬಹುದು.
- ನಿಮ್ಮ ಸಂಸ್ಥೆ ಈಗಾಗಲೇ ನಿರ್ದಿಷ್ಟ ಕ್ಲೌಡ್ ಮತ್ತು ಡೆವೊಪ್ಸ್ ಟೂಲ್ಸ್‌ಗಳನ್ನು ಬಳಸುತ್ತಿದರೆ, ಆ ನಿರ್ದಿಷ್ಟ ಟೂಲ್ಸ್‌ಗಳನ್ನು ಬಳಸುವ ವಿಚಾರದಲ್ಲಿ ಪರಿಣತಿ ಪಡೆಯಬಹುದು.
- ಈ ಕ್ಷೇತ್ರದಲ್ಲಿ ಪರಿಣತಿ ಪಡೆಯಲು ಅನೇಕ ಕೋರ್ಸ್‌ಗಳು ಉಚಿತವಾಗಿ ಲಭ್ಯವಿದೆ. ಇಲ್ಲಿ ಅಂಥ ಪ್ರಮುಖ 5 ಕೋರ್ಸ್‌ಗಳ ವೆಬ್ ಕೊಂಡಿಗಳ ಜತೆಗೆ ವಿವರಣೆ ನೀಡಲಾಗಿದೆ.

1. DevOps Culture and Mindset
- ಕೋರ್ಸೆರಾದಲ್ಲಿ ಉಚಿತ ಆಡಿಟ್ ಕೋರ್ಸ್ ಲಭ್ಯ.
- ಎಂಜಿನಿಯರಿಂಗ್ ಪದವೀಧರರು ಮತ್ತು ಐ. ಟಿ ತಂತ್ರಜಾನದ ಮೂಲ ಟೂಲ್ಸ್‌ಗಳ ಬಗ್ಗೆ ಜ್ಞಾನ ಉಳ್ಳವರು ಈ ಕೋರ್ಸ್‌ಗೆ ಹೆಸರು ನೋಂದಾಯಿಸಿಕೊಳ್ಳಬಹುದು.
- https://www.coursera.org/learn/devops-culture-and-mindset
- **ತರಬೇತಿ ಸಮಯ:** ಮೂರು ವಾರಗಳು /14 ಗಂಟೆ
- **ತರಬೇತಿ ವಿಧಾನ:** ಆನ್‌ಲೈನ್

2. Introduction to Jenkins
- LinuxFoundationX: Introduction to Jenkins ಎಂಬ ಈ ಕೋರ್ಸ್ ಉಚಿತವಾಗಿ ಲಭ್ಯ. ಸರ್ಟಿಫಿಕೇಷನ್ ಬೇಕಿದ್ದರೆ ಶುಲ್ಕ ಕೊಟ್ಟು ನೋಂದಣಿ ಮಾಡಿಕೊಳ್ಳಬಹುದು.
- ಸಾಫ್ಟ್‌ವೇರ್ ಅಭಿವೃದ್ಧಿ ಬಗ್ಗೆ ಕನಿಷ್ಠ ಆರಂಭಿಕ ಜ್ಞಾನ ಇರಬೇಕು.
- ಅನುಕೂಲಕ್ಕೆ ತಕ್ಕಂತೆ ಕೋರ್ಸ್‌ಗೆ ಸಮಯ ನೀಡಬಹುದು.
- https://www.edx.org/learn/computer-science/the-linux-foundation-introduction-to-jenkins
- **ತರಬೇತಿ ವಿಧಾನ:** ಆನ್‌ಲೈನ್

3. Docker Essentials
- ಈ ಕೋರ್ಸ್ ಉಡೆಮಿ ಪ್ಲಾಟ್‌ಫಾರ್ಮ್‌ನಲ್ಲಿ ಉಚಿತವಾಗಿ ಲಭ್ಯ.
- ಲಿನಕ್ಸ್ ಆಪರೇಟಿಂಗ್ ಸಿಸ್ಟಮ್‌ನ ಜ್ಞಾನ ಅವಶ್ಯಕ.
- https://www.udemy.com/course/docker-essentials/
- 5 ಗಂಟೆಗಳ , 52 ವಿಡಿಯೊ ತರಬೇತಿ ರೆಕಾರ್ಡಿಂಗ್ಸ್ ಲಭ್ಯ
- **ತರಬೇತಿ ವಿಧಾನ:** ಆನ್‌ಲೈನ್

4. Kubernetes: Getting Started
- ಈ ಕೋರ್ಸ್ ಉಡೆಮಿ ಪ್ಲಾಟ್‌ಫಾರ್ಮ್‌ನಲ್ಲಿ ಉಚಿತವಾಗಿ ಲಭ್ಯ.
- 4 ಗಂಟೆಗಳ , 15 ವಿಡಿಯೊ ತರಬೇತಿ ರೆಕಾರ್ಡಿಂಗ್ಸ್ ಲಭ್ಯ.
- https://www.udemy.com/course/kubernetes-getting-started/
- ಈಗಾಗಲೇ ಡೆವೊಪ್ಸ್ ಕ್ಷೇತ್ರದಲ್ಲಿ ಸ್ವಲ್ಪ ಅನುಭವ ಇದ್ದು ,ಕುಬೆರ್ನೆಟ್ಸ್ ತಂತ್ರಾಂಶ ಕಲಿಯ ಬಯಸುವವರು ಸಲ್ಲಿಸಬಹುದು.
- **ತರಬೇತಿ ವಿಧಾನ:** ಆನ್‌ಲೈನ್

5. Getting Started with DevOps on AWS
- ಈ ಟುಟೋರಿಯಲ್ AWSನಿಂದ ಉಚಿತವಾಗಿ ಲಭ್ಯ
- 1 ಗಂಟೆ ತರಬೇತಿ ರೆಕಾರ್ಡಿಂಗ್ಸ್ ಲಭ್ಯ
- AWS ಕ್ಲೌಡ್ ಆಧರಿಸಿ ಡೆವೊಪ್ಸ್‌ನಲ್ಲಿ ತೊಡಗಿಸಿಕೊಳ್ಳ ಬಯಸುವವರಿಗೆ ಸೂಕ್ತ
- ಐ. ಟಿ ಕ್ಷೇತ್ರದಲ್ಲಿ ಇರುವ ಯಾರೇ ಆಗಲಿ ಡೆವೊಪ್ಸ್ ನ basics ತಿಳಿಯಲು ಬಯಸುವವರು.
- https://explore.skillbuilder.aws/learn/courses/2000/getting-started-with-devops-on-aws
- **ತರಬೇತಿ ವಿಧಾನ:** ಆನ್‌ಲೈನ್

ವಿದ್ಯಾರ್ಥಿ ವೇತನ ಕೈಪಿಡಿ

ನೆಹರೂ ಫೆಲೋಷಿಪ್ ಇನ್ ಪಾಲಿಟಿಕ್ಸ್ ಅಂಡ್ ಎಲೆಕ್ಷನ್ಸ್

ನೆಹರೂ ಫೆಲೋಷಿಪ್ ಇನ್ ಪಾಲಿಟಿಕ್ಸ್ ಅಂಡ್ ಎಲೆಕ್ಷನ್ಸ್ 2025ಅನ್ನು 'ಇನ್‌ಕ್ಲೂಸಿವ್ ಮೈಂಡ್ಸ್'ನಿಂದ ಪದವಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಇದು ಯುಕೆಯಲ್ಲಿ ವಿಶ್ವದರ್ಜೆಯ ಶಿಕ್ಷಣವನ್ನು ಕೊಡುವ ಜತೆಗೆ, ಪಾಲಿಸಿ ರಿಸರ್ಚ್, ಪೊಲಿಟಿಕಲ್ ಸ್ಟ್ರಾಟಜಿ ಮತ್ತು ಕಮ್ಯೂನಿಕೇಷನ್ಸ್ ಸೇರಿ ಪೊಲಿಟಿಕಲ್ ಕನ್ಸಲ್ಟಿಂಗ್ ಮತ್ತು ಕ್ಯಾಂಪೇನ್‌ಗಳಲ್ಲಿ ವ್ಯವಹಾರಿಕ ಅನುಭವ ನೀಡುವ ಯೋಜನೆಯಾಗಿದೆ.

- **ಅರ್ಹತೆ:** ಅರ್ಜಿದಾರರು ಭಾರತೀಯ ನಾಗರಿಕರಾಗಿರಬೇಕು. ನಿರೀಕ್ಷೆಗಳನ್ನು ಮೀರಿ ಸಾಧನೆ ಮಾಡುವ ಬಲವಾದ ಹಂಬಲ ಮತ್ತು ಅಪೇಕ್ಷೆ ಹೊಂದಿರಬೇಕು.

ಆರ್ಥಿಕ ಸಹಾಯ: ಮಾಸಿಕ ₹75,000ದ ಸ್ಟೈಪೆಂಡ್
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-03-2025
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/NFPE1

ಎನ್‌ಐಟಿ ರೌರ್ಕೇಲಾ ಸಮ್ಮರ್ ಇಂಟರ್ನ್‌ಷಿಪ್

ರೌರ್ಕೇಲಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲಭ್ಯ. ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಇದು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ.

- **ಅರ್ಹತೆ:** ಅಭ್ಯರ್ಥಿಗಳು ಇವುಗಳಲ್ಲಿ ಒಂದು ವಿಷಯವನ್ನು ಅಭ್ಯಾಸ ಮಾಡುತ್ತಿರಬೇಕು. ಬಿ.ಇ. / ಬಿ.ಟೆಕ್. (4ನೇ ಸೆಮಿಸ್ಟರ್ ಪರೀಕ್ಷೆ ಪೂರ್ಣಗೊಂಡಿರುವುದು), ಬಿ.ಆರ್ಕ್./ಇಂಟಿಗ್ರೇಟೆಡ್ ಎಂ.ಎಸ್‌ಸಿ. / ಎಂ.ಟೆಕ್. /ಡ್ಯುವಲ್ ಡಿಗ್ರಿ (6ನೇ ಸೆಮಿಸ್ಟರ್ ಪರೀಕ್ಷೆ ಪೂರ್ಣಗೊಂಡಿರಬೇಕು) ಅಥವಾ ಎಂ.ಎಸ್‌ಸಿ./ಎಂ.ಎ./ಎಂಬಿಎ (2ನೇ ಸೆಮಿಸ್ಟರ್ ಪರೀಕ್ಷೆ ಪೂರ್ಣಗೊಂಡಿರುವುದು). ಹಿಂದಿನ ಸೆಮಿಸ್ಟರ್‌ಗಳಲ್ಲಿ ಉತ್ತಮ ಶೈಕ್ಷಣಿಕ ದಾಖಲೆ ಮತ್ತು ಅಂಕಗಳು / ಗ್ರೇಡ್ ಶೀಟ್‌ಗಳು ಅಗತ್ಯ. ಅಭ್ಯರ್ಥಿಗಳು 2025ರ ಮೇ 16 ರಿಂದ ಜುಲೈ 15ರವರೆಗೆ ಇಂಟರ್ನ್‌ಷಿಪ್‌ಗೆ ಲಭ್ಯರಿರಬೇಕು.

ಆರ್ಥಿಕ ಸಹಾಯ: ಮಾಸಿಕ ₹7,500 ಮತ್ತು ಇತರ ಪ್ರಯೋಜನಗಳು.
- **ಅರ್ಜಿ ಸಲ್ಲಿಸಲು ಕೊನೆ ದಿನ:** 10-03-2025
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/NRSI1

ವಹಾನಿ ಸ್ಕಾಲರ್‌ಷಿಪ್

12ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ವಹಾನಿ ಗ್ರೂಪ್ ನೀಡುತ್ತಿರುವ ಅವಕಾಶ ಇದಾಗಿದೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಮುಂದುವರಿಸಲು ಸಹಾಯ ಮಾಡುವ ಗುರಿಯನ್ನು ಈ ವಿದ್ಯಾರ್ಥಿವೇತನವು ಹೊಂದಿದೆ.

- **ಅರ್ಹತೆ:** ಪ್ರಸ್ತುತ 12ನೇ ತರಗತಿಯಲ್ಲಿ ಓದುತ್ತಿರುವ ಮತ್ತು ಮುಂದಿನ ವರ್ಷ ಅಂತಿಮ ಬೋರ್ಡ್ ಪರೀಕ್ಷೆಗೆ ಹಾಜರಾಗಲಿರುವ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ.

ಅಭ್ಯರ್ಥಿಗಳು 10ನೇ ತರಗತಿಯಲ್ಲಿ ಕನಿಷ್ಠ ಶೇ 85 ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ಒಟ್ಟು ₹ 300,000ಕ್ಕಿಂತ ಕಡಿಮೆ ಇರಬೇಕು.
- **ಆರ್ಥಿಕ ಸಹಾಯ:** ಸಂಪೂರ್ಣ ಬೋಧನಾ ಶುಲ್ಕ, ಸ್ಟೈಪೆಂಡ್ ಮತ್ತು ಇತರ ಪ್ರಯೋಜನಗಳು.
- **ಅರ್ಜಿ ಸಲ್ಲಿಸಲು ಕೊನೆ ದಿನ:** 01-12-2025
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url:www.b4s.in/praja/VAHS1



ಕದಿಯುವ ಮಗನಿಗೆ ಏನು ಹೇಳಲಿ?

- **ಮನೆಯಲ್ಲಿ ಮಗ ಕಳುವು ಮಾಡುತ್ತಿದ್ದಾನೆ ಎಂಬ ಅನುಮಾನವಿದೆ. ಇದನ್ನು ಹೇಗೆ ಪತ್ತೆ ಮಾಡುವುದು? ಅವನನ್ನು ಹೇಗೆ ಸರಿ ದಾರಿಗೆ ತರುವುದು? ಹಿಂದೆ ಒಂದೆರಡು ಸಲ ವಿಚಾರಿಸಿದಾಗ, ಕೋಪಗೊಂಡು ಮನೆಯಲ್ಲಿರುವ ವಸ್ತುಗಳನ್ನು ಎಸೆದು ಭರವಸೆ ಇಲ್ಲವೇ ಎಂದೆಲ್ಲ ಪ್ರಶ್ನಿಸಿದ್ದ. ಈ ವರ್ತನೆಯನ್ನು ಹತೋಟಿಗೆ ತರುವುದು ಹೇಗೆ?**



ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ನಿಮ್ಮ ಮಗನೇ ನಿಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದಾನೆ ಎನ್ನುವುದು ನಿಮಗೆ ಸ್ಪಷ್ಟವಾಗಿಲ್ಲ. ಇನ್ನೂ ಅನುಮಾನವಷ್ಟೇ. ಅವನನ್ನು ನೀವು ಹಿಡಿಯಲಿಲ್ಲ. ನಿಮಗೆ ಅವನ ಮೇಲೆ ನಂಬಿಕೆ ಇಲ್ಲ ಎನ್ನುವುದು ಅವನಿಗೆ ಗೊತ್ತಾಗಿದೆ. ಅವನನ್ನು ನಿಮ್ಮ ರೀತಿಯಲ್ಲಿ ವಿಚಾರಿಸಿದಾಗ ಆತ ತೀವ್ರವಾಗಿ ಪ್ರತಿಭಟಿಸಿದ್ದಾನೆ. ತಾನೂ ಪ್ರೌಢನಾಗುತ್ತಿದ್ದೇನೆ ಎನ್ನುವ ಸಂದೇಶವನ್ನು ಕೊಡಲಿಕ್ಕೆ ಪ್ರಯತ್ನಿಸಿದ್ದಾನೆ. ಇಷ್ಟರಲ್ಲಿ ಅವನು ನಿಮ್ಮನ್ನು ನಂಬುವುದಿಲ್ಲ. ನೀವೂ ಅವನನ್ನು ನಂಬುವುದಿಲ್ಲ ಎನ್ನುವ ಹಾಗಾಗಿದೆ.

ಬಹಳ ಮುಖ್ಯವಾಗಿ ಪಾಲಕರ ಹಾಗೂ ಮಕ್ಕಳ ಮಧ್ಯೆ ಪರಸ್ಪರ ಪ್ರೀತಿ, ವಿಶ್ವಾಸ ಇಲ್ಲ ಎನ್ನುವ ಹಾಗೆ ಆಗಬಾರದು. ಇಬ್ಬರಿಗೂ ಇರುಸು ಮುರುಸಾಗುತ್ತದೆ. ಪರಸ್ಪರರಲ್ಲಿ ಇರಬೇಕಾದ ಸುಮಧುರ ಸಂಬಂಧ ಹಾಳಾಗುತ್ತದೆ. ಮಕ್ಕಳ ಮನಸ್ಸು ಕನ್ನಡಿಯ ಹಾಗೆ ಇರುತ್ತದೆ. ಅದಕ್ಕೆ ಕಲ್ಲೆಸೆದರೆ ಒಡೆದುಹೋಗುತ್ತದೆ. ಹಾಗಾಗದಂತೆ ಮೊದಲಿನಿಂದಲೂ ಪಾಲಕರು ಎಚ್ಚರ ವಹಿಸಬೇಕು. ಮಕ್ಕಳೆದುರಿನಲ್ಲಿ ಪಾಲಕರು ಅತಿಯಾಗಿ ಜಗಳ ಮಾಡುವುದು, ಹೊಡೆದಾಡಿಕೊಳ್ಳುವುದು ಮಾಡುವುದರಿಂದಲೂ ಮಗುವಿನ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮಗಳಾಗುತ್ತವೆ.

ಮೊದಲ ತಪ್ಪನ್ನು ಮಕ್ಕಳು ಮಾಡುವುದಿಲ್ಲ. ಹಿರಿಯರು ಮಾಡಿದ್ದನ್ನು ನೋಡಿಯೇ ಮಕ್ಕಳು ಮಾಡುತ್ತಾರೆ. ಪ್ರತಿಭಟನೆಗಾಗಿಯೂ ಕೆಲವು ಸಲ ಮಕ್ಕಳು ತಪ್ಪು ಮಾಡುತ್ತಾರೆ. ಅದಕ್ಕೂ ಅವರ ನಿರೀಕ್ಷೆಯಂತೆ ಪುರಸ್ಕಾರ ಸಿಗದಿದ್ದಾಗ ಮುಂದೆ, ಕಾಲಾಂತರದಲ್ಲಿ ಅಪರಾಧವನ್ನು ಮಾಡುವ ಮಟ್ಟಕ್ಕೂ ಬೆಳೆಯುತ್ತಾರೆ. ಅತಿಯಾದ ಅಂಜಿಕೆಯಲ್ಲಿ ಬೆಳೆದ ಮಗು, ಮುಂದೆ ದೊಟ್ಟವನಾದ ಮೇಲೆ ಇತರರನ್ನು ಹೆದರಿಸುವ ಮೂಲಕ ತನ್ನೊಳಗಿನ ಹೆದರಿಕೆಯನ್ನು ಸಂತೈಸಿಕೊಳ್ಳುವುದೂ ಇದೆ.

ಇನ್ನು, ವಂಶವಾಹಿ (ಜೆನೆಟಿಕ್ಸ್) ಪ್ರಭಾವದಿಂದಲೂ ಮಕ್ಕಳು ಕೆಟ್ಟ ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತಾರೆ, ಅಪರಾಧಿಗಳಾಗುತ್ತಾರೆ, ಕ್ರಿಮಿನಲ್ ಗಳಾಗುತ್ತಾರೆ ಎನ್ನುವ ಅಧ್ಯಯನವೂ ನಡೆದಿದೆ. 'ಕ್ಲೆಪ್ಟೋಮೇನಿಯಾ' (Kleptomania) ಎನ್ನುವ ವಿಚಿತ್ರ ಹೆಸರಿನ ಮಾನಸಿಕ ಅಸ್ವಸ್ಥತೆಯಿಂದಲೂ ಮಕ್ಕಳು ಕಳ್ಳತನವನ್ನು ಮಾಡುತ್ತಾರೆ. ಈ ಸಮಸ್ಯೆಯಿಂದ ಬಳಲುತ್ತಿರುವವರು ಕದಿಯಲಾರದೇ ಇರಲಾರದಷ್ಟು ಒತ್ತಡಕ್ಕೆ ಒಳಗಾಗುತ್ತಾರೆ. ಯಾರಿಗೂ ಕಾಣದ ಹಾಗೆ, ಏನನ್ನೋ ಕದಿಯುವುದರಿಂದ ಕ್ಷಣಿಕ ಖುಷಿಯನ್ನು ಅನುಭವಿಸುತ್ತಾರೆ. ಯಾರಿಗೂ ಉಪಯೋಗಕ್ಕೆ ಬಾರದ ವಸ್ತುಗಳನ್ನಾದರೂ ಅವರು ಕದ್ದುಬಿಡುತ್ತಾರೆ. ಅದನ್ನು ಹಣಕೊಟ್ಟು ಕೊಂಡುಕೊಳ್ಳುವ ಸಾಮರ್ಥ್ಯ ಅವರಿಗೆ ಇರುತ್ತದೆ. ಇಂಥವರಲ್ಲಿ ಕೆಲವರು ಮಾತ್ರ ಕದ್ದ ನಂತರ ಪಾಪಪ್ರಜ್ಞೆಯಿಂದಲೂ ನರಳುವುದುಂಟು.

ನಿಮ್ಮ ಮಗನ ಮಾನಸಿಕ ಸಮತೋಲನವನ್ನು ಗಮನಿಸಿ. ಅವನು ನಿಮಗೆ ಎಷ್ಟು ಮುಖ್ಯ, ಎಷ್ಟೆಲ್ಲ ಪ್ರೀತಿಸುತ್ತೀರಿ ಎನ್ನುವುದನ್ನು, ಅವನ ಏಳ್ಗೆಗಾಗಿ ನೀವು ಎಷ್ಟೆಲ್ಲ ಶ್ರಮವಹಿಸುತ್ತೀದ್ದೀರಿ ಎನ್ನುವುದನ್ನು ಅವನಿಗೆ ಮನವರಿಕೆಯಾಗುವ ಹಾಗೆ ಹೇಳಿ. ಮನೆಯಲ್ಲಿ ಶಾಂತವಾಗಿ ಎಲ್ಲರೂ ಒಟ್ಟಿಗೆ ಕುಳಿತುಕೊಂಡು, ಸಂಸಾರದ ಆಗು ಹೋಗುಗಳ ಬಗ್ಗೆ ಮಾತನಾಡಿ. ಮನೆಯ ಹಾಗೂ ಮನಸ್ಸಿನ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಿ. ಇಷ್ಟಾಗಿಯೂ ಮಗನ ವರ್ತನೆಯಲ್ಲಿ ಧನಾತ್ಮಕ ಬದಲಾವಣೆ ಕಾಣಿಸದಿದ್ದರೆ, ಸಮರ್ಥ ಆಪ್ತಸಮಾಲೋಚಕರನ್ನು, ಮಾನಸಿಕತಜ್ಞರನ್ನು ಭೇಟಿಯಾಗಿ. ದೈಹಿಕ ಕಾಯಿಲೆಗಿಂತಲೂ ಮಾನಸಿಕ ಕಾಯಿಲೆಗಳು ಹೆಚ್ಚು ಅಪಾಯಕಾರಿ ಎನ್ನುವುದನ್ನು ಗಮನಿಸಿ.

ಎಸ್ಸೆಸ್ಸೆಲ್ಸಿ - ಸಿಇಟಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

19) ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.

ಉತ್ತರ:– ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ

1) ಎರಡೂ ಘಟ್ಟಗಳು ದಕ್ಷಿಣ ಭಾರತದಲ್ಲಿವೆ
2) ಎರಡೂ ಘಟ್ಟಗಳು ಕರಾವಳಿ ದಂಡೆಯ ಸಮೀಪದಲ್ಲಿವೆ
3) ವಿವಿಧ ಜೀವ ಮತ್ತು ಸಸ್ಯ ಪ್ರಬೇಧಗಳನ್ನು ಎರಡೂ ಘಟ್ಟಗಳಲ್ಲಿ ನೋಡಬಹುದಾಗಿದೆ.
4) ಎರಡೂ ಘಟ್ಟಗಳು ಕಾಡು ಮತ್ತು ಆಯುರ್ವೇದ ಸಸ್ಯಗಳ ಆಗರಗಳಾಗಿವೆ ಇತ್ಯಾದಿ

ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳು

1) ಪಶ್ಚಿಮ ಘಟ್ಟ ಎತ್ತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ಎತ್ತರವಾಗಿಲ್ಲ
2) ಪಶ್ಚಿಮ ಘಟ್ಟ ನಿರಂತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ನಿರಂತರವಾಗಿಲ್ಲ
3) ಪಶ್ಚಿಮ ಘಟ್ಟದಲ್ಲಿ ಬಹಳಷ್ಟು ನದಿಗಳು ಹುಟ್ಟುತ್ತವೆ ಆದರೆ ಪೂರ್ವ ಘಟ್ಟದ ಮೂಲಕ ಬಹಳಷ್ಟು ನದಿಗಳು ಸಮುದ್ರವನ್ನು ಸೇರುತ್ತವೆ.
4) ಆಣೈಮಲೆ ಪಶ್ಚಿಮ ಘಟ್ಟದಲ್ಲಿ ಅತಿದೊಡ್ಡ ಶಿಖರವಾದರೆ ಅರ್ಮಕೊಂಡ' ಎಂಬುದು ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರವಾಗಿದೆ
5) ಪಶ್ಚಿಮ ಘಟ್ಟಗಳಲ್ಲಿ ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ (ಅರಬ್ಬಿ ಸಮುದ್ರತೀರ) ಸಮಾಂತರವಾಗಿ ಹಬ್ಬಿವೆ. ಆದರೆ ಪೂರ್ವದಲ್ಲಿ ಉತ್ತರದಲ್ಲಿ ಮಹಾನದಿ ಕಣಿವೆಯಿಂದ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳವರೆಗೆ ವಿಸ್ತರಿಸಿದೆ

(**ಗಮನಿಸಿ:–** ನಿಮ್ಮ ಹೆಚ್ಚಿನ ಅಧ್ಯಯನದ ದೃಷ್ಟಿಯಿಂದ ಪಠ್ಯ ಪುಸ್ತಕದಲ್ಲಿರುವ ಮಾಹಿತಿಗಿಂತ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಈ ಪ್ರಶ್ನೆಯ ಉತ್ತರದಲ್ಲಿ ಸೇರಿಸಲಾಗಿದೆ)

20) ಅಸ್ಪೃಶ್ಯತಾ ನಿವಾರಣೆಯಲ್ಲಿ ಪಾತ್ರವಹಿಸಿದ ಸಮಾಜ ಸುಧಾರಕರನ್ನು ಹೆಸರಿಸಿ

ಉತ್ತರ:– ಸುಧಾರಣಾವಾದಿಗಳು, ಧಾರ್ಮಿಕ ನೇತಾರರು, ಬರಹಗಾರರು ಮತ್ತು ವಿಚಾರವಾದಿಗಳು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಸ್ವಾಮಿ ವಿವೇಕಾನಂದ, ಡಾ॥ ಬಿ. ಆರ್. ಅಂಬೇಡ್ಕರ್, ಜ್ಯೋತಿ ಬಾಪುಲೆ, ಗಾಂಧೀಜಿ, ಮೊದಲಾದವರು ಅಸ್ಪೃಶ್ಯತೆ ಹಾಗೂ ಅಸಮಾನತೆಯ ವಿರುದ್ಧ ಹೋರಾಟ ನಡೆಸಿದರು.

21) ಪೆಟ್ರೋಲಿಯಂ ದ್ರವರೂಪದ ಚಿನ್ನ ಎಂದು ಕರೆಯಲು ಕಾರಣವೇನು?

ಉತ್ತರ: ಪೆಟ್ರೋಲಿಯಂ ಪ್ರಮುಖವಾದ ಶಕ್ತಿ ಸಂಪನ್ಮೂಲ ಮಾತ್ರವಾಗಿರದೇ ಒಂದು ಮುಖ್ಯ ಕಚ್ಚಾ ವಸ್ತುವೂ ಸಹ ಆಗಿದೆ. ಇದನ್ನು ಕಚ್ಚಾ ವಸ್ತುವನ್ನಾಗಿ ಅವಲಂಬಿಸಿದ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. ಆದುದರಿಂದ ಇದನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾದಿದೆ.

22) ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.

ಉತ್ತರ: ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

23) ಜನಮಂದೆ ಎಂದರೇನು? ಉದಾಹರಣೆ ಕೊಡಿ.

ಉತ್ತರ:– ಯಾವುದೇ ಪೂರ್ವ ಯೋಜನೆ ಇಲ್ಲದೇ ಅನಿಶ್ಚಿತವಾಗಿರುವ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.

ಉದಾಹರಣೆ: * ಚಲನ ಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ.

24) ದಯಾನಂದ ಸರಸ್ವತಿಯವರು ಭಾರತೀಯರಿಗೆ 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಲು ಕಾರಣವೇನು?

ಉತ್ತರ: ಆರ್ಯ ಸಮಾಜವನ್ನು ದಯಾನಂದ ಸರಸ್ವತಿಯವರು ಸ್ಥಾಪಿಸಿ ಅದರ ಮೂಲಕ ವೇದಗಳು ಸತ್ಯ ಮತ್ತು ಜ್ಞಾನದ ಮೂಲವಾಗಿರುವ ಹಿನ್ನೆಲೆಯಲ್ಲಿ "ವೇದಗಳಿಗೆ ಹಿಂದಿರುಗಿ" ಎನ್ನುವ ಘೋಷಣೆ ಮಾಡಿದರು.

25) ಯಾವುದನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ?

ಉತ್ತರ:– ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ಅನ್ವರುದ್ದೀನನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡಿದ್ದರು. ಈ ಸಂದರ್ಭದಲ್ಲಿ ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು. ನಂತರ ಆದ ಒಪ್ಪಂದವೊಂದರ ಪ್ರಕಾರ ಫ್ರೆಂಚರು ಮದ್ರಾಸನ್ನು ಬ್ರಿಟಿಷರಿಗೆ ಹಿಂತಿರುಗಿಸಿದರು. ಈ ಘಟನೆಯನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ.

26) ಎರಡನೇ ಆಂಗ್ಲೋ–ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಅಂತ್ಯವಾಯಿತು?

ಉತ್ತರ:– ಈ ಯುದ್ಧವು ಮಂಗಳೂರಿನ ಶಾಂತಿ ಒಪ್ಪಂದದೊಂದಿಗೆ 1784ರಲ್ಲಿ ಕೊನೆಗೊಂಡಿತು

27) ಪೂರ್ವಾಗ್ರಹ ಎಂದರೇನು?

ಉತ್ತರ:– ಪೂರ್ವಾಗ್ರಹ ಎಂದರೆ ವ್ಯಕ್ತಿ ಇಲ್ಲವೇ ಸಮೂಹ, ಸಮಾಜದ ದುರಾಭಿಪ್ರಾಯದ ಭಾವನೆಯನ್ನು ಹೊಂದಿರುವುದು ಎಂದರ್ಥ

* ರಸ್ತೆ ಬದಿಯ ದೊಂಬರಾಟ ವೀಕ್ಷಿಸಲು ನೆರೆದಿರುವ ಜನ ಸಮೂಹ.

* ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನ ಸಮೂಹ, ಇತ್ಯಾದಿ.

28) ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಯಾರು?

ಉತ್ತರ:– ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಹೈದರಾಬಾದಿನ ನಿಜಾಮ.

29) ಎಲೆ ಉದುರುವ ಮಾನ್ಸೂನ್ ಅರಣ್ಯಗಳನ್ನು ಯಾಕೆ ಹಾಗೆ ಕರೆಯುತ್ತಾರೆ?

ಉತ್ತರ:– ಉಷ್ಣವಲಯದ ಎಲೆ ಉದುರಿಸುವ ಮಾನ್ಸೂನ್ ಕಾಡುಗಳಲ್ಲಿ ಮರಗಳು ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ (ವಸಂತ ಋತು ಮತ್ತು ಬೇಸಿಗೆಯ ಆರಂಭದಲ್ಲಿ) ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು ಎಲೆ ಉದುರುವ 'ಮಾನ್ಸೂನ್ ಅರಣ್ಯಗಳು' ಎಂತಲೂ ಕರೆಯುವರು

30) ಬ್ರಿಟಿಷ್ ಏಕರೂಪದ ಆಡಳಿತ ವ್ಯವಸ್ಥೆಯು ಭಾರತೀಯರಲ್ಲಿ ಹೇಗೆ ರಾಷ್ಟ್ರೀಯತೆಯನ್ನು ಬೆಳೆಸಿತು?

ಉತ್ತರ : ದೇಶದಲ್ಲಿ ಹಲವಾರು ಸಂಸ್ಥಾನಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಮೇಲೆ ಬ್ರಿಟಿಷರು ನಿಯಂತ್ರಣ ಹೊಂದಿದ್ದರು. ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಏಕರೂಪತೆಯನ್ನು ಕಾನೂನು ಸುವ್ಯವಸ್ಥೆಯನ್ನು ಸಂರಕ್ಷಿಸುವಲ್ಲಿ ಬ್ರಿಟಿಷರು ಸಫಲರಾಗಿದ್ದರು. ಇದರಿಂದ ದೇಶದಲ್ಲಿ ಸಮಾನತೆ ಏಕರೂಪದ ಅಧಿಕಾರಶಾಹಿತ್ವ ಅಸ್ತಿತ್ವಕ್ಕೆ ಬಂದಿತು ಇದರಿಂದ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿತು

(ಮುಂದಿನ ಸಂಚಿಕೆಗೆ ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

CET MATHEMATICS

MULTIPLE CHOICE QUESTIONS

1) Two finite sets have m and n elements respectively. The total number of subsets of the first set is 56 more than the total number of subsets of the second set. The values of m and n respectively are:

(A) 7, 6 (B) 5, 1
(C) 6, 3 (D) 8, 7

Ans:- (C) 6, 3

Expl:- The total number of subsets for a set with m elements is 2^m, and for n elements is 2^n. The difference is given as 56, so $2^m - 2^n = 56$. Solving this for m = 6 and n = 3.

2) If $f(x) = \log_{x^2} (\log x)$, then f'(x) at x = e is

(A) 0 (B) 1 (C) $\frac{1}{e}$ (D) $\frac{1}{2e}$

Ans : (D) $\frac{1}{2e}$

Expln :– $f(x) = \log_{x^2} (\log x) = \frac{\log_e (\log x)}{\log_e x^2} = \frac{\log (\log x)}{2 \log x}$

$$f'(x) = \frac{2 \log x . \frac{1}{\log x} . \frac{1}{x} - \log (\log x) . \frac{2}{x}}{4 (\log x)^2}$$

At x = e, log x = 1. ∴ log (log x) = 0.

$$f'(x) = \frac{2 . \left(\frac{1}{e}\right)}{4} = \frac{1}{2e}.$$

3) The value of c in Lagrange's theorem for the function f (x) = log (sin x) in the interval $\left[\frac{\pi}{6}, \frac{5\pi}{6}\right]$ is..............................

(A) $\frac{\pi}{4}$ (B) $\frac{\pi}{2}$
(C) $\frac{2\pi}{3}$ (D) None of these

Ans : (B) $\frac{\pi}{2}$

Expln :– f(x) = log (sin x)

$\therefore f'(x) = \frac{1}{\sin x} . \cos x = \cot x \therefore f'(c) = \cot c$

Lagrange's theorem is $f'(c) = \frac{f(b) - f(a)}{b - a}$

Here, $a = \frac{\pi}{6}, b = \frac{5\pi}{6}$

$$\therefore f'(c) = \frac{\log \sin \frac{5\pi}{6} - \log \sin \frac{\pi}{6}}{\frac{5\pi}{6} - \frac{\pi}{6}}$$

$$f'(c) = \frac{\log \frac{1}{2} - \log \frac{1}{2}}{\frac{4\pi}{6}} = 0$$

$\therefore f'(c) = \cot c = 0 \Rightarrow c = \frac{\pi}{2}.$

4) If f(x) = [x] - 5|x| + 6 = 0, where [x] denotes the greatest integer function, then:

(A) x ∈ [3, 4] (B) x ∈ (2, 4)
(C) x ∈ [2, 3] (D) x ∈ (2, 3]

Ans:- (B) x ∈ (2, 4)

Soln:-

5) If tan (x + y) = 33 and $x = \tan^{-1} 3$ then y is

(A) $\frac{3}{10}$ (B) $\frac{33}{10}$
(C) $\frac{1}{3}$ (D) $\tan^{-1} \frac{3}{10}$

Ans : (D) $\tan^{-1} \frac{3}{10}$

Expln : – $\tan (x + y) = \frac{\tan x + \tan y}{1 - \tan x \tan y}$

$33 = \frac{3 + \tan y}{1 - 3 \tan y}$ ∴ $33(1 - 3 \tan y) = 3 + \tan y$

$33 - 99 \tan y = 3 + \tan y$

$30 = 100 \tan y$ ∴ $\tan y = \frac{30}{100} = \frac{3}{10}$

$\therefore y = \tan^{-1} \frac{3}{10}$

6) $\lim_{x \to \infty} \left(\sqrt{a^2x^2 + bx + x} - ax\right) =$ ....

(A) $\frac{b}{2a}$ (B) $\frac{b}{a}$
(C) $\frac{b+1}{2a}$. (D) $\frac{2b}{a}$

Ans : C

Expln : –

$$\lim_{x \to \infty} \left[\left(\sqrt{a^2x^2 + bx + x} - ax\right) \times \frac{\sqrt{a^2x^2 + bx + x} + ax}{\sqrt{a^2x^2 + bx + x} + ax}\right]$$

$$\lim_{x \to \infty} \frac{a^2x^2 + bx + x - a^2x^2}{\sqrt{a^2x^2 + bx + x} + ax} = \lim_{x \to \infty} \frac{x(b+1)}{\sqrt{x^2\left(x^2 + \frac{b}{x} + \frac{1}{x}\right)} + ax}$$

$$\lim_{x \to \infty} \frac{x(b+1)}{x\left\{\sqrt{a^2 + \frac{b}{x} + \frac{1}{x}} + a\right\}} \lim_{x \to \infty} \frac{b+1}{\sqrt{a^2 + \frac{b}{x} + \frac{1}{x^2}} + a} = \frac{b+1}{2a}.$$

7) The solution of $\frac{6x}{4x-1} < \frac{1}{2}$ is

(A) $x < -\frac{1}{8}$ (B) $-\frac{1}{8} < x < \frac{1}{4}$
(C) $x < -\frac{1}{8}$ and $x > \frac{1}{4}$ (D) $x > \frac{1}{8}$

Ans : (B) $-\frac{1}{8} < x < \frac{1}{4}$

Expln : $\frac{6x}{4x-1} < \frac{1}{2} \Rightarrow \frac{6x}{4x-1} - \frac{1}{2} < 0$

$\frac{12x - (4x-1)}{2(4x-1)} < 0$

$\frac{8x+1}{2(4x-1)} < 0$

A fraction less than zero means Nr < 0 or Dr < 0

i.e., $8x + 1 < 0$ or $4x - 1 < 0$.Let $4x - 1 < 0$ and $8x + 1 > 0$.

Then $x < \frac{1}{4}$, $8x + 1 > 0$ ∴ $8x > -1$ i.e., $x > -\frac{1}{8}$.

$\therefore -\frac{1}{8} < x < \frac{1}{4}.$

'ನಟ್ಟು–ಬೋಲ್ಟ್ ಟೈಟ್' ಮಾತು: ವಿವಾದ

ಸಿನಿಮಾದವರನ್ನು ಸರಿಯಾಗಿ ನಡೆಸಿಕೊಳ್ಳಿ: ಆರ್. ಅಶೋಕ • ಚಿತ್ರರಂಗಕ್ಕೆ ಬೋಲ್ಟೇ ಇಲ್ಲ – ನಟ, ಸಂಸದ ಜಗ್ಗೇಶ್

'ರಾಜಣ್ಣನಿಗೆ ನಟ್ಟು ಬೋಲ್ಟ್ ಟೈಟ್ ಮಾಡಿ'



ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಈ ಕುರಿತು ಖಾರವಾಗಿ ಪ್ರತಿಕ್ರಿಯಿಸಿದ್ದು, 'ಡಿ.ಕೆ.ಶಿವಕುಮಾರ್ ಅಣ್ಣ ಮೊದಲು ನಿಮ್ಮ ರಾಜಣ್ಣನಿಗೆ ನಟ್ಟು ಬೋಲ್ಟ್ ಟೈಟ್ ಮಾಡಿ. ಅದನ್ನು ಬಿಟ್ಟು ಸಿನಿಮಾ ಕಲಾವಿದರ ನಟ್ಟು ಬೋಲ್ಟ್ ಟೈಟ್ ಮಾಡಲು ಆಗುತ್ತಾ' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ.

'ಕಿಚ್ಚ ಸುದೀಪ್‌ಗೆ, ಕೆಜಿಎಫ್ ಯಶ್‌ಗೆ, ನಟ ದರ್ಶನ್‌ಗೆ ನಟ್ಟು ಬೋಲ್ಟ್ ಟೈಟ್ ಮಾಡ್ತೀರಾ? ಸಿನಿಮಾದವರನ್ನು ಸರಿಯಾಗಿ ನಡೆಸಿಕೊಳ್ಳಿ. ಅಪಮಾನ ಮಾಡಬೇಡಿ' ಎಂದು ಹೇಳಿದ್ದಾರೆ.

'ನೀವು ಕಲಾವಿದರನ್ನು ಕೀಳಾಗಿ ನಡೆಸಿಕೊಳ್ಳುತ್ತಾ ಇದ್ದೀರ. ನಟ ತಾರಾ ಅವರು ಕರೆ ಬಂದಿಲ್ಲ ಎಂದಿದ್ದಾರೆ. ಸರಿಯಾಗಿ ಆಹ್ವಾನ ನೀಡದೇ ಅಪಮಾನ ಮಾಡಲಾಗಿದೆ. ಡಿ.ಕೆ. ಶಿವಕುಮಾರ್ ಅವರು ಕೂಡಲೇ ಕ್ಷಮಾಪಣೆ ಕೇಳಬೇಕು. ರಾಜ್‌ಕುಮಾರ್, ಶಂಕರ್‌ನಾಗ್, ವಿಷ್ಣುವರ್ಧನ್, ಅಂಬರೀಶ್ ಅಂತಹ ದಿಗ್ಗಜರು ಇದ್ದ ಚಿತ್ರರಂಗ. ಅಂಬರೀಶ್ ಅವರು ಇದ್ದಿದ್ದರೆ ಸರಿಯಾಗಿ ಉತ್ತರ ಕೊಡುತ್ತಿದ್ದರು. ಹಿಂದೆ ಜಯನಗರ ಶಾಸಕರ ಅನುದಾನ ಕೇಳಿದಾಗ, ತಗ್ಗಿ ಬಗ್ಗಿ ನಡೆಯಬೇಕು ಎಂದು ಹೇಳಿದ್ದರು. ಶಾಸಕರೇನು ಶಿವಕುಮಾರ್ ಅವರ ಅಡಿಯಾಳುಗಳೇ? ಸಿನಿಮಾ ನಟರ ಮೇಲೆ ಅದೇ ಚಾಳಿ ಮುಂದುವರಿಸಿದ್ದಾರೆ' ಎಂದು ಅಶೋಕ ಹರಿಹಾಯ್ದರು.

'ಬೋಲ್ಟೇ ಇಲ್ಲ, ಟೈಟ್ ಮಾಡೋದು ಹೇಗೆ'



ಉದ್ಘಾಟನಾ ಕಾರ್ಯಕ್ರಮ 7 ಗಂಟೆಗೆ ಇದ್ದರೆ, ಆಹ್ವಾನ ಪತ್ರಿಕೆ ತಲುಪಿದ್ದು 6 ಗಂಟೆಗೆ. ಕನ್ನಡ ಚಿತ್ರರಂಗದಲ್ಲಿ ಒಗ್ಗಟ್ಟಿಲ್ಲ, ಸಂವಾದವಿಲ್ಲ, ಕಲಾವಿದರ ಸಂಘವೇ ಕಣ್ಮರೆಯಾಗಿದೆ. ಕರ್ನಾಟಕದಲ್ಲಿ ಕನ್ನಡ ಚಿತ್ರರಂಗದ ಅವಸಾನ. ಯಾವ ಕಲಾವಿದರು ಏನಾಗಿದ್ದಾರೆ ಕಲಾವಿದರಾದ ನಮಗೇ ಮಾಹಿತಿ ಇಲ್ಲ. ಸಾವಿನ ಅಂಚಿಗೆ ಬಂದಿರುವ ಚಿತ್ರರಂಗಕ್ಕೆ ಬೋಲ್ಟೇ ಇಲ್ಲ, ಇನ್ನು ಟೈಟ್ ಮಾಡೋದು ಹೇಗೆ?

ಜಗ್ಗೇಶ್, ನಟ ಹಾಗೂ ರಾಜ್ಯಸಭಾ ಸದಸ್ಯ

'ಬಾರದ ನಟರ ಚಿತ್ರ ನಿಷೇಧಿಸಬೇಕು'



ಮೈಸೂರು: 'ಕನ್ನಡದ ಕಾರ್ಯಕ್ರಮಗಳಿಗೆ ಬಾರದ ರಾಜ್ಯದ ನಟರ ಚಲನಚಿತ್ರಗಳನ್ನು ನಿಷೇಧಿಸಬೇಕು. ಆಗ ಸರಿಯಾಗುತ್ತದೆ' ಎಂದು ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಆಕ್ರೋಶದಿಂದ ಹೇಳಿದರು.

ಬೆಂಗಳೂರಿನಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನೆಗೆ ಚಲನಚಿತ್ರ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳದ ಕುರಿತು ಇಲ್ಲಿ ಭಾನುವಾರ ಪ್ರತಿಕ್ರಿಯಿಸಿದ ಅವರು, 'ತೆಲಂಗಾಣದಲ್ಲಿ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರಂತೆ ನಾವೂ ನಡೆದುಕೊಂಡರೆ, ಚಲನಚಿತ್ರಗಳಿಗೆ ಈ ₹200ರಷ್ಟು ತೆರಿಗೆ ವಿಧಿಸಿದರೆ ಅವರೆಲ್ಲರಿಗೂ ಗೊತ್ತಾಗುತ್ತದೆ' ಎಂದು ಹೇಳಿದರು.

'ಪ್ರೀತಿಯಿಂದ ಆಹ್ವಾನಿಸಿದರೂ, ಡಿಮ್ಯಾಂಡ್ ಮಾಡಿದರೂ ಬಾರದ ಕನ್ನಡದ ಚಲನಚಿತ್ರ ನಟ-ನಟಿಯರ ಚಿತ್ರಗಳನ್ನು ನೋಡುವುದು ಕನ್ನಡಿಗರು ಹಾಗೂ ಪ್ರೇಕ್ಷಕರು ಬಿಟ್ಟದ್ದು' ಎಂದರು.

'ಕನ್ನಡಿಗರು ಚಲನಚಿತ್ರಗಳನ್ನು ನೋಡಿದ್ದರಿಂದಲೇ ಅವರು ಸ್ಟಾರ್‌ಗಳಾಗಿದ್ದಾರೆ. ಮುಂಬೈಗೆ ಹೋಗುವವರೆಗೂ ಬೆಳೆದಿದ್ದಾರೆ. ರಾಜ್ಯ ಸರ್ಕಾರ ಪ್ರಶಸ್ತಿ ನೀಡಿದರೆ, 'ಪ್ರಶಸ್ತಿ ಸ್ವೀಕರಿಸುವುದನ್ನು ಬಿಟ್ಟು ಬಹಳ ವರ್ಷವಾಯಿತು' ಎಂದು ನಟರೊಬ್ಬರು ಟ್ವೀಟ್ ಮಾಡುತ್ತಾರೆ. ಹಿಂದಿಯವರು ಪ್ರಶಸ್ತಿ ಕೊಟ್ಟರೆ ಹೋಗಿ ತೆಗೆದುಕೊಳ್ಳುತ್ತಾರೆ' ಎಂದು ನಾಯಕ ನಟ ಸುದೀಪ್ ಅವರನ್ನು ಕುಟುಕಿದರು.

ಬೆಂಗಳೂರು: 16ನೇ ಚಲನಚಿತ್ರೋತ್ಸವದ ಉದ್ಘಾಟನೆ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ಪ್ರಮುಖರು ಭಾಗಿಯಾಗದ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿ, 'ಯಾರಿಗೆ ಹೇಗೆ ನಟ್ಟು ಬೋಲ್ಟ್ ಟೈಟ್ ಮಾಡಬೇಕು ಎನ್ನುವುದು ಗೊತ್ತಿದೆ' ಎಂದು ಹೇಳಿದ್ದರು. ಆ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ಈ ಕುರಿತು ಹಲವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

'ಆಹ್ವಾನ ಸಿಕ್ಕಿದ್ದೆ ಹಿಂದಿನ ರಾತ್ರಿ'



ಸರಿಯಾದ ಮಾಹಿತಿ, ಆಹ್ವಾನ ಇದ್ದರೆ ಖಂಡಿತ ಭಾಗವಹಿಸುತ್ತೇವೆ. ಕಾರ್ಯಕ್ರಮ ಆಯೋಜಕರ ಲೋಪವಿರುತ್ತದೆ. ಇದರ ಬಗ್ಗೆ ಮಂತ್ರಿಗಳಿಗೆ ಗೊತ್ತಿರುವುದಿಲ್ಲ. ಈ ಚಿತ್ರೋತ್ಸವದ ಆಹ್ವಾನ ಪತ್ರಿಕೆ ಹಿಂದಿನ ದಿನ ರಾತ್ರಿ ತಲುಪಿದೆ. ಯಾರು ಕೊಟ್ಟು ಹೋಗಿದ್ದಾರೆ ಎಂಬುದೂ ಗೊತ್ತಿಲ್ಲ. ಈ ಹಿಂದೆ ಈ ರೀತಿ ಕಾರ್ಯಕ್ರಮಗಳಿಗೆ ಹೋಗಿ ಕಹಿ ಅನುಭವವಾಗಿದೆ. ಅಲ್ಲಿ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಗಂಟೆ ಗಟ್ಟಲೆ ಕಾದು ಕೂರಬೇಕು ಎನ್ನಲು ನಾವೇನು ಶಾಲಾ ವಿದ್ಯಾರ್ಥಿಗಳೇ? ಈ ರೀತಿ ಕಾರ್ಯಕ್ರಮಗಳ ಆಯೋಜನೆ ವಹಿಸಿಕೊಳ್ಳುವ ಅಕಾಡೆಮಿ, ವಾಣಿಜ್ಯ ಮಂಡಳಿಗಳು ಈ ಬಗ್ಗೆ ಗಮನಹರಿಸಬೇಕು. ಸರ್ಕಾರಕ್ಕೆ ಅಥವಾ ಚಿತ್ರರಂಗ ಸಂಬಂಧಿ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಬಾರದು ಎಂಬ ಭಾವನೆ ಯಾವ ಕಲಾವಿದನಿಗೂ ಇರುವುದಿಲ್ಲ.

ದೇವರಾಜ್, ನಟ

'ನಟ್ಟು- ಬೋಲ್ಟ್ ರಿಪೇರಿ ಮಾಡಲು ಆರಿಸಿದ್ದಲ್ಲ'

'ನಟ್ಟು ಬೋಲ್ಟ್ ರಿಪೇರಿ ಮಾಡಲು ಬಹಳ ಜನ ಇದ್ದಾರೆ. ರಾಜ್ಯದ ಜನ ನಿಮಗೆ 135 ಸೀಟು ಕೊಟ್ಟಿರುವುದು ರಿಪೇರಿ ಮಾಡುವುದಕ್ಕಲ್ಲ, ಜನರ ಸಮಸ್ಯೆ ಆಲಿಸಲು' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಕುಮಾರಸ್ವಾಮಿ, 'ಡಿ.ಕೆ. ಶಿವಕುಮಾರ್ ಅವರು ಬಹುಶಃ ಭೂಮಿ ಮೇಲಿಲ್ಲ ಅನಿಸುತ್ತದೆ. ಅಧಿಕಾರದ ಮದ ಈ ರೀತಿ ಮಾತನಾಡಿಸುತ್ತಿದೆ. ಅವರ ಬಗ್ಗೆ ಮಾತನಾಡುವುದಕ್ಕಿಂತ ಮೌನವಾಗಿರುವುದೇ ಒಳ್ಳೆಯದು' ಎಂದರು.

ಡಿ.ಕೆ. ಶಿವಕುಮಾರ್ ಹಿಂದುತ್ವದ ಜಪ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ಅದು ಅವರವರ ಭಾವಕ್ಕೆ ಬಿಟ್ಟಿದ್ದು, ನಾನು ಟೀಕೆ ಮಾಡಲು ಹೋಗುವುದಿಲ್ಲ' ಎಂದರು.

'ಚಲನಚಿತ್ರ ಕ್ಷೇತ್ರದಲ್ಲಿ ಫ್ಲಾಪ್ ಆಗಿ ರಾಜಕಾರಣಿಗಳ ಮಕ್ಕಳು ರಾಜಕಾರಣಕ್ಕೆ ಬಂದಿದ್ದಾರೆ' ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಗೆ, 'ನಾನೇ ಒಂದು ಕಾಲದಲ್ಲಿ ಸಿನಿಮಾ ಕ್ಷೇತ್ರದಲ್ಲಿ ಇದ್ದೆ. ಸಿನಿಮಾ ಹಂಚಿಕೆದಾರನಾಗಿದ್ದೆ, ಯಾವುದೇ ಸಂದರ್ಭದಲ್ಲಿಯೂ ರಾಜಕೀಯಕ್ಕೆ ಬರುತ್ತೇನೆ ಅಂದುಕೊಂಡಿರಲಿಲ್ಲ. ಆಕಸ್ಮಿಕ್ ಆಗಿ ರಾಜಕೀಯಕ್ಕೆ ಬಂದೆ. ಏಳುಬೀಳು ಎನ್ನುವುದು ಎಲ್ಲರಿಗೂ ಇರುತ್ತದೆ' ಎಂದರು.

'ಮಾತುಗಳ ಹಿಂದಿನ ಮರ್ಮ ಅರಿಯಬೇಕು..'



ಡಿ.ಕೆ.ಶಿವಕುಮಾರ್ ಅವರು ಉದ್ವೇಗದಿಂದ ಆ ಮಾತು ಹೇಳಿದ್ದಾರೆ. ಆ ರೀತಿ ಹೇಳಬಾರದಿತ್ತು. ಅದರ ಹಿಂದಿನ ಉದ್ದೇಶ ಗೊತ್ತಿಲ್ಲ. ಚಿತ್ರೋತ್ಸವದಲ್ಲಿ ಸಿನಿಮಾ ರಂಗದವರೇ ಇಲ್ಲ ಅಂದ್ರೆ ನಾವು ಯಾವ ಪುರುಷಾರ್ಥಕ್ಕೆ ನಡೆಸಬೇಕು ಎಂಬ ಭಾವದಲ್ಲಿ ಮಾತನಾಡಿದ್ದಾರೆ. ಸರ್ಕಾರದಿಂದ ಕೇಳಿದ್ದನ್ನೆಲ್ಲ ಒದಗಿಸುತ್ತಿದ್ದಾರೆ. ಚಿತ್ರರಂಗ ಅಭಿವೃದ್ಧಿ ಮಾಡಬೇಕೆಂಬ ಇರಾದೆ ಅವರಲ್ಲಿ ಇದೆ. ಮಾತುಗಳ ಹಿಂದಿನ ಮರ್ಮ ಅರ್ಥ ಮಾಡಿಕೊಳ್ಳಬೇಕು. ಜನಸಾಮಾನ್ಯರ ಹೋರಾಟಕ್ಕೆ ಚಿತ್ರೋದ್ಯಮ ಬೆಂಬಲ ನೀಡಬೇಕು.

ನರಸಿಂಹಲು ಎಂ, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

'ವಿಧಾನಸೌಧದ ಎದುರು ಕಾರ್ಯಕ್ರಮ ಬೇಡ'



ಉಪಮುಖ್ಯಮಂತ್ರಿಗಳ ಮಾತು ಸ್ವಲ್ಪ ಕಟುವಾಗಿತ್ತು ಅನ್ನಿಸಿತು. ವಿಧಾನಸೌಧದಲ್ಲಿ ಚಿತ್ರೋತ್ಸವದ ಉದ್ಘಾಟನೆ ಮಾಡಲು ಪ್ರಾರಂಭಿಸಿದ ನಂತರ ಇದರಲ್ಲಿ ಭಾಗಿಯಾಗುವವರ ಸಂಖ್ಯೆ ಕಡಿಮೆ ಆಗಿದೆ. ಚಿತ್ರೋತ್ಸವದಲ್ಲಿ ಅದ್ದೂರಿತನ ಬೇಡ. ಅಕಾಡೆಮಿ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಚಿತ್ರರಂಗದವರಿಗೆ ಈ ಕಾರ್ಯಕ್ರಮ ನಮ್ಮ ಮನೆ ಕೆಲಸ ಅನ್ನಿಸಬೇಕು. ಅದಾಗುತ್ತಿಲ್ಲ. ಹೀಗಾಗಿ ಚಿತ್ರರಂಗದವರನ್ನು ಸಾರಸಗಟಾಗಿ ದೂಷಿಸಲು ಸಾಧ್ಯವಿಲ್ಲ. ಈ ಬಗ್ಗೆ ಅವಲೋಕನ ನಡೆಯಬೇಕು. ಇನ್ನು ಮುಂದೆ ವಿಧಾನಸೌಧದ ಮುಂದೆ ಕಾರ್ಯಕ್ರಮ ಮಾಡುವುದನ್ನು ನಿಲ್ಲಿಸಿ. ಪಕ್ಷಾತೀತ ಕಾರ್ಯಕ್ರಮಗಳಿಗೆ ಈ ಹಿಂದೆ ಸಾಕಷ್ಟು ಸಲ ಚಿತ್ರಕರ್ಮಿಗಳು ಬಂದಿದ್ದಾರೆ. ನಿಜ, ಸಾಮಾಜಿಕ ಹೋರಾಟಗಳಲ್ಲಿ ಚಿತ್ರರಂಗ ಪಾಲ್ಗೊಳ್ಳಬೇಕು. ಕಲಾವಿದರು ಬರಬೇಕು. ಅದಕ್ಕೆ ಸೂಕ್ತ ನಾಯಕತ್ವ, ಒಗ್ಗಟ್ಟು ಬೇಕಿದೆ.

ಪಿ.ಶೇಷಾದ್ರಿ, ಚಲನಚಿತ್ರ ನಿರ್ದೇಶಕರು.

'ಹಂಪಿಯಲ್ಲಿದ್ದೆ, ಹಾಗಾಗಿ ಬರಲಿಲ್ಲ'



ನಾನು ಕಳೆದ ವರ್ಷ ಹೊರತುಪಡಿಸಿ ಹಿಂದಿನ ಎಲ್ಲ ಚಿತ್ರೋತ್ಸವಗಳಲ್ಲಿ ಭಾಗಿಯಾಗಿದ್ದೆ. ಉದ್ಘಾಟನೆಗೆ ಹೋಗದಿದ್ದರೂ ಯಾವುದಾದರೂ ಒಂದು ಚಿತ್ರ ಪ್ರದರ್ಶನಕ್ಕೆ ಹೋಗಿ ಬಂದಿದ್ದೇನೆ. ಸಾಮಾನ್ಯವಾಗಿ ಚಿತ್ರರಂಗದ ಕಾರ್ಯಕ್ರಮಗಳನ್ನು ತಪ್ಪಿಸುವುದಿಲ್ಲ. ಶನಿವಾರ ಹಂಪಿ ಉತ್ಸವದಲ್ಲಿದ್ದೆ. ಹೀಗಾಗಿ ಭಾಗವಹಿಸಲು ಸಾಧ್ಯವಾಗಿಲ್ಲ.

ರಮೇಶ್ ಅರವಿಂದ್, ನಟ

'ಸಾಹೇಬ್ರು ಹೇಳಿದ್ರಲ್ಲಿ ತಪ್ಪೇನಿಲ್ಲ'

ಪ್ರಜಾವಾಣಿ ವಾರ್ತೆ



ರಮ್ಯಾ

ಹೊಸಪೇಟೆ (ವಿಜಯನಗರ): ನೆಲ, ಜಲ, ಭಾಷೆ ವಿಚಾರದಲ್ಲಿ ಕಲಾವಿದರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದ್ದನ್ನು ನಟಿ ಹಾಗೂ ಕಾಂಗ್ರೆಸ್ ನಾಯಕಿ ರಮ್ಯಾ ಸಮರ್ಥಿಸಿಕೊಂಡಿದ್ದಾರೆ.

ಹಂಪಿ ಉತ್ಸವದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಭಾಗವಹಿಸುವುದಕ್ಕೂ ಮುನ್ನ ಹಂಪಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಸಾಹೇಬ್ರು ಹೇಳುವುದರಲ್ಲಿ ತಪ್ಪೇನಿಲ್ಲ, ನೀರಿನ ವಿಚಾರ ಬಂದಾಗ ಕಲಾವಿದರೆಲ್ಲರೂ ಬೆಂಬಲಿಸಬೇಕು. ಡಾ. ರಾಜ್‌ಕುಮಾರ್ ಅವರು, ನೆಲ, ಜಲ ಭಾಷೆ ವಿಚಾರದಲ್ಲಿ ಹೋರಾಟ ಮಾಡಿದ್ದಾರೆ' ಎಂದರು.

'ಉತ್ತರ ಕರ್ನಾಟಕದ ನದಿಗಳು, ಜಲಾಶಯಗಳ ಬಗ್ಗೆಯೂ ಕಲಾವಿದರು ಮಾತನಾಡಬೇಕು' ಎಂದು ಹೇಳಿದರು.



ಬೀದರ್‌ನಲ್ಲಿ ಭಾನುವಾರ ನಡೆದ 15ನೇ ರಾಜ್ಯಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನದಲ್ಲಿ ಅತ್ಯುತ್ತಮ ಜೀವ ವೈವಿಧ್ಯ ನಿರ್ವಹಣಾ ಪ್ರಶಸ್ತಿಯನ್ನು ಉಡುಪಿಯ ಆಶಾ, ಅತ್ಯುತ್ತಮ ಸಾವಯವ ಕೃಷಿ ಪದ್ಧತಿಗಾಗಿ ಮಂಡ್ಯದ ಬಿ. ರಾಮಲಿಂಗಯ್ಯ ಹಾಗೂ ಅತ್ಯುತ್ತಮ ಜೀವ ವೈವಿಧ್ಯ ಸಂರಕ್ಷಣೆ ಪ್ರಶಸ್ತಿಯನ್ನು ಶಿವಮೊಗ್ಗದ ಚಕ್ರವತ ಸುಬ್ರಮಣ್ಯ ಅವರಿಗೆ ಸಚಿವ ಈಶ್ವರ ಬಿ. ಖಂಡ್ರೆ ಪ್ರದಾನ ಮಾಡಿದರು. ಪ್ರಶಸ್ತಿಯು ತಲಾ ₹50 ಸಾವಿರ ನಗದು ಒಳಗೊಂಡಿದೆ. ಪಾರಂಪರಿಕ ವೈದ್ಯ ಪರಿಷತ್ ಗೌರವ ಅಧ್ಯಕ್ಷ ಬಸವ ನಾಗಿದೇವ ಶರಣರು, ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಹಾಜರಿದ್ದರು

ಕ್ಷೇತ್ರ ಮರು ವಿಂಗಡಣೆ ವಿರುದ್ಧ ಹೋರಾಟ: ಉಪಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ದಕ್ಷಿಣದ ರಾಜ್ಯಗಳಲ್ಲಿ ಲೋಕಸಭಾ ಕ್ಷೇತ್ರಗಳನ್ನು ಕುಗ್ಗಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದ್ದು ಇದರ ವಿರುದ್ಧ ಕಾಂಗ್ರೆಸ್ ಹೋರಾಡಲಿದೆ' ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಹೇಳಿದರು.

ಮಂಗಳೂರು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಸಂಸತ್ತಿನಲ್ಲಿ ದಕ್ಷಿಣ ರಾಜ್ಯಗಳ ಬಲ ಕಡಿಮೆ ಆಗಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಇಂಥ ಕೆಲಸಕ್ಕೆ ಮುಂದಾಗಿದೆ. ಇದು ಸರಿಯಲ್ಲ. ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆಗೆ ಕಾಂಗ್ರೆಸ್ ವಿರೋಧವಿದೆ' ಎಂದು ಹೇಳಿದರು.

'ಕೇಂದ್ರ ಸರ್ಕಾರದ ನಿರ್ಧಾರದ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಲಾಗುವುದು. ಅಗತ್ಯವಿದ್ದರೆ ನ್ಯಾಯಾಲಯದ ಮೂಲಕವೂ ಹೋರಾಟ ಮಾಡಲಾಗುವುದು' ಎಂದು ಅವರು ಹೇಳಿದರು.

ಯಾರೂ ಎದೆಗುಂದಬೇಕಿಲ್ಲ: ಎಚ್‌ಡಿಡಿ

ಜೆಡಿಎಸ್ ನಾಯಕರ ಸಭೆ: ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಗೈರು

ಪ್ರಜಾವಾಣಿ ವಾರ್ತೆ



ಎಚ್‌.ಡಿ. ದೇವೇಗೌಡ ಮತ್ತು ಎಚ್‌.ಡಿ ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ನಾಯಕರ ಸಭೆ ಭಾನುವಾರ ನಡೆಯಿತು

ಬೆಂಗಳೂರು: 'ಯಾರೂ ಎದೆಗುಂದಬೇಕಿಲ್ಲ. ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಸಮಾವೇಶಗಳನ್ನು ಆಯೋಜಿಸಿ ಪಕ್ಷ ಸಂಘಟಿಸೋಣ' ಎಂದು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಸಲಹೆ ನೀಡಿದರು.

ಭಾನುವಾರ ನಡೆದ ಪಕ್ಷದ ನಾಯಕರ ಸಭೆಯಲ್ಲಿ ಅವರು, 'ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಗೆಲ್ಲುವ ಸಮರ್ಥ ಅಭ್ಯರ್ಥಿಗಳನ್ನು ಹುಡುಕಿ ಪಟ್ಟಿ ಮಾಡಿ. ಯಾರೂ ನನ್ನನ್ನು ರಾಷ್ಟ್ರೀಯ ಅಧ್ಯಕ್ಷ ಎಂದು ಕರೆಯಬೇಡಿ. ಒಬ್ಬ ಕಾರ್ಯಕರ್ತ ಎಂದು ಕರೆದರೆ ಸಾಕು. ಎಲ್ಲಿಗೆ ಬೇಕಾದರೂ ಕರೆಯಿರಿ, ಬರುತ್ತೇನೆ. ನಿಮ್ಮ ಜೊತೆಯಲ್ಲಿ ಹೋರಾಟ ಮಾಡುತ್ತೇನೆ' ಎಂದರು.

ವಿಧಾನಮಂಡಲ ಕಲಾಪದಲ್ಲಿ ಅನುಸರಿಸಬೇಕಾದ ಕಾರ್ಯತಂತ್ರ, ಪಕ್ಷದ ದ್ವೈವಾರ್ಷಿಕ ಚುನಾವಣೆ, ಸದಸ್ಯತ್ವ ಅಭಿಯಾನ, ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆ ಮತ್ತಿತರ ವಿಷಯಗಳ ಕುರಿತು ಎಚ್‌.ಡಿ. ದೇವೇಗೌಡರು ಮತ್ತು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ನಾಯಕರ ಸಭೆ ನಡೆಯಿತು. ಪಕ್ಷದಿಂದ ಅಂತರ ಕಾಯ್ದು ಕೊಂಡಿರುವ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಅವರು ಗೈರಾಗಿದ್ದರು.

ರಾಜ್ಯದಾದ್ಯಂತ ಪಕ್ಷದಿಂದ ಸದಸ್ಯತ್ವ ಅಭಿಯಾನವನ್ನು ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗುವ ಬಗ್ಗೆ ಮುಖಂಡರ ಜೊತೆ ತಮ್ಮದೇ ಪರಿಕಲ್ಪನೆಗಳನ್ನು ಹಂಚಿಕೊಂಡ ಯುವ ಜನತಾದಳ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, 'ಸದಸ್ಯತ್ವ ಅಭಿಯಾನಕ್ಕೆ ಇನ್ನಷ್ಟು ವೇಗ ನೀಡಬೇಕು. ಶಾಸಕರು, ಮಾಜಿ ಶಾಸಕರು, ಹಿರಿಯ ಮುಖಂಡರು, ಎರಡನೇ ಹಂತದ ನಾಯಕರು ಹಾಗೂ ಕಾರ್ಯಕರ್ತರು ದೊಡ್ಡ ಪ್ರಮಾಣದಲ್ಲಿ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಭಾಗವಹಿಸಬೇಕು' ಎಂದರು.

ಇದಕ್ಕೆ ಸ್ಪಂದಿಸಿದ ದೇವೇಗೌಡರು, ಕುಮಾರಸ್ವಾಮಿ, 'ಸದಸ್ಯತ್ವ ನೋಂದಣಿಯನ್ನು ಎಲ್ಲ ಮುಖಂಡರು ಗಂಭೀರವಾಗಿ ಪರಿಗಣಿಸಬೇಕು. ಸಂಘಟನೆಯ ಬಗ್ಗೆ ಅಸಡ್ಡೆ ಬೇಡ' ಎಂದರು. 'ನಾನು ಪ್ರತಿ ಜಿಲ್ಲೆ, ತಾಲ್ಲೂಕಿನಲ್ಲಿ ಪ್ರವಾಸ ಮಾಡಿ ಕಷ್ಟಪಟ್ಟು ಪಕ್ಷ ಕಟ್ಟಿದ್ದೇನೆ. ಈಗಲೂ ಓಡಾಟ ಮಾಡುತ್ತಿದ್ದೇನೆ. ಪಕ್ಷ ಕಟ್ಟುವುದು ಸುಲಭದ ಕೆಲಸವಲ್ಲ. ಹೀಗಾಗಿ, ಯಾರೊಬ್ಬರೂ ಸಂಘಟನೆಯನ್ನು ಲಘುವಾಗಿ ತೆಗೆದುಕೊಳ್ಳಬಾರದು' ಎಂದು ದೇವೇಗೌಡರು ತಾಕೀತು ಮಾಡಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಬಿ.ಎಂ. ಫಾರೂಕ್, ಜೆಡಿಎಸ್ ರಾಜ್ಯ ಮಹಿಳಾ ಅಧ್ಯಕ್ಷೆ ರಶ್ಮಿ ರಾಮೇಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಬಂಡೆಪ್ಪ ಕಾಶೆಂಪುರ, ಎಚ್‌.ಕೆ. ಕುಮಾರಸ್ವಾಮಿ, ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ, ಕೆ.ಅನ್ನದಾನಿ, ಕೆ.ಎ.ತಿಪ್ಪೇಸ್ವಾಮಿ ಸಭೆಯಲ್ಲಿದ್ದರು.

'ಚುನಾವಣೆ ವೇಳೆ ಎಚ್ಚೆತ್ತರೆ ಉಪಯೋಗ ಇಲ್ಲ'

'ಚುನಾವಣೆ ಬಂದಾಗ ಮಾತ್ರ ಎಚ್ಚೆತ್ತರೆ ಉಪಯೋಗ ಇಲ್ಲ. ಸಂಘಟನೆಗೆ ಶಕ್ತಿ ತುಂಬಿ ಜನರ ಜತೆ ಇದ್ದರೆ ಪ್ರಬಲ ಪೈಪೋಟಿ ನೀಡಬಹುದು. ಇಲ್ಲವಾದರೆ ನಮ್ಮ ಶ್ರಮ ವ್ಯರ್ಥವಾಗುತ್ತದೆ' ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

'ನಾಯಕನಾಗುವ ಕನಸು ಇದ್ದರೆ ಸಾಲದು. ಅದಕ್ಕೆ ಮೂಲ ಬಂಡವಾಳ ಪಕ್ಷ ಸಂಘಟನೆ. ನಿಮ್ಮ ಕ್ಷೇತ್ರ, ಮತಗಟ್ಟೆ, ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಸಂಘಟನೆ ಬಲಪಡಿಸಿ. ಸದಸ್ಯತ್ವ ಅಭಿಯಾನವನ್ನು ವೇಗವಾಗಿ ನಡೆಸಬೇಕು. ಯುವಜನರು, ರೈತರು, ಕೃಷಿ ಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿ ಪಕ್ಷ ಸೇರ್ಪಡೆ ಆಗಬೇಕು' ಎಂದು ಕಾರ್ಯಕರ್ತರಿಗೆ ಅವರು ಹೇಳಿದರು.

'ಡಿಕೆಶಿ ಸಿ.ಎಂ ಆಗುವುದು ಶತಃಸಿದ್ಧ'

ಪ್ರಜಾವಾಣಿ ವಾರ್ತೆ



ವೀರಪ್ಪ ಮೊಯಿಲಿ

ಕಾರ್ಕಳ (ಉಡುಪಿ): 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಆಗದು. ಅವರು ಮುಖ್ಯಮಂತ್ರಿ ಆಗುವುದು ಶತಃಸಿದ್ಧ' ಎಂದು ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಅವರು ಹೇಳಿದರು.

ಕಾರ್ಕಳದ ಗಾಂಧಿ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಕುಟುಂಬೋತ್ಸವದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

'ಡಿ.ಕೆ ಶಿವಕುಮಾರ್ ಅವರು ಗಂಡುಮೆಟ್ಟಿನ ಭೂಮಿ ಕರಾವಳಿ ಜಿಲ್ಲೆಗೆ ಬಂದಿದ್ದಾರೆ. ಅದರಿಂದ ಪಕ್ಷಕ್ಕೆ ಶಕ್ತಿ ಬಂದಿದೆ. ಕಾಂಗ್ರೆಸ್ ವೈಭವ ಮತ್ತೆ ಬರಲಿದೆ. ಜನರ ಬದುಕಿಗೆ ಕಾಂಗ್ರೆಸ್ ಅನಿವಾರ್ಯ, ಪಕ್ಷವನ್ನು ತಳಮಟ್ಟದಿಂದ ಇನ್ನಷ್ಟು ಗಟ್ಟಿಗೊಳಿಸಿ ಮುನ್ನಡೆಸಬೇಕು' ಎಂದು ಹೇಳಿದರು.

ಕುಂಭಮೇಳಕ್ಕೆ ಹೋಗಿದ್ದೆ, ಆದರಲ್ಲಿ ತಪ್ಪೇನಿದೆ: ಡಿಕೆಶಿ ಪ್ರಶ್ನೆ

'ಲೆಕ್ಕಾಚಾರಗಳಿಗೆ ಚಿಂತಿಸಲ್ಲ'

ಪ್ರಜಾವಾಣಿ ವಾರ್ತೆ

ಉಡುಪಿ: 'ಪ್ರಯಾಗ್‌ರಾಜ್‌ನಲ್ಲಿ ನಡೆದ ಕುಂಭಮೇಳಕ್ಕೆ ನಾನು ಹೋಗಿದ್ದೆ, ತಿ.ನರಸೀಪುರದಲ್ಲಿ ನಡೆದ ಕುಂಭಮೇಳದಲ್ಲೂ ಭಾಗಿಯಾಗಿದ್ದೇನೆ. ಅದರಲ್ಲಿ ತಪ್ಪೇನಿದೆ. ನೀರಿಗೆ ಏನಾದರೂ ಜಾತಿ, ಧರ್ಮ, ಪಕ್ಷ ಇದೆಯಾ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಕಾಪು ಹೊಸ ಮಾರಿಗುಡಿ ದೇವಸ್ಥಾನದ ಪ್ರತಿಷ್ಠಾ ಬ್ರಹ್ಮಕಲಶೋತ್ಸವದಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಯಾರು ಯಾವ ಲೆಕ್ಕಚಾರ ಬೇಕಾದರೂ ಹಾಕಿಕೊಳ್ಳಲಿ. ನನಗೆ ಅದರ ಚಿಂತೆ ಇಲ್ಲ' ಎಂದರು.

ಇದಕ್ಕೂ ಮುನ್ನ ದೇವಸ್ಥಾನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅವರು, 'ಪ್ರತಿಯೊಬ್ಬರೂ ಮಾನವೀಯತೆಗೆ ತಲೆ ಬಾಗಿ, ಮಾನವ ಧರ್ಮ ಉಳಿಸಿಕೊಳ್ಳಬೇಕು. ಇನ್ನೊಂದು ಧರ್ಮದವರಿಗೆ ತೊಂದರೆ ಕೊಡಬೇಕೆಂದು ಯಾವ ಧರ್ಮದಲ್ಲೂ ಹೇಳಿಲ್ಲ' ಎಂದರು.

ಸರ್ಕಾರದ ಸಹಾಯವಿಲ್ಲದೇ ಭಕ್ತರೇ ಸುಮಾರು ₹99 ಕೋಟಿ ವೆಚ್ಚದಲ್ಲಿ ದೇವಾಲಯ ನಿರ್ಮಿಸಿದ್ದಾರೆ. ಇಂತಹ ಭವ್ಯ ದೇವಸ್ಥಾನವನ್ನು ನಾನು ಎಲ್ಲಿಯೂ ನೋಡಿಲ್ಲ. ದೇವಿಯ ಪ್ರತಿಷ್ಠೆಯಾದ ಬಳಿಕ ಮೊದಲ ಪ್ರಸಾದವನ್ನು ಪಡೆದಿರುವುದು ನನ್ನ ಭಾಗ್ಯ ಎಂದರು.

ಬ್ರಹ್ಮಕಲಶೋತ್ಸವದ ಚಿನ್ನದ ಕಲಶ ಸೇವೆಗಾಗಿ ಪತ್ನಿಯ ಹೆಸರಿನಲ್ಲಿ ಅವರು ₹9,99,999 ಅನ್ನು ಅವರು ದೇವಾಲಯಕ್ಕೆ ಸಮರ್ಪಿಸಿದರು.



ಕಾಪು ಹೊಸ ಮಾರಿಗುಡಿ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೇವಿಯ ದರ್ಶನ ಪಡೆದರು

'ವರ್ಷಾಂತ್ಯಕ್ಕೆ ಡಿಕೆಶಿ ಮುಖ್ಯಮಂತ್ರಿ'



ಬಸವರಾಜು ವಿ ಶಿವಗಂಗಾ

ದಾವಣಗೆರೆ: 'ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಡಿಸೆಂಬರ್ ಹೊತ್ತಿಗೆ ರಾಜ್ಯದ ಮುಖ್ಯಮಂತ್ರಿ ಆಗುವುದು ನಿಶ್ಚಿತ. ಅನುಮಾನ ಇರುವವರಿಗೆ ರಕ್ತದಲ್ಲಿ ಬರೆದುಕೊಡುತ್ತೇನೆ' ಎಂದು ಚನ್ನಗಿರಿ ಶಾಸಕ ಬಸವರಾಜು ವಿ. ಶಿವಗಂಗಾ ತಿಳಿಸಿದರು.

'ಡಿಕೆಶಿ ಅವರಿಗೆ ಹೈಕಮಾಂಡ್ ಮುಖ್ಯಮಂತ್ರಿ ಗಾದಿ ನೀಡಲಿದೆ ಎಂಬ ಅಚಲ ನಂಬಿಕೆ ಇದೆ. ವರ್ಷಾಂತ್ಯಕ್ಕೆ ಮುಖ್ಯಮಂತ್ರಿಯಾದರೆ ಮುಂದಿನ ಅವಧಿಗೂ ಅವರೇ ಮುಂದುವರಿಯಲಿದ್ದಾರೆ. ಏಳೂವರೆ ವರ್ಷ ರಾಜ್ಯದ ಮುಖ್ಯಮಂತ್ರಿ ಆಗಲಿದ್ದಾರೆ' ಎಂದು ಭಾನುವಾರ ಸುದ್ದಿಗಾರರಿಗೆ ಹೇಳಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವಲ್ಲಿ ಅವರ ಪಾತ್ರ ಪ್ರಮುಖವಾಗಿದೆ. ಪಕ್ಷಕ್ಕಾಗಿ ಹಣ ಖರ್ಚು ಮಾಡಿದ್ದಾರೆ. ಅವರ ಮೌನವನ್ನು ದೌರ್ಬಲ್ಯ ಎಂದು ಭಾವಿಸಬೇಕಿಲ್ಲ. ಅವರು ಕೈಗೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಿದ್ದೇವೆ. ಅವರು ಎಲ್ಲಿ ಇರುತ್ತಾರೊ ಅಲ್ಲಿ ನಾವೂ ಇರುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. 'ಸಿ.ಎಂ ಆಗುವುದು ಖಚಿತವಾಗಿರುವುದಕ್ಕೆ ಡಿಕೆಶಿ ವಿರುದ್ಧ ಕೆಲವರು ಅಸಮಾಧಾನ ಹೊರ ಹಾಕುತ್ತಿದ್ದಾರೆ. ಹೈಕಮಾಂಡ್ ಕೂಡಲೇ ಮಧ್ಯಪ್ರವೇಶ ಮಾಡಿ ರಾಜಣ್ಣ ಅವರ ಬಾಯಿ ಮುಚ್ಚಿಸಬೇಕು' ಎಂದು ಆಗ್ರಹಿಸಿದರು.

'ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಪ್ರಸ್ತಾವವೇ ಬಂದಿಲ್ಲ'

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ಕೊಪ್ಪಳದಲ್ಲಿ ಬಲ್ದೋಟಾ ಸ್ಟೀಲ್ ಮತ್ತು ಪವರ್ ಲಿಮಿಟೆಡ್ (ಬಿಎಸ್‌ಪಿಎಲ್) ಕಂಪನಿಯು 1.50 ಕೋಟಿ ಟನ್ ಉತ್ಪಾದನಾ ಸಾಮರ್ಥ್ಯದ ಇಂಟಿಗ್ರೇಟೆಡ್ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಲು ಮುಂದಾದ ಪ್ರಸ್ತಾವ ಕೇಂದ್ರದ ಮುಂದೆ ಬಂದೇ ಇಲ್ಲ. ಇದು ರಾಜ್ಯ ಸರ್ಕಾರ ಮತ್ತು ಕಂಪನಿ ನಡುವೆ ಆಗಿರುವ ಒಪ್ಪಂದ' ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿ 'ಕಾರ್ಖಾನೆ ನಿರ್ಮಾಣ ವಿರೋಧಿಸಿ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಮುಂದಾಳತ್ವದಲ್ಲಿ ನಡೆದಿರುವ ಹೋರಾಟಕ್ಕೆ ಬೆಂಬಲವಿದೆ. ಜನರಿಗೆ ಮತ್ತು ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು ಎಂದು ನಿಯಮವೇ ಇದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಸಾರ್ವಜನಿಕರು ಹಾಗೂ ಸ್ವಾಮೀಜಿ ಜತೆ ಚರ್ಚಿಸಬೇಕು. ಪರಿಸರಕ್ಕೆ ಹಾನಿಯಾಗದಂತೆ ನೋಡಿಕೊಳ್ಳಬೇಕು' ಎಂದರು.

'ಉಕ್ಕು ತಯಾರಿಸುವ ದೇಶದ ಹಲವಾರು ದೊಡ್ಡ ಕಾರ್ಖಾನೆಗಳಲ್ಲಿ ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಕ್ರಮ ಕೈಗೊಂಡಿದ್ದಾರೆ. ಅದೇ ರೀತಿಯಲ್ಲಿ ಆಯಾ ರಾಜ್ಯ ಸರ್ಕಾರಗಳು ಪರಿಸರಕ್ಕೆ ಹಾನಿಯಾಗದಂತೆ ಕ್ರಮ ವಹಿಸಬೇಕು' ಎಂದು ಹೇಳಿದರು.


'ಜಗತ್ತಿನಲ್ಲಿ ಗೊಂಬೆಗಳ ತಯಾರಿಕಾ ವಲಯದಲ್ಲಿ (ಟಾಯ್ ಕ್ಲಸ್ಟರ್) ಚೀನಾ ಸಿಂಹಪಾಲು ಹೊಂದಿದ್ದು, ಆ ದೇಶಕ್ಕೆ ಸರಿಸಮನಾಗಿ ಬೆಳೆಯಲು ನಮ್ಮ ದೇಶದ ಅನೇಕ ಕಡೆ ಟಾಯ್ ಕ್ಲಸ್ಟರ್‌ಗಳನ್ನು ಆರಂಭಿಸುತ್ತಿದ್ದೇವೆ' ಎಂದರು.

ರಾಜ್ಯದ ವಿರುದ್ಧ ಗರಂ: 'ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಪ್ರಚಾರ ಮಾಡುವುದು ಹಾಗೂ ಕೇಂದ್ರ ಸರ್ಕಾರವನ್ನು ದೂಷಣೆ ಮಾಡುವುದು ಬಿಟ್ಟು ಕಾಂಗ್ರೆಸ್ ಸರ್ಕಾರ ಬೇರೆ ಯಾವ ಅಭಿವೃದ್ಧಿ ಕೆಲಸಗಳನ್ನೂ ಮಾಡುತ್ತಿಲ್ಲ. ಕಲ್ಯಾಣ ಕರ್ನಾಟಕಕ್ಕೆ ಕಳೆದ ವರ್ಷದ ಬಜೆಟ್‌ನಲ್ಲಿ ₹ 5 ಸಾವಿರ ಕೋಟಿ ಘೋಷಿಸಿದರೂ ನಯಾಪೈಸೆ ಬಿಡುಗಡೆಯಾಗಿಲ್ಲ' ಎಂದರು.

₹1.40 ಲಕ್ಷದ ಬಣ್ಣ ಉಚಿತವಾಗಿ ನೀಡಿದ ಹಳೆ ವಿದ್ಯಾರ್ಥಿ ನಾಗೇಗೌಡ

'ಬಣ್ಣ' ಕಂಡ ಶತಮಾನದ ಶಾಲೆ

• ಬಿ. ಸತೀಶ್ ಆರಾಧ್ಯ



ನಾಗೇಗೌಡ

ಎಚ್‌.ಡಿ. ಕೋಟೆ (ಮೈಸೂರು ಜಿಲ್ಲೆ): ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಗೆ ಅಲ್ಲಿನ ಹಳೆ ವಿದ್ಯಾರ್ಥಿ, ಕಾಳಿದಾಸ ರಸ್ತೆಯ ನಿವಾಸಿ ನಾಗೇಗೌಡ ಹೊಸ ರೂಪ ನೀಡಿದ್ದಾರೆ. ಬಣ್ಣದ ಅಂಗಡಿಯ ಮಾಲೀಕರಾದ ಅವರು, ₹ 1.40 ಲಕ್ಷ ಮೌಲ್ಯದ ಬಣ್ಣವನ್ನು ಉಚಿತವಾಗಿ ಒದಗಿಸಿ ಗಮನಸೆಳೆದಿದ್ದಾರೆ. ಕಾರ್ಮಿಕರೂ ಉಚಿತವಾಗಿ ಕೆಲಸ ಮಾಡಿ ಕೈಜೋಡಿಸಿದ್ದಾರೆ.

143 ವರ್ಷದ ಇತಿಹಾಸ ಹೊಂದಿರುವ ಈ ಶಾಲೆ, ಕಳೆದ 25 ವರ್ಷಗಳಿಂದ ಸುಣ್ಣ-ಬಣ್ಣ ಕಂಡಿರಲಿಲ್ಲ. 1882ರಲ್ಲಿ ಸ್ಥಾಪನೆಯಾದ ಈ ಶಾಲೆಯು ತಾಲ್ಲೂಕಿನವರೇ ಆದ ಎಂ.ಶಿವಣ್ಣ ಅವರು ಸಚಿವರಾಗಿದ್ದಾಗ ಶತಮಾನೋತ್ಸವ ಆಚರಣೆ ಕಂಡಿತ್ತು.



ಎಚ್‌.ಡಿ. ಕೋಟೆ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆ ಬಣ್ಣ ಕಂಡುಕೊಂಡಿದೆ

ಹಿಂದೆ ಈ ಶಾಲೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದರು. ತಾಲ್ಲೂಕಿನ ಪ್ರಮುಖ ಶಾಲೆಗಳಲ್ಲಿ ಇದು ಮೊದಲನೇ ಸ್ಥಾನದಲ್ಲಿತ್ತು. ಪಠ್ಯೇತರ ಚಟುವಟಿಕೆಗಳಲ್ಲಿ ಇಲ್ಲಿನ ಮಕ್ಕಳು ಇತರ ಶಾಲೆಗಳವರಿಗಿಂತ ಮುಂದಿರುತ್ತಿದ್ದರು. ಆದರೆ, ಕ್ರಮೇಣ ಖಾಸಗಿ ಶಾಲೆಗಳ ಪೈಪೋಟಿ ಮತ್ತು ಸರ್ಕಾರವು ಸ್ಥಳೀಯವಾಗಿ ಮತ್ತಷ್ಟು ಶಾಲೆಗಳನ್ನು ತೆರೆದ ಕಾರಣದಿಂದ ದಾಖಲಾತಿ ಕುಸಿದಿದೆ. ಪ್ರಸ್ತುತ 52 ಮಕ್ಕಳು ಕಲಿಯುತ್ತಿದ್ದಾರೆ.

ಕಾರ್ಮಿಕರಿಂದಲೂ ಉಚಿತ ಸೇವೆ: 'ಅನೇಕ ವರ್ಷಗಳಿಂದ ಶಾಲೆ ಸುಣ್ಣ-ಬಣ್ಣ ಕಾಣದಿರುವುದು ಶಿಕ್ಷಕರಿಂದ ಗೊತ್ತಾಯಿತು. ಹೀಗಾಗಿ, ಬಣ್ಣದ ಜವಾಬ್ದಾರಿ ವಹಿಸಿಕೊಂಡೆ. ಬಣ್ಣದ ಅಗತ್ಯವಿತ್ತು, ಉಚಿತವಾಗಿ ಕೊಟ್ಟಿರುವೆ. ನಮ್ಮ ಅಂಗಡಿಯಲ್ಲಿ ಬಣ್ಣ ಖರೀದಿಸುವ 15 ಮಂದಿ ಪೇಂಟರ್‌ಗಳು ಇಲ್ಲಿ ಶ್ರಮದಾನ ಮಾಡಿದ್ದಾರೆ. ಶಾಲೆಯ 16 ಕೊಠಡಿಗಳು ಮತ್ತು ಕಾಂಪೌಂಡ್‌ಗೆ ಬಣ್ಣ ಹಚ್ಚಲು ಎರಡು ದಿನ ಕೆಲಸ ನಿರ್ವಹಿಸಿದ್ದಾರೆ. ಅವರೂ ಕೂಲಿ ಪಡೆದಿಲ್ಲ' ಎಂದು ನಾಗೇಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಹಿಂದೆ ಇಲ್ಲಿ 1ರಿಂದ 8ನೇ ತರಗತಿವರೆಗೆ ಇತ್ತು. ಆಗ 79 ವಿದ್ಯಾರ್ಥಿಗಳ ದಾಖಲಾತಿ ಇತ್ತು. ಶಿಕ್ಷಕರ ಕೊರತೆಯಿಂದಾಗಿ ಈಗ 7ನೇ ತರಗತಿವರೆಗಷ್ಟೆ ಅವಕಾಶ ಕೊಡಲಾಗಿದೆ. 8ನೇ ತರಗತಿ ವಿದ್ಯಾರ್ಥಿಗಳನ್ನು ಬೇರೆ ಶಾಲೆಗೆ ಕಳುಹಿಸಲಾಯಿತು. ಆದ್ದರಿಂದ ಸಂಖ್ಯೆ 52ಕ್ಕೆ ಇಳಿದಿದೆ. ನಮ್ಮ ಮನವಿಗೆ ಸ್ಪಂದಿಸಿದ ನಾಗೇಗೌಡ ಅವರು ಬಣ್ಣ ಮಾಡಿಸಿಕೊಡುತ್ತಿದ್ದಾರೆ' ಎಂದು ಮುಖ್ಯ ಶಿಕ್ಷಕ ಎಚ್‌.ಡಿ. ರಾಮಚಂದ್ರು ಮಾಹಿತಿ ನೀಡಿದರು.

'ಸ್ವಂತ ಹಣದಲ್ಲಿ ಸರ್ಕಾರಿ ಶಾಲೆಗೆ ಹೊಸ ರೂಪ ನೀಡಿರುವ ನಾಗೇಗೌಡರ ಕಾರ್ಯ ಅಭಿನಂದನೀಯವಾದುದು' ಎಂದು ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕದ ಅಧ್ಯಕ್ಷ ಕನ್ನಡ ಪ್ರಮೋದ್ ಹೇಳಿದರು.

ಸಿಮೆಂಟ್ ಕಂಪನಿಗೆ ₹ 1.34 ಕೋಟಿ ವಂಚನೆ: ಮೂವರ ಮೇಲೆ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಚಿತ್ತಾಪುರ ತಾಲ್ಲೂಕಿನಲ್ಲಿ ರಾಮ್ಕೊ ಸಿಮೆಂಟ್ ಕಂಪನಿಯ ನೂತನ ಘಟಕ ನಿರ್ಮಾಣದ ಭೂಮಿ ಖರೀದಿಯಲ್ಲಿ ₹ 1.34 ಕೋಟಿ ಪಡೆದು ವಂಚಿಸಿದ ಆರೋಪದಡಿ ದಂಪತಿ ಸೇರಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ಆಂಧ್ರಪ್ರದೇಶದ ಮೂಲದ ದಂಪತಿ ಸೋಮಶೇಖರ ರೆಡ್ಡಿ, ಆತನ ಪತ್ನಿ ಸುಷ್ಮಾ ಹಾಗೂ ಕಲಬುರಗಿಯ ಮಣಿಕಂಠ ಸಂಗಮೇಶ್ವರ ವಿರುದ್ಧ ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರದಾಳ, ಬಮ್ಮನಹಳ್ಳಿ ವ್ಯಾಪ್ತಿಯಲ್ಲಿ ಸಿಮೆಂಟ್ ಕಾರ್ಖಾನೆ ನಿರ್ಮಾಣಕ್ಕೆ ಅಗತ್ಯವಾದಷ್ಟು ಜಮೀನು ಖರೀದಿಗಾಗಿ ರಾಮ್ಕೊ ಸಿಮೆಂಟ್ ಕಂಪನಿಯು ಸೋಮಶೇಖರ ಹಾಗೂ ಮಣಿಕಂಠ ಅವರನ್ನು ಸ್ಥಳೀಯ ಅಧಿಕಾರಿಗಳನ್ನಾಗಿ ನಿಯೋಜಿಸಿತ್ತು. ಆರೋಪಿಗಳಿಬ್ಬರು 948 ಎಕರೆ ಜಮೀನು ಖರೀದಿಸಿದ್ದಾಗಿ ಕಂಪನಿಗೆ ಮಾಹಿತಿ ನೀಡಿದ್ದರು. ದಾಖಲಾತಿಗಳು ಪರಿಶೀಲಿಸಿದಾಗ 941 ಎಕರೆ ಜಮೀನು ಖರೀದಿಯಾಗಿದ್ದು, 7 ಎಕರೆ ಜಮೀನು ಕಡಿಮೆಯಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಕಂಪನಿಯ ಹಿರಿಯ ವ್ಯವಸ್ಥಾಪಕರು ಚಿತ್ತಾಪುರಕ್ಕೆ ಬಂದು, ಆರೋಪಿಗಳನ್ನು ಕರೆದು ವಿಚಾರಣೆ ನಡೆಸಿದಾಗ ಕಂಪನಿಗೆ ವಂಚಿಸಿದ್ದು ಬಹಿರಂಗವಾಗಿದೆ. ಹಣಕಾಸಿನ ಸಮಸ್ಯೆಗೆ ಸಿಲುಕಿದ್ದ ಸೋಮಶೇಖರ ರೆಡ್ಡಿ, ಬಮ್ಮನಹಳ್ಳಿ ವ್ಯಾಪ್ತಿಯ ಸರ್ವೆ ನಂಬರ್ 43/1ರಲ್ಲಿನ 7 ಎಕರೆ 4 ಗುಂಟೆ ಜಮೀನಿನ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದರು. ಚಿತ್ತಾಪುರ ಸಬ್ ರಿಜಿಸ್ಟ್ರಾರ್ ಹೆಸರಿನಲ್ಲಿ ನಕಲಿ ಸಹಿ ಮಾಡಿ, ಜಮೀನು ಖರೀದಿಸಿದ್ದಾಗಿ ಬಿಂಬಿಸಿ ದಾಖಲೆಗಳನ್ನು ಕಂಪನಿಗೆ ಕಳುಹಿಸಿದ್ದರು. ಪ್ರತಿ ಎಕರೆಗೆ ₹14 ಲಕ್ಷ ಹಾಗೂ ₹5 ಲಕ್ಷ ಬೆಳೆ ಪರಿಹಾರ ಸೇರಿದಂತೆ ತಲಾ ₹ 19 ಲಕ್ಷದಂತೆ ಒಟ್ಟು ₹1.34 ಕೋಟಿಯನ್ನು ಹಂತ -ಹಂತವಾಗಿ ಸೋಮಶೇಖರ ಪತ್ನಿ ಸುಷ್ಮಾ ಅವರ ಖಾತೆಗೆ ವರ್ಗಾಯಿಸಿಕೊಂಡಿದ್ದರು.

ವಂಚನೆ ಕೃತ್ಯವನ್ನು ತಪ್ಪೊಪ್ಪಿಕೊಂಡ ಆರೋಪಿಗಳು, ವಾಪಸ್ ಕೊಡುವುದಾಗಿ ಮೇಲಧಿಕಾರಿಗಳಿಗೆ ಭರವಸೆ ನೀಡಿದರು. ಅಂತೆಯೇ ₹14 ಲಕ್ಷ ಮರಳಿಸಿದ್ದು, ಉಳಿದ ಹಣವನ್ನು ಕೊಡದೆ ವಂಚಿಸಿದ್ದಾರೆ ಎಂದು ತಿಳಿಸಿದ್ದಾರೆ.



ಸುಭಾಷಿತ

ಒಳ್ಳೆಯವರ ಜೊತೆ ಒಳ್ಳೆಯವರಾಗೇ ಇರಿ. ಆದರೆ ಕೆಟ್ಟವರ ಜೊತೆ ಯಾವಾಗಲೂ ಕೆಟ್ಟವರಾಗಿ ಇರಬೇಡಿ. ವಜ್ರವನ್ನು ವಜ್ರದಿಂದಲೇ ಕತ್ತರಿಸಬಹುದು. ಆದರೆ ಕೇಸರನ್ನು ಕೇಸರಿನಿಂದ ತೊಳೆಯಲಾಗದು. –ಶಿವಕುಮಾರ ಸ್ವಾಮೀಜಿ

ಲೋಕಸಭಾ ಕ್ಷೇತ್ರ ಮರುವಿಂಗಡಣೆ ದಕ್ಷಿಣದ ಕಳವಳಕ್ಕೆ ಕಿವಿಗೊಡಿ

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಕಾರ್ಯ ನಡೆದಲ್ಲಿ, ದಕ್ಷಿಣದ ರಾಜ್ಯಗಳಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿರುವ ಭರವಸೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶಾ ಅವರ ಮಾತುಗಳು 'ವಿಶ್ವಾಸಾರ್ಹ ಅಲ್ಲ' ಎಂದು ಹೇಳಿದ್ದಾರೆ. ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ಬಗ್ಗೆ ಬಿಕ್ಕಟ್ಟಿನ ಧಾಟಿಯ ಅಭಿಪ್ರಾಯವನ್ನು ತೆಲಂಗಾಣದ ಕಾಂಗ್ರೆಸ್ ಹಾಗೂ ಭಾರತ ರಾಷ್ಟ್ರ ಸಮಿತಿಯ ನಾಯಕರು ವ್ಯಕ್ತಪಡಿಸಿದ್ದಾರೆ, ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರೂ ಇದೇ ಧಾಟಿಯಲ್ಲಿ ಮಾತನಾಡಿದ್ದಾರೆ. ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ವಿಚಾರವಾಗಿ ಬಿಜೆಪಿ ಹೊಂದಿರುವ ಯೋಜನೆಗೆ ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಮುಖರು ವಿರೋಧ ವ್ಯಕ್ತಪಡಿಸುತ್ತಿರುವುದು ರಾಜಕೀಯ ಉದ್ದೇಶದ್ದು ಎಂದು ಹೇಳುವುದು ಸರಿಯಲ್ಲ. ಏಕೆಂದರೆ, ಮರುವಿಂಗಡಣೆಯನ್ನು ವಿರೋಧಿಸಿ ತಮಿಳುನಾಡು 2024ರಲ್ಲಿ ನಿರ್ಣಯ ಕೈಗೊಂಡಾಗ, ಅದಕ್ಕೆ ಅಲ್ಲಿನ ಬಿಜೆಪಿ ನಾಯಕರ ಬೆಂಬಲವೂ ಇತ್ತು ಎಂಬುದನ್ನು ಮರೆಯುವಂತಿಲ್ಲ.

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ಕಾರಣದಿಂದಾಗಿ ದಕ್ಷಿಣದ ರಾಜ್ಯಗಳ ಒಂದೇ ಒಂದು ಲೋಕಸಭಾ ಸೀಟು ಕೂಡ ಕಡಿಮೆ ಆಗುವುದಿಲ್ಲ ಎಂಬ ಭರವಸೆಯನ್ನು ಶಾ ಅವರು ನೀಡಿದ್ದಾರೆ. ಆದರೆ ಮರುವಿಂಗಡಣೆಯ ಉದ್ದೇಶವನ್ನು ಇನ್ನಷ್ಟು ಸೂಕ್ಷ್ಮವಾಗಿ ಅವಲೋಕಿಸಬೇಕು. ಮರುವಿಂಗಡಣೆಗೆ ಆಧಾರ ಆಗುವುದು ಯಾವ ವರ್ಷದಲ್ಲಿ ನಡೆಯುವ ಜನಗಣತಿ? ಶಾ ಅವರು ಹೇಳಿದಂತೆ ಜನಸಂಖ್ಯೆಗೆ ಅನುಗುಣವಾಗಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದಾದಲ್ಲಿ, 1970ರ ದಶಕದಲ್ಲಿ ಕೇಂದ್ರ ಸರ್ಕಾರ ರೂಪಿಸಿದ ಜನಸಂಖ್ಯಾ ನಿಯಂತ್ರಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದ ದಕ್ಷಿಣದ ರಾಜ್ಯಗಳು ಕಳೆದುಕೊಳ್ಳುವುದೇ ಹೆಚ್ಚು. ಉತ್ತರ ಭಾರತದ ಹಲವು ರಾಜ್ಯಗಳು ಜನಸಂಖ್ಯಾ ನಿಯಂತ್ರಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿಲ್ಲ ಎಂಬುದನ್ನು ಗಮನಿಸಬೇಕು. 1971ರ ನಂತರದಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಜನಸಂಖ್ಯೆಯ ಹೆಚ್ಚಳ ಪ್ರಮಾಣವು ಉತ್ತರ ಭಾರತದ ರಾಜ್ಯಗಳಲ್ಲಿನ ಜನಸಂಖ್ಯೆಯ ಹೆಚ್ಚಳದ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆಯೇ ಇದೆ. ಅದರಲ್ಲೂ ಮುಖ್ಯವಾಗಿ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರಪ್ರದೇಶದ ಜನಸಂಖ್ಯಾ ಹೆಚ್ಚಳದ ಪ್ರಮಾಣಕ್ಕೆ ಹೋಲಿಸಿದರೆ ಗಣನೀಯವಾಗಿ ಕಡಿಮೆ ಇದೆ. ಅಂದರೆ, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ನಂತರ ದಕ್ಷಿಣದ ರಾಜ್ಯಗಳ ಲೋಕಸಭಾ ಸೀಟುಗಳ ಸಂಖ್ಯೆಯು ಹೆಚ್ಚಾಗಬಹುದಾದರೂ, ಆ ಹೆಚ್ಚಳವು ಉತ್ತರದ ಹಿಂದಿ ರಾಜ್ಯಗಳ ಸೀಟುಗಳಲ್ಲಿ ಆಗುವ ಹೆಚ್ಚಳಕ್ಕಿಂತ ಕಡಿಮೆ ಇರುತ್ತದೆ ಎಂಬುದರಲ್ಲಿ ಅನುಮಾನ ಇಲ್ಲ. ಮರುವಿಂಗಡಣೆಗೆ ವ್ಯಕ್ತವಾಗುತ್ತಿರುವ ವಿರೋಧವನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬೇಕು. ಕೇಂದ್ರದ ಮಾರ್ಗಸೂಚಿಗಳನ್ನು ಪಾಲಿಸದ ರಾಜ್ಯಗಳಿಗೆ ಮರುವಿಂಗಡಣೆ ಮೂಲಕ ಹೆಚ್ಚಿನ ಸಂಖ್ಯೆಯ ಪ್ರತಿನಿಧಿಗಳನ್ನು ಕೊಟ್ಟು 'ಪಾರಿತೋಷಕ' ನೀಡಲಾಗುತ್ತದೆ, ಹೆಚ್ಚಿನ ಸಂಖ್ಯೆಯ ಪ್ರತಿನಿಧಿಗಳು ಅಂದರೆ ಶಾಸನ ರೂಪಿಸುವ ಸಂದರ್ಭಗಳಲ್ಲಿ ಹೆಚ್ಚು ಮಾತಿನ ಸ್ವಾತಂತ್ರ್ಯ ಸಿಗುತ್ತದೆ ಎಂಬ ಕಳವಳವನ್ನು ಅರ್ಥಮಾಡಿಕೊಳ್ಳಬೇಕು. ಮರುವಿಂಗಡಣೆ ಆದಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಅಧಿಕಾರವು ಉತ್ತರದ ರಾಜ್ಯಗಳತ್ತ ಇನ್ನಷ್ಟು ವಾಲುತ್ತದೆ ಎಂದು ದಕ್ಷಿಣದ ರಾಜ್ಯಗಳು ಹೊಂದಿರುವ ಕಳವಳಕ್ಕೆ ಸ್ಪಂದಿಸುವ ಕಾರ್ಯವನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಇದುವರೆಗೆ ಪರಿಣಾಮಕಾರಿಯಾಗಿ ಮಾಡಿಲ್ಲ. ವಿಂಧ್ಯ ಪರ್ವತದ ದಕ್ಷಿಣಕ್ಕೆ ಇರುವ ಪ್ರದೇಶಗಳ ಜನರು ಮರುವಿಂಗಡಣೆ ಕಾರ್ಯವನ್ನು ಭಾರತದ ಭಾಷಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಬಹುತ್ವವನ್ನು ಅಳಿಸಿ, ಅದನ್ನು ಏಕರೂಪಿಯಾಗಿಸುವ ಬಿಜೆಪಿ–ಸಂಘ ಪರಿವಾರದ ಕಾರ್ಯಸೂಚಿಯ ಭಾಗವಾಗಿ ಕಾಣುತ್ತಿದ್ದಾರೆ.



ಮರುವಿಂಗಡಣೆಗೆ ವ್ಯಕ್ತವಾಗುತ್ತಿರುವ ವಿರೋಧವನ್ನು ದಕ್ಷಿಣ ಹಾಗೂ ಉತ್ತರದ ರಾಜ್ಯಗಳ ಲೋಕಸಭಾ ಸೀಟುಗಳ ಸಂಖ್ಯೆಯಲ್ಲಿ ಆಗಲಿರುವ ಏರುಪೇರಿನ ಹಿನ್ನೆಲೆಯಲ್ಲಿ ಗ್ರಹಿಸಬೇಕು

ವಿಶ್ವಾಸದ ಕೊರತೆಯು ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಬಂಧದಲ್ಲಿ ಸೌಹಾರ್ದ ಇಲ್ಲದಿರುವುದನ್ನೂ ಹೇಳುತ್ತಿದೆ. ಎರಡೂ ವ್ಯವಸ್ಥೆಗಳ ನಡುವೆ ಸುಮಧುರ ಸಂಬಂಧ ಇದ್ದಾಗ ದೊಡ್ಡ ಮಟ್ಟದ ಸುಧಾರಣೆಗಳು ಸುಲಲಿತವಾಗಿ ಜಾರಿಗೆ ಬರುತ್ತವೆ. ರಾಜ್ಯಗಳ ಜೊತೆ ಒಳ್ಳೆಯ ಸಂಬಂಧ ರೂಪಿಸುವ ಕೆಲಸದಲ್ಲಿ ಒಂದು ಹೆಜ್ಜೆ ಮುಂದೆ ಹೋಗಬೇಕಾದ ಹೊಣೆ ಕೇಂದ್ರದ ಮೇಲೆ ಇದೆ. ದಕ್ಷಿಣದ ರಾಜ್ಯಗಳ ಕಳವಳಗಳನ್ನು ಕೇಂದ್ರ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ನೇತೃತ್ವ ಹೊತ್ತಿರುವ ರಾಜಕೀಯ ಪಕ್ಷವು ಕಡೆಗಣಿಸಿದರೆ, ಉತ್ತರದ ರಾಜ್ಯಗಳ ಎದುರು ದಕ್ಷಿಣದ ರಾಜ್ಯಗಳ ಧ್ವನಿ ಕ್ಷೀಣವಾಗಲಿದೆ ಎಂಬ ಆತಂಕ ಇನ್ನಷ್ಟು ಹೆಚ್ಚಾಗುತ್ತದೆ.

ಭಾಷೆಯ ಮುಖೇನ ದಬ್ಬಾಳಿಕೆ ಮಾಡುವ ಆಕ್ರಮಣಕಾರಿ ನೀತಿಯನ್ನು ಒಪ್ಪಲಾಗದು

ದ್ವಿಭಾಷಾ ನೀತಿಯೇ ಒಕ್ಕೂಟದ ಧರ್ಮ



ವಿಶ್ಲೇಷಣೆ

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಭಾಷೆಯು ಕಲಿಕೆಗೂ ಶಿಕ್ಷಣಕ್ಕೂ ಇರುವ ನಂಟು ಕಾಯ–ಜೀವದ ನಂಟಿನಷ್ಟೇ ಸಹಜವಾದುದು. ಜೀವವಿಲ್ಲದ ಕಾಯ ಶವ. ಹಾಗೆಯೇ ಕಾಯವಿಲ್ಲದ ಜೀವಕ್ಕೆ ಅಸ್ತಿತ್ವ ಇಲ್ಲ. ಬೇರೆ ಯಾವುದೇ ದೇಶದ ಶಿಕ್ಷಣ ನೀತಿ ಭಾರತದ ಶಿಕ್ಷಣ ನೀತಿಯಷ್ಟು ಜಟಿಲವಾಗಿರಲು ಸಾಧ್ಯವಿಲ್ಲ. ಏಕೆಂದರೆ ಭಾರತ ಬಹುಭಾಷಿಕ ದೇಶ, ಬಹುಸಂಸ್ಕೃತಿ, ಬಹುಧರ್ಮಗಳ ದೇಶ. ಹೀಗಾಗಿ, ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಭಾಷೆಯ ವಿಚಾರದಲ್ಲಿ ಒಂದು ಏಕಮುಖತ್ವಕ್ಕೆ ಬರಲು ಸಾಧ್ಯವಾಗಿಲ್ಲ; ಸಾಧ್ಯವಾಗುತ್ತಿಲ್ಲ. ಆದರೆ ದೇಶದ ಒಕ್ಕೂಟ ಉಳಿವಿಗಾಗಿ ಒಂದು ಬಹುಮಾನ್ಯ ಶಿಕ್ಷಣ ನೀತಿಯ, ಭಾಷಾ ನೀತಿಯ ಅಗತ್ಯವಿದೆ.

ಭಾಷಾ ಕಲಿಕೆಯ ವಿಚಾರದಲ್ಲಿ ಸಾಮಾನ್ಯವಾಗಿ ಹೇಳುವ ಮಾತು ಬೇರೆ. ಯಾರು ಎಷ್ಟು ಭಾಷೆಯನ್ನು ಬೇಕಾದರೂ ಕಲಿಯಬಹುದು. ಅದು ಅವರ ಶಕ್ತಿ ಅನುಸಾರ ಸಾಧ್ಯವಾಗಬಹುದಾದ ಅವಕಾಶ. ಇದಕ್ಕೆ ಯಾರ ವಿರೋಧವೂ ಇಲ್ಲ. ಆದರೆ ಶಿಕ್ಷಣದ ವಿಚಾರಕ್ಕೆ ಬಂದಾಗ ಈ ಉದಾರ ನೀತಿಯನ್ನು ಅಳವಡಿಸಲಾಗುವುದಿಲ್ಲ. ಕಾರಣ, ಇಲ್ಲಿ ಲಿಪಿಯಿದ್ದ ಭಾಷೆಗಳ, ಮೌಖಿಕ ಭಾಷೆಗಳ ಎಂಬಂತಹ ಹಲವು ಸೂಕ್ಷ್ಮ ನೆಲೆಯ ಸಂಗತಿಗಳು ಚರ್ಚೆಗೆ ಬರುತ್ತವೆ.

ಕರ್ನಾಟಕವನ್ನೇ ತೆಗೆದುಕೊಂಡರೆ, ಈ ನೆಲದ ಭಾಷೆಗಳಲ್ಲದೆ ವಲಸೆ ಭಾಷೆಗಳೂ ಸೇರಿ ಕರ್ನಾಟಕ ಬಹುಭಾಷೆಗಳ ರಾಜ್ಯ. ಆದರೆ ಇದು ಕನ್ನಡ ಭಾಷೆಯ ಕರ್ನಾಟಕ ರಾಜ್ಯ. ಕನ್ನಡವನ್ನು ರಾಜ್ಯ ಭಾಷೆಯೆಂದು ಈಗಾಗಲೇ ರಾಜ್ಯವೂ ಘೋಷಿಸಿದೆ, ಕೇಂದ್ರವೂ ಅದನ್ನು ಅಂಗೀಕರಿಸಿದೆ. ಆದ್ದರಿಂದಲೇ ನೋಟುಗಳ ಮೇಲೆ ಮುದ್ರಿತವಾಗಿರುವ ಭಾಷೆಗಳಲ್ಲಿ ಕನ್ನಡವೂ ಸ್ಥಾನ ಪಡೆದಿದೆ. ಕನ್ನಡವು ಪ್ರಾಥಮಿಕ ಶಿಕ್ಷಣದಲ್ಲಿ ಕಲಿಯುವ ಕಡ್ಡಾಯ ಭಾಷೆಯೂ ಆಗಿದೆ. ಇದು ಉಚಿತ ಶಿಕ್ಷಣ ಕಡ್ಡಾಯ ಶಿಕ್ಷಣ ಪಾಲನೆಯಲ್ಲಿ ಇರುವವರೆಗೂ ಅನಿರ್ಬಂಧವಾಗಿ ಅನುಸರಿಸಬೇಕಾದದ್ದು. ಏಕೆಂದರೆ ಮಕ್ಕಳ ಹಕ್ಕು ಹಾಗೂ ಖಾಸಗಿ ಶಿಕ್ಷಣ ವಲಯದವರೂ ಈ ನೀತಿಯನ್ನು ಸರ್ಕಾರಿ ಶಾಲೆಗಳವರಂತೆಯೇ ಪಾಲಿಸಿಕೊಂಡು ಬರುತ್ತಿದ್ದಾರೆ. ಆದರೆ ಅನ್ನದ ಭಾಷೆ ಎನ್ನುವ ಭ್ರಾಮಕ ಮೋಹವನ್ನು ಹುಟ್ಟುಹಾಕಿ ಶಿಕ್ಷಣ ಮಾಧ್ಯಮವನ್ನು ದಂಧೆಯಾಗಿ ಮಾಡಿಕೊಂಡ ಖಾಸಗಿ ಶಿಕ್ಷಣ ವಲಯ ಇಡೀ ಶಿಕ್ಷಣ ನೀತಿಯ ದಾರಿ ತಪ್ಪಿಸಿತು. ಇದರ ಜೊತೆಗೆ ಹಿಂದಿ ಭಾಷೆಯನ್ನು ನಮ್ಮ ಕೇಂದ್ರ ಸರ್ಕಾರ ಹಿಂದಿಯೇತರ ರಾಜ್ಯಗಳ ಮೇಲೆ ನಿರ್ದಿಷ್ಟವಾಗಿ ಹೇರುತ್ತಾ ಬಂತು. ಒಂಟೆ ಮೊದಲು ಡೇರೆಯೊಳಗೆ ಕತ್ತು ತೂರಿಸಿ ಅನಂತರ ಇಡೀ ಡೇರೆಯನ್ನೇ ಬುಡಮೇಲು ಮಾಡುವ ರೀತಿಯಲ್ಲಿ ಕೇಂದ್ರದ ಹಿಂದಿ ಹೇರಿಕೆಯ ನೀತಿ ಇದೆ.

ತ್ರಿಭಾಷಾ ನೀತಿಯೆಂಬ ತಲೆತೂರಿಸುವ ಹಿಂದಿ ಪ್ರವೇಶದ ಅವಕಾಶ ಪಡೆದ ನೀತಿಯು ಇಂದು ನೆಲದ ಭಾಷೆ, ಪರಿಸರದ ಭಾಷೆ ಅರ್ಥಾತ್ ರಾಜ್ಯ ಭಾಷೆಗಳ ಮೇಲೆ ಎರಗಿದ ಘಾತುಕ ನೀತಿಯಾಗಿದೆ. ಅದರ ಎರಗುವಿಕೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳೇ ತೆರೆದ ಬಾಗಿಲುಗಳಾಗಿವೆ. ಅನ್ನದ ಭಾಷೆ ಎಂಬ ಭ್ರಮೆಗೆ ಸಿಲುಕಿದ ಪೋಷಕರು ಕೂಡ ಇದರ ಭಾಗೀದಾರರು. ಪ್ರಜೆಗಳಿಗೆ ಕನ್ನಡ ಅರ್ಥಾತ್ ರಾಜ್ಯ ಭಾಷೆಗೆ ಅನ್ಯಾಯ ಮಾಡಿದವರಾಗಿದ್ದಾರೆ.

ದ್ವಿಭಾಷಾ ನೀತಿ ಒಪ್ಪಿಕೊಂಡ ರಾಜ್ಯ ಸರ್ಕಾರಗಳ ಮೇಲೆ ಇತ್ತೀಚಿನ ವರ್ಷಗಳಲ್ಲಿ ತ್ರಿಭಾಷಾ ಸೂತ್ರವನ್ನು ಹೇರಿಸಲು ಹೊರಟಿರುವ ಕೇಂದ್ರದ ನೀತಿ ಅಪ್ರಜಾಸತ್ತಾತ್ಮಕ ಅಷ್ಟೇ ಅಲ್ಲ ಅಸಾಂವಿಧಾನಿಕ ನಡೆಯಾಗಿದೆ. ಇನ್ನು ತ್ರಿಭಾಷಾ ನೀತಿಯನ್ನು ಪ್ರತಿಪಾದಿಸುವ ಕೆಲವರು, ಬಹುಭಾಷಾ ಕಲಿಕೆಯ ವಿಚಾರ, ಅದರ ಅನುಕೂಲಗಳ ಕುರಿತು ಮಾತನಾಡುತ್ತಿದ್ದಾರೆ. ಇವರದೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮಾತಿನಲ್ಲಿ ಬೆಣ್ಣೆ, ಕಂಕುಳಲ್ಲಿ ದೊಣ್ಣೆ ನೀತಿಯ ಭಾಷಾ ನೀತಿಗಳು. ತ್ರಿಭಾಷಾ ನೀತಿಯನ್ನು ಬೆಂಬಲಿಸುವವರು 'ಭಾಷೆ ಕುರಿತ ರಾಜಕೀಯವನ್ನು ಒಂದು ಕ್ಷಣ ಬದಿಗಿರಿಸಿ ಇದನ್ನು ಭಾಷಾ ವೈಜ್ಞಾನಿಕ ದೃಷ್ಟಿಯಿಂದ, ಭಾಷೆಯ ಕಲಿಕೆ ವ್ಯಕ್ತಿಯ ಅಭ್ಯುದಯಕ್ಕೆ ಪೂರಕವಾಗಬೇಕು ಎನ್ನುವ ನೆಲೆಯಿಂದ ನಾವು ಈ ಕುರಿತು ಚಿಂತನೆ ಮಾಡಬಹುದು' ಎಂದು ಮುಂತಾಗಿ ಮಾತನಾಡುತ್ತಾರೆ. ಆದರೆ ರಾಜಕೀಯವನ್ನು ಬದಿಗಿರಿಸಿ ಯಾವುದರ ಬಗ್ಗೆ ಮಾತನಾಡಿದರೂ ಅದು ಅಪ್ರಯೋಜಕ ಮಾತು ಮತ್ತು ವಾಸ್ತವಕ್ಕೆ ಕುರುಡಾದ ಮಾತು.

ನಾವು ತಿನ್ನುವ ಅಗುಳುಅಗುಳೂ ರಾಜಕೀಯವಾಗಿದೆ. ಪ್ರಜಾಪ್ರಭುತ್ವವಾದಿಯಾಗೋ ಅಪ್ರಜಾಪ್ರಭುತ್ವವಾದಿಯಾಗೋ ನಾವು ರಾಜಕೀಯ ನಿರ್ಣಯಗಳ ಭಾಗೀದಾರರಾಗಿದ್ದೇವೆ. ನಾವು ಹಾಕುವ ಮತ ನಮ್ಮ ರಾಜಕೀಯವನ್ನು ತನ್ಮೂಲಕ ನಮ್ಮ ಬದುಕಿನ ಗತಿಯನ್ನು ನಿರ್ಣಯಿಸುತ್ತದೆ. ಹೀಗಿರುವಾಗ, ರಾಜಕೀಯ ಪ್ರಜ್ಞೆಯಿಲ್ಲದೆ ಪ್ರಜಾಪ್ರಭುತ್ವದ ಆಗುಹೋಗುಗಳ ಬಗೆಗೆ, ಸಂಸ್ಕೃತಿ, ಧರ್ಮ, ಭಾಷೆ, ಶಿಕ್ಷಣದಂತಹವುಗಳ ಬಗೆಗೆ ಮಾತನಾಡುವುದು ಸಾಧ್ಯವೇ ಇಲ್ಲ. ಇತ್ತೀಚಿನ ದಿನಗಳಲ್ಲಿ ಸಂವಿಧಾನದ ರಕ್ಷಣೆ, ಪ್ರಜಾಪ್ರಭುತ್ವದ ಉಳಿವು, ಒಕ್ಕೂಟ ವ್ಯವಸ್ಥೆಯ ಸಂರಕ್ಷಣೆ ಬಗ್ಗೆ ಕೂಗುಗಳೇಳುತ್ತಿವೆ. ಈ ಕೂಗುಗಳ ಹಿಂದಿರುವ ಆತಂಕ ಯಾವುದು? ಸ್ಥಿತಿ ಹೀಗಿರುವಾಗ ಭಾಷೆಯ ಕುರಿತು, ಶಿಕ್ಷಣ ನೀತಿಯ ಕುರಿತು ರಾಜಕೀಯವನ್ನು ಮರೆತು ಮಾತನಾಡಬೇಕು ಎನ್ನುವ ಆಲೋಚನೆಯೇ ಅಪ್ರಬುದ್ಧತೆಯಿಂದ ಅಥವಾ ಅಧಿಕಾರಪ್ರೀತಿಯಿಂದ ಆದ ಆತ್ಮದ್ರೋಹದ ನಡೆ. ಒಕ್ಕೂಟ ವಿರೋಧಿ ನಡೆ.

ಇನ್ನು ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ 2020ರ ರಾಷ್ಟ್ರೀಯ ಶಿಕ್ಷಣ ನೀತಿಯು (ಪರಿಷ್ಕರಣೆಯನ್ನು ಒಳಗೊಂಡ) ಮಾಧ್ಯಮದ ಬಗೆಗೆ ಹೇಳಿರುವ ನೀತಿ ಸೂತ್ರ ಹೀಗಿದೆ: 'ಎಲ್ಲೆಲ್ಲಿ ಸಾಧ್ಯವೋ ಅಲ್ಲಿ, ಕನಿಷ್ಠ ಐದನೇ ತರಗತಿಯವರೆಗೆ, ಸಾಧ್ಯವಾದರೆ 8ನೇ ತರಗತಿಯವರೆಗೆ ಅಥವಾ ಇನ್ನೂ ಮುಂದಕ್ಕೂ ಶಿಕ್ಷಣದ ಮಾಧ್ಯಮವು ಕಲಿಯುವವರ ಮನೆಮಾತು, ಮಾತೃಭಾಷೆ, ಸ್ಥಳೀಯ ಭಾಷೆ, ಪ್ರಾದೇಶಿಕ ಭಾಷೆ ಆಗಿರತಕ್ಕದ್ದು'. ಈ ಸೂತ್ರವು ಯಾರು ಹೇಗೆ ಬೇಕಾದರೂ ವ್ಯಾಖ್ಯಾನಿಸಿಕೊಳ್ಳಬಹುದಾದ, ಖಚಿತತೆ ಇಲ್ಲದ ಮಾತು.

ಏಕೆಂದರೆ, ಮಾತೃಭಾಷೆ, ಮನೆಮಾತು, ಸ್ಥಳೀಯ ಭಾಷೆ, ಪ್ರಾದೇಶಿಕ ಭಾಷೆ ಇವೆಲ್ಲವೂ ಒಂದೇ ಅಲ್ಲ. ಇವನ್ನು ಭಿನ್ನ ನೆಲೆಯಲ್ಲಿ ನಿಂತು ಯಾರು ಬೇಕಾದರೂ ಯಾವುದರ ಬಗೆಗೂ ಮಾತನಾಡಬಹುದು, ಆಯ್ಕೆ ಮಾಡಿಕೊಳ್ಳಬಹುದು. ಹೀಗೆ ಇವೆಲ್ಲವನ್ನೂ ಒಟ್ಟಿಗೆ ಸೇರಿಸಿ ಗೊಂದಲ ಸೃಷ್ಟಿಸಿ, ತಿಪ್ಪೆ ಸಾರಿಸುವ ಅಥವಾ ತುಟಿಗೆ ತುಪ್ಪ ಹಚ್ಚುವ ನೀತಿ ಇದರ ಆಂತರ್ಯವಾಗಿದೆ. ಇದು ರಾಜ್ಯ ಭಾಷೆಗಳಿಗೆ ಮಾಡುವ ದ್ರೋಹವೇ ಆಗಿದೆ. ಮಾತೃಭಾಷೆ, ಪರಿಸರ ಭಾಷೆ, ರಾಜ್ಯ ಭಾಷೆಯ ಪ್ರಶ್ನೆ ಬಂದಾಗ ನ್ಯಾಯಾಲಯಗಳು ಎತ್ತಿ ಹಿಡಿಯುವುದು ಮಾತೃಭಾಷೆಯನ್ನು ಹಾಗೂ ಪೋಷಕರ ಆಯ್ಕೆಯನ್ನು. ಈಗಾಗಲೇ ಇಂಥ ಮಾದರಿಯ ತೀರ್ಪುಗಳು ನಮ್ಮ ಮುಂದಿವೆ. ಈ ಮಾದರಿಗಳನ್ನು ಮುಂದೊಡ್ಡುತ್ತಲೇ ಖಾಸಗಿ ಶಿಕ್ಷಣ ಸಂಸ್ಥೆಯವರು ತ್ರಿಭಾಷಾ ನೀತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಮತ್ತು ರಾಜ್ಯಭಾಷೆಯಾದ ಕನ್ನಡವನ್ನು ಕಡೆಗಣಿಸುತ್ತಿದ್ದಾರೆ.

'ಮಕ್ಕಳು ಕಲಿಯುವ ಮೂರು ಭಾಷೆಗಳು ರಾಜ್ಯ, ಪ್ರದೇಶ ಮತ್ತು ವಿದ್ಯಾರ್ಥಿಗಳ ಆಯ್ಕೆಗೆ ಬಿಟ್ಟಿದ್ದು. ಈ ಮೂರರಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳಾಗಿರಬೇಕು' ಎಂಬ ರಾಷ್ಟ್ರೀಯ ಶಿಕ್ಷಣ ನೀತಿಯ ಭಾಷಾ ಸೂತ್ರವೇ ಅವರ ವಾದ ಸಮರ್ಥನೆಗೆ ಪುಷ್ಟಿ ನೀಡುತ್ತದೆ. ಹಿಂದಿ, ಸಂಸ್ಕೃತವನ್ನು ಬಿಟ್ಟು ಬೇರೆ ಯಾವ ರಾಜ್ಯ ಭಾಷೆಯೂ ಆ ಭಾರತೀಯ ಭಾಷೆಗಳಲ್ಲಿ ಸ್ಥಾನ ಪಡೆಯದಿರುವುದು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಣ್ಣಿಗೆ ಹೊಡೆಯುವ ಸತ್ಯವಾಗಿದೆ.

ಈ ಎಲ್ಲ ಕಾರಣಗಳ ಹಿನ್ನೆಲೆಯನ್ನು ಅರಿತಲ್ಲದೆ ಭಾಷೆ ಕಲಿಯುವ ಬಗ್ಗೆ, ಶಿಕ್ಷಣದಲ್ಲಿ ಭಾಷಾ ನೀತಿಯನ್ನು ಹಕ್ಕಾಗಿ ಪ್ರತಿಪಾದಿಸುವುದರ ಬಗ್ಗೆ ಮಾತನಾಡಲಾಗದು. ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲ ಭಾಷೆಗಳನ್ನೂ ಸಮಾನವಾಗಿ ಗೌರವಿಸಿರುವ ನೀತಿ ಇರುವುದರಿಂದಲೇ ಯಾವುದೇ ಒಂದು ಭಾಷೆಯನ್ನು ರಾಷ್ಟ್ರಭಾಷೆ ಎಂದು ಹೆಸರಿಸಿಲ್ಲ. ಎಲ್ಲ ಭಾಷೆಗಳನ್ನೂ ರಾಷ್ಟ್ರೀಯ ಭಾಷೆಗಳೆಂದು ಕರೆಯಲಾಗಿದೆ. ಆದ್ದರಿಂದ ಭಾಷೆಯ ಮುಖೇನವಾಗಿ ದಬ್ಬಾಳಿಕೆ ಮಾಡುವ ಯಾವುದೇ ಆಕ್ರಮಣಕಾರಿ ನೀತಿಯನ್ನು ಒಪ್ಪಲಾಗದು.



ರಾಜ್ಯ ಸರ್ಕಾರಗಳು ರಾಜ್ಯದ ಅಧಿಕೃತ ಭಾಷೆಯನ್ನೇ ಪ್ರಥಮ ಭಾಷೆಯಾಗಿ ಕಲಿಸಬೇಕು. ಸರ್ಕಾರ ರೂಪಿಸುವ ಪಠ್ಯಗಳನ್ನೇ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಕೇಂದ್ರೀಯ ಶಾಲೆಗಳಲ್ಲಿ ಬೋಧಿಸುವ ನಿಯಮ ಜಾರಿಯಾಗಬೇಕು. ಇದು ಕರ್ನಾಟಕಕ್ಕೆ ಮಾತ್ರವಲ್ಲ ಎಲ್ಲ ಪ್ರಾದೇಶಿಕ ಸರ್ಕಾರಗಳ ಪ್ರಾದೇಶಿಕ ಶಿಕ್ಷಣ ನೀತಿಯಾಗಬೇಕು. ಆಗ ಮಾತ್ರ ರಾಜ್ಯಭಾಷೆಗಳು ಉಳಿಯುತ್ತವೆ, ಬೆಳೆಯುತ್ತವೆ, ಪ್ರಾದೇಶಿಕ ಬಹುಸಂಸ್ಕೃತಿಗಳ ಸಂರಕ್ಷಣೆ ಸಾಧ್ಯವಾಗುತ್ತದೆ, ಬಹುತ್ವ ಭಾರತದ ಒಕ್ಕೂಟ ವ್ಯವಸ್ಥೆ ಉಳಿಯುತ್ತದೆ.

ಚುರುಮುರಿ



ಸ್ವಆರೈಕೆ ಸಮಯ

• ಸುಮಂಗಲಾ

'ಇಷ್ಟ್ ಲಗೂನೆ ಎದಕ್ಕೆ ಎದ್ದೀ? ಇನ್ನೊಂದು ಸ್ವಲ್ಪ ಹೊತ್ತು ಮಕ್ಕೋ ಹೋಗು' ಎಂದು ಬೆಕ್ಕಣ್ಣ ಅಗದಿ ಭಯಂಕರ ಕಾಳಜಿಯಿಂದ ಹೇಳಿತು.

'ಎಷ್ಟಕೊಂದು ದಗದ ಐತಿ, ನೀ ಮಾಡತೀಯೇನ್' ಎಂದು ರೇಗಿ ಮನೆಗೆಲಸ ಶುರು ಮಾಡಿದೆ.

'ವಾಕಿಂಗ್ ಹೋಗು ಅಥವಾ ವ್ಯಾಯಾಮ ಮಾಡು ಅಥವಾ ಆರಾಮಾಗಿ ತುಸು ಹೊತ್ತು ಕುಂತು ಚಾ ಕುಡಿತಾ ಪೇಪರು ಓದು' ಬೆಕ್ಕಣ್ಣನ ಕಾಳಜಿ.

'ಏನಲೇ ಬೆಳಗ್ಗೆನೇ ಇಷ್ಟ್ ಬೆಣ್ಣೆ ಹಚ್ಚಲಾಕೆ ಹತ್ತೀ?' ಎಂದೆ.

'ಮಂದಿ ನಿದ್ದೆ, ವ್ಯಾಯಾಮ ಇತ್ಯಾದಿ ಸ್ವಆರೈಕೆಗೆ ಕೊಡೋ ಸಮಯ ಈಗ ಐದು ವರ್ಸದಾಗೆ ಕಡಿಮೆಯಾಗೈತೆ ಅಂತ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ ಸಮೀಕ್ಷೆ ಹೇಳೈತೆ. ಸ್ವಆರೈಕೆ ಮಾಡಿಕೋಬೇಕವಾ' ಬೆಕ್ಕಣ್ಣ ವಿವರಿಸಿತು.

'ಈಗ ಐದು ವರ್ಸದಾಗೆ ಮಂದಿ ಮೊಬೈಲು, ಕಂಪ್ಯೂಟರ್, ಟೀವಿ ನೋಡದು ಅಂತ ಸ್ಕ್ರೀನ್ ಟೈಮೂ ಹೆಚ್ಚಾಗೈತಿ. ಸ್ಕ್ರೀನ್ ನೋಡತಾ ಕೂತವರಿಗೆ ಸ್ವಆರೈಕೆ ಎಲ್ಲಿ ನೆನಪಿರತೈತಿ' ಎಂದೆ.

'ನಾನಂತೂ ದಿನಕ್ಕೆ ಹದಿನೆಂಟು ತಾಸು ನಿದ್ದೆ ಮಾಡತೀನಿ. ಎಣ್ಣೇಲಿ ಕರಿದಿದ್ದು, ಹಾಲುಮೊಳು ಏನೂ ತಿನ್ನಂಗಿಲ್ಲ. ಇಲಿ, ಹೆಗ್ಗಣಗಳ ಹಿಂದೆ ಓಡಿ ಮಸ್ತ್ ರನ್ನಿಂಗ್ ರೇಸೂ ಮಾಡತೀನಿ. ಹಿಂಗಾಗಿ ನನಗ ಚೂರೂ ಬೊಜ್ಜು ಇಲ್ಲ' ಬೆಕ್ಕಣ್ಣ ಜಂಭದಿಂದ ಹೇಳಿತು.

'ಮೋದಿ ಮಾಮಾರು ಫ್ಯಾಟ್ ಚಾಲೆಂಜ್ ಮಾಡಿ, ಹತ್ತು ಜನ ಸೆಲೆಬ್ರಿಟಿಗಳನ್ನು ಹೆಸರಿಸಿ ಛಲೋ ಕೆಲಸ ಮಾಡ್ಯಾರೆ. ಖರೇ ಅಂದ್ರೆ ನಿನ್ನನ್ನೂ ಹೆಸರಿಸಬೇಕಿತ್ತು ನೋಡಲೇ' ಎಂದು ರೇಗಿಸಿದೆ.

'ಹೆಸರಿಸೋ ಅಗತ್ಯನೇ ಇಲ್ಲದೆ ಕೆಲಸ ಮಾಡಾಂವ ನಾ. ಒಂದ್ ಕಡಿಗೆ, ವಾರಕ್ಕೆ ಎಪ್ಪತ್ತು ತಾಸು, ನೂರು ತಾಸು ದುಡೀರಿ ಅಂತಾರೆ. ಇನ್ನೊಂದು ಕಡಿಗೆ, ಸ್ವಆರೈಕೆ ಮಾಡಿಕೋರಿ, ಬೊಜ್ಜು ಕರಗಿಸಿ ಅಂತಾರೆ. ಮಂದಿ ಈ ಯಾವ ಉಸಾಬರೀನೇ ಬೇಡ ಅಂತ ಬಿಡುವಿದ್ದಾಗ ಸ್ಕ್ರೀನ್ ನೋಡತಾ ಕುಂದರತಾರೆ!' ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ದಿನದ ಟ್ವೀಟ್


ಅಜಾಗರೂಕ ಚಾಲನೆ: ಕಠಿಣ ಕ್ರಮ ಜರುಗಿಸಿ



ಬೆಂಗಳೂರಿನಲ್ಲಿ ಎರಡು ಬಿಎಂಟಿಸಿ ಬಸ್ಸುಗಳ ನಡುವೆ ಸಿಲುಕಿ ಆಟೊವೊಂದು ನಜ್ಜುಗುಜ್ಜಾಗಿದೆ. ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ನಮ್ಮ ದೇಶದಲ್ಲಿ ರಸ್ತೆ ಸುರಕ್ಷತೆ ಎಂಬುದು ಮಿಥ್ಯೆಯಾಗಿದೆ. ರಸ್ತೆಗಳು ವಾಹನ ಚಾಲನೆಗೆ ಅಪಾಯಕಾರಿಯಾಗಿ ಪರಿಣಮಿಸಿವೆ.

ವಿಜೆ ಶೆಟ್ಟಿ, ಎಂಜಿನಿಯರ್

ಕಿಡಿನುಡಿ



ಕಲಾವಿದರು ನಿಮ್ಮ ಪಕ್ಷದ ಕಾರ್ಯಕರ್ತರಲ್ಲ. ನಿಮ್ಮ ಪಕ್ಷದ ಕಾರ್ಯಕರ್ತರನ್ನು ನಡೆಸಿಕೊಂಡ ರೀತಿಯಲ್ಲಿ ಕಲಾವಿದರನ್ನು ನಡೆಸಿಕೊಳ್ಳಬೇಡಿ. ಕಲಾವಿದರಿಗೆ ಗೌರವ ಕೊಡುವುದನ್ನು ಕಲಿಯಿರಿ.

(ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭಕ್ಕೆ ಚಿತ್ರೋದ್ಯಮದ ಮಂದಿ ಹೆಚ್ಚಿನ ಸಂಖ್ಯೆಯಲ್ಲಿ ಬಾರದೇ ಇದ್ದುದಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಟುವಾಗಿ ಮಾತನಾಡಿರುವುದಕ್ಕೆ ಪ್ರತಿಕ್ರಿಯೆ)

ಆರ್.ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 3-3-2000

• **ಆರ್‌ಎಸ್‌ಎಸ್ ವಿವಾದ ಪರಿಹರಿಸಿ ಪ್ರಧಾನಿಗೆ ಬಾಲಯೋಗಿ ಸಲಹೆ**

ನವದೆಹಲಿ, ಮಾರ್ಚ್ 2 (ಪಿಟಿಐ)– ಗುಜರಾತ್ ಸರ್ಕಾರ ತನ್ನ ನೌಕರರಿಗೆ ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಮತಿ ನೀಡಿರುವ ವಿಷಯ ಆರನೇ ದಿನವಾದ ಇಂದೂ ಸಂಸತ್ತಿನಲ್ಲಿ ಪ್ರತಿಧ್ವನಿಸಿ ಕೋಲಾಹಲ ಸೃಷ್ಟಿಸಿದ್ದರಿಂದ ಚಿಂತೆಗೊಳಗಾಗಿರುವ ಲೋಕಸಭೆ ಅಧ್ಯಕ್ಷ ಜಿ.ಎಂ.ಸಿ.ಬಾಲಯೋಗಿ, ಪ್ರಧಾನಿ ವಾಜಪೇಯಿ ಅವರನ್ನು ಭೇಟಿ ಮಾಡಿ, ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಮುಂದಾಗುವಂತೆ ಸಲಹೆ ಮಾಡಿದರು.

ಆದರೆ ವಿವಾದಾತ್ಮಕ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಗುಜರಾತ್ ಸರ್ಕಾರಕ್ಕೆ ಸಂವಿಧಾನಾತ್ಮಕ ನಿರ್ದೇಶನ ನೀಡಲು ಕೇಂದ್ರ ನಿರಾಕರಿಸಿದೆ.

• **ನೆರೆ ರಾಜ್ಯಗಳಿಂದ ಬರುತ್ತಿರುವ ಕೊಳಕು ನೋಟು**

ಬೆಂಗಳೂರು, ಮಾರ್ಚ್ 2– ಚಲಾವಣೆಯಲ್ಲಿರುವ ಹರಿದ ಹಳೆಯ ನೋಟುಗಳ ಬದಲಿಗೆ ಹೊಸ ನೋಟುಗಳನ್ನು ನೀಡುವ ಕಾರ್ಯವನ್ನು ಆರ್‌ಬಿಐ ಕಳೆದ ಒಂದು ವರ್ಷದಿಂದ ಚುರುಕುಗೊಳಿಸಿದ್ದರೂ, ಸಾರ್ವಜನಿಕರ 'ಅಸಹಕಾರ' ಹಾಗೂ ನೆರೆ ರಾಜ್ಯಗಳಿಂದ ಹಳೆಯ ನೋಟುಗಳು ರಾಜ್ಯಕ್ಕೆ ಹರಿದುಬರುತ್ತಿರುವ ಕಾರಣದಿಂದ ಹಳೆಯ ನೋಟುಗಳು ಇನ್ನೂ ಚಲಾವಣೆಯಲ್ಲಿವೆ.

50 ವರ್ಷಗಳ ಹಿಂದೆ

ಸೋಮವಾರ, 3-3-1975

• **ಪ್ರಧಾನಿ ಸೂಚನೆಯಂತೆ ಕೇಂದ್ರ ಸಚಿವ ಧಾರಿಯಾ ರಾಜೀನಾಮೆ**

ನವದೆಹಲಿ, ಮಾರ್ಚ್ 2– 'ಯಂಗ್‌ಟರ್ಕ್' ಗುಂಪಿನ ನಾಯಕರಲ್ಲೊಬ್ಬರಾದ ಕೇಂದ್ರ ಕಾಮಗಾರಿ ಮತ್ತು ವಸತಿ ಖಾತೆ ರಾಜ್ಯ ಸಚಿವ ಮೋಹನ್ ಧಾರಿಯಾ ಅವರು ಇಂದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಧಾರಿಯಾ ಅವರು ಸಾರ್ವಜನಿಕ ಸಭೆಗಳಲ್ಲಿ ಇತ್ತೀಚೆಗೆ ಮಾಡಿದ ಭಾಷಣಗಳು, ಮುಖ್ಯವಾಗಿ ಜಯಪ್ರಕಾಶ ನಾರಾಯಣ್ ಅವರ ಚಳವಳಿಯ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು ಸರ್ಕಾರದ ನೀತಿಗೆ ಅನುಗುಣವಾಗಿ ಇಲ್ಲದಿದ್ದುದೇ ಅವರನ್ನು ಪ್ರಧಾನಿಯವರು ವಜಾ ಮಾಡಲು ಕಾರಣವೆಂಬುದು ಸುಸ್ಪಷ್ಟ.

• **ಬೆಳೆದದ್ದು ಬೇಕಾದಷ್ಟು ಆದರೂ ದುರ್ಭಿಕ್ಷ?**

ಬೆಂಗಳೂರು, ಮಾರ್ಚ್ 2– ರಾಜ್ಯದ ಅಗತ್ಯಕ್ಕಿಂತಲೂ ಮೀರಿ 1974–75ನೇ ಸಾಲಿನಲ್ಲಿ ಆಹಾರ ಉತ್ಪಾದನೆಯಾದರೂ ಈ ಅಭಾವ ಏಕೆ?

ಲಾಭಬಡುಕರು, ಕಾಳಸಂತೆಕೋರರು ಮತ್ತು ಕಳ್ಳದಾಸ್ತಾನುಗಾರರು ಸೃಷ್ಟಿಸಿರುವ 'ಕೃತಕ ಅಭಾವ' ಎನ್ನುತ್ತಾರೆ ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎನ್.ಪಿ.ಪಾಟೀಲ್ ಅವರು.

ರಾಜ್ಯವು 65 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನಾ ಗುರಿ ಮುಟ್ಟಿ ಸ್ವಾವಲಂಬನೆ ಸಾಧಿಸಿದೆ. ಉತ್ಪಾದನೆಯು ರಾಜ್ಯದ ಅವಶ್ಯಕತೆಗಿಂತ ಹೆಚ್ಚಿನ ಪ್ರಮಾಣದ್ದಾಗಿದೆ ಎಂಬುದು ಅವರ ಅಭಿಪ್ರಾಯ.

ಸಂಗತ

ತೆರೆಯಬೇಕಿದೆ ಕಥಾ ಕಣಜ

ಕಥೆಗಳ ಮೂಲಕ ಮಕ್ಕಳಲ್ಲಿ ಬದುಕಿನ ಮೌಲ್ಯಗಳನ್ನು ಬಿತ್ತುವುದು ಉತ್ತಮ ಪರಿಕಲ್ಪನೆ

• ರಾಜಕುಮಾರ ಕುಲಕರ್ಣಿ

ಶಾಲೆಗಳಲ್ಲಿ ಮಕ್ಕಳಿಗೆ ಕಥೆಗಳನ್ನು ಹೇಳಲು ಅನುಕೂಲ ಆಗುವಂತೆ ಸಭಾಭವನಗಳನ್ನು ಕಟ್ಟಿಸಲು ಧನಸಹಾಯ ನೀಡಬೇಕೆಂದು ಸುಧಾಮೂರ್ತಿ ಅವರು ರಾಜ್ಯಸಭೆಯಲ್ಲಿ ಸರ್ಕಾರವನ್ನು ಒತ್ತಾಯಿಸಿದ್ದು ಪತ್ರಿಕೆಗಳಲ್ಲಿ ಪ್ರಕಟವಾಗಿ ಗಮನ ಸೆಳೆಯಿತು. ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿಸಲು, ಅವರಿಗೆ ಬದುಕಿನ ಮೌಲ್ಯಗಳನ್ನು ಕಥೆಗಳ ಮೂಲಕ ಬೋಧಿಸುವುದು ಅಗತ್ಯ ಎಂದು ಅವರು ಹೇಳಿದ್ದಾರೆ. ಮನೆಗಳಲ್ಲಿ ಅಜ್ಜ– ಅಜ್ಜಿಯಿಂದ ಮತ್ತು ಅಪ್ಪ– ಅಮ್ಮನಿಂದ ಕಥೆ ಕೇಳುವ ವಾತಾವರಣ ಇಲ್ಲದಿರುವ ಈ ದಿನಗಳಲ್ಲಿ, ಸುಧಾಮೂರ್ತಿ ಅವರ ಚಿಂತನೆಯು ಭರವಸೆಯ ಕಿರಣದಂತೆ ಗೋಚರಿಸುತ್ತದೆ.


ವಿಭಕ್ತ ಕುಟುಂಬಗಳ ಈ ಕಾಲಘಟ್ಟದಲ್ಲಿ, ಮಕ್ಕಳಿಗೆ ಮನೆಯಲ್ಲಿ ಕಥೆಗಳನ್ನು ಹೇಳುವ ಹಿರಿಯರು ಇಲ್ಲವಾಗಿದ್ದಾರೆ. ಅಜ್ಜ– ಅಜ್ಜಿ ಹೇಳುವ ಕಥೆಗಳ ಮೂಲಕ ಬದುಕಿನ ಮೌಲ್ಯಗಳನ್ನು ಕಲಿಯಬೇಕಾದ ಮಕ್ಕಳು ಈಗ ಮೊಬೈಲ್ ಫೋನ್ ವ್ಯಸನಿಗಳಾಗಿದ್ದಾರೆ. ಮಕ್ಕಳ ಹಟ ಮತ್ತು ತುಂಟಾಟವನ್ನು ನಿಯಂತ್ರಿಸಲು ಪಾಲಕರೇ ಮಕ್ಕಳ ಕೈಗೆ ಫೋನ್ ಕೊಡುವುದನ್ನು ರೂಢಿಸಿಕೊಂಡಿದ್ದಾರೆ. ಧಾವಂತದ ಬದುಕಿನಲ್ಲಿ ಮಕ್ಕಳಿಗೆ ಕಥೆ ಹೇಳುವಷ್ಟು ವ್ಯವಧಾನ ಪಾಲಕರಲ್ಲಿ ಇಲ್ಲವಾಗಿದೆ.

ವಸತಿಶಾಲೆಯಲ್ಲಿ ತಮ್ಮ ಮಕ್ಕಳನ್ನು ಓದಿಸುತ್ತಿರುವ ನನ್ನ ಪರಿಚಿತರೊಬ್ಬರು ಅಲ್ಲಿನ ಮಕ್ಕಳ ಗುಣ ಸ್ವಭಾವವನ್ನು ಹೀಗೆ ವಿಶ್ಲೇಷಿಸುತ್ತಾರೆ- 'ಆ ಶಾಲೆಯಲ್ಲಿ ಪ್ರತಿ ತಿಂಗಳು ಕಿರುಪರೀಕ್ಷೆ ನಡೆಸಲಾಗುತ್ತದೆ. ಆಗ ಕಡಿಮೆ ಅಂಕಗಳನ್ನು ಪಡೆದ ಮಕ್ಕಳು ವಿಚಿತ್ರವಾಗಿ ವರ್ತಿಸುತ್ತಾರೆ. ಹೆಚ್ಚು ಅಂಕಗಳನ್ನು ಪಡೆದ ತಮ್ಮ ಸಹಪಾಠಿಗಳನ್ನು ಹಿಂಸಿಸುವುದು, ಅವರ ಪುಸ್ತಕಗಳನ್ನು ಹರಿದುಹಾಕುವುದು, ಅಗತ್ಯದ ವಸ್ತುಗಳನ್ನು ಬಚ್ಚಿಡುವುದು, ಮುನಿಸಿಕೊಳ್ಳುವಂತಹ ದುರ್ವರ್ತನೆಗಳನ್ನು ತೋರುತ್ತಾರೆ'. ಜೀವನದ ಮೌಲ್ಯಗಳನ್ನು ಕಲಿಸದೇ ಹೋದರೆ ಮಕ್ಕಳಲ್ಲಿ ಇಂತಹ ದುರ್ನಡತೆಗಳು ಕಾಣಿಸಿಕೊಳ್ಳುತ್ತವೆ. ಮಕ್ಕಳಿಗೆ ಮೌಲ್ಯಗಳನ್ನು ಪರಿಚಯಿಸಲು ಕಥೆ ಅತ್ಯಂತ ಸಶಕ್ತ ಮಾಧ್ಯಮ. ಕನ್ನಡದ ಸಮೃದ್ಧವಾದ ಕಥಾಸಾಹಿತ್ಯವನ್ನು ಬಳಸಿಕೊಂಡು ಮೌಲ್ಯಗಳ ದರ್ಶನ ಮಾಡಿಸುವುದು ಇಂದಿನ ತುರ್ತು.

ಕನ್ನಡ ಭಾಷೆಯಲ್ಲಿ ಮಕ್ಕಳ ಪುಸ್ತಕಗಳು ಸಮೃದ್ಧವಾಗಿ ಪ್ರಕಟಗೊಂಡಿವೆ. ಎಂ.ಎಸ್.ಪುಟ್ಟಣ್ಣನವರ 'ನೀತಿ ಚಿಂತಾಮಣಿ', ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಮತ್ತು 'ಮೋಡಣ್ಣನ ತಮ್ಮ' ಮಕ್ಕಳ ಕೃತಿಗಳಾಗಿವೆ. ಪಂಜೆ ಮಂಗೇಶರಾಯರು, ಶಿವರಾಮ ಕಾರಂತ, ಜಿ.ಪಿ. ರಾಜರತ್ನಂ, ನಾ.ಕಸ್ತೂರಿ, ಚಿ.ಸದಾಶಿವಯ್ಯ, ಸಿಸು ಸಂಗಮೇಶ, ಜಯವಂತ ಕಾಡದೇವರ, ಕಂಚ್ಯಾಣಿ ಶರಣಪ್ಪ ಕನ್ನಡ ಭಾಷೆಯಲ್ಲಿ ಮಕ್ಕಳ ಸಾಹಿತ್ಯವನ್ನು ಸಮೃದ್ಧಗೊಳಿಸಿದವರಲ್ಲಿ ಪ್ರಮುಖರು. ಎ.ಆರ್. ಕೃಷ್ಣಶಾಸ್ತ್ರಿ ಅವರ 'ನಿರ್ಮಲ ಭಾರತಿ' ಮಕ್ಕಳ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆ ಎಂದು ಪರಿಗಣಿತವಾಗಿದೆ. ಅನುಪಮಾ ನಿರಂಜನ ಅವರ 'ದಿನಕ್ಕೊಂದು ಕಥೆ' ಮಕ್ಕಳಿಗಾಗಿ ಬರೆದ 365 ಕಥೆಗಳ ಸಂಪುಟ. ಶಿವರಾಮ ಕಾರಂತರು 'ಬಾಲ ಪ್ರಪಂಚ'ದ ಮೂಲಕ ಮಕ್ಕಳಿಗಾಗಿ ವಿಜ್ಞಾನಲೋಕದ ವಿಸ್ಮಯಗಳನ್ನು ಮನೆ ಮನೆಗೂ ಮುಟ್ಟಿಸಿದರು.

ಈ ಹಿಂದೆ ಶಾಲೆಗಳಲ್ಲಿ ಭಾಷಾ ವಿಷಯಗಳನ್ನು ಬೋಧಿಸುವಾಗ ತರಗತಿಗೆ ಅಕ್ಷರಶಃ ರಂಗಭೂಮಿಯ ಕಳೆ ಪ್ರಾಪ್ತವಾಗುತ್ತಿತ್ತು. ಶಿಕ್ಷಕರು ಪಾತ್ರಧಾರಿಗಳಾಗಿ ಸನ್ನಿವೇಶವನ್ನು ಸೃಷ್ಟಿಸಿ ತೋರಿಸುತ್ತಿದ್ದರು. ಕವಿತೆ ಹಾಡಾಗುತ್ತಿತ್ತು, ಕಥೆ ವಾಚನವಾಗುತ್ತಿತ್ತು. ಇರುವೆಯೊಂದು ಪಾರಿವಾಳದ ಜೀವ ಉಳಿಸಿದ್ದು, ಶಿಬಿ ಚಕ್ರವರ್ತಿಯ ತ್ಯಾಗ, ಪುಣ್ಯಕೋಟಿಯ ಪ್ರಾಮಾಣಿಕತೆ, ಗಾಂಧೀಜಿಯ ಸತ್ಯಸಂಧ ನಡೆ... ಇಂತಹ ಕಥೆಗಳನ್ನೆಲ್ಲ ನೀತಿ ಶಿಕ್ಷಣದ ಮೂಲಕ ಬೋಧಿಸಲಾಗುತ್ತಿತ್ತು.

ಈಗ ಕಾಲ ಬದಲಾಗಿದೆ. ವಿವಿಧ ಕೆಲಸಗಳ ಒತ್ತಡಗಳಿಂದಾಗಿ ಶಿಕ್ಷಕರಿಗೆ ಪಾಠ ಮಾಡಲು ಸಮಯವೇ ಇಲ್ಲದಂತಾಗಿದೆ. ಇಂಥ ಸನ್ನಿವೇಶದಲ್ಲಿ ಮಕ್ಕಳಿಗೆ ಕಥೆಗಳನ್ನು ಹೇಳುವ ಮನಃಸ್ಥಿತಿಯನ್ನು ಶಿಕ್ಷಕರು ಮೈಗೂಡಿಸಿಕೊಳ್ಳುವುದು ಅಸಾಧ್ಯದ ಮಾತು. ಶಿಕ್ಷಕರನ್ನು ಬೋಧನೇತರ ಕೆಲಸಗಳಿಂದ ಬಿಡುಗಡೆಗೊಳಿಸಿ ಅವರು ಪೂರ್ಣಪ್ರಮಾಣದಲ್ಲಿ ಬೋಧನೆಯಲ್ಲಿ ತೊಡಗಿಸಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗಬೇಕು.



ಜಿ.ಪಿ.ರಾಜರತ್ನಂ ಕೆಲಸ ಇಲ್ಲದೆ ನಿರುದ್ಯೋಗಿಯಾಗಿದ್ದಾಗ ಕುಟುಂಬ ನಿರ್ವಹಣೆಗಾಗಿ ಇಲಾಖೆಯೊಂದರ ತಾತ್ಕಾಲಿಕ ಹುದ್ದೆಗೆ ಸಂದರ್ಶನಕ್ಕೆ ಹೋಗುತ್ತಾರೆ. ಸಂದರ್ಶನ ಸಮಿತಿಯಲ್ಲಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು 'ಇದು ನಿಮಗೆ ತಕ್ಕುದಾದ ಹುದ್ದೆಯಲ್ಲ. ಈ ಕೆಲಸದಿಂದ ನಿಮ್ಮ ಬರವಣಿಗೆಗೆ ತೊಡಕಾಗುತ್ತದೆ. ಶಿಕ್ಷಕ ಹುದ್ದೆ ದೊರೆಯುವವರೆಗೆ ನಿಮ್ಮ ಕುಟುಂಬ ನಿರ್ವಹಣೆಗೆ ಅಗತ್ಯವಾದ ಹಣ ಪ್ರತಿ ತಿಂಗಳು ನಿಮ್ಮ ಮನೆಗೆ ತಲುಪುವುದು. ನೀವು ಬರವಣಿಗೆಯಲ್ಲಿ ತೊಡಗಿಕೊಳ್ಳಿ' ಎಂದು ವಾಪಸ್ ಕಳಿಸುತ್ತಾರೆ. ಇಂದು ಶಿಕ್ಷಕರಿಗೆ ಇಂಥ ಪ್ರೋತ್ಸಾಹ ಮತ್ತು ಸಹಕಾರದ ಅಗತ್ಯವಿದೆ.

ಕಥೆಗಳ ಮೂಲಕ ಬದುಕಿನ ಮೌಲ್ಯಗಳನ್ನು ಮಕ್ಕಳಲ್ಲಿ ಬಿತ್ತುವ ದಿಸೆಯಲ್ಲಿ ಅಗತ್ಯದ ಕಥಾಪುಸ್ತಕಗಳು ಶಾಲೆಗಳಿಗೆ ಪೂರೈಕೆಯಾಗಬೇಕು. ಶಿಕ್ಷಕರಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸಲು ಮತ್ತು ತರಬೇತಿ ನೀಡಲು ಕ್ಲಸ್ಟರ್ ಹಂತದಲ್ಲಿ ಕಥಾಕಮ್ಮಟಗಳನ್ನು ಆಯೋಜಿಸಬೇಕು. ಸ್ಥಳೀಯ ಲೇಖಕರು ಮತ್ತು ಸಾಹಿತ್ಯಾಸಕ್ತರನ್ನು ಸಂಪನ್ಮೂಲ ವ್ಯಕ್ತಿಗಳೆಂದು ನೇಮಕ ಮಾಡಬೇಕು. ಒಟ್ಟಾರೆ, ಮಕ್ಕಳಲ್ಲಿ ಕಥೆಗಳನ್ನು ಆಲಿಸುವ ಮತ್ತು ಓದುವ ಹವ್ಯಾಸ ಬೆಳೆಸಿ, ಆ ಮೂಲಕ ಅವರನ್ನು ಸಮಾಜದ ಉತ್ತಮ ನಾಗರಿಕರನ್ನಾಗಿ ರೂಪಿಸುವ ಜವಾಬ್ದಾರಿ ಶಿಕ್ಷಕರು ಹಾಗೂ ಪಾಲಕರ ಮೇಲಿದೆ.

ವಾಚಕರ ವಾಣಿ

ಟ್ಯಾಟೂ: ಬೇಕು ಮಾನದಂಡ

ಇಂದಿನ ಯುವಜನ ಮತ್ತು ಮಕ್ಕಳು ಟ್ಯಾಟೂ ಎಂಬ ಸಮೂಹಸನ್ನಿಗೆ ಒಳಗಾಗಿದ್ದು, ಇದಕ್ಕೆ ಬಳಸುವ ಶಾಹಿಯಲ್ಲಿ ಅಪಾಯಕಾರಿ ಭಾರಲೋಹಗಳು ಬಳಕೆಯಾಗುತ್ತಿವೆ ಎಂಬುದನ್ನು ತಿಳಿದು (ಪ್ರ.ವಾ., ಮಾರ್ಚ್ 2) ಗಾಬರಿಯಾಯಿತು. ಭವಿಷ್ಯದ ಸದೃಢ ಪ್ರಜೆಗಳು ಅನವಶ್ಯವಾಗಿ ಚರ್ಮರೋಗ ಹಾಗೂ ಸೋಂಕುಗಳಿಗೆ ತುತ್ತಾಗುವುದು ಆತಂಕಕಾರಿ. ಈ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರ ತಕ್ಷಣ ಮಾನದಂಡವೊಂದನ್ನು ರೂಪಿಸಿ ಇದನ್ನು ನಿಯಂತ್ರಿಸಬೇಕು. ಈ ಕುರಿತು ಜಾಗೃತಿ ಮೂಡಿಸುವ ಕೆಲಸ ಅವಶ್ಯವಾಗಿ ಆಗಬೇಕು.

ಮಹೇಶ ಪಿ., ಪುಟ್ಟೇಗೌಡನಹುಂಡಿ, ಚಾಮರಾಜನಗರ

ಟೀಕೆ ಪ್ರಜಾಪ್ರಭುತ್ವದ ಪರಿಭಾಷೆಗೆ ತಕ್ಕಂತಿರಲಿ

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಸಮಾರಂಭಕ್ಕೆ ಚಿತ್ರೋದ್ಯಮದವರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿಲ್ಲವೆಂದು ತೀವ್ರ ಬೇಸರದ ಮಾತುಗಳನ್ನಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಫೆ. 2). ಅವರು ಬೇಸರವನ್ನು ವ್ಯಕ್ತಪಡಿಸಲು ಸಕಾರಣಗಳಿರುವಂತೆ, ಅನೇಕರ ಗೈರುಹಾಜರಿಗೂ ಸಕಾರಣಗಳಿರಬಹುದು. ಚಿತ್ರೋದ್ಯಮದ ಬಹಳಷ್ಟು ಮಂದಿಗೆ ಕೊನೇ ಕ್ಷಣದಲ್ಲಿ ಆಹ್ವಾನಪತ್ರಿಕೆಗಳು ತಲುಪಿವೆ ಎಂಬುದರಿಂದ ಹಿಡಿದು ನಿರಾಸಕ್ತಿಗೆ ಇನ್ನೂ ಕೆಲವು ಕಾರಣಗಳಿರಬಹುದು.

ಇಷ್ಟಾದರೂ ಉಪಮುಖ್ಯಮಂತ್ರಿಯವರಿಗೆ ಬೇಸರದಿಂದ ಪ್ರತಿಕ್ರಿಯಿಸುವ ಹಕ್ಕು ಇದೆ. ಆದರೆ ಪ್ರತಿಕ್ರಿಯೆಗೆ ಸೂಕ್ತ ಭಾಷೆಯ ಅಗತ್ಯವೂ ಇದೆ. 'ಕಲೆ, ಸಿನಿಮಾದ ಮೂಲಕ ಸರ್ಕಾರದ ಆಚಾರ ವಿಚಾರಗಳನ್ನು ಪ್ರಚಾರ ಮಾಡುವುದು ನಿಮ್ಮ ಕರ್ತವ್ಯ' ಎನ್ನುವುದಾಗಲಿ, 'ಸರ್ಕಾರಕ್ಕೆ ಸಹಕಾರ ನೀಡದವರ ಚಿತ್ರಗಳ ಚಿತ್ರೀಕರಣಕ್ಕೆ, ಬಿಡುಗಡೆಗೆ ಅವಕಾಶ ನೀಡದೆ ಬಿಗಿ ಮಾಡಲು ತಿಳಿದಿದೆ' ಎಂದು ಹೇಳುವುದಾಗಲಿ ಪ್ರಜಾಪ್ರಭುತ್ವದ ಪರಿಭಾಷೆಯಲ್ಲ. ಸರ್ಕಾರದ ಉನ್ನತ ಸ್ಥಾನದಲ್ಲಿ ಇರುವವರು ತಮ್ಮ ಜೊತೆ ಕೈಜೋಡಿಸದವರ 'ಬೋಲ್ಟು ನಟ್ಟುಗಳನ್ನು ಬಿಗಿ ಮಾಡುವ' ಮಾತನಾಡುವುದು ಶೋಭೆ ತರುವುದಿಲ್ಲ. ಕಲೆಗಳ ಕ್ಷೇತ್ರವು ಬೋಲ್ಟು ನಟ್ಟುಗಳ ಉಗ್ರಾಣವಲ್ಲವಾದ್ದರಿಂದ ಬಿಗಿ ಮಾಡಲು ಬರುವುದಿಲ್ಲ ಎಂದು, ಸಾಂಸ್ಕೃತಿಕ ವಲಯಕ್ಕೆ ಉಚಿತವಾದ ಭಾಷೆಯ ಮೂಲಕ ಮನವರಿಕೆ ಮಾಡಬಯಸುತ್ತೇನೆ!

ಬರಗೂರು ರಾಮಚಂದ್ರಪ್ಪ, ಬೆಂಗಳೂರು

ಧಾವಂತ, ತಾ... ತಾ...!

ಹಿಮಾಚಲದಲ್ಲಿ
ಹಿಮ ಕುಸಿತ,
ರೈಲು ನಿಲ್ದಾಣದಲ್ಲಿ
ಕಾಲ್ತುಳಿತ,
ಮುಂದಿನ ವರ್ಷದಿಂದ
ರಾಜ್ಯಗಳ ಪಾಲು ಕಡಿತ?
ಪಾಪ, ಗುತ್ತಿಗೆದಾರರದು
ಅದೇ ಧಾವಂತ...
ಯಾವ ಪಕ್ಷ ಅಧಿಕಾರಕ್ಕೆ ಬಂದರೂ
ತಪ್ಪಲಿಲ್ಲವಂತೆ ತಾ... ತಾ...!

ಮ.ಗು.ಬಸವಣ್ಣ, ಮೈಸೂರು

ಕನ್ನಡದ ಬದ್ಧತೆಯತ್ತ ಮತ್ತೊಂದು ಹೆಜ್ಜೆ

ಕಚೇರಿಗಳು, ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿ ಕನಿಷ್ಠ ಶೇ 60ರಷ್ಟು ಕನ್ನಡ ಭಾಷೆ ಅಳವಡಿಕೆ ಅನುಷ್ಠಾನದ ಬೆನ್ನಲ್ಲೇ ಇದೀಗ ರಾಜ್ಯದೊಳಗೆ ಉತ್ಪಾದನೆಯಾಗುವ ಉತ್ಪನ್ನಗಳ ಪ್ಯಾಕೆಟ್ ಮೇಲೆ ಕನ್ನಡದಲ್ಲೂ ಹೆಸರು ಮುದ್ರಿಸಬೇಕು ಮತ್ತು ಅವುಗಳ ಬಳಕೆ ಬಗೆಗಿನ ನಿರ್ದೇಶನಗಳು ಕನ್ನಡದಲ್ಲೂ ಇರಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿರುವುದು ಕನ್ನಡದ ಬದ್ಧತೆಯ ಬಗೆಗೆ ರಾಜ್ಯ ಸರ್ಕಾರದ ಇನ್ನೊಂದು ದಿಟ್ಟ ಹೆಜ್ಜೆ ಎನ್ನಬಹುದು. ಇದು ಎಂದೋ ಆಗಬೇಕಾಗಿದ್ದ ಕೆಲಸ. ಆದರೆ ಸ್ವಲ್ಪ ತಡವಾಗಿಯಾದರೂ ಆಗುತ್ತಿರುವುದು ಕನ್ನಡಿಗರಿಗೆ ಸಂತಸದ ಸುದ್ದಿಯೇ ಸರಿ. ಇದೇ ರೀತಿ ಹೋಟೆಲ್‌ಗಳ ತಿಂಡಿ ಪಟ್ಟಿಯಲ್ಲೂ ಕನ್ನಡವು ಕಡ್ಡಾಯವಾಗಿ ಇರುವಂತೆ ಆದೇಶ ಜಾರಿಗೆ ಬರಬೇಕಾಗಿದೆ.

ರಮಾನಂದ ಶರ್ಮಾ, ಬೆಂಗಳೂರು

ರಾಜಧಾನಿಯ ಹೊರಗಿರಲಿ ಜನೋಪಯೋಗಿ ಉದ್ದಿಮೆ

'ಹೈಟೆಕ್ ಹೂಡಿಕೆ'ಗಿಂತಲೂ ಸ್ಥಳೀಯರ ಅಭಿವೃದ್ಧಿ ಮುಖ್ಯ ಎಂದು ಪ್ರಾಧ್ಯಾಪಕ ನರೇಂದ್ರ ಪಾಣಿ ಅವರು ಅಭಿಪ್ರಾಯಪಟ್ಟಿರುವುದು (ಪ್ರ.ವಾ., ಮಾರ್ಚ್ 1) ಸರಿಯಾಗಿದೆ. ಕರ್ನಾಟಕ ಹಲವು ವಿಧದಲ್ಲಿ ಉತ್ತಮ ಸಮೃದ್ಧಶೀಲ ರಾಜ್ಯ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಹಲವಾರು ಉದ್ದಿಮೆ ಹಾಗೂ ಕೌಶಲಾಭಿವೃದ್ಧಿ ಸಂಸ್ಥೆಗಳು ರಾಜ್ಯದಲ್ಲಿ ಸ್ಥಾಪನೆಯಾಗಿವೆ. ಆದರೆ ಇವುಗಳಲ್ಲಿ ಹೆಚ್ಚಿನವು ರಾಜ್ಯ ರಾಜಕಾರಣದ ಅಧಿಕಾರ ಕೇಂದ್ರ ಹಾಗೂ ವಾಣಿಜ್ಯ ಕೇಂದ್ರವಾಗಿರುವ ಬೆಂಗಳೂರಿನಲ್ಲೇ ಸ್ಥಾಪಿತವಾಗಿವೆ. ಹೀಗಾಗಿ, ಬೆಂಗಳೂರು ನಗರದ ಮೇಲೆ ಮಿತಿಮೀರಿದ ಒತ್ತಡ ಉಂಟಾಗಿರುವುದರ ಜೊತೆಗೆ ರಾಜ್ಯದ ಇತರ ಪ್ರದೇಶಾಭಿವೃದ್ಧಿಯನ್ನು ಕಡೆಗಣಿಸಿದಂತೆ ಆಗಿದೆ.

ರಾಜ್ಯದ ಯಾವುದೇ ಭಾಗದಿಂದ ಒಮ್ಮೆ ಶಾಸಕನಾಗಿ ಆಯ್ಕೆಯಾದರೆ, ಅಧಿಕಾರಿಯಾಗಿ ನೇಮಕಗೊಂಡರೆ ಅವರ ಕಾರ್ಯಸ್ಥಾನ ಬಹುತೇಕ ರಾಜಧಾನಿ ಬೆಂಗಳೂರೇ ಆಗಿ, ಅವರ ಮೂಲಸ್ಥಾನ ಮರೆತುಹೋಗುತ್ತದೆ. ಅಂತೆಯೇ ಸಹಜವಾಗಿ ಅವರ ಕುಟುಂಬಗಳಿಗೂ ಬೆಂಗಳೂರೇ ಶಾಶ್ವತ ವಾಸಸ್ಥಾನ ಆಗುತ್ತದೆ. ಇಂತಹವರ ಪ್ರಭಾವದಿಂದ, ಹಲವು ಹೊಸ ಉದ್ದಿಮೆಗಳಿಗೂ ಬಕಾಸುರನಂತಾಗಿರುವ ಬೆಂಗಳೂರೇ ಬೇಕೆನಿಸುತ್ತದೆ. ಇದರಿಂದಾಗಿ ರಾಜ್ಯದ ಇತರ ಪ್ರದೇಶಗಳು ಔದ್ಯಮಿಕವಾಗಿ ಅಭಿವೃದ್ಧಿಯಾಗುತ್ತಿಲ್ಲ. ಉದಾಹರಣೆಗೆ, ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಹೆಚ್ಚಾಗಿ ಬುದ್ಧಿಮತ್ತೆಯನ್ನೇ ಅವಲಂಬಿಸಿರುತ್ತವೆ. ಅವಕ್ಕೆ ಬೇಕಿರುವುದು ನಿರಂತರ ವಿದ್ಯುತ್ ಸಂಪರ್ಕ, ವಿಮಾನಯಾನದಂತಹ ಆಧುನಿಕ ಸಾರಿಗೆ ವ್ಯವಸ್ಥೆ. ಇವು ರಾಜ್ಯದ ಇತರ ನಗರ ಅಥವಾ ಜಿಲ್ಲೆಗಳಲ್ಲಿ ಲಭ್ಯವಾಗುವಂತೆ ಮಾಡಿದರೆ ಆಗ ಆ ಪ್ರದೇಶಗಳೂ ಅಭಿವೃದ್ಧಿ ಆಗುತ್ತವೆ. ಅದೇ ರೀತಿ ಸ್ಥಳೀಯವಾಗಿ ದೊರಕುವ ಸಂಪನ್ಮೂಲಗಳನ್ನು ಬಳಸಿ ಅಲ್ಲಲ್ಲೇ ವ್ಯವಸಾಯ, ಹೈನುಗಾರಿಕೆ, ಕೃಷಿ ಉಪಕರಣ, ಗೃಹೋಪಯೋಗಿ ವಸ್ತುಗಳ ಉತ್ಪಾದನೆ, ಫಲ–ಪುಷ್ಪ ಸಂಸ್ಕರಣೆಯಂತಹ ಜನೋಪಯೋಗಿ ಉದ್ದಿಮೆಗಳನ್ನು ಸ್ಥಾಪಿಸಬೇಕು. ಮೇಲಾಗಿ ಆಯಾ ಸ್ಥಳೀಯ ಶಾಸಕರು ಬೆಂಗಳೂರು ಕೇಂದ್ರಿತ ಮೋಹ ತೊರೆದು ತಮ್ಮ ಪ್ರದೇಶಾಭಿವೃದ್ಧಿಗೆ ಪಣ ತೊಡಬೇಕು. ಆಗ ಪ್ರಾದೇಶಿಕ ಅಸಮತೋಲನ ತಪ್ಪುತ್ತದೆ, ಅಲ್ಲದೆ ಬೆಂಗಳೂರು ಎಂಬ ಬಕಾಸುರನ ಮೇಲಿನ ಒತ್ತಡವನ್ನು ನಿಯಂತ್ರಿಸಿದಂತೆಯೂ ಆಗುತ್ತದೆ.

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

₹26.24 ಲಕ್ಷ ಕೋಟಿ ಮೂರು ವರ್ಷಗಳಲ್ಲಿ ಯುದ್ಧಕ್ಕೆ ಮಾಡಲಾದ ಅಂದಾಜು ವೆಚ್ಚ	1.53 ಲಕ್ಷ ಯುದ್ಧದಿಂದಾಗಿ ಮೃತಪಟ್ಟವರು	10 ಲಕ್ಷ ಎರಡೂ ರಾಷ್ಟ್ರಗಳಲ್ಲಿ ಗಾಯಗೊಂಡವರು	10.46 ಲಕ್ಷ ಉಕ್ರೇನ್‌ನಲ್ಲಿ ನಿರಾಶ್ರಿತರಾದವರು	95 ಸಾವಿರ ಮೃತಪಟ್ಟ ರಷ್ಯಾ ಸೈನಿಕರು	6.05 ಲಕ್ಷ ರಷ್ಯಾದಲ್ಲಿ ಗಾಯಗೊಂಡವರು	46 ಸಾವಿರ ಮೃತಪಟ್ಟ ಉಕ್ರೇನ್ ಸೈನಿಕರು	3.80 ಲಕ್ಷ ಉಕ್ರೇನ್‌ನಲ್ಲಿ ಗಾಯಗೊಂಡವರು	12,654 ಉಕ್ರೇನ್‌ನಲ್ಲಿ ಮೃತಪಟ್ಟ ನಾಗರಿಕರು



ಉಕ್ರೇನ್‌ಗಿಲ್ಲ ಅಮೆರಿಕ ಅಭಯ



ಶ್ವೇತಭವನದಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಾಗ್ವಾದ ಐರೋಪ್ಯ ಒಕ್ಕೂಟ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಅಚ್ಚರಿಗೆ ಕಾರಣವಾಗಿದೆ. ಟ್ರಂಪ್ ಅವರ ಅಸ್ಥಿರ ವರ್ತನೆಯು ಉಕ್ರೇನ್–ರಷ್ಯಾ ಯುದ್ಧದ ಶಾಂತಿ ಒಪ್ಪಂದಕ್ಕೆ ಅಡ್ಡಿಯಾಗಬಹುದೇ ಎನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ. ಯುದ್ಧ ಆರಂಭವಾದ ಗಳಿಗೆಯಿಂದಲೂ ಉಕ್ರೇನ್‌ಗೆ ಬೆಂಬಲ ನೀಡಿದ್ದ ಅಮೆರಿಕದ ಹೊಸ ನಡೆಯು ಉಕ್ರೇನ್‌ಗೆ ಅಷ್ಟೇ ಅಲ್ಲ; ಐರೋಪ್ಯ ಒಕ್ಕೂಟದಲ್ಲೂ ಆತಂಕ ಮೂಡಿಸಿದೆ


ಅಮೆರಿಕ ಅಧ್ಯಕ್ಷ ಟ್ರಂಪ್ ಅಸ್ಥಿರ ಮಾತು, ವರ್ತನೆ; ನೆರವಿಗಾಗಿ ಯುರೋಪ್‌ನತ್ತ ಮುಖ ಮಾಡಿದ ಝೆಲೆನ್‌ಸ್ಕಿ

ಪ್ರಜಾವಾಣಿ ವಾರ್ತೆ

‘ರಷ್ಯಾ–ಉಕ್ರೇನ್ ಯುದ್ಧವು ಶೀಘ್ರವೇ ಅಂತ್ಯಗೊಳ್ಳಲಿದೆ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಫೆ.25ರಂದು ವಿಶ್ವಾಸ ವ್ಯಕ್ತಪಡಿಸಿದ್ದರು. ರಷ್ಯಾದೊಂದಿಗೆ ಮಾಡಿಕೊಳ್ಳುವ ಯಾವುದೇ ಒಪ್ಪಂದವು ಉಕ್ರೇನ್ ಅನ್ನು ಶರಣಾಗುವಂತೆ ಮಾಡುವಂತಿರಬಾರದು ಎಂದೂ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಪರ ವಾದಿಸಿದ್ದರು. ಕೇವಲ ಒಂದು ವಾರದಲ್ಲಿ ಟ್ರಂಪ್ ನಡೆ ನುಡಿ ಬದಲಾಗಿದೆ. ಪರಿಸ್ಥಿತಿ ತಿರುವುಮುರುವಾಗಿದೆ. ಫೆ.28ರಂದು ಶ್ವೇತಭವನದಲ್ಲಿ ನಡೆದ ಟ್ರಂಪ್–ಝೆಲೆನ್‌ಸ್ಕಿ ನಡುವಿನ ಬಹಿರಂಗ ವಾಗ್ವಾದ ಉಕ್ರೇನ್–ರಷ್ಯಾ ಯುದ್ಧದ ಮೇಲೆಯೂ ಪರಿಣಾಮ ಬೀರಲಿದೆ ಎನ್ನಲಾಗುತ್ತಿದ್ದು, ಜಾಗತಿಕ ಪರಿಸ್ಥಿತಿ ಮತ್ತಷ್ಟು ಸಂಕೀರ್ಣಗೊಂಡಿದೆ.

ಈವರೆಗೂ ಉಕ್ರೇನ್ ಪರವಾಗಿದ್ದ ಅಮೆರಿಕದ ನಿಲುವು ಈಗ ಟ್ರಂಪ್ ಅವರಿಂದಾಗಿ ಬದಲಾಗಿದ್ದು, ಉಕ್ರೇನ್‌ಗೆ ಇನ್ನು ಮುಂದೆ ಬೆಂಬಲ ನೀಡುವುದಿಲ್ಲ ಎಂದು ಹೇಳಿದೆ. ಇದರಿಂದಾಗಿ ರಷ್ಯಾ–ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧ ಮತ್ತು ಪ್ರಸ್ತಾವಿತ ಶಾಂತಿ ಮಾತುಕತೆಯ ಬಗ್ಗೆ ಅನಿಶ್ಚಿತ ಸ್ಥಿತಿ ಮೂಡಿದೆ.

2022ರ ಫೆಬ್ರುವರಿ 24ರಂದು ರಷ್ಯಾವು ಉಕ್ರೇನ್ ಮೇಲೆ ಯುದ್ಧ ಸಾರಿದ ನಂತರ ಅಮೆರಿಕವು ಉಕ್ರೇನ್ ನೆರವಿಗೆ ಬಂದಿತ್ತು. ಅಮೆರಿಕ ಅಧ್ಯಕ್ಷರಾಗಿದ್ದ ಜೋ ಬೈಡನ್ ಝೆಲೆನ್‌ಸ್ಕಿ ಪರ ಗಟ್ಟಿಯಾಗಿ ನಿಂತಿದ್ದರು. ಸೇನಾ ನೆರವು ನೀಡಿದ್ದರ ಜತೆಗೆ ದೊಡ್ಡ ಮೊತ್ತದ ಧನಸಹಾಯ ಮಾಡಿದ್ದರು. ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಎರಡನೆಯ ಬಾರಿ ಆಯ್ಕೆ ಆದ ನಂತರ ಉಕ್ರೇನ್ ಬೆಂಬಲಿಗರಲ್ಲಿ ಅಮೆರಿಕದ ಬೆಂಬಲದ ಬಗ್ಗೆ ಸಣ್ಣ ಆತಂಕವೊಂದು ಮೂಡಿತ್ತು.





ರಷ್ಯಾ ದಾಳಿಯಲ್ಲಿ ಮೃತಪಟ್ಟ ಉಕ್ರೇನ್ ಸೈನಿಕರೊಬ್ಬರ ಮೃತದೇಹವನ್ನು ಭದ್ರತಾ ಸಿಬ್ಬಂದಿ ಹೊತ್ತೊಯ್ಯುತ್ತಿದ್ದ ದೃಶ್ಯ

ಏಕೆಂದರೆ, ಉಕ್ರೇನ್–ರಷ್ಯಾ ಯುದ್ಧ ಶೀಘ್ರವೇ ಕೊನೆಗೊಳ್ಳಲಿದೆ ಎಂದು ಟ್ರಂಪ್ ಹೇಳಿದ ನಂತರವೂ, ರಷ್ಯಾ ವಿರುದ್ಧ ನಿಲುವು ತಳೆಯಲು ಅಮೆರಿಕ ನಿರಾಕರಿಸಿತ್ತು. ಉಕ್ರೇನ್‌ನಿಂದ ರಷ್ಯಾ ಪಡೆಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಫೆ.24ರಂದು ವಿಶ್ವಸಂಸ್ಥೆ ಮಂಡಿಸಿದ್ದ ನಿರ್ಣಯದ ವೇಳೆ ಅಮೆರಿಕವು ರಷ್ಯಾ ಪರ, ಉಕ್ರೇನ್ ವಿರುದ್ಧ ಮತ ಚಲಾಯಿಸಿತ್ತು.

ಟ್ರಂಪ್ ಅವರ ಅಸ್ಥಿರವಾದ ಮಾತು ಮತ್ತು ನಡೆಗಳು ಉಕ್ರೇನ್ ಪಾಲಿಗೆ ಬಿಸಿತುಪ್ಪವಾಗಿವೆ. ಟ್ರಂಪ್ ಅವರು ತಮ್ಮ ವಿದೇಶಾಂಗ ನೀತಿಯಲ್ಲಿ ಬದಲಾವಣೆ ತರುವುದರ ಸೂಚನೆ ನೀಡಿದ್ದು, ಯುರೋಪ್‌ನ ತಮ್ಮ ಸಾಂಪ್ರದಾಯಿಕ ಮಿತ್ರರನ್ನು ಬಿಟ್ಟು ರಷ್ಯಾದತ್ತ ವಾಲುತ್ತಿದ್ದಾರೆ. ಇದರಿಂದ ಶಾಂತಿ ಒಪ್ಪಂದದ ವೇಳೆ ರಷ್ಯಾದ ಕೈ ಮೇಲಾದರೆ, ಯುರೋಪ್‌ನ ಇತರ ರಾಷ್ಟ್ರಗಳ ಮೇಲೂ ಅದು ಪ್ರಭಾವ ಬೀರಲಿದೆ ಎನ್ನುವ ಆತಂಕ ಹುಟ್ಟಿಕೊಂಡಿದೆ. ಶಾಂತಿ ಒಪ್ಪಂದದ ವೇಳೆ ಯಾವ ಷರತ್ತುಗಳನ್ನು ಹಾಕಲಾಗುತ್ತದೆ; ನಂತರ ಉಕ್ರೇನ್‌ನ ರಕ್ಷಣೆ ಹೇಗೆ, ಅದಕ್ಕೆ ಯಾವ ರೀತಿಯ ನೆರವು ನೀಡಲಾಗುತ್ತದೆ ಎನ್ನುವ ಬಗ್ಗೆ ಯುರೋಪ್‌ನಲ್ಲಿ ಚರ್ಚೆ ನಡೆಯುತ್ತಿದೆ.

ಉಕ್ರೇನ್‌ಗೆ ಐರೋಪ್ಯ ಒಕ್ಕೂಟ ಮತ್ತು ಬ್ರಿಟನ್ ತಮ್ಮ ಬೆಂಬಲವನ್ನು ಪುನರುಚ್ಚರಿಸಿವೆ. ‘ನೀವು ಎಂದಿಗೂ ಏಕಾಂಗಿ ಅಲ್ಲ’ ಎಂದು ಐರೋಪ್ಯ ಒಕ್ಕೂಟ ಝೆಲೆನ್‌ಸ್ಕಿಗೆ ಭರವಸೆ ನೀಡಿದೆ. ಅಮೆರಿಕದ ಕಹಿ ಅನುಭವದ ನಂತರ ಬ್ರಿಟನ್‌ಗೆ ಬಂದಿರುವ ಝೆಲೆನ್‌ಸ್ಕಿ ಅವರನ್ನು ಪ್ರಧಾನಿ ಕೀರ್ ಸ್ಟಾರ್ಮರ್ ಹಾರ್ದಿಕವಾಗಿ ಸ್ವಾಗತಿಸಿ, ನೆರವಿನ ಭರವಸೆ ನೀಡಿದ್ದಾರೆ. ಐರೋಪ್ಯ ಒಕ್ಕೂಟದ ಅರ್ಧ ಡಜನ್ ನಾಯಕರು ಬ್ರಿಟನ್‌ಗೆ ಬಂದಿದ್ದು, ಉಕ್ರೇನ್–ರಷ್ಯಾ ಸಂಘರ್ಷದ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ‘ಉಕ್ರೇನ್‌ಗೆ ಅತ್ಯುತ್ತಮವಾದುದನ್ನು ಖಾತರಿಪಡಿಸುವುದು, ಐರೋಪ್ಯ ಒಕ್ಕೂಟವನ್ನು ರಕ್ಷಿಸುವುದು ಮತ್ತು ನಮ್ಮೆಲ್ಲರ ಭವಿಷ್ಯವನ್ನು ಭದ್ರಪಡಿಸಿಕೊಳ್ಳುವುದಕ್ಕೆ ನಾವೆಲ್ಲರೂ ಒಟ್ಟಾಗಬೇಕಾದ ಸಮಯವಾಗಿದೆ’ ಎಂದು ಕೀರ್ ಸ್ಟಾರ್ಮರ್ ಹೇಳಿದ್ದಾರೆ.

ಸೇನಾ ನೆರವಿನ ವಿಚಾರದಲ್ಲಿ ಐರೋಪ್ಯ ಒಕ್ಕೂಟ ಮತ್ತು ಬ್ರಿಟನ್ ನಡುವೆ ಹೊಸ ಚರ್ಚೆಗಳು ಆರಂಭವಾಗಿವೆ. ಕೆಲವೇ ದಿನಗಳಲ್ಲಿ ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಮತ್ತು ಬ್ರಿಟನ್ ಅಧ್ಯಕ್ಷ ಕೀರ್ ಸ್ಟಾರ್ಮರ್ ಅವರು ಶ್ವೇತಭವನದಲ್ಲಿ ಟ್ರಂಪ್ ಅವರನ್ನು ಭೇಟಿ ಆಗಲಿದ್ದಾರೆ. ಈ ಸಂದರ್ಭದಲ್ಲಿ ಅವರು ಉಕ್ರೇನ್–ರಷ್ಯಾ ಶಾಂತಿ ಒಪ್ಪಂದದ ಬಗ್ಗೆಯೂ ಮಾತನಾಡಲಿದ್ದಾರೆ. ಈ ವಿಚಾರದಲ್ಲಿ ಐರೋಪ್ಯ ಒಕ್ಕೂಟಕ್ಕೆ ಸ್ಟಾರ್ಮರ್ ಅವರೇ ಹೊಸ ಮುಂದಾಳಾಗಿದ್ದಾರೆ.

ಇಷ್ಟೆಲ್ಲ ಆದ ನಂತರವೂ ಟ್ರಂಪ್ ಅವರಿಗೆ ಸ್ನೇಹಹಸ್ತ ಚಾಚಿರುವ ಝೆಲೆನ್‌ಸ್ಕಿ, ಅಮೆರಿಕದೊಂದಿಗೆ ಖನಿಜ ಒಪ್ಪಂದಕ್ಕೆ ಸಿದ್ಧವಿರುವುದಾಗಿ ಹೇಳಿದ್ದಾರೆ. ಅಮೆರಿಕದ ಜತೆಗಿನ ಸಂಬಂಧವನ್ನು ಮರುಸ್ಥಾಪಿಸಿಕೊಳ್ಳುವಂತೆ ನ್ಯಾಟೊ ರಾಷ್ಟ್ರಗಳು ಉಕ್ರೇನ್‌ಗೆ ಸಲಹೆಯನ್ನೂ ನೀಡಿವೆ.

ಉಕ್ರೇನ್‌ಗೆ ನೆರವು: ಯಾರು, ಎಷ್ಟು?

ಅಮೆರಿಕ

11,415 ಕೋಟಿ ಯುರೊ (₹10.36 ಲಕ್ಷ ಕೋಟಿ)

ಯುರೋಪ್

13,226 ಕೋಟಿ ಯುರೊ (₹12 ಲಕ್ಷ ಕೋಟಿ)

(ಹಣಕಾಸು, ಸೇನೆ ಮತ್ತು ಮಾನವೀಯ ನೆರವು ಸೇರಿ)

ಸೇನಾ ನೆರವು

ಅಮೆರಿಕ 6,413 ಕೋಟಿ ಯುರೊ (₹5.82 ಲಕ್ಷ ಕೋಟಿ)

ಯುರೋಪ್ 6,197 ಕೋಟಿ ಯುರೊ (₹5.62 ಲಕ್ಷ ಕೋಟಿ)

(2022ರ ಜನವರಿಯಿಂದ 2024ರ ಡಿಸೆಂಬರ್‌ವರೆಗೆ)

ಬೆನ್ನಿಗೆ ನಿಂತಿದ್ದ ಅಮೆರಿಕ

ರಷ್ಯಾ ಸೈನಿಕರು ಉಕ್ರೇನ್ ಗಡಿ ದಾಟಿ ಅತಿಕ್ರಮಣ ಆರಂಭ ಮಾಡಿದಾಗಿನಿಂದ ಪೂರ್ವ ಯುರೋಪಿನ ಪುಟ್ಟ ರಾಷ್ಟ್ರ ಉಕ್ರೇನ್‌ನ ಬೆನ್ನ ಹಿಂದೆ ಗಟ್ಟಿಯಾಗಿ ನಿಂತಿದ್ದು ಅಮೆರಿಕ. ಯುದ್ಧ ಆರಂಭವಾದಾಗಿನಿಂದ 2024ರ ಡಿಸೆಂಬರ್ ಕೊನೆಯವರೆಗೆ ಅಮೆರಿಕವು ಉಕ್ರೇನ್‌ಗೆ ₹10.36 ಲಕ್ಷ ಕೋಟಿಯಷ್ಟು ನೆರವು ನೀಡಿದೆ ಎಂದು ಜರ್ಮನಿಯ ‘ಕೀಲ್ ಇನ್‌ಸ್ಟಿಟ್ಯೂಟ್ ಫಾರ್ ದಿ ವರ್ಲ್ಡ್ ಎಕಾನಮಿ’ ಹೇಳಿದೆ. ಇದರಲ್ಲಿ ಹಣಕಾಸು, ಸೇನಾ ಮತ್ತು ಮಾನವೀಯ ನೆರವು ಸೇರಿದೆ.

ರಷ್ಯಾವನ್ನು ಸಮರ್ಥವಾಗಿ ಎದುರಿಸಲು ಉಕ್ರೇನ್ ಸೈನಿಕರಿಗೆ ಸಹಾಯ ಮಾಡಿದ್ದ ಅಮೆರಿಕದ ರಕ್ಷಣಾ ಸಲಕರಣೆಗಳು, ವಾಯು ರಕ್ಷಣಾ ವ್ಯವಸ್ಥೆಗೆ ಬೇಕಾದ ಕ್ಷಿಪಣಿಗಳು, ಡ್ರೋನ್‌ಗಳು, ಭೂಸೇನೆಗೆ ಬೇಕಾದ ಫಿರಂಗಿ, ಮದ್ದುಗುಂಡುಗಳು ಸೇರಿದಂತೆ ವಿವಿಧ ಸಲಕರಣೆಗಳನ್ನು ಪೂರೈಸಿದೆ. ಈ ವರ್ಷದ ಜನವರಿಯ ನಂತರ ಅಮೆರಿಕವು ಉಕ್ರೇನ್‌ಗೆ ಯಾವುದೇ ಶಸ್ತ್ರಾಸ್ತ್ರ ಪೂರೈಸಿಲ್ಲ. ಉಕ್ರೇನ್ ಬಳಿ ಇರುವ ಶಸ್ತ್ರಗಳ ಸಂಗ್ರಹ ಮೇ ತಿಂಗಳ ಹೊತ್ತಿಗೆ ಮುಗಿಯಲಿದೆ ಎಂದು ಹೇಳಲಾಗುತ್ತಿದೆ.

ಯುರೋಪ್ ರಾಷ್ಟ್ರಗಳಿಂದಲೂ ನೆರವು

ಯುರೋಪಿನ ವಿವಿಧ ರಾಷ್ಟ್ರಗಳು ಕೂಡ ಇಲ್ಲಿಯವರೆಗೂ ಉಕ್ರೇನ್ ಹಿಂದೆ ದೃಢವಾಗಿ ನಿಂತಿವೆ. ಯುರೋಪಿನ ಎಲ್ಲ ರಾಷ್ಟ್ರಗಳು ಉಕ್ರೇನ್‌ಗೆ ನೀಡಿರುವ ನೆರವಿನ ಒಟ್ಟಾರೆ ಮೊತ್ತವು ಅಮೆರಿಕ ನೀಡಿದ್ದ ನೆರವಿಗಿಂತಲೂ ಹೆಚ್ಚು. ಯುರೋಪ್ ರಾಷ್ಟ್ರಗಳು ಒಟ್ಟಾಗಿ ಉಕ್ರೇನ್‌ಗೆ ₹12 ಲಕ್ಷ ಕೋಟಿಯಷ್ಟು ನೆರವು ನೀಡಿವೆ.

ಉಕ್ರೇನ್‌ಗೆ ನೀಡಲಾಗುತ್ತಿದ್ದ ನೆರವು ನಿಲ್ಲಿಸುವುದಾಗಿ ಅಮೆರಿಕ ಹೇಳಿರುವುದರಿಂದ ಇನ್ನು ಮುಂದೆ ರಷ್ಯಾವನ್ನು ಎದುರಿಸಲು ಉಕ್ರೇನ್ ಯುರೋಪ್ ರಾಷ್ಟ್ರಗಳನ್ನೇ ಆಶ್ರಯಿಸಬೇಕಾಗಿದೆ. ಬ್ರಿಟನ್ ದೊಡ್ಡ ಮಟ್ಟದಲ್ಲಿ ತನಗೆ ಸಹಾಯ ಮಾಡಬಹುದು ಎಂಬ ನಿರೀಕ್ಷೆಯಲ್ಲಿ ಉಕ್ರೇನ್ ಇದೆ. ಅಮೆರಿಕವು ಅಧಿಕೃತವಾಗಿ ಬೆಂಬಲ ವಾಪಸ್ ಪಡೆದಲ್ಲಿ ರಷ್ಯಾ ದಾಳಿಯನ್ನು ಎದುರಿಸಲು ಯುರೋಪ್ ರಾಷ್ಟ್ರಗಳು ಕನಿಷ್ಠ 3 ಲಕ್ಷ ಸೈನಿಕರನ್ನು ಉಕ್ರೇನ್‌ಗೆ ಕಳುಹಿಸಬೇಕಾಗಬಹುದು ಎಂದು ತಜ್ಞರು ಹೇಳಿದ್ದಾರೆ.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್, ನ್ಯೂಯಾರ್ಕ್ ಟೈಮ್ಸ್, ದಿ ವಾಷಿಂಗ್ಟನ್ ಪೋಸ್ಟ್, ಯುಎನ್‌ಎಚ್‌ಸಿಆರ್

ಸಿನಿ ಬಿಟ್ಸ್

ಏ.11ಕ್ಕೆ ‘ಅಜ್ಞಾತವಾಸಿ’



ರಂಗಾಯಣ ರಘು

‘ಸಪ್ತ ಸಾಗರದಾಚೆ ಎಲ್ಲೋ’ ಸೇರಿದಂತೆ ಕೆಲ ಸಿನಿಮಾಗಳನ್ನು ನಿರ್ದೇಶಿಸಿದ್ದ ಹೇಮಂತ್ ರಾವ್ ಈಗ ನಿರ್ಮಾಪಕರಾಗಿದ್ದಾರೆ. ಅವರ ನಿರ್ಮಾಣದ ‘ಅಜ್ಞಾತವಾಸಿ’ ಚಿತ್ರ ಏ.11 ರಂದು ತೆರೆಗೆ ಬರಲಿದೆ. ಈ ಚಿತ್ರಕ್ಕೆ ‘ಗುಳ್ಟು’ ಖ್ಯಾತಿಯ ಜನಾರ್ದನ್ ಚಿಕ್ಕಣ್ಣ ಆ್ಯಕ್ಷನ್ ಕಟ್ ಹೇಳಿದ್ದಾರೆ.

1997ರಲ್ಲಿ ಮಲೆನಾಡಿನಲ್ಲಿ ನಡೆದ ಕೊಲೆಯೊಂದರ ಸುತ್ತ ಈ ಕಥೆ ಹೆಣೆಯಲಾಗಿದೆ. ಕನ್ನಡದಲ್ಲಿ ಈವರೆಗೂ ಬಂದಿರದ ಮರ್ಡರ್ ಮಿಸ್ಟರಿ ಕಥಾಹಂದರ ಚಿತ್ರದಲ್ಲಿದೆ ಎಂದಿದ್ದಾರೆ ನಿರ್ದೇಶಕರು.

ರಂಗಾಯಣ ರಘು ಮುಖ್ಯ ಭೂಮಿಕೆಯಲ್ಲಿದ್ದು, ಪಾವನ ಗೌಡ ಹಾಗೂ ಸಿದ್ದು ಮೂಲಿಮನಿ, ಶರತ್ ಲೋಹಿತಾಶ್ವ, ರವಿಶಂಕರ್ ಗೌಡ ಸೇರಿದಂತೆ ಹಲವರು ನಟಿಸಿದ್ದಾರೆ. ಚರಣ್ ರಾಜ್ ಸಂಗೀತ, ಅದ್ವೈತ ಛಾಯಾಚಿತ್ರಗ್ರಹಣ, ಭರತ್ ಎಂ.ಸಿ ಸಂಕಲನವಿದೆ. ಹೇಮಂತ್ ಅವರು ತಮ್ಮ ತಾಯಿ ನೆನಪಿನಲ್ಲಿ ‘ದಾಕ್ಷಾಯಿಣಿ ಟಾಕೀಸ್’ ನಿರ್ಮಾಣ ಸಂಸ್ಥೆ ಪ್ರಾರಂಭಿಸಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.

‘ಆಪಲ್ ಕಟ್’ಗೆ ಗಣೇಶ್ ಸಾಥ್



ಚಿತ್ರತಂಡದೊಂದಿಗೆ ಗಣೇಶ್

ಖ್ಯಾತ ನಿರ್ದೇಶಕ ರಾಜ್ ಕಿಶೋರ್ ಅವರ ಪುತ್ರಿ ಸಿಂಧುಗೌಡ ನಿರ್ದೇಶಿಸಿರುವ ‘ಆಪಲ್ ಕಟ್’ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಗೊಂಡಿದೆ. ನಟ ಗಣೇಶ್ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

‘ನಾನು ಸಾಮಾನ್ಯವಾಗಿ ನನ್ನ ಚಿತ್ರದ ಹೊರತು ಬೇರೆ ಸಮಾರಂಭಗಳಿಗೆ ಹೋಗುವುದು ಕಡಿಮೆ. ಕನ್ನಡ ಚಿತ್ರರಂಗಕ್ಕೆ ಅನೇಕ ಸೂಪರ್ ಹಿಟ್ ಚಿತ್ರಗಳನ್ನು ನೀಡಿರುವ ಹಿರಿಯ ನಿರ್ದೇಶಕ ರಾಜ್ ಕಿಶೋರ್ ಅವರ ಪುತ್ರಿ ಈ ಚಿತ್ರದ ನಿರ್ದೇಶಕರು ಎಂದು ತಿಳಿದು ಸಂತೋಷವಾಯಿತು. ಟ್ರೇಲರ್ ನೋಡಿದಾಗ ವಿಭಿನ್ನ ಕಂಟೆಂಟ್ ಹೊಂದಿರುವ ಚಿತ್ರ ಎಂದು ತಿಳಿಯುತ್ತದೆ’ ಎಂದರು ಗಣೇಶ್.

ಮಾ.7 ರಂದು ಚಿತ್ರ ತೆರೆಗೆ ಬರುತ್ತಿದೆ. ಸಾನ್ವಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ಶಿಲ್ಪ ಪ್ರಸನ್ನ ಚಿತ್ರ ನಿರ್ಮಿಸಿದ್ದಾರೆ. ಮರ್ಡರ್ ಮಿಸ್ಟರಿ ಕಥಾಹಂದರ ಹೊಂದಿರುವ ಚಿತ್ರಕ್ಕೆ ಸೂರ್ಯ ಗೌಡ ನಾಯಕನಾಗಿದ್ದು, ಅಶ್ವಿನಿ ಪೋಲೆಪಲ್ಲಿ ನಾಯಕಿ. ಅಪ್ಪಣ್ಣ, ಅಭಿಜಿತ್, ಮೀನಾಕ್ಷಿ, ಬಾಲ ರಾಜವಾಡಿ ಈ ಚಿತ್ರದ ಮುಖ್ಯಪಾತ್ರದಲ್ಲಿದ್ದಾರೆ.

ವೀರ್ ಸಮರ್ಥ ಸಂಗೀತ ಸಂಯೋಜಿಸಿರುವ ಹಾಡುಗಳಿಗೆ ಯೋಗರಾಜ್ ಭಟ್, ಸತ್ಯಪ್ರಕಾಶ್ ಸಾಹಿತ್ಯವಿದೆ. ರಾಜೇಶ್ ಗೌಡ ಛಾಯಾಚಿತ್ರಗ್ರಹಣ ಹಾಗೂ ಸುಚೇಂದ್ರ ಎನ್ ಮೂರ್ತಿ ಸಂಕಲನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

‘ಹೈದರಾಬಾದ್‌ನ ನೆಹರೂ ಹೊರ ವರ್ತುಲ ರಸ್ತೆಯ (ಔಟರ್ ರಿಂಗ್ ರೋಡ್) ವೈಮಾನಿಕ ನೋಟ’ ಎಂದು ಹೇಳಿಕೊಂಡು ಹಲವು ಮೇಲ್ಸೇತುವೆಗಳನ್ನು ಹೊಂದಿರುವ ಚಿತ್ರವೊಂದನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ‘ಹೈದರಾಬಾದ್‌ನಲ್ಲಿ 156 ಕಿ.ಮೀ ಉದ್ದದ ಹೊರ ವರ್ತುಲ ರಸ್ತೆ ಇದ್ದು, ಇದು ದೇಶದಲ್ಲೇ ಅತ್ಯಂತ ಉದ್ದದ ವರ್ತುಲ ರಸ್ತೆ’ ಎಂಬ ಒಕ್ಕಣೆಯೂ ಆ ಚಿತ್ರದಲ್ಲಿದೆ. ಆದರೆ, ಇದು ಸುಳ್ಳು. ಅದು ನೈಜ ಚಿತ್ರವಲ್ಲ.

ಚಿತ್ರವನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ, ಹಲವರು ಈ ಫೋಟೊ ಹಂಚಿಕೊಂಡಿರುವುದು ಕಂಡು ಬಂತು. ನಿರ್ದಿಷ್ಟ ಪದಗಳನ್ನು ಬಳಸಿಕೊಂಡು ಹೈದರಾಬಾದ್‌ನ ವರ್ತುಲ ರಸ್ತೆಯ ಬಗ್ಗೆ ಗೂಗಲ್‌ನಲ್ಲಿ ಜಾಲಾಡಿದಾಗ, ಈ ವರ್ತುಲ ರಸ್ತೆಯ ಕಾಮಗಾರಿ ಟೆಂಡರ್ ವಹಿಸಿಕೊಂಡ ಐಆರ್‌ಬಿ ಇನ್‌ಫ್ರಾಸ್ಟ್ರಕ್ಚರ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾದ ಮಾಹಿತಿ ಸಿಕ್ಕಿತು. ವೆಬ್‌ಸೈಟ್‌ನಲ್ಲಿರುವ ರಸ್ತೆಯ ಚಿತ್ರಗಳನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ, ಸಾಮಾಜಿಕ ಜಾಲತಾಣಗಳಲ್ಲಿರುವ ಪೋಸ್ಟ್‌ಗೂ, ವೆಬ್‌ಸೈಟ್‌ನಲ್ಲಿರುವ ಚಿತ್ರಗಳ ನಡುವೆ ಹೋಲಿಕೆ ಕಾಣಲಿಲ್ಲ. ಪೋಸ್ಟ್‌ನಲ್ಲಿರುವ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಇದು ಎಐ ಚಿತ್ರವಾಗಿರಬಹುದು ಎಂಬ ಅನುಮಾನ ಮೂಡಿತು. ಎಐ ಚಿತ್ರವನ್ನು ಪತ್ತೆ ಮಾಡುವ ಹೈವ್ ಮಾಡರೇಷನ್ ಟೂಲ್ ಬಳಸಿ ಚಿತ್ರವನ್ನು ಪರೀಕ್ಷಿಸಿದಾಗ ಅದು ಎಐ ಚಿತ್ರ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮಾರ್ಚ್ 3, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಚತುರ್ಥಿ ಗಂ. 18-03 ನಕ್ಷತ್ರ: ರೇವತಿ ಗಂ. 06-39 ನಂತರ ಅಶ್ವಿನಿ ಗಂ. 28-30 ಯೋಗ: ಶುಕ್ಲ (ಶುಕ್ರ) ಗಂ. 08-57, ಕುಂಭ ಮಾಸದ 19 ನೇ ದಿನ, ಮಳೆನಕ್ಷತ್ರ: ಶತಭಿಷ 4.

ರಾಹುಕಾಲ: ಬೆಳಿಗ್ಗೆ 07-30 – 09-00

ಸೂರ್ಯೋದಯ: 06-49 **ಸೂರ್ಯಾಸ್ತ:** 06-36

ಮುಸ್ಲಿಂ ದಿನಾಂಕ: 02 ರಂಜಾನ್

ಅದೃಷ್ಟ ಸಂಖ್ಯೆ: 9, 5

ಮೇಷ: ಎದುರಾಳಿಗಳ ಬಲವನ್ನು ಮಾತ್ರ ತಿಳಿದ ನಿಮಗೆ, ಅವರಲ್ಲಿರುವ ಕುಂದು ಕೊರತೆಗಳನ್ನು ತಿಳಿಸುವವರೊಬ್ಬರು ಈ ದಿನ ದೊರೆಯಲಿದ್ದಾರೆ. ಮೂಳೆಗೆ ಸಂಬಂಧಿಸಿದಂಥ ವ್ಯಾಧಿಗಳಿಂದ ಎಚ್ಚರವಾಗಿರಿ.

ವೃಷಭ: ರಾಜ್ಯಮಟ್ಟದಲ್ಲಿ ಯಾವುದಾದರೊಂದು ಜವಾಬ್ದಾರಿಯನ್ನು ನಿಭಾಯಿಸುವಂಥ ಕೆಲಸಗಳು ದೊರೆಯುವವು. ಕ್ರೀಡೆಯನ್ನು ಆಡುವಾಗ ಸಹವರ್ತಿಗಳ ಜತೆ ಸಂಯಮದಿಂದ ವರ್ತಿಸುವುದು ಬಹಳ ಮುಖ್ಯ.

ಮಿಥುನ: ಹಿಂದೆ ಮಾಡಿದಂಥ ಕೆಲಸದಲ್ಲಿ ಕಂಡ ದೋಷಗಳನ್ನು ಈ ಬಾರಿ ಪರಿವರ್ತಿಸದೇ ಅಚ್ಚುಕಟ್ಟಾಗಿ ಮಾಡುವಿರಿ. ಗರ್ಭಿಣಿಯರು ವೈದ್ಯರ ಸಲಹೆಯಂತೆ ನಡೆಯುವುದರ ಜತೆಗೆ ಪೌಷ್ಟಿಕ ಆಹಾರವನ್ನು ಸೇವಿಸಿ.

ಕರ್ಕಾಟಕ: ಬುದ್ಧಿಶಕ್ತಿಯ ಬಲದಿಂದ ಮತ್ತು ಸ್ವಂತ ಅನುಭವದ ಜತೆಗೆ ವಿವಿಧ ಕಾರ್ಯಗಳು ಫಲಿತಗೊಂಡು, ಉತ್ತಮ ಅಭಿವೃದ್ಧಿ ಅನುಭವಿಸುವ ಯೋಗ ನಿಮ್ಮದಾಗಲಿದೆ.

ಸಿಂಹ: ಕೆಲಸದಲ್ಲಿ ಸಮಾನ ಮನಸ್ಕರರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆ ನಡೆದು ಕಾರ್ಯಭಾರವು ಸುಗಮವಾಗುತ್ತದೆ. ಕೋರ್ಟ್ ವ್ಯವಹಾರದಲ್ಲಿ ದೇವರ ಕೃಪೆಯಿಂದ ನಿರೀಕ್ಷೆಯ ಜಯ ಸಿಗುವುದು.

ಕನ್ಯಾ: ಸಂಶೋಧನಾ ವೃತ್ತಿಯಲ್ಲಿರುವವರಿಗೆ ಅಧ್ಯಯನಕ್ಕೆ ಸುಸಮಯ ಅಥವಾ ಅನುಭವ ಸಿಗಲಿದೆ. ಸಹೋದ್ಯೋಗಿಯ ವಿರಾಮದಿಂದಾಗಿ ಉದ್ಯೋಗದಲ್ಲಿರುವ ಒತ್ತಡವನ್ನು ನಿವಾರಿಸಿಕೊಳ್ಳುವುದು ಕಷ್ಟವಾಗುತ್ತದೆ.

ತುಲಾ: ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪಿದ ಕಾರಣದಿಂದಾಗಿ ಮನಸ್ಸಿಗೆ ಹಾಗೂ ಕುಟುಂಬದವರಿಗೆ ಸಮಾಧಾನವಾಗುವುದು. ಸಣ್ಣಮಕ್ಕಳ ವಿಚಾರವಾಗಿ ಎಷ್ಟು ಗಮನ ಹರಿಸಿದರೂ ಸಾಲದು ಎಂಬಂತೆ ಆಗುವುದು.

ವೃಶ್ಚಿಕ: ಸಮಾಜದಲ್ಲಿ ಹೆಸರು ಸಂಪಾದಿಸಲು ಪೂರಕ ವಾತಾವರಣ ಮೂಡಿ ಬರಲಿದೆ. ಆಜ್ಞೆಯ ನಂತರದಲ್ಲಿ ಗೃಹ ನಿರ್ಮಾಣದ ಕೆಲಸದಲ್ಲಿ ಉಂಟಾದ ಪ್ರಮುಖ ಬದಲಾವಣೆಯು ಗಮನಕ್ಕೆ ಬರಲಿದೆ.

ಧನು: ಸರ್ಕಾರಿ ಕಾಮಗಾರಿಯ ವ್ಯವಹಾರಕ್ಕೆ ಸಂಬಂಧಿಸಿದ ಹಾಗೂ ರಾಜಕೀಯದ ಸ್ಥಾನ ಪಡೆಯುವ ಬಗ್ಗೆ ವರಿಷ್ಠರೊಂದಿಗೆ ಮಾತುಕತೆಗಳು ನಡೆಯಲಿವೆ. ವಿಲಾಸಿಜೀವನದ ಸುಖ ಅನುಭವಿಸಬಹುದು.

ಮಕರ: ಸಮಾಜಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವವರಿಗೆ ಬಹಳಷ್ಟು ಸಮಸ್ಯೆಯನ್ನು ಎದುರಿಸಬೇಕಾಗಬಹುದು. ಕರ್ಮನಿಷ್ಠೆ ಮತ್ತು ಪ್ರಾಮಾಣಿಕತೆಗೆ ತಕ್ಕಂಥ ಫಲವನ್ನು ಪಡೆಯುತ್ತೀರಿ.

ಕುಂಭ: ಅಪರೂಪದ ಔತಣಕೂಟವೊಂದರಲ್ಲಿ ಭಾಗವಹಿಸುವ ಸಲುವಾಗಿ ಆಮಂತ್ರಣ ಬರಲಿದೆ. ವಿದ್ಯಾರ್ಥಿಗಳು ಉದ್ಯೋಗದ, ಹಣದ ಆಸೆ ಬಿಟ್ಟು ಓದು ಮುಂದುವರಿಸುವುದನ್ನು ನಿರ್ಧರಿಸಿ.

ಮೀನ: ದಾಖಲೆಯ ಪತ್ರಗಳನ್ನು ಬರೆಸುವ ಸಂದರ್ಭವಿದ್ದಲ್ಲಿ, ಸಂಖ್ಯೆಗಳಲ್ಲಿ ಅಥವಾ ವಾಕ್ಯಗಳಲ್ಲಿ ಗಮನವಹಿಸಿ. ಪರಿಣಿತರ ಅನುಭವವನ್ನು ಕೇಳಿ ಮುಂದುವರಿಯಿರಿ. ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ನುಡಿ ಬೆಳಗು

ದೇಹವೇ ಒಂದು ಪಂಚಾಂಗ



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

143

ಮನುಷ್ಯನಿಗೆ ಜಗತ್ತು ಕಂಡಿದೆ. ಆದರೆ ಶಕ್ತಿ ಕಂಡಿಲ್ಲ. ಮನೆಯಲ್ಲಿ ಫ್ಯಾನ್ ಹಚ್ಚುತ್ತೀರಿ. ವಿದ್ಯುತ್ ದೀಪ ಹಚ್ಚುತ್ತೀರಿ. ಫ್ರಿಜ್ ಬಾಗಿಲು ತೆರೆಯುತ್ತೀರಿ. ಎಲ್ಲವೂ ಒಂದೇ ವಿದ್ಯುತ್‌ನಿಂದ ನಡೆಯುತ್ತದೆ. ಆದರೆ ವಿದ್ಯುತ್ ಕಾಣತೈತೇನು? ಇಲ್ಲ. ಆದರೂ ಎಲ್ಲವೂ ಒಂದೇ ಶಕ್ತಿಯಿಂದಲೇ ನಡೀತೈತಿ. ಕಂಡಿಲ್ಲ ಅಂದ್ರೆ ಇಲ್ಲ ಎಂದು ಹೇಳಲಾಗದು. ಅದು ಇಲ್ಲದಿದ್ದರೆ ನಡೆಯುವುದಿಲ್ಲ. ಹಾಗೆಯೇ ಮನುಷ್ಯನ ಒಳಗೂ ಒಂದು ಶಕ್ತಿ ಐತಿ. ಆ ಶಕ್ತಿಯ ಬಗ್ಗೆ ನಮಗೆ ಗೊತ್ತಿರಬೇಕು. ದೇವರು ನಮ್ಮ ದೇಹದಲ್ಲಿ ಅಪಾರ ಶಕ್ತಿ ಇಟ್ಟಿದ್ದಾನೆ. ಆದರೆ ಸಮಯ ಕಡಿಮೆ ಕೊಟ್ಟಿದ್ದಾನೆ.

ಜೀವನ ಎಂದರೆ ಒಂದು ಪರೀಕ್ಷೆ. ಅದರಲ್ಲಿ ಹೇಗೆ ಪಾಸಾಗ್ತಿ ನೋಡೋಣ ಅಂತಾನೆ ದೇವರು. ಬಹಳ ಶಕ್ತಿ ಇಟ್ಟು ಕಡಿಮೆ ಸಮಯ ಕೊಟ್ಟು ದೇವರು ನಮ್ಮನ್ನು ಇಲ್ಲಿಗೆ ಕಳಿಸಿದ್ದಾನೆ. ಹೇಗೆ ಬಳಸಿಕೊಳ್ಳುತ್ತಾರೆ ಎಂದು ನೋಡ್ತಾನೆ ಅವನು. ರಾವಣನಿಗೆ ಎಷ್ಟು ಶಕ್ತಿ ಇತ್ತು! ಭೂಲೋಕದಿಂದ ದೇವಲೋಕದವರೆಗೆ ಸೇತುವೆ ಕಟ್ಟಿದ್ದ. ಆದರೆ ಶಕ್ತಿಯ ದುರುಪಯೋಗ ಮಾಡಿಕೊಂಡ. ಭಸ್ಮಾಸುರನಿಗೆ ಎಷ್ಟು ಶಕ್ತಿ ಇತ್ತು! ದೇವರ ತಲೆಯ ಮೇಲೆ ಕೈಇಟ್ಟರೂ ದೇವರೇ ಸುಟ್ಟು ಹೋಗುವಷ್ಟು ಶಕ್ತಿ ಪಡೆದುಕೊಂಡಿದ್ದ. ಆದರೆ, ಶಕ್ತಿಯ ದುರುಪಯೋಗ ಮಾಡಿಕೊಂಡಿದ್ದರಿಂದ ಹಾಳಾದ. ರಾವಣನಿಗೂ ಶಕ್ತಿ ಇತ್ತು. ರಾಮನಿಗೂ ಶಕ್ತಿ ಇತ್ತು. ವಿಶ್ವೇಶ್ವರಯ್ಯನಿಗೂ ಶಕ್ತಿ ಇತ್ತು. ವೀರಪ್ಪನ್‌ಗೂ ಶಕ್ತಿ ಇತ್ತು. ರಾಮ ಶಕ್ತಿಯನ್ನು ಬಳಸಿಕೊಂಡು ದೇವರಾದ. ರಾವಣ ಶಕ್ತಿಯನ್ನು ದುರುಪಯೋಗ ಮಾಡಿಕೊಂಡು ರಾಕ್ಷಸನಾದ. ವಿಶ್ವೇಶ್ವರಯ್ಯ ಶಕ್ತಿಯನ್ನು ಬಳಸಿಕೊಂಡು ನರರ ಚಿಂತಕರಾದರು. ವೀರಪ್ಪನ್ ಅದನ್ನು ದುರುಪಯೋಗ ಮಾಡಿಕೊಂಡು ನರಹಂತಕ ಆದ. ರಾಶಿಯಿಂದ ಭವಿಷ್ಯ ನಿರ್ಮಾಣ ಆಗತೈತಿ ಅಂತಾರ. ಆದರೆ ರಾಮನದ್ದು ರಾವಣನದ್ದು ಇಬ್ಬರದ್ದೂ ಒಂದೇ ರಾಶಿ. ವಿಶ್ವೇಶ್ವರಯ್ಯ, ವೀರಪ್ಪನ್ ಇಬ್ಬರದ್ದೂ ಒಂದೇ ರಾಶಿ. ಭವಿಷ್ಯ ನಮ್ಮ ರಾಶಿಯಲ್ಲಿ ಇಲ್ಲ. ನಮ್ಮ ಶಕ್ತಿಯನ್ನು ಸದುಪಯೋಗ ಮಾಡಿಕೊಳ್ಳುವುದರಲ್ಲಿ ನಮ್ಮ ಭವಿಷ್ಯ ಇದೆ.

ನಮ್ಮ ಅದೃಷ್ಟವನ್ನು ಪಂಚಾಂಗದಲ್ಲಿ ಹುಡುಕುತ್ತೇವೆ. ಪಂಚಾಂಗ ಎಂದರೆ ಏನು? ಐದು ಅಂಗ. ದಿನ, ವಾರ, ನಕ್ಷತ್ರ, ಕರಣ, ಯೋಗ. ಪಂಚಾಂಗ ತೆಗೆದು ನೋಡಿರಿ ಅನ್ನುತ್ತೇವೆ. ಮನುಷ್ಯನೇ ಹೊರಗಿನ ಪಂಚಾಂಗ ಏನು ನೋಡ್ತಿ? ನಿನ್ನ ಇಂದ್ರಿಯಗಳೇ ಐದು. ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ನೀನು ಅನುಭವಿಸುವ ಶಬ್ದ ವಿಷಯಗಳು ಏನದಾವೆ ಅದು ಕೂಡ ಐದು, ನಿನ್ನೊಳಗೆ ಪ್ರಾಣ ಐದು ಇವೆ. ಅವು ಪಂಚಾಂಗ, ನಿನ್ನ ಅಂತರ್ ಇಂದ್ರಿಯಗಳು ಐದು, ನಿನ್ನ ದೇಹವೇ ಒಂದು ಪಂಚಾಂಗ. ಅದನ್ನು ತೆಗೆದು ನೋಡು. ಇದನ್ನು ತಿಳಿದುಕೊಂಡರೆ ರಾಜಯೋಗ, ತಿಳಿಯದೇ ಇದ್ದರೆ ಯಮಗಂಡ ಕಾಲ. ಕಾಲಲ್ಲಿ ಶಕ್ತಿ ಇದೆ. ಕೈಯಲ್ಲಿ ಶಕ್ತಿ ಇದೆ. ಕಣ್ಣಲ್ಲಿ ಶಕ್ತಿ ಇದೆ. ಅದನ್ನು ಸರಿಯಾಗಿ ಬಳಸಬೇಕು. ನಮ್ಮ ಕಾಲಿಗೂ ಶಕ್ತಿ ಇದೆ. ನಾವೂ ಹೆಜ್ಜೆ ಹಾಕುತ್ತೇವೆ. ಬಸವಣ್ಣನ ಕಾಲಿಗೂ ಶಕ್ತಿ ಇತ್ತು. ಬಸವಣ್ಣ ಹೆಜ್ಜೆ ಹಾಕಿದರೆ ಕಲ್ಯಾಣ ನಿರ್ಮಾಣ ಆಗಿತ್ತು. ಬೋಸ್, ಗಾಂಧಿಯಂತಹವರು ಹೆಜ್ಜೆ ಹಾಕಿದರೆ ದೇಶಕ್ಕ ಸ್ವಾತಂತ್ರ್ಯ ಸಿಕ್ಕಿತ್ತು. ಬುದ್ಧ ಹೆಜ್ಜೆ ಹಾಕಿದರೆ ಕರುಣೆ ನಿರ್ಮಾಣವಾಗಿತ್ತು. ಅರಿಯದೆ ಹಾಕುವ ಸಾವಿರ ಹಜ್ಜೆಗಳಿಗಿಂತ ಅರಿತು ಹಾಕುವ ನಾಲ್ಕು ಹಜ್ಜೆಗಳು ಮೇಲು.

ಪದಬಂಧ 5970


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊರಳಲ್ಲಿ ಧರಿಸಲು ಅಡ್ಡಿಯಾಗದ ಅರ್ಧ ಚಂದ್ರಾಕೃತಿ ಆಭರಣ (3)
2.ಹೊಸದಾಗಿ ಅಭಿನಯಿಸುತ್ತಿರುವವನು (4)
5.ನಾರಿ ಹಿಡಿದಿರುವ ತೆಂಗಿನ ಕಾಯಿ (4)
6.ಸಂತನಿಂದ ಬಂದಿರುವ ಪೀಳಿಗೆ (3)
8.ಭವನದ ಮೇಲಿಂದ ಕಾಣುವ ಕಾಡು (2)
10.ಹಿಂದಿಯವನ ದಾರಿದ್ರ್ಯ (3)
11.ಪಯಣದಲ್ಲಿನ ಜೂಜು ಉಲ್ಟಾ ಆಗಿಬಿಟ್ಟಿದೆ (2)
13.ಸುಳ್ಳು ಸುಳ್ಳೇ ಹಬ್ಬಿದ ಗಾಳಿ ಸುದ್ದಿ (3)
14.ಉಲ್ಟಾಪಲ್ಟಾ ಕಾಣುತ್ತಿರುವ ಹುಲ್ಲುಗಾವಲು (4)
16.ಅಳತೆಗೆ ಮೀರಿದ ಸ್ಥಿತಿ (4)
17.ಶ್ರೇಷ್ಠವಾದ ಗುರಿಯನ್ನು ಹೀಗೂ ಹೇಳುವರು (3)

ಮೇಲಿಂದ ಕೆಳಕ್ಕೆ

1.ಒಂದನ್ನೊಂದು ಅಗಲದೇ ಇರುವಂಥದ್ದು (5)
2.ಮೂಗಿಗೇರಿಸುವ ತಂಬಾಕಿನ ಪುಡಿ (2)
3.ಪ್ರಾಯಕ್ಕೆ ಬಂದವನು (5)
4.ಚಂದ್ರನ ಕಾಂತಿಯಿದು (5)
7.ನಡುವೆ ಬರ ಬಂದರೂ ಮಾಡಿದ ಒತ್ತಾಯ (5)
9.ಹೊಸದಾಗಿ ಮದುವೆಯಾದ ಗಂಡ ಹೆಂಡಿರು (5)
12.ಕನ್ನಡಿಗನು ಮಾಡಿದ ಪಾಲಿನೇಷನ್! (5)
15.ಸಂಕಟದಿಂದ ಕಟ್ಟಿರುವ ತೆರ (2)



5969ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಾಹಚರ್ಯ 3.ಅಭ್ಯಂತರ 5.ಬಳಪ 7.ವಿನಿಮಯ 9.ಗಗನಗಾಮಿ 11.ನಿರಾಯುಧ 13.ನವಿಲು 15.ಕರಣಿಕ 16.ಮದುಮಗ

ಮೇಲಿಂದ ಕೆಳಕ್ಕೆ: 2.ಹವಳ 3.ಅವನಿ 4.ತನಯ 5.ಬನವಾಸಿ 6.ಪರಾಗ 7.ವಿಧಾನಸೌಧ 8.ಅಹವಾಲು 10.ಮಿಥುನ 11.ನಿರ್ಝರ 12.ಯುವಕ 14.ವಿರಾಮ

ಸುಡೊಕು 6355

3					8	2		6
			4	9				3
		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6354 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಅಕ್ರಮವಾಗಿ ಕಂಪನಿ ಲಿಸ್ಟಿಂಗ್: ಬುಚ್ ವಿರುದ್ಧ ದೂರು

ಷೇರುಪೇಟೆ ವಂಚನೆ ಆರೋಪ



ಮುಂಬೈ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಕಾಯ್ದೆ 1992 ಅನ್ನು ಗಾಳಿಗೆ ತೂರಿ ಷೇರು ವಿನಿಮಯ ಕೇಂದ್ರದಲ್ಲಿ ಕಂಪನಿಯೊಂದರ ಲಿಸ್ಟಿಂಗ್‌ಗೆ ಅನುವು ಮಾಡಿಕೊಟ್ಟಿರುವ ಆರೋಪವು ಸೆಬಿ ಮಾಜಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ವಿರುದ್ಧ ಕೇಳಿಬಂದಿದೆ.

ಬುಚ್ ಹಾಗೂ ಇತರೆ ಐವರು ಅಧಿಕಾರಿಗಳು ಸೆಬಿಯ ನಿಯಮಾವಳಿ ಉಲ್ಲಂಘಿಸಿ ಆರ್ಥಿಕ ವಂಚನೆ ಎಸಗಿದ್ದಾರೆ ಎಂದು ಪತ್ರಕರ್ತ ಸಪನ್ ಶ್ರೀವಾಸ್ತವ ಅವರು, ಮುಂಬೈನ ಎಸಿಬಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ಈ ಆರೋಪ ಮಾಡಿದ್ದಾರೆ.

ಲಿಸ್ಟಿಂಗ್ ಆಗಿರುವ ಕಂಪನಿಯು ಸೆಬಿಯ ಮಾನದಂಡಗಳನ್ನು ಪೂರೈಸಿಲ್ಲ. ಅಧಿಕಾರಿಗಳು ತಮಗಿರುವ ಶಾಸನಬದ್ಧ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಕೃತಕ ಬೆಲೆಯಲ್ಲಿ ಷೇರುಗಳ ಮಾರಾಟಕ್ಕೆ ಅವಕಾಶ ಕಲ್ಪಿಸಿದ್ದಾರೆ ಎಂದು ದೂರಿದ್ದಾರೆ.

ಈ ವಂಚನೆ ಬಗ್ಗೆ ಪೊಲೀಸ್ ಠಾಣೆ ಮತ್ತು ನಿಯಂತ್ರಕ ಸಂಸ್ಥೆಗಳ ಗಮನಕ್ಕೆ ಹಲವು ಬಾರಿ ತರಲಾಗಿದೆ. ಆದರೆ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಿಲ್ಲ ಎಂದು ಹೇಳಿದ್ದಾರೆ.

ನ್ಯಾಯಾಲಯ ಹೇಳಿದ್ದೇನು?: ತಪ್ಪಿತಸ್ಥರ ವಿರುದ್ಧ ಕಾನೂನು ಪರಿಪಾಲನಾ ಸಂಸ್ಥೆಗಳು ಮತ್ತು ಸೆಬಿಯು ಕ್ರಮ ಕೈಗೊಳ್ಳಲು ನಿರ್ಲಕ್ಷ್ಯ ತಳೆದಾಗ, ಅಪರಾಧ ಪ್ರಕ್ರಿಯಾ ಸಂಹಿತೆಯಡಿ (ಸಿಆರ್‌ಪಿಸಿ) ಹಸ್ತಕ್ಷೇಪ ಮಾಡುವ ನ್ಯಾಯಿಕ ಅಧಿಕಾರವು ನ್ಯಾಯಾಲಯಕ್ಕಿದೆ ಎಂದು ಎಸಿಬಿ ನ್ಯಾಯಾಲಯವು ಪ್ರತಿಪಾದಿಸಿದೆ.

ಬುಚ್ ಸೇರಿದಂತೆ ಬಿಎಸ್‌ಇ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸುಂದರರಾಮನ್ ರಾಮಮೂರ್ತಿ, ಅಧ್ಯಕ್ಷ ಪ್ರಮೋದ್ ಅಗರ್ವಾಲ್, ಸೆಬಿಯ ಪೂರ್ಣಕಾಲಿಕ ಸದಸ್ಯರಾದ ಅಶ್ವನಿ ಭಾಟಿಯಾ, ಜಿ. ಅನಂತ್ ನಾರಾಯಣ ಹಾಗೂ ಕಮಲೇಶ್ ಚಂದ್ರ ವಿರುದ್ಧ ಎಫ್‌ಐಆರ್ ದಾಖಲಿಸಲು ನ್ಯಾಯಾಧೀಶರು ಸೂಚಿಸಿದ್ದಾರೆ.

ನ್ಯಾಯಾಲಯವು ತನಿಖೆಯ ಮೇಲ್ವಿಚಾರಣೆ ನಡೆಸಲಿದ್ದು, 30 ದಿನದೊಳಗೆ ಪ್ರಕರಣದ ಸ್ಥಿತಿಗತಿ ಬಗ್ಗೆ ವರದಿ ಸಲ್ಲಿಸುವಂತೆ ನಿರ್ದೇಶಿಸಿದ್ದಾರೆ.

ಅದಾನಿ ಸಮೂಹದ ಸಾಗರೋತ್ತರ ಹೂಡಿಕೆಯಲ್ಲಿ ಮಾಧವಿ ಮತ್ತು ಅವರ ಪತಿಯು ಪಾಲುದಾರಿಕೆ ಹೊಂದಿದ್ದಾರೆ ಎಂದು ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್ ಆರೋಪಿಸಿತ್ತು. ಇದನ್ನು ಈ ಇಬ್ಬರು ನಿರಾಕರಿಸಿದ್ದರು. ಮಾಧವಿ ಅವರ ಮೂರು ವರ್ಷದ ಅಧಿಕಾರಾವಧಿಯು ಶುಕ್ರವಾರ ಮುಕ್ತಾಯಗೊಂಡಿದೆ.

ಕಾನೂನು ನೆಲಗಟ್ಟಿನಲ್ಲೇ ಹೋರಾಟ: ಸೆಬಿ

‘ನ್ಯಾಯಾಲಯದಲ್ಲಿ ಸೆಬಿ ಮಾಜಿ ಅಧ್ಯಕ್ಷೆ ಹಾಗೂ ಇತರರ ವಿರುದ್ಧ ತನಿಖೆ ಕೋರಿ ಅರ್ಜಿಯೊಂದು ಸಲ್ಲಿಕೆಯಾಗಿದೆ. ಈ ಆರೋಪಕ್ಕೆ ಸಂಬಂಧಿಸಿದಂತೆ ತನ್ನ ಮನವಿ ಆಲಿಸುವುದಕ್ಕೆ ನ್ಯಾಯಾಲಯವು ಅವಕಾಶ ನೀಡದೆ ತನಿಖೆಗೆ ಆದೇಶಿಸಿದೆ’ ಎಂದು ಸೆಬಿ ಪ್ರತಿಕ್ರಿಯಿಸಿದೆ.

ಸೆಬಿ ವಿರುದ್ಧ ಈ ಅರ್ಜಿದಾರರಿಗೆ ಪದೇ ಪದೇ ದೂರು ಸಲ್ಲಿಸುವುದು ರೂಢಿಯಾಗಿದೆ. ಈ ಹಿಂದೆಯೂ ಅವರು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಾಲಯವು ವಜಾಗೊಳಿಸಿ ದಂಡ ವಿಧಿಸಿದೆ ಎಂದು ಹೇಳಿದೆ.

ನಿಯಮಾವಳಿಗಳ ಪಾಲನೆಯ ಜೊತೆಗೆ ನ್ಯಾಯಾಲಯದ ಆದೇಶವನ್ನು ಕಾನೂನು ನೆಲಗಟ್ಟಿನಲ್ಲಿಯೇ ನಿಭಾಯಿಸಲಾಗುವುದು ಎಂದು ಹೇಳಿದೆ.

ಮೈಕ್ರೊ ಎಸ್‌ಐಪಿ ಹೂಡಿಕೆ ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಒಂದು ಕಾಲದಲ್ಲಿ ಶಾಂಪೂ, ಫೇಸ್ ಪೌಡರ್, ಫೇರ್ ನೆಸ್ ಕ್ರೀಂ, ಕಾಫಿ ಪುಡಿ, ಟೀ ಪುಡಿ, ವಾಷಿಂಗ್ ಪೌಡರ್ ಇವೆಲ್ಲಾ ದೊಡ್ಡಗಾತ್ರದ ಡಬ್ಬಿ ಮತ್ತು ಪ್ಯಾಕೆಟ್‌ಗಳಲ್ಲಿ ಮಾರುಕಟ್ಟೆ ತಲುಪುತ್ತಿದ್ದವು. ಆಗ ಸಾಕಷ್ಟು ದುಡ್ಡಿರುವ ಮಂದಿಯಷ್ಟೇ ಇವುಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತಿತ್ತು. ಆ ಎಲ್ಲಾ ವಸ್ತುಗಳು ಕ್ರಮೇಣ ಸ್ಯಾಚೆಟ್ (ಸಣ್ಣ ಪ್ಯಾಕೆಟ್) ರೂಪದಲ್ಲಿ ಮಾರುಕಟ್ಟೆ ಪ್ರವೇಶಿಸಲು ಶುರುವಾದವು. ಇದರಿಂದ ಜನಸಾಮಾನ್ಯರು ಕೂಡ ಬ್ರ್ಯಾಂಡೆಡ್ ವಸ್ತುಗಳನ್ನು ಸಣ್ಣ ಪ್ರಮಾಣದಲ್ಲಿ ಖರೀದಿಸಲು ಸಾಧ್ಯವಾಯಿತು.

ಹೌದು, ದೇಶದಲ್ಲಿ ಸ್ಯಾಚೆಟ್ ಪದ್ಧತಿಯನ್ನು ಹುಟ್ಟುಹಾಕಿ ಬ್ರ್ಯಾಂಡೆಡ್ ವಸ್ತುಗಳ ಸಾರ್ವತ್ರೀಕರಣ ಮಾಡಿದವರು ತಮಿಳುನಾಡಿನ ರೈತ, ಉದ್ಯಮಿ ಚಿನ್ನಿ ಕೃಷ್ಣನ್. ಈಗ ಅದೇ ಸ್ಯಾಚೆಟ್ ಪರಿಕಲ್ಪನೆಯು ಮ್ಯೂಚುವಲ್ ಫಂಡ್ ಹೂಡಿಕೆಯನ್ನೂ ಪ್ರವೇಶಿಸಿದೆ.

ಮ್ಯೂಚುವಲ್ ಫಂಡ್ ಮೈಕ್ರೊ ಎಸ್‌ಐಪಿ (ಸಣ್ಣ ಮೊತ್ತದ ಮ್ಯೂಚುವಲ್ ಫಂಡ್ ಹೂಡಿಕೆ) ಕಲ್ಪನೆಯನ್ನು ಎಸ್‌ಬಿಐ ಮ್ಯೂಚುವಲ್ ಫಂಡ್ ಪರಿಚಯಿಸಿದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ₹250 ಮೊತ್ತದ ಮೈಕ್ರೊ ಎಸ್‌ಐಪಿಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ಅಗತ್ಯವಿದೆ ಎಂದು ಹಲವು ಬಾರಿ ಪ್ರಸ್ತಾಪಿಸಿತ್ತು. ಹಾಗಾಗಿ, ಎಸ್‌ಬಿಐ ಮ್ಯೂಚುವಲ್ ಫಂಡ್ ಜನ್‌ನಿವೇಶ್ ಎಸ್‌ಐಪಿ ಸ್ಕೀಂನಲ್ಲಿ ಕೇವಲ ₹250 ಹೂಡಿಕೆಗೆ ಅವಕಾಶ ಕಲ್ಪಿಸಿದೆ.

ಮೈಕ್ರೊ ಎಸ್‌ಐಪಿ ಎಂದರೇನು?: ಮೈಕ್ರೊ ಎಸ್‌ಐಪಿ ಒಂದು ಸಣ್ಣ ಪ್ರಮಾಣದ ಮ್ಯೂಚುವಲ್ ಫಂಡ್ ಹೂಡಿಕೆಯ ಉತ್ಪನ್ನವಾಗಿದೆ. ಪ್ರತಿ ದಿನ, ಪ್ರತಿ ವಾರ ಅಥವಾ ಪ್ರತಿ ತಿಂಗಳು ₹250 ಎಸ್‌ಐಪಿ ಮಾಡಲು ಕಲ್ಪಿಸಲಾಗಿದೆ. ಸದ್ಯ ಎಸ್‌ಬಿಐ ಬ್ಯಾಲೆನ್ಸ್ಡ್ ಅಡ್ವಾಂಡೇಟ್ ಫಂಡ್‌ನಲ್ಲಿ ಮೈಕ್ರೊ ಎಸ್‌ಐಪಿ ಆಯ್ಕೆ ಇದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಫಂಡ್‌ಗಳಿಗೆ ಈ ಎಸ್‌ಐಪಿ ವ್ಯವಸ್ಥೆ ಒದಗಿಸುವುದಾಗಿ ಎಸ್‌ಬಿಐ ಮ್ಯೂಚುವಲ್ ಫಂಡ್ ತಿಳಿಸಿದೆ.

ಜನರು ತೊಡಗಿಸಿದ ಹಣವನ್ನು ಷೇರುಪೇಟೆ ಮತ್ತು ಬಾಂಡ್‌ನಂತಹ ಡೆಟ್ ಹೂಡಿಕೆಗಳಲ್ಲಿ ಎಸ್‌ಬಿಐ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್ ಹೂಡಿಕೆ ಮಾಡುವುದರಿಂದ ಮಾರುಕಟ್ಟೆ ಏರಿಳಿತವನ್ನು ಯಶಸ್ವಿಯಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ಈ ಫಂಡ್‌ನ ಒಂದು ವರ್ಷದ ಗಳಿಕೆ ಶೇ 9.9ರಷ್ಟಿದ್ದು ಮೂರು ವರ್ಷದ ವಾರ್ಷಿಕ ಸರಾಸರಿ ಗಳಿಕೆ ಶೇ 12.69ರಷ್ಟಿದೆ.

ಈ ಫಂಡ್‌ನ ಡೈರೆಕ್ಟ್ ಪ್ಲಾನ್‌ನಲ್ಲಿ (ನೀವೇ ನೇರವಾಗಿ ಹೂಡಿಕೆ ಮಾಡಿದರೆ ಶೇ 0.69ರಷ್ಟು (ಎಕ್ಸ್‌ಪೆನ್ಸ್ ರೇಷಿಯೊ) ಕಮಿಷನ್ ಇದೆ. ರೆಗ್ಯುಲರ್ ಫಂಡ್‌ನಲ್ಲಿ ಮ್ಯೂಚುವಲ್ ಫಂಡ್ ವಿತರಕರ ಮೂಲಕ ತೊಡಗಿಸಿದರೆ ಶೇ 1.57ರಷ್ಟು (ಎಕ್ಸ್‌ಪೆನ್ಸ್ ರೇಷಿಯೊ) ಕಮಿಷನ್ ಕೊಡಬೇಕಾಗುತ್ತದೆ. ಎಸ್‌ಬಿಐ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್‌ನಲ್ಲಿ ಹೂಡಿಕೆ ಮಾಡಲು ಸದ್ಯ ಎಸ್‌ಬಿಐ ಯೊನೊ, ಎಸ್‌ಬಿಐ ಮ್ಯೂಚುವಲ್ ಫಂಡ್ ಪ್ಲಾಟ್‌ಫಾರಂಗಳನ್ನು ಬಳಸಬಹುದಾಗಿದೆ.

ಮುಂದಿನ ದಿನಗಳಲ್ಲಿ ಜೆರೊದಾ, ಗ್ರೋ, ಪೇಟಿಎಂ ಸೇರಿ ಇತರೆ ಡೈರೆಕ್ಟ್ ಮ್ಯೂಚುವಲ್ ಫಂಡ್ ಆ್ಯಪ್‌ಗಳು ಕೂಡ ಎಸ್‌ಬಿಐ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್ ತರಹದ ಮೈಕ್ರೊ ಎಸ್‌ಐಪಿ ಹೂಡಿಕೆಗಳಿಗೆ ಅವಕಾಶ ಕಲ್ಪಿಸುವ ಸಾಧ್ಯತೆಯಿದೆ. ಸೆಬಿ ನಿರ್ದೇಶನದಂತೆ ಮುಂದಿನ ದಿನಗಳಲ್ಲಿ ಎಸ್‌ಬಿಐ ಅಷ್ಟೇ ಅಲ್ಲದೆ ಇನ್ನಿತರ ಮ್ಯೂಚುವಲ್ ಫಂಡ್ ಕಂಪನಿಗಳು ಸಹ ಮೈಕ್ರೊ ಎಸ್‌ಐಪಿ ಹೂಡಿಕೆ ಆಯ್ಕೆಗಳನ್ನು ತರುವ ಸಾಧ್ಯತೆ ಇದೆ.

ಯಾರಿಗೆ ಅನುಕೂಲ?: ಹೊಸದಾಗಿ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವವರಿಗೆ, ಗ್ರಾಮೀಣ ಮತ್ತು ಸಣ್ಣ ಪಟ್ಟಣಗಳಲ್ಲಿ ವಾಸವಿರುವವರಿಗೆ, ವ್ಯಾಪಾರಸ್ಥರಿಗೆ, ಪ್ರತಿದಿನ ಆದಾಯ ಗಳಿಸುವವರಿಗೆ, ಪಾರ್ಟ್ ಟೈಂ ಕೆಲಸ ಮಾಡುವವರಿಗೆ, ಆಟೊ ಚಾಲಕರಿಗೆ, ಕ್ಯಾಬ್ ಚಾಲಕರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಹೀಗೆ ಪ್ರತಿಯೊಬ್ಬರಿಗೂ ಹೂಡಿಕೆ ಮಾಡಲು ಮೈಕ್ರೊ ಎಸ್‌ಐಪಿ ಅನುಕೂಲಕರವಾಗಿದೆ.

ಮೈಕ್ರೊ ಎಸ್‌ಐಪಿ ಮೂಲಕ ಹೆಚ್ಚೆಚ್ಚು ಜನರಿಗೆ ಮ್ಯೂಚುವಲ್ ಫಂಡ್ ಹೂಡಿಕೆ ತಲುಪಿಸಲು ಸಾಧ್ಯವಾಗುವ ಜೊತೆಗೆ ಹಣಕಾಸು ನಿರ್ವಹಣೆ ಮತ್ತು ಉಳಿತಾಯದ ಶಿಸ್ತನ್ನು ತರಬಹುದಾಗಿದೆ. ಉದಾಹರಣೆಗೆ ಮುಂದಿನ 25 ವರ್ಷ ಕಾಲ ಪ್ರತಿ ತಿಂಗಳು ₹250 ಎಸ್‌ಐಪಿ ಹೂಡಿಕೆ ಮಾಡಿದರೆ ಶೇ 12ರಷ್ಟು ಗಳಿಕೆ ಲಾಭಾಂಶ ಸಿಕ್ಕರೆ ₹4.25 ಲಕ್ಷ ಸಿಗುತ್ತದೆ.

25 ವರ್ಷ ಕಾಲ ಪ್ರತಿದಿನ ₹250 ಎಸ್‌ಐಪಿ ಹೂಡಿಕೆ ಮಾಡಿ ಶೇ 12ರಷ್ಟು ಲಾಭಾಂಶ ದಕ್ಕಿದರೆ ₹16.50 ಲಕ್ಷ ಹೂಡಿಕೆ ಮೊತ್ತವೂ ಸೇರಿ 25 ವರ್ಷದ ಬಳಿಕ ₹1.04 ಕೋಟಿ ಲಭಿಸುತ್ತದೆ. ಸಣ್ಣ ಹೂಡಿಕೆಯೂ ಎಷ್ಟು ದೊಡ್ಡ ಮೊತ್ತ ತಂದುಕೊಡಬಹುದು ಎನ್ನುವುದು ಈ ಲೆಕ್ಕಾಚಾರದಿಂದ ಮನದಟ್ಟಾಗುತ್ತದೆ.

ಕಿವಿಮಾತು: ಸೆಬಿ ನಿರ್ದೇಶನಕ್ಕೂ ಮುಂಚೆಯೇ ₹100 ಮೈಕ್ರೊ ಎಸ್‌ಐಪಿಗಳನ್ನು ಹಲವು ಮ್ಯೂಚುವಲ್ ಫಂಡ್‌ಗಳು ಪರಿಚಯಿಸಿವೆ. ಆದರೆ, ಸಣ್ಣ ಮೊತ್ತದ ಹೂಡಿಕೆಗಳು ಲಾಭದಾಯಕವಲ್ಲದ ಕಾರಣ ಮ್ಯೂಚುವಲ್ ಫಂಡ್ ಕಂಪನಿಗಳು ಅಂತಹ ಮೈಕ್ರೊ ಎಸ್‌ಐಪಿಗಳಿಗೆ ಹೆಚ್ಚು ಒತ್ತು ನೀಡಿರಲಿಲ್ಲ. ಈಗ ಸೆಬಿ ಮುಂದಾಳತ್ವದಲ್ಲಿ ₹250 ಮೈಕ್ರೊ ಎಸ್‌ಐಪಿಗಳನ್ನು ಜನರ ಮೇಲೆ ಹೆಚ್ಚು ಶುಲ್ಕದ ಭಾರ ಹೇರದೆ ನಡೆಸಿದರೆ ಅವು ಜನಪ್ರಿಯವಾಗುವುದರಲ್ಲಿ ಅನುಮಾನವಿಲ್ಲ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)



ಕರಡಿ ಹಿಡಿತದಲ್ಲಿ ಷೇರುಪೇಟೆ

ಷೇರುಪೇಟೆಯಲ್ಲಿ ಕರಡಿ ಹಿಡಿತ ಜೋರಾಗಿದೆ. ಫೆಬ್ರುವರಿ 28ಕ್ಕೆ ಕೊನೆಗೊಂಡ ವಾರದಲ್ಲಿ ಸೂಚ್ಯಂಕಗಳು ಗಣನೀಯ ಕುಸಿತ ದಾಖಲಿಸಿವೆ. 73,198 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.81ರಷ್ಟು ತಗ್ಗಿದೆ. 22,124 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.94ರಷ್ಟು ಇಳಿಕೆಯಾಗಿದೆ.

ಇನ್ನು ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 5.09ರಷ್ಟು ಕುಗ್ಗಿದ್ದರೆ, ಸ್ಮಾಲ್ ಕ್ಯಾಪ್ ಶೇ 5.99ರಷ್ಟು ಕುಸಿದಿದೆ. ನಿಫ್ಟಿ ಸತತ ಐದು ತಿಂಗಳಿಂದ ಕುಸಿತ ಕಾಣುತ್ತಿದ್ದರೆ, ಸೆನ್ಸೆಕ್ಸ್ ಮೂರು ತಿಂಗಳಿಂದ ಇಳಿಮುಖವಾಗಿ ಸಾಗುತ್ತಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕ ನೀತಿ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬರುತ್ತಿರುವ ಮಂದಗತಿಯ ವಹಿವಾಟು, ಕಂಪನಿಗಳ ಮುಂಬರುವ ತ್ರೈಮಾಸಿಕದ ಫಲಿತಾಂಶ ಕುಸಿಯಬಹುದು ಎಂಬ ಆತಂಕ, ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ ಸೇರಿ ಹಲವು ಅಂಶಗಳು ಮಾರುಕಟ್ಟೆಯ ಗಣನೀಯ ಇಳಿಕೆಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಐ.ಟಿ ಶೇ 7.96, ಮಾಧ್ಯಮ ಶೇ 7.07, ರಿಯಲ್ ಎಸ್ಟೇಟ್ ಶೇ 5.52, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 5.33, ಎನರ್ಜಿ ಶೇ 4.98, ಆಟೊ ಶೇ 4.68, ಲೋಹ ಶೇ 4.54, ಸರ್ವಿಸ್ ಶೇ 2.9, ಫಾರ್ಮಾ ಶೇ 2.81, ಎಫ್‌ಎಂಸಿಜಿ ಶೇ 2.7 ಮತ್ತು ಫೈನಾನ್ಸ್ ಶೇ 0.63ರಷ್ಟು ಕುಸಿದಿವೆ.

ಇಳಿಕೆ–ಗಳಿಕೆ: ನಿಫ್ಟಿ 50 ಸೂಚ್ಯಂಕದಲ್ಲಿ ವಾರದ ಲೆಕ್ಕಾಚಾರ ನೋಡಿದಾಗ ಟೆಕ್ ಮಹೀಂದ್ರ ಶೇ 9.83, ಅಲ್ಟ್ರಾ ಟೆಕ್ ಸಿಮೆಂಟ್ ಶೇ 9.22, ವಿಪ್ರೊ ಶೇ 9.14, ಟಿಸಿಎಸ್ ಶೇ 8, ಟಾಟಾ ಮೋಟರ್ಸ್ ಶೇ 7.7, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 7.34, ಬಜಾಜ್ ಆಟೊ ಶೇ 7.09, ಇಂಡಸ್ ಇಂಡ್ ಬ್ಯಾಂಕ್ ಶೇ 6.74, ಇನ್ಫೊಸಿಸ್ ಶೇ 6.69, ಒಎನ್‌ಜಿಸಿ ಶೇ 5.9, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 4.64ರಷ್ಟು ಕುಸಿತ ಕಂಡಿವೆ.

ಶ್ರೀರಾಮ್ ಫೈನಾನ್ಸ್ ಶೇ 5.22, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 2.36, ಬಜಾಜ್ ಫೈನಾನ್ಸ್ ಶೇ 1.91 ಮತ್ತು ಎಕ್ಸಿಸ್ ಬ್ಯಾಂಕ್ ಶೇ 0.65ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆ ಸೂಚ್ಯಂಕಗಳು ಎಣಿಕೆಯ ಲೆಕ್ಕಾಚಾರಕ್ಕೆ ಸಿಗದ ಸ್ಥಿತಿ ತಲುಪಿವೆ. ಜಾಗತಿಕ ವಿದ್ಯಮಾನ, ಟ್ರಂಪ್ ಸುಂಕ ನೀತಿ ಸೇರಿ ಇನ್ನೂ ಹಲವು ಅಂಶಗಳು ಮಾರುಕಟ್ಟೆ ಮೇಲೆ ಈ ವಾರವೂ ಪರಿಣಾಮ ಬೀರುವ ಸಾಧ್ಯತೆಯಿದೆ. ಇದರ ನಡುವೆಯೂ ಮಾರುಕಟ್ಟೆ ಒಂದಷ್ಟು ಚೇತರಿಕೆ ಕಾಣಲಿದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ. ಆದರೆ, ಅದು ಎಷ್ಟರಮಟ್ಟಿಗೆ ವಾಸ್ತವಕ್ಕೆ ಬರಲಿದೆ ಎನ್ನುವುದನ್ನು ಕಾದುನೋಡಬೇಕಿದೆ.

ಸಂಕ್ಷಿಪ್ತ ಸುದ್ದಿ

‘ಸಾಗಣೆ ವೆಚ್ಚ ತಗ್ಗಿಸಲು ಸಿಡಬ್ಲ್ಯುಸಿ ಪಾತ್ರ ಹಿರಿದು’



ಪ್ರಲ್ಹಾದ ಜೋಶಿ

ನವದೆಹಲಿ (ಪಿಟಿಐ): ‘ದೇಶದ ಸರಕು ಸಾಗಣೆಯ ವೆಚ್ಚ ತಗ್ಗಿಸುವಲ್ಲಿ ಕೇಂದ್ರ ಗೋದಾಮು ನಿಗಮವು (ಸಿಡಬ್ಲ್ಯುಸಿ) ಮಹತ್ವದ ಪಾತ್ರ ವಹಿಸುತ್ತಿದೆ’ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಸಿಡಬ್ಲ್ಯುಸಿಯ 69ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸಾಗಣೆ ವೆಚ್ಚ ತಗ್ಗಿಸಲು ರಾಷ್ಟ್ರೀಯ ಸರಕು ಸಾಗಣೆ ನೀತಿ ಮತ್ತು ಪಿ.ಎಂ ಗತಿಶಕ್ತಿ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಪ್ರಸ್ತುತ ದೇಶದ ಸಾಗಣೆ ವೆಚ್ಚವು ಶೇ 13ರಿಂದ ಶೇ 14ರಷ್ಟಿದೆ. ಜಾಗತಿಕ ಮಾನದಂಡದ ಪ್ರಕಾರ ಇದನ್ನು ಶೇ 8ಕ್ಕೆ ಇಳಿಸಲು ಸರ್ಕಾರ ಗುರಿ ಹೊಂದಿದೆ ಎಂದು ಹೇಳಿದರು.

1957ರಲ್ಲಿ ಸ್ಥಾಪನೆಗೊಂಡ ಸಿಡಬ್ಲ್ಯುಸಿ 700ಕ್ಕೂ ಹೆಚ್ಚು ಗೋದಾಮುಗಳನ್ನು ಹೊಂದಿದ್ದು, 148.29 ಲಕ್ಷ ಟನ್ ದಾಸ್ತಾನು ಸಾಮರ್ಥ್ಯವನ್ನು ಹೊಂದಿದೆ.

ಫೆಮಾ ಉಲ್ಲಂಘನೆ ಪೇಟಿಎಂಗೆ ನೋಟಿಸ್ ಜಾರಿ

ನವದೆಹಲಿ (ಪಿಟಿಐ): ಎರಡು ಕಂಪನಿಗಳ ಸ್ವಾಧೀನ ಪ್ರಕ್ರಿಯೆ ವೇಳೆ ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆಯ (ಫೆಮಾ) ನಿಯಮಾವಳಿ ಉಲ್ಲಂಘಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್‌ಗೆ (ಒಸಿಎಲ್) ಜಾರಿ ನಿರ್ದೇಶನಾಲಯವು (ಇ.ಡಿ) ಷೋಕಾಸ್ ನೋಟಿಸ್ ನೀಡಿದೆ.

ಗ್ರೂಪಾನ್ ಇಂಡಿಯಾದ ಲಿಟಲ್ ಇಂಟರ್‌ನೆಟ್ ಪ್ರೈವೆಟ್ ಲಿಮಿಟೆಡ್ (ಎಲ್‌ಐಪಿಎಲ್) ಮತ್ತು ನಿಯರ್‌ಬೈ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಅನ್ನು (ಎನ್‌ಐಪಿಎಲ್) 2017ರಲ್ಲಿ ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. 2015ರಿಂದ 2019ರ ಅವಧಿಯಲ್ಲಿ ಫೆಮಾ ನಿಯಮ ಉಲ್ಲಂಘಿಸಲಾಗಿದೆ ಎಂದು ನೋಟಿಸ್ ನೀಡಲಾಗಿದೆ ಎಂದು ಪೇಟಿಎಂ ತಿಳಿಸಿದೆ.

ಈ ನೋಟಿಸ್‌ಗೆ ಸಂಬಂಧಿಸಿದಂತೆ ಕಾನೂನು ಸಲಹೆ ಪಡೆಯಲಾಗುತ್ತಿದೆ. ಇದು ಕಂಪನಿಯ ಸೇವೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಹೇಳಿದೆ.

ಗಾಜಾಕ್ಕೆ ಇಸ್ರೇಲ್ ನೆರವು ಕಡಿತ

ಟೆಲ್ ಅವೀವ್ (ಎಪಿ): ಇಸ್ರೇಲ್ ಭಾನುವಾರ ಗಾಜಾಪಟ್ಟಿಗೆ ಪೂರೈಕೆ ಆಗುತ್ತಿದ್ದ ಎಲ್ಲ ಸರಕು ಸರಬರಾಜನ್ನು ನಿಲ್ಲಿಸಿದೆ. ಕದನ ವಿರಾಮದ ಮೊದಲ ಹಂತದ ಮಾತುಕತೆಯನ್ನು ಹಮಾಸ್ ಒಪ್ಪಿಕೊಳ್ಳದಿದ್ದರೆ, ‘ಇನ್ನಷ್ಟು ಕೆಟ್ಟ ಪರಿಣಾಮ’ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಟ್ರಂಪ್ ಕ್ರಮ ಕಾನೂನು ವಿರೋಧಿ: ನ್ಯಾಯಾಧೀಶ

ವಾಷಿಂಗ್ಟನ್ (ಎಪಿ): ಫೆಡರಲ್ ಕಣ್ಗಾವಲು ಸಂಸ್ಥೆಯ ಮುಖ್ಯಸ್ಥರು ತಮ್ಮ ಸೇವೆಯಲ್ಲಿ ಮುಂದುವರಿಯಬೇಕು ಎಂದು ವಾಷಿಂಗ್ಟನ್‌ನ ನ್ಯಾಯಾಧೀಶರೊಬ್ಬರು ಶನಿವಾರ ಹೇಳಿದರು.

ಸ್ಪೆಷಲ್ ಕೌನ್ಸಿಲ್ ಅವರನ್ನು ಉಚ್ಚಾಟಿಸಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮ ‘ಕಾನೂನು ವಿರೋಧಿ’ ಎಂದು ಅವರು ಹೇಳಿದರು.

ಸ್ವತಂತ್ರ ಕಣ್ಗಾವಲು ಸಂಸ್ಥೆಯ ಮುಖ್ಯಸ್ಥರನ್ನು ಉಚ್ಚಾಟನೆ ಮಾಡಿದ ಅಧ್ಯಕ್ಷರ ಅಧಿಕಾರವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಅಮೆರಿಕದ ಜಿಲ್ಲಾ ನ್ಯಾಯಾಧೀಶ ಆಮಿ ಬರ್ಮನ್ ಜಾಕ್ಸನ್ ಅವರು ವಿಚಾರಣೆ ನಡೆಸಿದರು. ಸ್ಪೆಷಲ್ ಕೌನ್ಸಿಲ್ ಕಚೇರಿಯ ಮುಖ್ಯಸ್ಥ ಹ್ಯಾಂಪ್ಟನ್ ಡೆಲ್ಲಿಂಗರ್ ಅವರನ್ನು ಪುನರ್ ನೇಮಕ ಮಾಡಿ ತೀರ್ಪು ಪ್ರಕಟಿಸಿದರು. ಟ್ರಂಪ್ ಕ್ರಮವನ್ನು ಪ್ರಶ್ನಿಸಿ ಡೆಲ್ಲಿಂಗರ್ ಅವರು ಕಳೆದ ತಿಂಗಳು ನ್ಯಾಯಾಲಯದ ಮೊರೆಹೋಗಿದ್ದರು.

ಶೇ 40ರಷ್ಟು ಜನರಿಗೆ ಮಾತೃಭಾಷೆಯಲ್ಲಿ ಸಿಗದ ಶಿಕ್ಷಣ

ನವದೆಹಲಿ (ಪಿಟಿಐ): ಜಗತ್ತಿನ ಶೇ 40ರಷ್ಟು ಜನರಿಗೆ, ತಮಗೆ ಅರ್ಥವಾಗುವ ಅಥವಾ ಮಾತನಾಡುವ ಭಾಷೆಯಲ್ಲಿ ಶಿಕ್ಷಣ ದೊರೆಯುತ್ತಿಲ್ಲ ಎಂದು ಯುನೆಸ್ಕೊದ ಜಾಗತಿಕ ಶಿಕ್ಷಣ ಮೇಲ್ವಿಚಾರಣೆ ತಂಡವು (ಜಿಇಎಂ) ಹೇಳಿದೆ.

ಶಿಕ್ಷಣದಲ್ಲಿ ಮಾತೃಭಾಷೆಯ ಪಾತ್ರದ ಬಗ್ಗೆ ಹಲವು ದೇಶಗಳಲ್ಲಿ ಜಾಗೃತಿ ಹೆಚ್ಚುತ್ತಿದ್ದರೂ ಈ ನೀತಿ ಅಳವಡಿಕೆ ಪ್ರಮಾಣವು ಸೀಮಿತವಾಗಿದೆ. ಶಿಕ್ಷಕರಲ್ಲಿ ಮಾತೃಭಾಷೆಗಳನ್ನು ಬಳಸುವ ಸಾಮರ್ಥ್ಯ ಸೀಮಿತವಾಗಿರುವುದು, ಪಠ್ಯಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಸ್ಥಳೀಯ ಭಾಷೆಗಳಲ್ಲಿ ಮಾಹಿತಿ ಅಭಾವ, ಸಮುದಾಯದ ವಿರೋಧ ಸೇರಿದಂತೆ ಹಲವು ಸಮಸ್ಯೆಗಳು ಮಾತೃಭಾಷೆ ಶಿಕ್ಷಣ ನೀತಿ ಅನುಷ್ಠಾನಕ್ಕೆ ಸವಾಲಾಗಿವೆ ಎಂದು ಅದು ಅಭಿಪ್ರಾಯಪಟ್ಟಿದೆ.

ಕಡಿಮೆ ಮತ್ತು ಮಧ್ಯಮ ಆದಾಯ ಇರುವ ಕೆಲವು ದೇಶಗಳಲ್ಲಿ ಈ ಸಮಸ್ಯೆಯು ಶೇ 90ರಷ್ಟಿದೆ. ಎಲ್ಲ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವ ಶೈಕ್ಷಣಿಕ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವ ಗುರಿಯೊಂದಿಗೆ ಬಹುಭಾಷಾ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಶಿಫಾರಸು ಮಾಡಲಾಗುತ್ತಿದೆ ಎಂದು ಜಿಇಎಂ ಅಧಿಕಾರಿಗಳು ತಿಳಿಸಿದರು.

ಎರಡು ತಿಂಗಳೊಳಗೆ ಬಿಡುಗಡೆ: ನೀತಿ ಆಯೋಗ

ಹೂಡಿಕೆ ಸ್ನೇಹಿ ಸೂಚ್ಯಂಕಕ್ಕೆ ಸಿದ್ಧತೆ

NITI AAYOG

ನವದೆಹಲಿ (ಪಿಟಿಐ): ‘ರಾಜ್ಯಗಳ ಹೂಡಿಕೆ ಸ್ನೇಹಿ ಸೂಚ್ಯಂಕ ಸಿದ್ಧಪಡಿಸಲಾಗುತ್ತಿದ್ದು, ಇನ್ನೆರಡು ತಿಂಗಳೊಳಗೆ ಬಿಡುಗಡೆ ಮಾಡಲಾಗುವುದು’ ಎಂದು ನೀತಿ ಆಯೋಗದ ಸದಸ್ಯ ಅರವಿಂದ ವೀರಮಣಿ ತಿಳಿಸಿದ್ದಾರೆ.

ಪ್ರಸಕ್ತ ವರ್ಷದಲ್ಲಿ ರಾಜ್ಯಗಳ ಹೂಡಿಕೆ ಸ್ನೇಹಿ ವಾತಾವರಣ ಕುರಿತಂತೆ ಸೂಚ್ಯಂಕ ಪ್ರಕಟಿಸುವ ಬಗ್ಗೆ 2025–26ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಪ್ರಕಟಿಸಿದೆ.

ಸಂಯುಕ್ತ ವ್ಯವಸ್ಥೆಯಡಿ ಸ್ಪರ್ಧಾತ್ಮಕತೆಯ ಸಹಕಾರಕ್ಕೆ ಇದು ಪ್ರೇರಣೆಯಾಗಲಿದೆ. ಹೂಡಿಕೆಗೆ ಅಡ್ಡಿಯಾಗಲಿರುವ ನೀತಿಗಳನ್ನು ಪರಾಮರ್ಶಿಸಿ ಮಾರ್ಪಾಡು ಮಾಡಿಕೊಳ್ಳಲು ರಾಜ್ಯಗಳಿಗೆ ನೆರವಾಗಲಿದೆ. ಖಾಸಗಿ ಹೂಡಿಕೆಯ ಆಕರ್ಷಣೆಗೆ ಸಂಬಂಧಿಸಿದಂತೆ ರಾಜ್ಯಗಳ ನಡುವೆ ಆರೋಗ್ಯಕರ ಸ್ಪರ್ಧೆಗೆ ಸಹಕಾರಿಯಾಗಲಿದೆ ಎಂದು ಹೇಳಿದೆ.

ಕೇಂದ್ರ ಹಣಕಾಸು ಸಚಿವಾಲಯವು ನೀತಿ ಆಯೋಗ, ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ (ಡಿಪಿಐಐಟಿ) ಜೊತೆಗೆ ಸಮಾಲೋಚನೆ ನಡೆಸಿ ಈ ಸೂಚ್ಯಂಕವನ್ನು ಸಿದ್ಧಪಡಿಸುತ್ತಿದೆ.

‘ಸೂಚ್ಯಂಕ ಸಿದ್ಧಪಡಿಸುವಿಕೆಯ ಮೊದಲ ಹಂತ ಪೂರ್ಣಗೊಂಡಿದೆ. ಎರಡನೇ ಹಂತವು ಪ್ರಗತಿಯಲ್ಲಿದೆ. ಕೈಗಾರಿಕಾ ವಲಯದಿಂದ ಸಲಹೆ ಸ್ವೀಕರಿಸಲಾಗುತ್ತಿದೆ. ಸೂಚ್ಯಂಕ ಸಿದ್ಧಪಡಿಸುವಿಕೆಯಲ್ಲಿ ಈ ಸಲಹೆಗಳು ಹೆಚ್ಚು ಪ್ರಾಮುಖ್ಯ ಪಡೆದಿವೆ. ಇವುಗಳ ಆಧಾರದ ಮೇಲೆ ಮಾರ್ಪಾಡುಗಳನ್ನು ಮಾಡಲಾಗುತ್ತದೆ’ ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ವೀರಮಣಿ ತಿಳಿಸಿದ್ದಾರೆ.

‘ಯಾವ ದಿನದಂದು ಈ ಸೂಚ್ಯಂಕ ಬಿಡುಗಡೆಯಾಗಲಿದೆ ಎಂಬ ಬಗ್ಗೆ ನಾನು ಖಚಿತವಾಗಿ ಹೇಳಲಾರೆ. ಆದರೆ, ಒಂದು ಅಥವಾ ಎರಡು ತಿಂಗಳೊಳಗೆ ಬಿಡುಗಡೆ ಮಾಡಲಾಗುವುದು’ ಎಂದು ತಿಳಿಸಿದ್ದಾರೆ.

ಎಲ್ಲಾ ರಾಜ್ಯಗಳು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮತ್ತು ಖಾಸಗಿ ಬಂಡವಾಳ ಹೂಡಿಕೆಯ ಪ್ರಯೋಜನ ಪಡೆದುಕೊಳ್ಳುವಂತೆ ಪ್ರಧಾನಿ ಹೇಳಿದ್ದಾರೆ. ಇದರಿಂದ ತಯಾರಿಕಾ ಚಟುವಟಿಕೆಗಳು ಸದೃಢಗೊಳ್ಳಲಿವೆ. ರಾಜ್ಯಗಳ ಆರ್ಥಿಕತೆಯ ಬೆಳವಣಿಗೆಯು ಬಲಗೊಳ್ಳಲಿದೆ ಎಂದು ಹೇಳಿದ್ದಾರೆ.

ಐ.ಟಿ ಮಸೂದೆ: 6ರಿಂದ ಅಭಿಪ್ರಾಯ ಸಂಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಪರಿಶೀಲನಾ ಸಮಿತಿಯು ಆದಾಯ ತೆರಿಗೆ ಮಸೂದೆ 2025ರ ಕುರಿತಂತೆ ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ), ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಎಫ್‌ಐಸಿಸಿಐ) ಸೇರಿ ಕೈಗಾರಿಕೆ ವಲಯದ ಸಂಘ–ಸಂಸ್ಥೆಗಳಿಂದ ಅಭಿಪ್ರಾಯ ಸ್ವೀಕರಿಸಲಿದೆ.

ಬಿಜೆಪಿ ಹಿರಿಯ ಸಂಸದ ಬೈಜಯಂತ್ ಪಾಂಡಾ ಇದರ ಅಧ್ಯಕ್ಷರಾಗಿದ್ದಾರೆ. ಸಂಸದರಾದ ನಿಶಿಕಾಂತ್ ದುಬೆ, ಜಗದೀಶ ಶೆಟ್ಟರ್, ಭರ್ತೃಹರಿ ಮಹತಾಬ್, ನವೀನ್ ಜಿಂದಾಲ್, ದೀಪೇಂದರ್ ಹೂಡಾ, ಬೆನ್ನಿ ಬೆಹನನ್, ಮಹುವಾ ಮೊಯಿತ್ರಾ, ಎನ್.ಕೆ. ಪ್ರೇಮಚಂದ್ರನ್, ಸುಪ್ರಿಯಾ ಸುಳೆ, ಅರವಿಂದ್ ಸಾವಂತ್ ಹಾಗೂ ಲಾಲ್ಜಿ ವರ್ಮಾ ಈ ಸಮಿತಿಯ ಸದಸ್ಯರಾಗಿದ್ದಾರೆ.

ಫೆಬ್ರುವರಿ 24ರಂದು ಸಮಿತಿಯ ಮೊದಲ ಸಭೆ ನಡೆದಿದೆ. ಮಾರ್ಚ್ 6ರಂದು ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆ (ಐಸಿಎಐ), ತೆರಿಗೆ ಸಲಹಾ ಸಂಸ್ಥೆಯಾದ ಇವೈ ಇಂಡಿಯಾ ಜೊತೆಗೆ ಸಮಾಲೋಚನೆ ನಡೆಸಲಿದೆ. ಮಾರ್ಚ್ 7ರಂದು ಎಫ್‌ಐಸಿಸಿಐ ಮತ್ತು ಸಿಐಐ ಜೊತೆಗೆ ಚರ್ಚಿಸಲಿದೆ.

ಮುಂದಿನ ಸಂಸತ್ ಅಧಿವೇಶನದ ಮೊದಲ ದಿನದಂದು ವರದಿ ಸಲ್ಲಿಸುವಂತೆ ಈ ಸಮಿತಿಗೆ ಸೂಚಿಸಲಾಗಿದೆ.

ವಿಚ್ಛೇದನ ನೀಡುವೆ, ಇನ್‌ಸ್ಟಾಗ್ರಾಂ ತ್ಯಜಿಸಲ್ಲ: ನವ ವಿವಾಹಿತೆ

ಪ್ರಜಾವಾಣಿ ವಾರ್ತೆ

ಪಟ್ನಾ: ಬಿಹಾರದಲ್ಲಿ ಇತ್ತೀಚೆಗೆ ವಿವಾಹವಾದ ಮಹಿಳೆಯೊಬ್ಬರು, ‘ಪತಿಗೆ ವಿಚ್ಛೇದನ ನೀಡಲು ಸಿದ್ಧ, ಆದರೆ ಇನ್‌ಸ್ಟಾಗ್ರಾಂ ಬಳಕೆ ಮಾತ್ರ ನಿಲ್ಲಿಸುವುದಿಲ್ಲ’ ಎಂದು ಹೇಳಿದ್ದಾರೆ.


ಪೂರ್ಣಿಯಾ ಜಿಲ್ಲೆಯ ಯುವಕನೊಬ್ಬ, ‘ಪತ್ನಿ ದಿನವಿಡೀ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಮುಳುಗಿರುತ್ತಾರೆ. ವಿವಿಧ ಭಂಗಿಯ ಫೋಟೊಗಳನ್ನು ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿರುತ್ತಾರೆ’ ಎಂದು ದೂರು ನೀಡಿದ್ದಾರೆ. ಇದೇ ವಿಷಯವಾಗಿ ಪತಿ–ಪತ್ನಿ ಮಧ್ಯೆ ವ್ಯಾಜ್ಯವಾಗಿತ್ತು. ಜಗಳ ವಿಕೋಪಕ್ಕೆ ತಿರುಗಿ, ಮಹಿಳೆ ತವರು ಮನೆಗೆ ತೆರಳಿದರು. ಗಂಡನ ಮನೆಗೆ ವಾಪಸ್ ಬರಲು ಅವರು ನಿರಾಕರಿಸುತ್ತಿದ್ದಾರೆ. ಪತಿ ನೀಡಿದ ದೂರಿನ ಆಧಾರದಲ್ಲಿ ಸ್ಥಳೀಯ ಪೊಲೀಸ್ ಸಲಹಾ ಮಂಡಳಿಯು ದಂಪತಿಯನ್ನು ವಿಚಾರಣೆಗೆ ಕರೆದಿತ್ತು. ಈ ಸಂದರ್ಭದಲ್ಲಿ ಮಹಿಳೆ, ಅಧಿಕಾರಿಗಳ ಎದುರೇ ಪತಿಯ ಜತೆ ವಾಗ್ವಾದ ನಡೆಸಿದರು. ‘ಬೇರೊಬ್ಬರ ಜೊತೆ ಸಂಬಂಧ ಇದೆ’ ಎಂಬ ಆರೋಪವನ್ನು ಅಲ್ಲಗಳೆದರು. ನಂತರ, ‘ಪತಿಯನ್ನು ಬೇಕಾದರೆ ಬಿಡುತ್ತೇನೆ. ಆದರೆ, ಸಾಮಾಜಿಕ ಮಾಧ್ಯಮದ ಬಳಕೆ ಬಿಡುವುದಿಲ್ಲ’ ಎಂದು ಹೇಳಿದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹540-695

ದ್ವಿತಳಿ (ಬಿ.ವಿ) ₹149-833

ಎನ್‌ಇಸಿಸಿ ಮೊಟ್ಟೆ ಧಾರಣೆ



ಬೆಂಗಳೂರು 100ಕ್ಕೆ ₹455

12 ಕ್ಕೆ ₹63

ಮೈಸೂರು 100ಕ್ಕೆ ₹450

ಅಮೆರಿಕದ ಮುಂದೆ ಮಂಡಿಸಲು ಚಿಂತನೆ: ಬ್ರಿಟನ್ ಪ್ರಧಾನಿ

ಕದನ ವಿರಾಮಕ್ಕೆ ಯೋಜನೆ

ಲಂಡನ್ (ಎಪಿ): ರಷ್ಯಾ ಮತ್ತು ಉಕ್ರೇನ್ ನಡುವೆ ಕದನ ವಿರಾಮ ಸಾಧ್ಯವಾಗಿಸಲು ಯೋಜನೆಯೊಂದನ್ನು ಒಟ್ಟಾಗಿ ಸಿದ್ಧಪಡಿಸಲು ಬ್ರಿಟನ್, ಫ್ರಾನ್ಸ್ ಮತ್ತು ಉಕ್ರೇನ್ ಒಪ್ಪಿವೆ ಎಂದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಭಾನುವಾರ ಹೇಳಿದ್ದಾರೆ.

ಕದನ ವಿರಾಮ ಯೋಜನೆಯನ್ನು ಅಮೆರಿಕದ ಮುಂದೆ ಇರಿಸಲಾಗುತ್ತದೆ. ರಷ್ಯಾ–ಉಕ್ರೇನ್ ಸಮರವನ್ನು ಕೊನೆಗೊಳಿಸುವ ಉದ್ದೇಶದಿಂದ ಸ್ಟಾರ್ಮರ್ ಅವರು ಯುರೋಪಿನ ವಿವಿಧ ದೇಶಗಳ ನಾಯಕರ ಸಭೆ ಕರೆದಿದ್ದಾರೆ. ಭಾನುವಾರ ನಡೆಯುವ ಸಭೆಗೂ ಮೊದಲು ಅವರು ಈ ವಿಷಯ ತಿಳಿಸಿದ್ದಾರೆ.

‘ಬ್ರಿಟನ್, ಫ್ರಾನ್ಸ್ ಮತ್ತು ಇನ್ನೂ ಒಂದು ಅಥವಾ ಎರಡು ದೇಶಗಳು ಒಟ್ಟಾಗಿ ಉಕ್ರೇನ್ ಜೊತೆಗೂಡಿ, ಯುದ್ಧವನ್ನು ನಿಲ್ಲಿಸುವ ಯೋಜನೆಯೊಂದನ್ನು ರೂಪಿಸಲು ಒಪ್ಪಿದ್ದೇವೆ. ಆ ಯೋಜನೆಯನ್ನು ನಾವು ನಂತರದಲ್ಲಿ ಅಮೆರಿಕದ ಜೊತೆ ಹಂಚಿಕೊಳ್ಳುತ್ತೇವೆ’ ಎಂದು ಸ್ಟಾರ್ಮರ್ ಅವರು ಬಿಬಿಸಿ ಪ್ರತಿನಿಧಿಗೆ ತಿಳಿಸಿದ್ದಾರೆ.

ಕದನ ವಿರಾಮ ಜಾರಿಗೆ ತರುವುದಕ್ಕಾಗಿ ಯುರೋಪಿನ ದೇಶಗಳ ಮಿಲಿಟರಿಯನ್ನು ಉಕ್ರೇನ್ ದೇಶಕ್ಕೆ ಕಳುಹಿಸುವ ಬಗ್ಗೆಯೂ ಭಾನುವಾರದ ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದೆ. ಉಕ್ರೇನ್‌ಗೆ ನೀಡಿರುವ ಬೆಂಬಲವನ್ನು ಅಮೆರಿಕವು ಹಿಂಪಡೆದರೆ ಯುರೋಪಿನ ದೇಶಗಳು ಉಕ್ರೇನ್ ಅನ್ನು ಹೇಗೆ ರಕ್ಷಿಸಬಹುದು ಮತ್ತು ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬಹುದು ಎಂಬುದನ್ನು ಚರ್ಚಿಸಲು ಈ ಸಭೆ ಕರೆಯಲಾಗಿದೆ.

ಝೆಲೆನ್‌ಸ್ಕಿ ಬ್ರಿಟನ್ ಸ್ವಾಗತ: ಲಂಡನ್‌ಗೆ ಶನಿವಾರ ಬಂದ ಝೆಲೆನ್‌ಸ್ಕಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದ ಕೀರ್ ಸ್ಟಾರ್ಮರ್ ಅವರು, ಉಕ್ರೇನ್‌ಗೆ ತಮ್ಮ ದೇಶದ ಬೆಂಬಲ ಇದೆ ಎಂದು ಹೇಳಿದ್ದಾರೆ. ಝೆಲೆನ್‌ಸ್ಕಿ ಅವರು ಅಮೆರಿಕ ಪ್ರವಾಸ ಮುಗಿಸಿ ಬ್ರಿಟನ್‌ಗೆ ಬಂದಿದ್ದಾರೆ.

ಝೆಲೆನ್‌ಸ್ಕಿ ಅವರು ಬ್ರಿಟನ್ ಪ್ರಧಾನಿಯ ನಿವಾಸದ ಬಳಿ ಬಂದಾಗ ಅಲ್ಲಿ ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದ ಜನ, ಉಕ್ರೇನ್ ಪರವಾಗಿ ಘೋಷಣೆಗಳನ್ನು ಕೂಗಿದರು. ಸ್ಟಾರ್ಮರ್ ಅವರು ಝೆಲೆನ್‌ಸ್ಕಿ ಅವರನ್ನು ಆಲಂಗಿಸಿ, ನಿವಾಸದ ಒಳಗೆ ಕರೆದುಕೊಂಡು ಹೋದರು.

‘ಹೊರಗಡೆ ಬೀದಿಯಲ್ಲಿ ಸೇರಿದ್ದ ಜನರ ಘೋಷಣೆಗಳನ್ನು ನೀವು ಕೇಳಿಸಿಕೊಂಡಿರುವಂತೆ, ನಿಮಗೆ ಬ್ರಿಟನ್ನಿನಾದ್ಯಂತ ಪೂರ್ಣ ಬೆಂಬಲ ಇದೆ’ ಎಂದು ಸ್ಟಾರ್ಮರ್ ಅವರು ಉಕ್ರೇನ್ ಅಧ್ಯಕ್ಷರಿಗೆ ಹೇಳಿದರು.

ಝೆಲೆನ್‌ಸ್ಕಿ ಅವರ ಜೊತೆ ಸಭೆ ನಡೆಸಿದ ನಂತರ ಸ್ಟಾರ್ಮರ್ ಅವರು ಟ್ರಂಪ್ ಮತ್ತು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರನ್ ಜೊತೆ ಮಾತುಕತೆ ನಡೆಸಿದರು ಎಂದು ಪ್ರಧಾನಿ ಕಚೇರಿ ಹೇಳಿದೆ.



ಲಂಡನ್‌ಗೆ ಬಂದ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರಿಗೆ ಬ್ರಿಟನ್ನಿನ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಆತ್ಮೀಯ ಸ್ವಾಗತ ಕೋರಿದರು —ಎಎಫ್‌ಪಿ ಚಿತ್ರ

> ಅಗತ್ಯ ಇರುವವರೆಗೂ ನಾವು ಉಕ್ರೇನ್ ಜೊತೆ ಇರುತ್ತೇವೆ
>
> **ಕೀರ್ ಸ್ಟಾರ್ಮರ್,** ಬ್ರಿಟನ್ ಪ್ರಧಾನಿ

ಟ್ರಂಪ್ ಕುರಿತು ರಷ್ಯಾ ಮೆಚ್ಚುಗೆ



ಮಾಸ್ಕೊ (ರಾಯಿಟರ್ಸ್): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಅವರು ಶ್ಲಾಘಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ವ್ಯಾವಹಾರಿಕವಾಗಿದ್ದಾರೆ ಎಂದು ಲಾವ್ರೊವ್ ಅವರು ರಷ್ಯಾದ ಮಿಲಿಟರಿ ಪತ್ರಿಕೆಯೊಂದಕ್ಕೆ ತಿಳಿಸಿದ್ದಾರೆ.

ಕಳೆದ ಐದುನೂರು ವರ್ಷಗಳಲ್ಲಿ ಜಗತ್ತು ಕಂಡ ಎಲ್ಲ ದುರಂತಗಳು ಯುರೋಪಿನಲ್ಲೇ ಹುಟ್ಟಿವೆ ಎಂದು ಹೇಳುವ ಮೂಲಕ ಲಾವ್ರೊವ್ ಅವರು ಯುರೋಪಿನ ದೇಶಗಳನ್ನು ಟೀಕಿಸಿದ್ದಾರೆ.

‘ಸಂಬಂಧ ಸರಿಪಡಿಸಲು ದಾರಿ ಕಂಡುಕೊಳ್ಳಿ’

ಲಂಡನ್ (ಎಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಜೊತೆಗಿನ ಸಂಬಂಧವನ್ನು ಸರಿಪಡಿಸಿ ಕೊಳ್ಳಲು ದಾರಿ ಕಂಡುಕೊಳ್ಳಬೇಕು ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರಿಗೆ ತಿಳಿಸಿರುವುದಾಗಿ ‘ನೇಟೊ’ ಒಕ್ಕೂಟದ ಮಹಾ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ ಹೇಳಿದ್ದಾರೆ.

ಅಮೆರಿಕದ ಶ್ವೇತಭವನದಲ್ಲಿ ಟ್ರಂಪ್ ಮತ್ತು ಝೆಲೆನ್‌ಸ್ಕಿ ಅವರ ನಡುವೆ ಶುಕ್ರವಾರ ವಾಕ್ಸಮರ ನಡೆದ ನಂತರದಲ್ಲಿ ರುಟ್ ಅವರು ಈ ಕಿವಿಮಾತು ಹೇಳಿದ್ದಾರೆ. ‘ಉಕ್ರೇನ್‌ಗಾಗಿ ಅಧ್ಯಕ್ಷ ಟ್ರಂಪ್ ಅವರು ಇದುವರೆಗೆ ಮಾಡಿರುವುದನ್ನು ನಿಜವಾಗಿಯೂ ಗೌರವಿಸಬೇಕು ಎಂದು ಝೆಲೆನ್‌ಸ್ಕಿ ಅವರಿಗೆ ಹೇಳಿದ್ದೇನೆ’ ಎಂದು ರುಟ್ ಅವರು ಬಿಬಿಸಿ ಪ್ರತಿನಿಧಿಗೆ ತಿಳಿಸಿದ್ದಾರೆ. ಟ್ರಂಪ್ ನೇತೃತ್ವದ ಆಡಳಿತವು 2019ರಲ್ಲಿ ಉಕ್ರೇನ್‌ಗೆ ಜಾವೆಲಿನ್ ಯುದ್ಧಟ್ಯಾಂಕ್ ನಿರೋಧಕ ಕ್ಷಿಪಣಿಗಳನ್ನು ನೀಡಲು ಅನುಮತಿ ಕೊಟ್ಟಿತ್ತು. ಈ ಕ್ಷಿಪಣಿಗಳನ್ನು ಉಕ್ರೇನ್ 2022ರಲ್ಲಿ ರಷ್ಯಾ ವಿರುದ್ಧ ಬಳಸಿತ್ತು.

ಟ್ರಂಪ್ ಮತ್ತು ಝೆಲೆನ್‌ಸ್ಕಿ ನಡುವಿನ ಶುಕ್ರವಾರದ ಸಭೆಯಲ್ಲಿ ನಡೆದ ವಿದ್ಯಮಾನಗಳು ‘ದುರದೃಷ್ಟಕರ’ ಎಂದು ಹೇಳಿದ ರುಟ್, ‘ಉಕ್ರೇನ್ ಮತ್ತು ರಷ್ಯಾ ನಡುವೆ ದೀರ್ಘಾವಧಿಗೆ ಶಾಂತಿ ನೆಲಸುವಂತೆ ಮಾಡುವ ವಿಚಾರದಲ್ಲಿ ಅಮೆರಿಕದ ಆಡಳಿತವು ಬಹುವಾಗಿ ತೊಡಗಿಸಿಕೊಂಡಿದೆ ಎಂಬುದು ನನಗೆ ಗೊತ್ತಿದೆ’ ಎಂದಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606385001, 9606384001

ಪ್ರವಾಸ

Travel

20.03.2025 ಕಾಶಿ ಅಯೋಧ್ಯ ಅಲಹಾಬಾದ್,ಬುದ್ಧಗಯಾ. 14.04.2025 ವೈಷ್ಣೋದೇವಿ ಕಾಶ್ಮೀರ್,ಜ್ವಾಲಾಮುಖಿ ಕುಲುಮನಾಲಿ. 28.04.2025 12.05.2025 ಚಾರ್‌ಧಾಮ್ ಸಮೇತಪ್ರವಾಸ. 26.06.2025 10.07.2025 ಅಮರನಾಥ್ ಅಮೃತ್‌ಸರ್ ಕುರುಕ್ಷೇತ್ರ ಗುಲ್ ಮಾರ್ಗ. 14.04.2025 ಸೋಮನಾಥ್,ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. ಇತ್ಯಾದಿ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು.4. 26574131 8431888138 8317446683 9686708171

ಕಾಶಿಯಾತ್ರೆ: 14.3.2025, 14.4.2025 ರಿಂದ 7ದಿನಗಳು ವಾರಣಾಸಿ,ಪ್ರಯಾಗ್ ರಾಜ್ ಗಯಾ ಬೈದ್ಯನಾಥ್,ಅಯೋಧ್ಯ. ಚಾರ್ ಧಾಮ್ ಸ್ಪೆಷಲ್ ಯಾತ್ರೆ: 28.5.25 ರಿಂದ 14ದಿನಗಳು ಕೇದಾರನಾಥ್,ಬದರಿನಾಥ್ (ಪುಷ್ಕರ್ ಸರಸ್ವತಿ ನದಿಸ್ನಾನ) ಯಮುನೋತ್ರಿ,ಗಂಗೋತ್ರಿ ಇತ್ಯಾದಿ.ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವೆಲ್ಸ್,ಬೆಂಗಳೂರು. 9741024122, 9740311411.

26.03.2025/ ಏಪ್ರಿಲ್ ಮೇ ತಿಂಗಳಲ್ಲಿ 7 ದಿನಗಳ ಕಾಶಿ,ಗಯಾ,ಪ್ರಯಾಗ್‌ರಾಜ್ ಅಯೋಧ್ಯ. ಮೇ ತಿಂಗಳಿಂದ ಪ್ರತಿ 15 ದಿನಗಳಿಗೊಮ್ಮೆ 13 ದಿನಗಳ ಚಾರ್‌ಧಾಮ ಬದರಿನಾಥ್,ಕೇದಾರನಾಥ್ ಗಂಗೋತ್ರಿ ಯಮನೋತ್ರಿ ದೆಹಲಿ. ಶ್ರೀಸುಧಾ ಟ್ರಾವಲ್ಸ್ 8088826815 9019301300

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಾಣಾದಲ್ಲಿ ಹಿಮಕುಸಿತ ಪ್ರಕರಣ ● ರಕ್ಷಿಸಿದವರ ಪೈಕಿ ಮೂವರ ಸ್ಥಿತಿ ಗಂಭೀರ

ಮೃತರ ಸಂಖ್ಯೆ 8ಕ್ಕೆ ಏರಿಕೆ: ಕಾರ್ಯಾಚರಣೆ ಅಂತ್ಯ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಾಣಾ ಗ್ರಾಮದಲ್ಲಿ ಹಿಮಕುಸಿತದಲ್ಲಿ ಸಿಲುಕಿದ್ದ ಸ್ಥಳದಿಂದ ನಾಲ್ವರು ಕಾರ್ಮಿಕರ ಮೃತದೇಹವನ್ನು ಭಾನುವಾರ ಹೊರತೆಗೆಯಲಾಗಿದೆ. ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 8ಕ್ಕೆ ಏರಿಕೆಯಾಗಿದ್ದು, 60 ಗಂಟೆಗಳ ರಕ್ಷಣಾ ಕಾರ್ಯಾಚರಣೆಯನ್ನು ಅಧಿಕಾರಿಗಳು ಅಂತ್ಯಗೊಳಿಸಿದರು.

ಮಾಣಾ ಮತ್ತು ಬದರೀನಾಥದ ನಡುವೆ ಇರುವ ಗಡಿ ರಸ್ತೆಗಳ ಸಂಸ್ಥೆಯ (ಬಿಆರ್‌ಒ) ಶಿಬಿರದಲ್ಲಿ ಶುಕ್ರವಾರ ಮುಂಜಾನೆ ಹಿಮಕುಸಿತ ಉಂಟಾಯಿತು. ಶಿಬಿರದಲ್ಲಿದ್ದ 8 ಕಂಟೇನರ್‌ಗಳು ಹಾಗೂ ಶೆಡ್ ಒಂದರಲ್ಲಿ ಒಟ್ಟು 54 ಮಂದಿ ಸಿಲುಕಿದ್ದರು. ಮೊದಲಿಗೆ 55 ಮಂದಿ ಸಿಲುಕಿದ್ದರು ಎಂದು ಅಂದಾಜಿಸಲಾಗಿತ್ತು. ಕಾರ್ಮಿಕರೊಬ್ಬರು ಅನುಮತಿ ಪಡೆಯದೇ ರಜೆ ಪಡೆದು ಮನೆಗೆ ಸುರಕ್ಷಿತವಾಗಿ ಮರಳಿರುವುದು ಖಚಿತಪಟ್ಟಿದೆ.

‘ಶನಿವಾರದಿಂದ 46 ಮಂದಿಯನ್ನು ರಕ್ಷಿಸಿ, ಜ್ಯೋತಿರ್ಮಠದ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರನ್ನು ಹೃಷಿಕೇಶದ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈಗ ರಕ್ಷಿಸಿರುವವರ ಪೈಕಿ ಮೂವರ ಸ್ಥಿತಿ ಗಂಭೀರವಾಗಿದೆ’ ಎಂದು ಲೆಫ್ಟಿನೆಂಟ್ ಕರ್ನಲ್ ಡಿ.ಎಸ್. ಮಾಲ್ವ್ಯಾ ತಿಳಿಸಿದರು.

‘ನಾಪತ್ತೆಯಾದ ಕಾರ್ಮಿಕರ ಪೈಕಿ ಕೊನೆಯ ವ್ಯಕ್ತಿಯ ಮೃತದೇಹ ಸಿಕ್ಕ ಬಳಿಕ ಮಾಣಾದಲ್ಲಿ ಕೈಗೊಂಡ ರಕ್ಷಣಾ ಕಾರ್ಯಾಚರಣೆ ಕೊನೆಗೊಳಿಸಲಾಯಿತು’ ಎಂದು ರಕ್ಷಣಾ ಇಲಾಖೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಮನೀಶ್ ಶ್ರೀವಾಸ್ತವ ತಿಳಿಸಿದರು.

‘ಹಿಮಕುಸಿತದಿಂದ 54 ಮಂದಿ ಕಾರ್ಮಿಕರು ನಾಪತ್ತೆಯಾಗಿದ್ದು, 46 ಮಂದಿಯನ್ನು ರಕ್ಷಿಸಲಾಗಿದೆ. 8 ಮಂದಿಯ ಮೃತದೇಹ ದೊರೆತಿದೆ’ ಎಂದು ಚಮೋಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಸಂದೀಪ್ ತಿವಾರಿ ತಿಳಿಸಿದರು.

ಶನಿವಾರ ಹಾಗೂ ಭಾನುವಾರ ತಲಾ ನಾಲ್ಕು ಮೃತದೇಹಗಳು ಪತ್ತೆಯಾದವು.

200 ಮಂದಿಯಿಂದ ರಕ್ಷಣಾ ಕಾರ್ಯಾಚರಣೆ: ಹಿಮಕುಸಿತ ಸಂಭವಿಸುತ್ತಿದ್ದಂತೆ, ಕೇಂದ್ರ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ತಂಡದ ಸದಸ್ಯರು, ಇಂಡೋ–ಟಿಬೆಟಿಯನ್ ಪಡೆ, ಬಿಆರ್‌ಒ, ಜಿಲ್ಲಾಡಳಿತ, ಆರೋಗ್ಯ ಹಾಗೂ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದರು.

‘ಸೇನೆಯ 6 ಹೆಲಿಕಾಪ್ಟರ್, ಶ್ವಾನದಳ ಹಾಗೂ ಥರ್ಮಲ್ ಇಮೇಜಿಂಗ್ ತಂತ್ರಜ್ಞಾನ ಬಳಸಿಕೊಂಡು ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು’ ಎಂದು ಅಧಿಕಾರಿಗಳು ತಿಳಿಸಿದರು.

ಪತ್ತೆಯಾದ ಕೊನೆಯ ಮೃತದೇಹವನ್ನು ಡೆಹ್ರಾಡೂನ್‌ನ ಕ್ಲೆಮೆಂಟ್ ಟೌನ್‌ನ ನಿವಾಸಿ ಅರವಿಂದ್ ಕುಮಾರ್ ಸಿಂಗ್ (43) ಅವರದ್ದು ಎಂದು ಗುರುತಿಸಲಾಗಿದೆ. ಉಳಿದಂತೆ ರುದ್ರಾಪುರ ಜಿಲ್ಲೆಯ ಅನಿಲ್‌ಕುಮಾರ್ (21), ಉತ್ತರ ಪ್ರದೇಶ ಫತೇಪುರದ ಅಶೋಕ್ (28), ಹಾಗೂ ಹಿಮಾಚಲ-ಪ್ರದೇಶ ಉನಾದ ಹರ್ಮೇಶ್ ಎಂದು ಗುರುತಿಸಲಾಗಿದೆ.

ಮೃತದೇಹಗಳನ್ನು ಜ್ಯೋತಿರ್ಮಠದ ಸಮುದಾಯದ ಆರೋಗ್ಯ ಕೇಂದ್ರಕ್ಕೆ ತಂದು ಮರಣೋತ್ತರ ಪರೀಕ್ಷೆ ನಡೆಸಲಾಯಿತು.



ಮಾಣಾ ಗ್ರಾಮದಲ್ಲಿ ಸಂಭವಿಸಿದ ಹಿಮಕುಸಿತದಲ್ಲಿ ಸಿಲುಕಿದ್ದ ಕಾರ್ಮಿಕರನ್ನು ಯೋಧರು ಹೊತ್ತುತಂದರು —ಪಿಟಿಐ ಚಿತ್ರ

ಮುಖ್ಯಾಂಶಗಳು

- ಬದರೀನಾಥದಿಂದ 3 ಕಿ.ಮೀ ದೂರದಲ್ಲಿದೆ ಮಾಣಾ ಗ್ರಾಮ
- ಇಂಡೋ–ಟಿಬೆಟಿಯನ್ ಕೊನೆಯ ಗ್ರಾಮ
- ಸಮುದ್ರಮಟ್ಟದಿಂದ 3,200 ಮೀಟರ್ ಎತ್ತರದಲ್ಲಿದೆ

ಶವದ ಜೊತೆ 25 ತಾಸು ಕಳೆದ ಸಹೋದ್ಯೋಗಿ

‘ಕಣ್ಣು ಹಾಯಿಸಿದ್ದಷ್ಟೂ ಹಿಮ. ಕಾಲು ಮುರಿದು, ತಲೆಗೆ ಪೆಟ್ಟು ಬಿದ್ದರೂ ಹಿಮದ ರಾಶಿಯೊಳಗೆ ಸಿಲುಕಿಕೊಂಡು ದೇಹವನ್ನು ಅಲುಗಾಡಿಸಲೂ ಆಗದ ಪರಿಸ್ಥಿತಿ. ಇದೂ ಸಾಲದೆಂಬಂತೆ, ಪಕ್ಕದಲ್ಲಿಯೇ ಸಹೋದ್ಯೋಗಿಯ ಮೃತದೇಹ...’

–ಮಾಣಾದಲ್ಲಿ ಸಂಭವಿಸಿದ ಹಿಮಕುಸಿತದಲ್ಲಿ 25 ತಾಸುಗಳ ಕಾಲ ಸತತ ಹೋರಾಡಿ ಬದುಕುಳಿದ ಬಿಆರ್‌ಒ ಕಾರ್ಮಿಕ ಜಗ್ಬೀರ್ ಸಿಂಗ್ ಅವರ ಮಾತುಗಳಿವು.

ಅಮೃತಸರದ ಇವರು, ಬಿಆರ್‌ಒದ ಕಂಟೇನರ್‌ನಲ್ಲಿ ನಿದ್ರೆಗೆ ಜಾರಿದ್ದರು.

‘ಹಿಮಕುಸಿತದ ವೇಳೆ ಕಂಟೇನರ್ ನೂರಾರು ಮೀಟರ್ ಉರುಳಿಬಿದ್ದಿದ್ದರಿಂದ, ನನ್ನ ಸಹೋದ್ಯೋಗಿಯೊಬ್ಬರು ಮೃತಪಟ್ಟರು. ನನ್ನ ಜೊತೆಗಿದ್ದ 14ರಿಂದ 15 ಮಂದಿ ಒಂದೇ ಹೊದಿಕೆಯಲ್ಲಿಯೇ 25 ತಾಸು ಕಳೆದೆವು. ನೋವಿನಿಂದ ಬಳಲಿದರೂ ಏನೂ ಮಾಡಲು ಸಾಧ್ಯವಾಗಲಿಲ್ಲ’ ಎಂದರು.

‘ಹಿಮಕುಸಿತ ಸಂಭವಿಸಿದ ಕೇವಲ 10 ಸೆಕೆಂಡ್‌ನಲ್ಲಿಯೇ ನಾವು ಮಲಗಿದ್ದ ಕಂಟೇನರ್ 300 ಮೀಟರ್ ಕೆಳಕ್ಕೆ ಕುಸಿಯಿತು ಎಂದರೆ ಅದರ ತೀವ್ರತೆ ಹೇಗಿತ್ತು ಎಂಬುದನ್ನು ಅಂದಾಜಿಸಬಹುದು’ ಎಂದು ಉತ್ತರಕಾಶಿಯ ಮನೋಜ್ ಭಂಡಾರಿ ನೆನಪಿಸಿಕೊಂಡರು.

‘ಸುತ್ತಲೂ ಹಿಮ ಆವರಿಸಿದ್ದರಿಂದ ಉಸಿರಾಟಕ್ಕೂ ಕಷ್ಟಪಡುತ್ತಿದ್ದ ಯೋಧರು ಬಂದು ನಮ್ಮನ್ನು ರಕ್ಷಿಸಿದರು’ ಎಂದು ಧನ್ಯವಾದ ಸಲ್ಲಿಸಿದರು.

ಗಾಯಾಳು ಕಾರ್ಮಿಕರನ್ನು ಜ್ಯೋತಿರ್ಮಠದ ಸೇನಾ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ.

ಸುರಂಗ ಕುಸಿತ ಪ್ರಕರಣ:ರಕ್ಷಣೆ ಕಾರ್ಯ ಚುರುಕು

ನಾಗರ್‌ಕರ್ನೂಲ್,(ತೆಲಂಗಾಣ) (ಪಿಟಿಐ): ಶ್ರೀಶೈಲಂ ಎಡದಂಡೆ ಕಾಲುವೆ (ಎಸ್‌ಎಲ್‌ಬಿಸಿ) ಭಾಗದ ಸುರಂಗದಲ್ಲಿ ಸಿಲುಕಿರುವ ಎಂಟು ಕಾರ್ಮಿಕರ ರಕ್ಷಣೆಗಾಗಿ ಹೂಳು ತೆರವುಗೊಳಿಸುವ ಕಾರ್ಯ ತ್ವರಿತಗತಿಯಲ್ಲಿ ನಡೆದಿದೆ.ಸುರಂಗ ಕುಸಿದಿದ್ದರಿಂದ ಮಣ್ಣು ಸಾಗಣೆ ಮಾಡುವುದು ಕಷ್ಟವಾಗಿದೆ. ಸಾಗಣೆ ಮಾಡುವ ವ್ಯವಸ್ಥೆ ಸರಿಪಡಿಸುವ ಕೆಲಸವು ಸೋಮವಾರದ ವೇಳೆಗೆ ಮುಗಿಯುವ ನಿರೀಕ್ಷೆಯಿದೆ. ಆ ಬಳಿಕ ಹೂಳು ತೆರವುಗೊಳಿಸುವ ಪ್ರಕ್ರಿಯೆ ಇನ್ನಷ್ಟು ಸುಗಮ ಮತ್ತು ತ್ವರಿತಗತಿಯಲ್ಲಿ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಖರವಾಗಿ ತಿಳಿದಿಲ್ಲ: ಕಾರ್ಮಿಕರು ಸಿಲುಕಿರುವ ಸ್ಥಳವನ್ನು ನಿಖರವಾಗಿ ಪತ್ತೆ ಮಾಡಲು ಇನ್ನೂ ಸಾಧ್ಯವಾಗಿಲ್ಲ ಎಂದು ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಹೇಳಿದ್ದಾರೆ.

ಬಿಹಾರದಲ್ಲಿ ಗಂಗಾ ನೀರು ಸ್ನಾನಕ್ಕೆ ಯೋಗ್ಯವಲ್ಲ: ವರದಿ

ಪಟ್ನಾ (ಪಿಟಿಐ): ಬಿಹಾರದಲ್ಲಿ ಗಂಗಾ ನದಿಯ ನೀರು ಬಹುತೇಕ ಕಡೆಗಳಲ್ಲಿ ಸ್ನಾನಕ್ಕೆ ಯೋಗ್ಯವಾಗಿಲ್ಲ ಎಂದು 2024–25ನೆಯ ಸಾಲಿನ ಬಿಹಾರ ಆರ್ಥಿಕ ಸಮೀಕ್ಷೆಯ ವರದಿ ಹೇಳಿದೆ. ಹಾನಿಕಾರಕ ಬ್ಯಾಕ್ಟೀರಿಯಾಗಳ ಪ್ರಮಾಣ ಹೆಚ್ಚಾಗಿರುವುದು ಇದಕ್ಕೆ ಕಾರಣ ಎಂದು ವರದಿ ತಿಳಿಸಿದೆ.

ಬಿಹಾರದ 34 ಕಡೆಗಳಲ್ಲಿ ಗಂಗಾ ನದಿಯ ಗುಣಮಟ್ಟವನ್ನು ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯು (ಬಿಎಸ್‌ಪಿಸಿಬಿ) ಪ್ರತಿ 15 ದಿನಗಳಿಗೊಮ್ಮೆ ಗಮನಿಸುತ್ತಿರುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರ್ಥಿಕ ಸಮೀಕ್ಷೆಯ ವರದಿಯನ್ನು ಬಿಹಾರ ವಿಧಾನಸಭೆಯಲ್ಲಿ ಈಚೆಗೆ ಮಂಡಿಸಲಾಗಿದೆ. ‘ನದಿ ನೀರಿನ ಗುಣಮಟ್ಟವು, ಅದರಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾಗಳ ಪ್ರಮಾಣ ಹೆಚ್ಚಿರುವುದನ್ನು ಸೂಚಿಸುತ್ತಿದೆ. ಗಂಗಾ ನದಿ ಮತ್ತು ಅದರ ಉಪನದಿಗಳ ದಂಡೆಯ ಮೇಲಿರುವ ನಗರಗಳ ಕೊಳಚೆ ನೀರು ಹಾಗೂ ಮನೆಗಳ ತ್ಯಾಜ್ಯ ನೀರನ್ನು ನದಿಗೆ ಬಿಡುತ್ತಿರುವುದು ಇದಕ್ಕೆ ಮುಖ್ಯ ಕಾರಣ’ ಎಂದು ವರದಿ ಹೇಳಿದೆ. ಆದರೆ, ಜಲಚರಗಳಿಗೆ, ಮೀನುಗಾರಿಕೆಗೆ ಮತ್ತು ನೀರಾವರಿಗೆ ಬಳಸಲು ಗಂಗಾ ಮತ್ತು ಅದರ ಉಪನದಿಗಳ ನೀರು ಯೋಗ್ಯವಾಗಿದೆ ಎಂದು ಅದು ಹೇಳಿದೆ.

ಗಂಗಾ ನದಿಯಲ್ಲಿ ಬ್ಯಾಕ್ಟೀರಿಯಾ ಪ್ರಮಾಣವು ಹೆಚ್ಚಿರುವುದು ಕಳವಳ ಮೂಡಿಸುವ ಸಂಗತಿ ಎಂದು ಬಿಎಸ್‌ಪಿಸಿಬಿ ಅಧ್ಯಕ್ಷ ಡಿ.ಕೆ. ಶುಕ್ಲಾ ಹೇಳಿದ್ದಾರೆ. ರಾಜ್ಯದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕಗಳು ಸರಿಯಾಗಿ ಕೆಲಸ ಮಾಡುವುದನ್ನು ಖಾತರಿಪಡಿಸಲು ಮಂಡಳಿಯು ಕ್ರಮ ಕೈಗೊಳ್ಳುತ್ತಿದೆ ಎಂದು ಶುಕ್ಲಾ ಮಾಹಿತಿ ನೀಡಿದ್ದಾರೆ.

ಬಿಎಸ್‌ಪಿ: ಆಕಾಶ್ ಆನಂದ್ ವಜಾ

ಪ್ರಜಾವಾಣಿ ವಾರ್ತೆ

ಲಖನೌ: ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ನಾಯಕಿ ಮಾಯಾವತಿ ಅವರು ತಮ್ಮ ಸೋದರ ಸಂಬಂಧಿ ಆಕಾಶ್ ಆನಂದ್ ಅವರನ್ನು ಪಕ್ಷದ ರಾಷ್ಟ್ರೀಯ ಸಂಚಾಲಕನ ಹುದ್ದೆಯಿಂದ ವಜಾಗೊಳಿಸಿದ್ದಾರೆ.

ಆಕಾಶ್ ಆನಂದ್ ಅವರನ್ನು ಒಂದು ವರ್ಷದಲ್ಲಿ ಎರಡನೇ ಬಾರಿ ಈ ಹುದ್ದೆಯಿಂದ ವಜಾಗೊಳಿಸಲಾಗಿದೆ. ಕಳೆದ ವರ್ಷ ಕೂಡ ಅವರನ್ನು ಪಕ್ಷದ ಎಲ್ಲ ಜವಾಬ್ದಾರಿಗಳಿಂದ ಮುಕ್ತಗೊಳಿಸಿದ್ದ ಮಾಯಾವತಿ, ಕೆಲ ತಿಂಗಳ ಹಿಂದೆಯಷ್ಟೇ ಪಕ್ಷದ ರಾಷ್ಟ್ರೀಯ ಸಂಚಾಲಕರನ್ನಾಗಿ ಮರುನೇಮಕ ಮಾಡಿದ್ದರು.

ಆಕಾಶ್ ಆನಂದ್ ಅವರ ತಂದೆ ಆನಂದ್ ಕುಮಾರ್ ಮತ್ತು ಇನ್ನೊಬ್ಬ ಮುಖಂಡ ರಾಮ್‌ಜಿ ಗೌತಮ್ ಅವರನ್ನು ಪಕ್ಷದ ನೂತನ ರಾಷ್ಟ್ರೀಯ ಸಂಚಾಲಕರನ್ನಾಗಿ ನೇಮಕ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಜನರಿಗೆ ಭಿಕ್ಷೆ ಬೇಡುವುದು ಹವ್ಯಾಸವಾಗಿದೆ’



ಪ್ರಹ್ಲಾದ ಸಿಂಗ್ ಪಟೇಲ್

ರಾಜಗಢ (ಪಿಟಿಐ): ಜನರು ಸರ್ಕಾರದ ಬಳಿ ‘ಭಿಕ್ಷೆ’ ಬೇಡುವ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ದೇಶಕ್ಕಾಗಿ ಪ್ರಾಣವನ್ನೇ ಮುಡಿಪಾಗಿಟ್ಟವರಿಂದ ಇವರು ಪಾಠ ಕಲಿಯಬೇಕಿದೆ ಎಂದು ಮಧ್ಯಪ್ರದೇಶ ಸಚಿವ ಪ್ರಹ್ಲಾದ ಸಿಂಗ್ ಪಟೇಲ್ ಅವರು ಹೇಳಿದರು.

ಪಂಚಾಯತ್ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವರ ಈ ಹೇಳಿಕೆಯು ವಿವಾದಕ್ಕೆ ಕಾರಣವಾಗಿದೆ.

ರಾಜಗಢ ಜಿಲ್ಲೆಯ ಸುತಾಲಿಯಾ ನಗರದಲ್ಲಿ ಶನಿವಾರ ನಡೆದ ರಾಣಿ ಅವಂತಿ ಬಾಯಿ ಲೋಧಿ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಕೆಲವರು ದೇಶಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ಯಾಕಾಗಿ ಅವರು ತ್ಯಾಗ ಮಾಡಿದರು? ಅವರ ಜೀವನ ಮೌಲ್ಯವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಬದುಕೂ ಯಶಸ್ವಿಯಾಗುತ್ತದೆ’ ಎಂದು ಹೇಳಿದರು.

‘ನಾಯಕರನ್ನು ಆಹ್ವಾನಿಸಿ ವೇದಿಕೆಯ ಮೇಲೆ ಕರೆದು ಹಾರ ಹಾಕಲಾಗುತ್ತದೆ ಮತ್ತು ಅವರಿಗೆ ರಾಶಿ ರಾಶಿ ಅರ್ಜಿಗಳನ್ನು ನೀಡಲಾಗುತ್ತದೆ. ಇದು ಒಳ್ಳೆಯ ಅಭ್ಯಾಸವಲ್ಲ. ಯಾವಾಗಲೂ ಸ್ವೀಕರಿಸುವ ಬದಲು, ನೀಡುವ ಮನಸ್ಥಿತಿ ಬೆಳೆಸಿಕೊಳ್ಳಿ’ ಎಂದು ಸಲಹೆ ನೀಡಿದರು.

ಅನಧಿಕೃತ ವಿದೇಶ ಪ್ರವಾಸ: ಐಪಿಎಸ್ ಅಧಿಕಾರಿ ಅಮಾನತು



ಅಮರಾವತಿ (ಪಿಟಿಐ): ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗ ಪೂರ್ವಾನುಮತಿ ಇಲ್ಲದೆ, ವಿದೇಶ ಪ್ರವಾಸ ಕೈಗೊಂಡ ಹಿರಿಯ ಐಪಿಎಸ್ ಅಧಿಕಾರಿಯನ್ನು ಆಂಧ್ರ ಪ್ರದೇಶ ಸರ್ಕಾರವು ಭಾನುವಾರ ಅಮಾನತುಗೊಳಿಸಿದೆ.

ಸರ್ಕಾರದದಿಂದ ಸೂಕ್ತ ಅನುಮತಿ ಪಡೆಯದೆ, ವಿದೇಶ ಪ್ರವಾಸ ಕೈಗೊಂಡ ಆರೋಪದ ಮೇಲೆ ಹುದ್ದೆ ನಿರೀಕ್ಷಿಸುತ್ತಿರುವ ಡಿಜಿಪಿ ರ್‍ಯಾಂಕ್‌ನ ಅಧಿಕಾರಿ ಪಿ.ವಿ. ಸುನಿಲ್ ಕುಮಾರ್ ಅವರನ್ನು ಅಮಾನತುಗೊಳಿಸಿ ಮುಖ್ಯ ಕಾರ್ಯದರ್ಶಿ ಕೆ. ವಿಜಯಾನಂದ್ ಆದೇಶ ಹೊರಡಿಸಿದ್ದಾರೆ.

‘ಅಖಿಲ ಭಾರತ ಸೇವಾ ನಿಯಮ (ಶಿಸ್ತು ಹಾಗೂ ಮೇಲ್ಮನವಿ) 1969 ನಿಯಮ 3(1) ಅಡಿಯಲ್ಲಿ ಅಧಿಕಾರ ಚಲಾಯಿಸುವ ವೇಳೆ ಶಿಸ್ತು ಉಲ್ಲಂಘಿಸಿದ ಆರೋಪದ ಮೇಲೆ ಪಿ.ವಿ. ಸುನಿಲ್ ಕುಮಾರ್ ಅವರನ್ನು ತಕ್ಷಣದಿಂದಲೇ ಅನ್ವಯ ವಾಗುವಂತೆ ಅಮಾನತುಗೊಳಿಸಲಾಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ. 2019ರಿಂದ 2024ರ ನಡುವೆ ಕುಮಾರ್ ಅವರು ಜಾರ್ಜಿಯಾ, ಯುಎಇ, ಸ್ವೀಡನ್, ಅಮೆರಿಕ ಬ್ರಿಟನ್‌ಗೆ ಪ್ರವಾಸ ಕೈಗೊಂಡಿದ್ದರು ಎಂದು ಪತ್ರದಲ್ಲಿ ಹೇಳಲಾಗಿದೆ.

‘ಒಂದೇ ಎಪಿಕ್ ಸಂಖ್ಯೆ ನಕಲಿ ಅಲ್ಲ’

ನವದೆಹಲಿ (ಪಿಟಿಐ): ಬೇರೆ ಬೇರೆ ರಾಜ್ಯಗಳಲ್ಲಿನ ಮತದಾರರಿಗೆ ನೀಡಿರುವ ಗುರುತಿನ ಚೀಟಿಯಲ್ಲಿನ ಎಪಿಕ್ ಸಂಖ್ಯೆಯು ಒಂದೇ ಆಗಿದೆ ಎಂಬ ವರದಿಗಳ ಕಾರಣಕ್ಕೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ಚುನಾವಣಾ ಆಯೋಗವು, ಸಂಖ್ಯೆಯು ಒಂದೇ ಇದೆ ಎಂಬ ಕಾರಣಕ್ಕೆ ಅದನ್ನು ಹೊಂದಿರುವವರು ನಕಲಿ ಮತದಾರರು ಎನ್ನಲಾಗದು ಎಂದು ಹೇಳಿದೆ.

ಮತದಾರರ ಗುರುತಿನ ಚೀಟಿಯ (ಎಪಿಕ್) ಸಂಖ್ಯೆಗಳು ಒಂದೇ ಆಗಿರಬಹುದಾದರೂ ಇತರ ವಿವರಗಳು ಒಂದೇ ಆಗಿರುವುದಿಲ್ಲ ಎಂದು ಆಯೋಗ ತಿಳಿಸಿದೆ. ‘ಎಪಿಕ್ ಸಂಖ್ಯೆ ಏನೇ ಇರಬಹುದು. ಆದರೆ, ಮತದಾರರು ತಮಗೆ ನಿಗದಿ ಮಾಡಲಾದ ಮತಗಟ್ಟೆಯಲ್ಲಿ ಮಾತ್ರ ಮತ ಚಲಾಯಿಸಬಹುದು’ ಎಂದು ಆಯೋಗವು ಸ್ಪಷ್ಟನೆ ನೀಡಿದೆ.

ವಿಕೇಂದ್ರೀಕೃತ ಹಾಗೂ ಕಂಪ್ಯೂಟರ್ ಆಧಾರಿತವಲ್ಲದ ವ್ಯವಸ್ಥೆಯ ಕಾರಣದಿಂದ ಒಂದೇ ಬಗೆಯ ಎಪಿಕ್ ಸಂಖ್ಯೆಗಳು ಬೇರೆ ಬೇರೆ ರಾಜ್ಯಗಳ ಮತದಾರರಿಗೆ ದೊರೆತಿವೆ. ಎಲ್ಲ ರಾಜ್ಯಗಳ ಮತದಾರರ ದತ್ತಾಂಶವನ್ನು ಎರೊನೆಟ್ ವ್ಯವಸ್ಥೆಗೆ ವರ್ಗಾವಣೆ ಮಾಡುವ ಮೊದಲು ಹೀಗಾಗಿದೆ ಎಂದು ಅದು ಹೇಳಿದೆ.

ಇದರಿಂದಾಗಿ ಕೆಲವು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳು ಒಂದೇ ಸರಣಿಯ ಎಪಿಕ್ ಸಂಖ್ಯೆಗಳನ್ನು ಬಳಕೆ ಮಾಡಿದ್ದಾರೆ. ಹಾಗಾಗಿ, ಬೇರೆ ಬೇರೆ ರಾಜ್ಯಗಳ ಬೇರೆ ಬೇರೆ ವಿಧಾನಸಭಾ ಕ್ಷೇತ್ರಗಳ ಮತದಾರರಿಗೆ ಒಂದೇ ಎಪಿಕ್ ಸಂಖ್ಯೆ ಸಿಕ್ಕಿದೆ ಎಂದು ಹೇಳಿದೆ.ಒಂದೇ ಎಪಿಕ್ ಸಂಖ್ಯೆ ನೀಡಿರುವುದನ್ನು ಸರಿಪಡಿಸಲಾಗುತ್ತದೆ. ವಿಶಿಷ್ಟ ಸಂಖ್ಯೆಗಳನ್ನೇ ನೀಡಲಾಗುತ್ತದೆ ಎಂದು ಸ್ಪಷ್ಟಪಡಿಸಿದೆ.

‘ಹೋಳಿ: ಮುಸ್ಲಿಮರಿಗೆ ಪ್ರವೇಶ ನೀಡಬೇಡಿ’

ಮುಖ್ಯಮಂತ್ರಿ ಯೋಗಿ ಆದಿತ್ಯನಾಥಗೆ ರಕ್ತದಲ್ಲಿ ಪತ್ರ ಬರೆದ ದಿನೇಶ್ ಶರ್ಮಾ

ಪ್ರಜಾವಾಣಿ ವಾರ್ತೆ/ ಪಿಟಿಐ

ಮಥುರಾ (ಉತ್ತರ ಪ್ರದೇಶ): ಮಹಾಕುಂಭ ಮೇಳದ ನಂತರ, ಮಥುರಾ ಮತ್ತು ಬೃಂದಾವನದಲ್ಲಿ ನಡೆಯುವ ಪ್ರಸಿದ್ಧ ‘ಬ್ರಿಜ್ ಕಿ ಹೋಳಿ’ ಆಚರಣೆಗಳಲ್ಲಿ ಮುಸ್ಲಿಮರಿಗೆ ಪ್ರವೇಶ ನಿಷೇಧಿಸಬೇಕೆಂದು ಹಿಂದೂ ಸಂಘಟನೆಗಳು ಒತ್ತಾಯಿಸಿವೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ತಮ್ಮ ರಕ್ತದಲ್ಲಿ ಪತ್ರ ಬರೆದಿರುವ ಶ್ರೀ ಕೃಷ್ಣ ಜನ್ಮಭೂಮಿ ಸಂಘ ಟ್ರಸ್ಟ್‌ನ ದಿನೇಶ್ ಶರ್ಮಾ ಅವರು, ‘ಮುಸ್ಲಿಮರನ್ನು ಮಹಾಕುಂಭ ಮೇಳದಿಂದ ದೂರವಿಟ್ಟಂತೆ ‘ಬ್ರಿಜ್ ಕಿ ಹೋಳಿ’ ಆಚರಣೆಗಳಿಂದಲೂ ದೂರವಿಡಬೇಕು. ಮುಸ್ಲಿಮರು ಸಿಹಿತಿಂಡಿಗಳು ಮತ್ತು ಇತರ ವಸ್ತುಗಳ ಮೇಲೆ ಉಗುಳಬಹುದು ಹಾಗೂ ಕಲಬೆರಕೆ ಬಣ್ಣಗಳನ್ನು ಮಾರಾಟ ಮಾಡಬಹುದು. ಹಾಗಾಗಿ, ಅವರಿಗೆ ಪ್ರವೇಶ ನೀಡಬಾರದು’ ಎಂದು ಮನವಿ ಮಾಡಿದ್ದಾರೆ.

‘ಈ ಸಂದರ್ಭ ಮಥುರಾ, ಬೃಂದಾವನ, ಬರ್ಸಾನಾ, ಗೋಕುಲ, ದೌಜಿ ಮತ್ತು ಇತರ ಧಾರ್ಮಿಕ ಸ್ಥಳಗಳಲ್ಲಿ ಮುಸ್ಲಿಮರಿಗೆ ಅಂಗಡಿಗಳನ್ನು ಸ್ಥಾಪಿಸಲು ಅವಕಾಶ ನೀಡುವುದಿಲ್ಲ. ಅಲ್ಲದೆ, ಈ ಆಚರಣೆಯಲ್ಲಿ ಅವರಿಗೆ ಪ್ರವೇಶ ನೀಡದಿರಲು ನಿರ್ಧರಿಸಿದ್ದೇವೆ’ ಎಂದು ಧರ್ಮ ರಾಕ್ಷಾ ಸಂಘದ ರಾಷ್ಟ್ರೀಯ ಅಧ್ಯಕ್ಷ ಸೌರವ್ ಗೌರ್ ಹೇಳಿದ್ದಾರೆ.

‘ಹೋಳಿಯು ಪ್ರೀತಿ ಮತ್ತು ಸಾಮರಸ್ಯದ ಹಬ್ಬ. ಮುಸ್ಲಿಂ ಸಮುದಾಯದ ಯಾವುದೇ ಸದಸ್ಯರು ನಮ್ಮ ಆಚರಣೆ ಗಳಲ್ಲಿ ಭಾಗವಹಿಸಿ, ತೊಂದರೆ ನೀಡುವುದನ್ನು ನಾವು ಬಯಸುವುದಿಲ್ಲ’ ಎಂದು ಅವರು ಹೇಳಿದ್ದಾರೆ.

‘ಕೋಮು ಸಾಮರಸ್ಯಕ್ಕೆ ಅಡ್ಡಿ’

ಹಿಂದೂ ಸಂಘಟನೆಗಳ ಈ ಬೇಡಿಕೆಗೆ ಮುಸ್ಲಿಂ ನಾಯಕರು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ‘ಇಂತಹ ಕ್ರಮವು ದೇಶದಲ್ಲಿ ಕೋಮು ಸಾಮರಸ್ಯಕ್ಕೆ ಅಡ್ಡಿಯಾಗುತ್ತದೆ. ಈ ಪ್ರದೇಶದಲ್ಲಿ ಹೋಳಿ ಹಬ್ಬದ ಸಂದರ್ಭ ಮುಸ್ಲಿಮರು ತಮ್ಮ ಹಿಂದೂ ಸಹೋದರರನ್ನು ಸ್ವಾಗತಿಸುವ ಸಂಪ್ರದಾಯವಿದೆ. ಇಂತಹ ಹೇಳಿಕೆಯು ವಿಭಜನಕಾರಿಯಾದುದು. ಇದನ್ನು ಖಂಡಿಸಬೇಕು’ ಎಂದು ಮಥುರಾದ ಶಾಹಿ ಈದ್ಗಾ ಇಂತಾಜಾಮಿಯಾ ಸಮಿತಿ ಕಾರ್ಯದರ್ಶಿ ತನ್ವೀರ್ ಅಹ್ಮದ್ ಹೇಳಿದ್ದಾರೆ.

‘ಬ್ರಿಜ್‌ನಲ್ಲಿ ಹೋಳಿಯನ್ನು ಯಾವಾಗಲೂ ಪ್ರೀತಿ ಮತ್ತು ಶಾಂತಿಯಿಂದ ಆಚರಿಸಲಾಗುತ್ತದೆ. ಯಾವುದೇ ಸಮುದಾಯದಿಂದ ಯಾವುದೇ ದೂರು ಬಂದಿಲ್ಲ. ರಾಸ್ ಖಾನ್ ಮತ್ತು ತಾಜ್ ಬೀಬಿ ಮಹಾನ್ ಕೃಷ್ಣ ಭಕ್ತರಾಗಿದ್ದರು. ಅವರನ್ನು ಸಹ ಇಲ್ಲಿ ಪೂಜಿಸಲಾಗುತ್ತದೆ’ ಎಂದು ಅವರು ಹೇಳಿದ್ದಾರೆ.

ಮಹಾಕುಂಭದ ಸಮಯದಲ್ಲಿಯೂ ಹಿಂದೂ ಯಾತ್ರಿಕರಿಗೆ ಮುಸ್ಲಿಮರು ಆಶ್ರಯ ಮತ್ತು ಆಹಾರ ಒದಗಿಸಿದರು, ಕೋಮು ಸೌಹಾರ್ದವನ್ನು ಪ್ರದರ್ಶಿಸಿದರು ಎಂದು ಅಹ್ಮದ್ ತಿಳಿಸಿದ್ದಾರೆ.

ಅಖಿಲ ಭಾರತ ಅಖಾಡಾ ಪರಿಷತ್ (ಎಐಎಪಿ) ಇತ್ತೀಚೆಗೆ ಮುಕ್ತಾಯಗೊಂಡ ಮಹಾ ಕುಂಭದಲ್ಲಿ ಮುಸ್ಲಿಮರಿಗೆ ಪ್ರವೇಶ ನಿಷೇಧಿಸಿತ್ತು.

ಬಾಲಕಿ ಮೇಲೆ ಅತ್ಯಾಚಾರ: ಆರೋಪಿ, ವೈದ್ಯನ ಬಂಧನ

ಠಾಣೆ (ಪಿಟಿಐ): 17 ವರ್ಷದ ಬಾಲಕಿಯ ಮೇಲೆ ಅತ್ಯಾಚಾರವೆಸಗಿದ ಆರೋಪಿ ಹಾಗೂ ಆ ಬಾಲಕಿಯ ಗರ್ಭಪಾತಕ್ಕೆ ಸಹಕರಿಸಿದ ವೈದ್ಯರೊಬ್ಬರನ್ನು ಬಂಧಿಸಲಾಗಿದೆ ಎಂದು ಠಾಣೆ ಪೊಲೀಸರು ತಿಳಿಸಿದ್ದಾರೆ.

ಇಲ್ಲಿನ ಉಲ್ಲಾಸ ನಗರ ಪಟ್ಟಣದಲ್ಲಿ ವಾಸವಾಗಿದ್ದ 29 ವರ್ಷದ ವ್ಯಕ್ತಿಯು, ಕಳೆದ ವರ್ಷ ಜುಲೈ ತಿಂಗಳಲ್ಲಿ ನೆರೆಮನೆಯ ಬಾಲಕಿಯನ್ನು ತನ್ನ ಮನೆಗೆ ಕರೆಸಿಕೊಂಡು, ಅತ್ಯಾಚಾರವೆಸಗಿದ್ದ. ಈ ವೇಳೆ ಆತನ ಪತ್ನಿ, ತಾಯಿ, ಮಕ್ಕಳು ಊರಿಗೆ ತೆರಳಿದ್ದರು. ಇದಾದ ಬಳಿಕ ಹಲವು ಸಲ ಇದೇ ರೀತಿ ಅತ್ಯಾಚಾರವೆಸಗಿದ್ದನು. ಈ ವಿಚಾರವನ್ನು ಯಾರಿಗಾದರೂ ತಿಳಿಸಿದರೆ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದನು.

‘ಕೆಲವು ತಿಂಗಳ ನಂತರ ಬಾಲಕಿಯು ತಾನು ಗರ್ಭಿಣಿಯಾಗಿರುವುದನ್ನು ಆರೋಪಿಯ ಗಮನಕ್ಕೆ ತಂದಿದ್ದಳು. ಆಗ ವೈದ್ಯರಿಂದ ಗರ್ಭಪಾತದ ಮಾತ್ರೆ ಖರೀದಿಸಿ ಬಾಲಕಿಗೆ ನೀಡಿದ್ದನು. ಆದರೆ, ಗರ್ಭಪಾತ ಆಗಲಿಲ್ಲ. ಬಾಲಕಿಯ ಹೆತ್ತವರು ಊರಿಗೆ ತೆರಳಿದ ವೇಳೆ ಆರೋಪಿಯ ಪತ್ನಿ, ತಾಯಿ ಹಾಗೂ ಅತ್ತೆ ಸೇರಿಕೊಂಡು ಆಕೆಯನ್ನು ಕಲ್ಯಾಣದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಸುಳ್ಳು ಮಾಹಿತಿ ನೀಡಿ, ಗರ್ಭಪಾತ ಮಾಡಿಸಿದ್ದರು. ನಂತರ ಭ್ರೂಣವನ್ನು ಉಲ್ಲಾಸನಗರ ಸ್ಮಶಾನದಲ್ಲಿ ಹೂತಿದ್ದರು’ ಎಂದು ಉಲ್ಲಾಸನಗರ ಪೊಲೀಸ್ ಠಾಣೆಯ ಹಿರಿಯ ಇನ್‌ಸ್ಪೆಕ್ಟರ್ ಶಂಕರ್ ಅವತಾಡೆ ತಿಳಿಸಿದ್ದಾರೆ.

ಫೆ.23ರಂದು ಗ್ರಾಮದಿಂದ ಹೆತ್ತವರು ಮರಳಿದ ಬಳಿಕ ಬಾಲಕಿಯು ನಡೆದ ಘಟನೆಯನ್ನು ವಿವರಿಸಿದ್ದು, ಅವರು ಸ್ಥಳೀಯ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಕಾರ್ಯಾಚರಣೆ ನಡೆಸಿದ ಪೊಲೀಸರು, ಫೆ.25ರಂದು ಆರೋಪಿ ಹಾಗೂ ಗರ್ಭಪಾತದ ಮಾತ್ರೆ ನೀಡಿದ ವೈದನನ್ನು ಬಂಧಿಸಿದ್ದಾರೆ.

ಬೆಕ್ಕು ಸತ್ತಿದ್ದಕ್ಕೆ ದುಃಖ ತಾಳಲಾರದೆ ಆತ್ಮಹತ್ಯೆ?

ಲಖನೌ: ಪ್ರೀತಿಯ ಸಾಕುಪ್ರಾಣಿಗಳ ಹೆಸರಿಗೆ ಆಸ್ತಿ ಬರೆದವರ ಬಗ್ಗೆ ಜನ ಓದಿರಬಹುದು. ಆದರೆ ಉತ್ತರ ಪ್ರದೇಶದಲ್ಲಿ ಮಹಿಳೆಯೊಬ್ಬರು ತಮ್ಮ ಪ್ರೀತಿಯ ಬೆಕ್ಕು ಮೃತಪಟ್ಟ ನಂತರ ದುಃಖ ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.


ರಾಜ್ಯದ ಅಮರೋಹಾ ಜಿಲ್ಲೆಯಲ್ಲಿ ಈ ಘಟನೆ ವರದಿಯಾಗಿದೆ. ಆತ್ಮಹತ್ಯೆ ಮಾಡಿಕೊಂಡಿರುವ ಮಹಿಳೆಯ ಹೆಸರು ಪೂಜಾ. ಇವರು ಜಿಲ್ಲೆಯ ಹಸನ್‌ಪುರದ ನಿವಾಸಿಯಾಗಿದ್ದರು.

ಪೂಜಾ ಅವರು ಬೆಕ್ಕೊಂದನ್ನು ಸಾಕಿದ್ದರು. ಅದು ನಾಲ್ಕು ದಿನಗಳ ಹಿಂದೆ ಸತ್ತಿದೆ. ಆ ಬೆಕ್ಕಿನ ಜೊತೆ ಪೂಜಾ ಅವರು ಅದೆಷ್ಟು ಗಾಢವಾದ ಸಂಬಂಧವನ್ನು ಬೆಳೆಸಿಕೊಂಡಿದ್ದರು ಎಂದರೆ, ಬೆಕ್ಕು ಸತ್ತ ನಂತರ ಅದನ್ನು ಹೂಳಲೂ ಇಲ್ಲ.

‘ಬೆಕ್ಕಿಗೆ ಬಹಳ ಬೇಗ ಜೀವ ಬರುತ್ತದೆ. ಹಾಗಾಗಿ ಅದನ್ನು ಹೂಳುವುದಿಲ್ಲ’ ಎಂದು ಪೂಜಾ ಹೇಳುತ್ತಿದ್ದರು ಎಂದು ಅವರ ತಾಯಿ ಹೇಳಿದ್ದಾರೆ. ಪೂಜಾ ಅವರು ಶನಿವಾರ ರಾತ್ರಿ ತಮ್ಮ ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದಾರೆ ಎಂದು ವರದಿಗಳು ಹೇಳಿವೆ.

‘ಸರ್ಕಾರದ ವೈಫಲ್ಯಗಳ ಬಗ್ಗೆ ಚರ್ಚಿಸಿ’

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: ‘ವಿಧಾನ ಮಂಡಲ ಅಧಿವೇಶನದಲ್ಲಿ ಜನಪರ ವಿಷಯಗಳ ಬಗ್ಗೆ ಚರ್ಚಿಸಬೇಕು. ಸರ್ಕಾರದ ವೈಫಲ್ಯ ಚರ್ಚಿಸಲು ಆದ್ಯತೆ ನೀಡಬೇಕು’ ಎಂದು ತಮ್ಮ ಪಕ್ಷದ ಶಾಸಕರಿಗೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸೂಚನೆ ನೀಡಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅಧಿವೇಶನದಲ್ಲಿ ಅನುಸರಿಸಬೇಕಾದ ಕಾರ್ಯತಂತ್ರದ ಕುರಿತು ಸಲಹೆ ನೀಡಿದರು.

‘ದಾಖಲೆಗಳನ್ನು ಆಧರಿಸಿ ಮಾತನಾಡಬೇಕು. ಕಲಾಪದ ಸಮಯ ಸದ್ಬಳಕೆ ಮಾಡಿಕೊಳ್ಳಬೇಕು. ಮಿತ್ರ ಪಕ್ಷವಾದ ಬಿಜೆಪಿಯ ನಾಯಕರ ಜತೆ ಈಗಾಗಲೇ ಚರ್ಚೆ ನಡೆಸಲಾಗಿದೆ. ಉಭಯ ಸದನಗಳಲ್ಲಿ ಪರಸ್ಪರ ಒಮ್ಮತದಿಂದ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕು’ ಎಂದು ಸಲಹೆ ನೀಡಿದರು.

‘ಕಾಂಗ್ರೆಸ್ ಸರ್ಕಾರವು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದಕ್ಕಿಂತ ದುರ್ಬಳಕೆ ಮಾಡಿಕೊಂಡು ರಾಜಕೀಯ ಲಾಭ ಮಾಡಿಕೊಂಡಿದ್ದೇ ಹೆಚ್ಚು. ಗೃಹಲಕ್ಷ್ಮಿ ಯೋಜನೆಯ ಹಣವನ್ನು ಬಾಕಿ ಇಟ್ಟುಕೊಂಡು ಯಾವುದಾದರೂ ಚುನಾವಣೆ ಬಂದಾಗ ಒಮ್ಮೆಲೆ ಖಾತೆಗಳಿಗೆ ಜಮೆ ಮಾಡಲಾಗುತ್ತಿದೆ. ಈ ವಿಷಯವನ್ನು ಕಲಾಪದಲ್ಲಿ ಪರಿಣಾಮಕಾರಿಯಾಗಿ ಚರ್ಚಿಸಬೇಕು’ ಎಂದು ಸೂಚನೆ ನೀಡಿದರು.

‘ಕಲ್ಯಾಣ ಕರ್ನಾಟಕಕ್ಕೆ ₹ 5 ಸಾವಿರ ಕೋಟಿ ಅನುದಾನ ನೀಡುವುದಾಗಿ ಹೇಳಿದ್ದ ಸರ್ಕಾರ, ನಯಾಪೈಸೆ ಬಿಡುಗಡೆ ಮಾಡಿಲ್ಲ. ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕಕ್ಕೆ ಮೋಸ ಮಾಡುತ್ತಿದೆ. ಈ ಬಗ್ಗೆಯೂ ಹೋರಾಟ ಮಾಡಬೇಕು. ತೆರಿಗೆ ಎಷ್ಟು ವಸೂಲಿ ಮಾಡಿದ್ದೀರಿ, ಗ್ಯಾರಂಟಿಗಳಿಗೆ ಎಷ್ಟು ಹಣ ಖರ್ಚು ಮಾಡುತ್ತಿದ್ದೀರಿ, ಉಳಿದ ಹಣ ಎಲ್ಲಿ ಹೋಗುತ್ತಿದೆ ಎಂಬ ಬಗ್ಗೆ ಪ್ರಶ್ನೆ ಮಾಡಿ’ ಎಂದೂ ಶಾಸಕರಿಗೆ ನಿರ್ದೇಶನ ನೀಡಿದರು.

ಮಣಿಪುರ: ಅಕ್ರಮವಾಗಿ ನಿರ್ಮಿಸಿದ್ದ ಐದು ಬಂಕರ್ ನಾಶ

ಇಂಫಾಲ್ (ಪಿಟಿಐ): ಮಣಿಪುರದ ಕಾಂಗ್‌ಪೋಕ್ಪಿ ಜಿಲ್ಲೆಯ ಥಿಂಗ್ಪಾಟ್ ಬೆಟ್ಟ ಹಾಗೂ ಇಂಫಾಲ್ ಪೂರ್ವ ಜಿಲ್ಲೆಗೆ ಹೊಂದಿಕೊಂಡಿರುವ ವಕಾನ್ ಬೆಟ್ಟದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಐದು ಬಂಕರ್‌ಗಳನ್ನು ಭದ್ರತಾ ಪಡೆಗಳು ನಾಶಪಡಿಸಿವೆ.

ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ ರೈಫಲ್, ಮದ್ದುಗುಂಡುಗಳು, ಬಂದೂಕುಗಳು ಸೇರಿದಂತೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿವೆ.

42 ಬಂದೂಕು ಪೊಲೀಸರ ವಶಕ್ಕೆ: ಜನಾಂಗೀಯ ಕಲಹದಿಂದ ತತ್ತರಿಸಿರುವ ಮಣಿಪುರದ ಐದು ಜಿಲ್ಲೆಗಳಲ್ಲಿ ಸ್ಥಳೀಯರು ಈ ಹಿಂದೆ ಹೊತ್ತೊಯ್ದಿದ್ದ ಶಸ್ತ್ರಾಸ್ತ್ರಗಳಲ್ಲಿ ಕೆಲವನ್ನು ಮರಳಿಸಿದ್ದಾರೆ.

ಇಂಫಾಲ್ ಪಶ್ಚಿಮ ಮತ್ತು ಪೂರ್ವ, ಚುರಾಚಾಂದಪುರ, ಬಿಷ್ಣುಪುರ, ತಮೆಂಗ್‌ಲಾಂಗ್ ಜಿಲ್ಲೆಗಳಲ್ಲಿ 42 ಬಂದೂಕುಗಳು, ಮದ್ದುಗುಂಡುಗಳನ್ನು ಶನಿವಾರ ಮರಳಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಒಳಬೇಗುದಿ ನಡುವೆ ಸದನಕ್ಕೆ ಸಜ್ಜು...

ಒಂದನೇ ಪುಟದಿಂದ...

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಪರೀಕ್ಷೆಯಲ್ಲಿ ಆಗಿರುವ ಲೋಪ, ರೈತರ ಆತ್ಮಹತ್ಯೆ ಪ್ರಕರಣಗಳು, ಬೆಳಗಾವಿಯಲ್ಲಿ ಕನ್ನಡ ಭಾಷಿಕ ಬಸ್ ನಿರ್ವಾಹಕನ ಮೇಲೆ ನಡೆದಿರುವ ದಾಳಿ ಸೇರಿ ಹಲವು ಪ್ರಕರಣಗಳನ್ನು ಸದನದ ಪ್ರಸ್ತಾಪಿಸಲು ಬಿಜೆಪಿ ಮತ್ತು ಜೆಡಿಎಸ್ ತಯಾರಿ ಮಾಡಿಕೊಂಡಿವೆ.

‘ಗ್ಯಾರಂಟಿ’ ಗೊಂದಲವೂ ಅಸ್ತ್ರ: ಗ್ಯಾರಂಟಿ ಯೋಜನೆಗಳ ಕುರಿತು ಸಚಿವರು ನೀಡುತ್ತಿರುವ ವಿಭಿನ್ನ ಹೇಳಿಕೆಗಳನ್ನೂ ಪ್ರಸ್ತಾಪಿಸಿ ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಲೂ ವಿರೋಧ ಪಕ್ಷಗಳು ಸಜ್ಜಾಗಿವೆ. ಗ್ಯಾರಂಟಿ ಯೋಜನೆಗಳ ಸಹಾಯಧನ ಬಿಡುಗಡೆ ವಿಳಂಬ ಆಗಿರುವುದು, ಯೋಜನೆಗಳ ಭವಿಷ್ಯದ ಕುರಿತು ಕೆಲವು ಸಚಿವರು ನೀಡಿರುವ ಹೇಳಿಕೆಗಳನ್ನು ವಿರೋಧಪಕ್ಷಗಳು ಅಸ್ತ್ರವಾಗಿ ಬಳಸುವ ಸಾಧ್ಯತೆಗಳಿವೆ.

ಪ್ರತ್ಯುತ್ತರಕ್ಕೆ ಸರ್ಕಾರ ಸಜ್ಜು: ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ಮತ್ತು ಬಜೆಟ್ ಮೇಲಿನ ಚರ್ಚೆಯೂ ಸೇರಿದಂತೆ ವಿಧಾನಮಂಡಲದಲ್ಲಿ ವಿರೋಧ ಪಕ್ಷಗಳು ಪ್ರಸ್ತಾಪಿಸಬಹುದಾದ ವಿಷಯಗಳ ಕುರಿತು ಬಲವಾದ ಉತ್ತರ ನೀಡುವ ತಯಾರಿಯನ್ನು ಸರ್ಕಾರ ಮಾಡಿಕೊಳ್ಳುತ್ತಿದೆ. ಹಿಂದೆ ಬಿಜೆಪಿ ಹಾಗೂ ಜೆಡಿಎಸ್ ನೇತೃತ್ವದ ಸರ್ಕಾರಗಳ ಅವಧಿಯಲ್ಲಿ ನಡೆದ ಪ್ರಕರಣಗಳನ್ನೇ ಆಧಾರವಾಗಿಟ್ಟುಕೊಂಡು ಪ್ರತಿಪಕ್ಷಗಳ ಬಾಯಿ ಮುಚ್ಚಿಸುವ ತಂತ್ರಗಾರಿಕೆಯನ್ನು ಆಡಳಿತರೂಢ ‘ಕೈ’ ಪಾಳಯ ಮಾಡುತ್ತಿದೆ.

ಕೇಂದ್ರದಿಂದ ರಾಜ್ಯಕ್ಕೆ ಹೆಚ್ಚು ಅನುದಾನ ದೊರಕದೇ ಇರುವುದು, ತೆರಿಗೆ ಪಾಲು ಹಂಚಿಕೆಯಲ್ಲಿ ಮುಂದುವರಿದ ನಷ್ಟ ಸೇರಿದಂತೆ ಹಲವು ವಿಷಯಗಳನ್ನು ಪ್ರತಿಪಕ್ಷಗಳ ವಿರುದ್ಧದ ಅಸ್ತ್ರವಾಗಿ ಸರ್ಕಾರ ಬಳಸಿಕೊಳ್ಳುವ ಸಂಭವವಿದೆ.

ವಿವಿಧ ಮಸೂದೆಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲರ ಜತೆಗಿನ ಸಂಘರ್ಷವೂ ಚರ್ಚೆಗೆ ಬರುವ ಸಾಧ್ಯತೆ ಇದೆ. ಬೆಳಗಾವಿ ಅಧಿವೇಶನ ಕೊನೆಯ ದಿನ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮತ್ತು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಮಧ್ಯೆ ನಡೆದ ಮಾತಿನ ಚಕಮಕಿ, ಅದರ ಬೆನ್ನಲ್ಲೇ ನಡೆದ ವಿದ್ಯಮಾನಗಳು ಈ ಬಾರಿಯೂ ಪ್ರತಿಧ್ವನಿಸುವ ಸಾಧ್ಯತೆ ಇದೆ.

ಇಬ್ಬರ ಚಿತ್ತವೂ ಸಂಘರ್ಷದತ್ತ: ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಕೆಲವು ದಿನಗಳಿಂದ ಅಧಿಕಾರ ಹಂಚಿಕೆ ಕುರಿತ ಚರ್ಚೆ ಬಿರುಸು ಪಡೆದಿದೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವರಾದ ಸತೀಶ ಜಾರಕಿಹೊಳಿ, ಕೆ.ಎನ್. ರಾಜಣ್ಣ, ಜಿ. ಪರಮೇಶ್ವರ ಮತ್ತಿತರ ಮಧ್ಯೆ ಮುನಿಸು ಬಲಗೊಳ್ಳುತ್ತಲೇ ಇದೆ. ‘ಕೈ’ ಪಾಳಯದಲ್ಲಿನ ಆಂತರಿಕ ಸಂಘರ್ಷ ಸದನದೊಳಗೆ ಮೇಲುಗೈ ಸಾಧಿಸಲು ತಮಗೆ ಅನುಕೂಲ ಮಾಡಿಕೊಡಬಹುದು ಎಂಬ ಲೆಕ್ಕಾಚಾರದಲ್ಲಿ ಬಿಜೆಪಿ, ಜೆಡಿಎಸ್ ನಾಯಕರಿದ್ದಾರೆ.

ಅತ್ತ ಬಿಜೆಪಿಯಲ್ಲಿ ಆಂತರಿಕ ಬೇಗುದಿಯ ಬೆಂಕಿ ಆರುತ್ತಲೇ ಇಲ್ಲ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಭಿನ್ನಮತೀಯರ ಗುಂಪು ಬಂಡಾಯದ ಕಹಳೆ ಮೊಳಗಿಸುತ್ತಲೇ ಇದೆ. ಜೆಡಿಎಸ್‌ನಲ್ಲೂ ನಾಯಕತ್ವದ ವಿರುದ್ಧದ ಅಸಮಾಧಾನ ಹೊಗೆಯಾಡುತ್ತಿದೆ. ಜಿ.ಟಿ. ದೇವೇಗೌಡ ಅವರು ಮೌನಕ್ಕೆ ಜಾರಿದ್ದು, ಸರ್ಕಾರದ ವಿರುದ್ಧ ಗಟ್ಟಿ ಧ್ವನಿಯಲ್ಲಿ ಮಾತನಾಡುವವರೇ ಇಲ್ಲದ ಸ್ಥಿತಿ ಇದೆ. ವಿಪಕ್ಷಗಳೊಳಗಿನ ಬಿಕ್ಕಟ್ಟು ಅಧಿವೇಶನದಲ್ಲಿ ಮೇಲುಗೈ ಸಾಧಿಸಲು ನೆರವಾಗಲಿದೆ ಎಂಬ ವಿಶ್ವಾಸದಲ್ಲಿದ್ದಾರೆ ಆಡಳಿತಾರೂಢ ಕಾಂಗ್ರೆಸ್ ನಾಯಕರು.

ರಾಜ್ಯಪಾಲರನ್ನು ಬೆಂಬಲಿಸಿ ಬಿಜೆಪಿ ಪಾದಯಾತ್ರೆ

ರಾಜ್ಯಪಾಲರು ಮತ್ತು ರಾಜಭವನಕ್ಕೆ ರಾಜ್ಯ ಸರ್ಕಾರ ನಿರಂತರ ಅಪಮಾನ ಮಾಡುತ್ತಿದೆ ಎಂದು ಆರೋಪಿಸಿರುವ ಬಿಜೆಪಿ ನಾಯಕರು, ಇದನ್ನು ವಿರೋಧಿಸಿ ಸೋಮವಾರ ಬೆಳಿಗ್ಗೆ ಶಾಸಕರ ಭವನದಿಂದ ವಿಧಾನಸೌಧದವರೆಗೆ ಪಾದಯಾತ್ರೆ ನಡೆಸಲು ತೀರ್ಮಾನಿಸಿದೆ.

ಈ ಕುರಿತು ಮಾತನಾಡಿರುವ ಆರ್.ಅಶೋಕ, ‘ಸರ್ಕಾರ ಒಂದು ಕಡೆ ರಾಜ್ಯಪಾಲರಿಗೆ ಅವಮಾನ ಮಾಡುತ್ತಿದೆ. ಮತ್ತೊಂದೆಡೆ ಅವರನ್ನು ಕಾಡಿ ಬೇಡಿ ಅವರಿಂದ ಭಾಷಣ ಮಾಡಿಸುತ್ತಿದೆ. ಯಾವ ಮುಖ ಇಟ್ಟುಕೊಂಡು ಭಾಷಣ ಮಾಡಿಸುತ್ತಿದೆ’ ಎಂದು ಪ್ರಶ್ನಿಸಿದರು.

‘ಅಭಿವೃದ್ಧಿ ಶೂನ್ಯ ಸರ್ಕಾರ ಬಜೆಟ್ ಮಂಡನೆ ಮಾಡಲು ಹೊರಟಿದೆ. ಆರ್ಥಿಕವಾಗಿ ಮತ್ತು ನೈತಿಕವಾಗಿ ಸರ್ಕಾರ ಕುಸಿದು ಹೋಗಿದೆ. ಜನರ ಗಮನವನ್ನು ಬೇರೆ ಕಡೆ ಸೆಳೆಯಲು ರಾಜ್ಯಪಾಲರ ಅಧಿಕಾರ ಮೊಟಕು ಮಾಡಲು ಹೊರಟಿದ್ದಾರೆ. ಇದನ್ನು ವಿರೋಧಿಸಿ ಪಾದಯಾತ್ರೆ ಮಾಡುತ್ತಿದ್ದೇವೆ’ ಎಂದು ಹೇಳಿದರು.

ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಕಾಂಗ್ರೆಸ್ ಶಾಸಕರೇ ಈ ಮಾತನ್ನು ಹೇಳುತ್ತಿದ್ದಾರೆ. ಜತೆಗೆ ಹಣ ಇಲ್ಲದೇ ಒಂದು ಲಕ್ಷ ಕೋಟಿ ಸಾಲ ಮಾಡುತ್ತಿದ್ದಾರೆ. ಜನರ ಮೇಲೆ ಅನಗತ್ಯವಾಗಿ ತೆರಿಗೆ ಹೊರೆ ಹೇರಲಾಗುತ್ತಿದೆ ಎಂದರು.

‘ಸಿದ್ದರಾಮಯ್ಯ ಸರ್ಕಾರ ದಲಿತರ ಹಣವನ್ನು ಗ್ಯಾರಂಟಿಗೆ ಬಳಸಿದೆ. ದಲಿತರ ಹಣವನ್ನು ದಲಿತರಿಗೆ ಸಂಬಂಧಿಸಿದ ಯೋಜನೆಗಳಿಗೇ ಮಾತ್ರ ಬಳಸಬೇಕು. ಚುನಾವಣೆ ಸಮಯದಲ್ಲಿ ಎಲ್ಲರಿಗೂ ಉಚಿತ ಎಂದು ಹೇಳಿ, ಈಗ ದಲಿತರ ಹಣ ಬಳಸಲಾಗುತ್ತಿದೆ. ಬಿಜೆಪಿಯ ಶೇ 40 ಕಮಿಷನ್‌ನ ಹಣ ಉಳಿಸಿ ಗ್ಯಾರಂಟಿಗೆ ಬಳಸಲಾಗುವುದು ಎನ್ನುತ್ತಿದ್ದರು. ಈಗ ಗುತ್ತಿಗೆದಾರರೇ ಕಾಂಗ್ರೆಸ್ ಸರ್ಕಾರದ ಕಮಿಷನ್ ಕುರಿತು ಮಾತನಾಡಿದ್ದಾರೆ’ ಎಂದರು.

ಸಿಎಲ್‌ಪಿ ಸಭೆ ನಾಳೆ

ಒಂದನೇ ಪುಟದಿಂದ...

‘ಗ್ಯಾರಂಟಿ ಯೋಜನೆಗಳಿಗೆ ಹಣ ಪಾವತಿ ವಿಳಂಬ, ವಿಶ್ವವಿದ್ಯಾಲಯಗಳ ರದ್ದು, ಬೆಳಗಾವಿಯಲ್ಲಿ ಮರಾಠಿಗರ ದೌರ್ಜನ್ಯ ವಿಷಯಗಳನ್ನು ಪ್ರಸ್ತಾಪಿಸಿ ವಿಪಕ್ಷಗಳು ಜಂಟಿಯಾಗಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದು. ಇದಕ್ಕೆ ಪ್ರತಿ ಹೋರಾಟ ಹೇಗಿರಬೇಕು ಎಂದು ಈ ಸಭೆಯಲ್ಲಿ ಚರ್ಚಿಸಲಾಗುವುದು. ಜೊತೆಗೆ, ಪಕ್ಷ ಸಂಘಟನೆ, ಮುಂಬರುವ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗೆ ತಯಾರಿ ಕುರಿತು ಕೂಡಾ ಚರ್ಚೆಯಾಗುವ ಸಾಧ್ಯತೆಗಳಿವೆ’ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಗ್ರಾಮಗಳ ಜೀವಜಲ ಆಪೋಶನ ತೆಗೆದುಕೊಂಡ ನಗರೀಕರಣ

ಕಲುಷಿತಗೊಂಡ ದೊಡ್ಡ ಹಳ್ಳ

● ಪ್ರಭು ಬ. ಅಡವಿಹಾಳ

ಕಲಬುರಗಿ: ನಗರದ ಸುತ್ತಲಿನ ಹತ್ತಾರು ಹಳ್ಳಿಗಳಿಗೆ ಆಧಾರವಾಗಿದ್ದ ದೊಡ್ಡ ಹಳ್ಳವೊಂದು ನಾಲ್ಕು ವರ್ಷಗಳಿಂದ ಕಲುಷಿತಗೊಂಡಿದೆ. ಹಳ್ಳಿಗಳ ಜನ–ಜಾನುವಾರಿಗೆ ಆಸರೆಯಾಗಿದ್ದ ಹಳ್ಳವನ್ನು ನಗರೀಕರಣ ಆಪೋಶನ ಪಡೆದಿದೆ.

ಕೆರೆಭೋಸಗಾ, ಮಾಲಗತ್ತಿ, ವೆಂಕಟ ಬೇನೂರ, ಸುಲ್ತಾನಪೂರ, ಕಪನೂರ, ಭೂಪಾಲ ತೆಗನೂರು, ಖಾಜಾ ಕೋಟನೂರ ಸೇರಿ 10ಕ್ಕೂ ಹಳ್ಳಿಗಳು ಕಲಬುರಗಿ ನಗರವನ್ನು ಹತ್ತಾರು ಕಿಲೋಮೀಟರ್ ಅಂತರದಲ್ಲೇ ಸುತ್ತುವರಿದಿವೆ. ಕೆರೆಭೋಸಗಾದಲ್ಲಿ ಹುಟ್ಟಿ ಖಾಜಾ ಕೋಟನೂರ ಗ್ರಾಮದ ಮತ್ತೊಂದು ಕೆರೆ ಸೇರುತ್ತಿದ್ದ ಹಳ್ಳ ಸುಮಾರು 25 ಕಿ.ಮೀ. ಹರಿಯುತ್ತಿತ್ತು.

ಈ ಗ್ರಾಮಗಳ ಜನ, ಜಾನುವಾರು ಹಾಗೂ ಕೃಷಿಗೂ ಈ ಹಳ್ಳ ಆಧಾರವಾಗಿತ್ತು. ಆದರೆ, ಕಳೆದ ನಾಲ್ಕು ವರ್ಷಗಳಿಂದ ಕಾರ್ಖಾನೆಗಳ ತ್ಯಾಜ್ಯ ನೀರು ಮತ್ತು ಕಲಬುರಗಿ ನಗರದ ಒಳಚರಂಡಿ ನೀರು ಹಳ್ಳಕ್ಕೆ ಸೇರುತ್ತಿದ್ದು, ಜೀವಜಲವಾಗಿದ್ದ ದೊಡ್ಡಹಳ್ಳವೀಗ ಹಾಲಾಹಲವಾಗಿ ಮಾರ್ಪಟ್ಟಿದೆ.

2020ಕ್ಕೂ ಮುನ್ನ ಸ್ವಚ್ಛಂದವಾಗಿ ಹರಿಯುತ್ತಿದ್ದ ಇದೇ ಹಳ್ಳದ ನೀರು ಬಳಸಿ ರೈತರು ಕೃಷಿ ಮಾಡುತ್ತಿದ್ದರು. ಸೊಪ್ಪು, ತರಕಾರಿ ಬೆಳೆದು ಕಲಬುರಗಿಯ ಕಣ್ಣಿ ಮಾರುಕಟ್ಟೆ, ತಾಜಸುಲ್ತಾನಪುರ ಮಾರುಕಟ್ಟೆಗೆ ಒಯ್ದು ಮಾರಾಟ ಮಾಡಿ ಜೀವಿಸುತ್ತಿದ್ದರು. ಆದರೀಗ ಜನ, ಜಾನುವಾರುಗಳಿರಲಿ, ಜಲಚರಗಳೂ ಜೀವಿಸದಷ್ಟು ವಿಷವಾಗಿ ಮಾರ್ಪಟ್ಟಿದೆ. ಹುಡುಕಿದರೆ ಒಂದು ಸಣ್ಣ ಮರಿಮೀನೂ ಸಿಕ್ಕುವುದಿಲ್ಲ. ಜಮೀನುಗಳಿಗೆ ನೀರು ಹರಿಸಿದರೆ ರಾಸಾಯನಿಕದಿಂದಾಗಿ ಬೆಳೆ ಬಾಡಿಹೋಗುತ್ತದೆ ಎನ್ನುತ್ತಾರೆ ಮಾಲಗತ್ತಿ ಗ್ರಾಮದ ವಕೀಲ ರಾಜು ದೇವಣಗಿ.

ಹಳ್ಳಕ್ಕೆ ಚರಂಡಿ, ಕಾರ್ಖಾನೆ ನೀರು ಸೇರುತ್ತಿರುವುದರಿಂದ ಅಂತರ್ಜಲದ ನೀರೂ ಹಾಳಾಗಿದೆ. ಗ್ರಾಮಗಳಲ್ಲಿನ ಕೊಳವೆಬಾವಿ ನೀರೂ ವಾಸನೆ ಬರುತ್ತಿದೆ. ದನಗಳೂ ನೀರು ಕುಡಿಯುತ್ತಿಲ್ಲ ಎಂದು ಭೂಪಾಲತೆಗನೂರ ನಿವಾಸಿ ಕಲ್ಯಾಣಪ್ಪ ಕಂದಗೋಳ ಬೇಸರಿಸಿದರು.

ಆಗಿದ್ದೇನು?: ‘ಕಲಬುರಗಿ ನಗರದಿಂದ 7 ಕಿ.ಮೀ. ದೂರದಲ್ಲಿರುವ ಕಪನೂರಲ್ಲಿ ಆಸಿಡ್ ಉತ್ಪಾದನಾ ಘಟಕಗಳು, ಸ್ಟೀಲ್ ಪಾತ್ರೆ ತಯಾರಿಸುವ ಘಟಕಗಳು ಸೇರಿದಂತೆ ಹಲವು ಕಾರ್ಖಾನೆಗಳು ತಲೆಯೆತ್ತಿವೆ. ಇವುಗಳ ತ್ಯಾಜ್ಯವು ಸಮೀಪದ ಹಳ್ಳಕ್ಕೆ ಬಂದು ಸೇರುತ್ತಿದೆ. ಕಲಬುರಗಿ ನಗರದ ಒಳಚರಂಡಿ ನೀರು ಕೂಡ ಇದೇ ಹಳ್ಳದ ಒಡಲಿಗೆ ನುಗ್ಗುತ್ತಿದೆ. ಕಪನೂರಲ್ಲೇ ಒಳಚರಂಡಿ ಸಂಸ್ಕರಣಾ ಘಟಕ (ಎಸ್‌ಟಿಪಿ) ಇದ್ದರೂ ಘನತ್ಯಾಜ್ಯ ಮಾತ್ರ ನೀರಿನಿಂದ ಬೇರ್ಪಡುತ್ತಿದೆ ಹೊರತು, ಆಯಿಲ್ ಮತ್ತು ಗ್ರೀಸ್ ಬೇರ್ಪಡಿಸಲಾಗುತ್ತಿಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು ಎಸ್‌ಟಿಪಿ ಘಟಕದ ಪ್ರಾಜೆಕ್ಟ್ ಮ್ಯಾನೇಜರ್ ರೇವಣಸಿದ್ದಪ್ಪ.

‘ಕಪನೂರು ಎಸ್‌ಟಿಪಿ ಘಟಕದ ಸಾಮರ್ಥ್ಯ ಹೆಚ್ಚಿಸಬೇಕು. ಪ್ರಸ್ತುತ ಒಳಚರಂಡಿ ನೀರು ಎರಡು ಹಂತಗಳಲ್ಲಿ ಫಿಲ್ಟರ್ ಆಗುತ್ತಿದೆ. ಅದು ಮೂರು ಹಂತಗಳಲ್ಲಿ ನಡೆದರೆ, ಆರ್.ಒ. ವಾಟರ್ ಹಂತಕ್ಕೆ ನೀರು ಶುದ್ಧೀಕರಣವಾಗುತ್ತದೆ. ಈ ಯೋಜನೆಯ ಪ್ರಸ್ತಾವ ಇದ್ದರೂ ಅನುದಾನದ ಕೊರತೆಯಿದೆ. ನಮಗೆ ಒಂದು ವರ್ಷದಿಂದ ಸಂಬಳವನ್ನೂ ನೀಡಿಲ್ಲ’ ಎಂದು ಎಸ್‌ಟಿಪಿ ಘಟಕದ ಸಿಬ್ಬಂದಿ ಅಳಲು ತೋಡಿಕೊಂಡರು.



ಕಲಬುರಗಿಯ ಮಾಲಗತ್ತಿ ಬಳಿ ಹಳ್ಳದ ನೀರು ಮಲಿನಗೊಂಡಿದೆ

> ಒಳಚರಂಡಿ ನೀರು ಬಂದು ನಮ್ಮ ಹಳ್ಳ ಸೇರುತ್ತಿರುವುದನ್ನು ಮಹಾನಗರ ಪಾಲಿಕೆ ತಡೆಯಬೇಕು. ಇಲ್ಲದಿದ್ದರೆ ಹಳ್ಳ ಹುಡುಕಿಕೊಡಿ ಎಂದು ನಾವು ಕೋರ್ಟ್ ಮೆಟ್ಟಿಲೇರುತ್ತೇವೆ
>
> **ರಾಜು ದೇವಣಗಿ,** ವಕೀಲ, ಮಾಲಗತ್ತಿ ಗ್ರಾಮ

> ಸ್ಥಳಕ್ಕೆ ಶೀಘ್ರವೇ ಭೇಟಿ ನೀಡಿ ಪರಿಶೀಲಿಸುತ್ತೇನೆ. ಎಸ್‌ಟಿಪಿಯನ್ನು ಉನ್ನತೀಕರಿಸಿ ಶುದ್ಧ ನೀರು ಹೊರ ಹೋಗುವಂತೆ ಕ್ರಮ ಜರುಗಿಸುತ್ತೇವೆ
>
> **ಅವಿನಾಶ ಸಿಂಧೆ** ಕಲಬುರಗಿ ಪಾಲಿಕೆ ಆಯುಕ್ತ

ಸೆಮಿಫೈನಲ್‌ನಲ್ಲಿ ಭಾರತಕ್ಕೆ ಆಸ್ಟ್ರೇಲಿಯಾ ಎದುರಾಳಿ: ರೋಹಿತ್ ಶರ್ಮಾ ಪಡೆಗೆ 44 ರನ್‌ಗಳ ಜಯ

ಚಕ್ರವರ್ತಿ ಸ್ಪಿನ್‌ಗೆ ಶರಣಾದ ಕಿವೀಸ್

ದುಬೈ (ಪಿಟಿಐ): 'ನಿಗೂಢ ಸ್ಪಿನ್ನರ್' ಖ್ಯಾತಿಯ ವರುಣ ಚಕ್ರವರ್ತಿ ಅವರ ಅಮೋಘ ಬೌಲಿಂಗ್ ಬಲದಿಂದ ಭಾರತ ತಂಡವು ಭಾನುವಾರ ನ್ಯೂಜಿಲೆಂಡ್ ಎದುರು ಜಯಭೇರಿ ಬಾರಿಸಿತು. ಅದರೊಂದಿಗೆ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಎ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಇದೇ 4ರಂದು ದುಬೈನಲ್ಲಿ ನಡೆಯುವ ಸೆಮಿಫೈನಲ್‌ನಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಎದುರು ಸೆಣಸಲಿದೆ. ಲಾಹೋರ್‌ನಲ್ಲಿ ನಡೆಯುವ ಇನ್ನೊಂದು ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ಮುಖಾಮುಖಿ ಯಾಗಲಿವೆ.

ಭಾನುವಾರ ದುಬೈ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 44 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಕಿವೀಸ್ ಪಡೆಯು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತದ ಅಗ್ರಕ್ರಮಾಂಕದ ಮೂವರು ಬ್ಯಾಟರ್ ರೋಹಿತ್ ಶರ್ಮಾ, ಶುಭಮನ್ ಗಿಲ್ ಮತ್ತು ವಿರಾಟ್ ಕೊಹ್ಲಿ ಅವರು ಔಟಾದಾಗ ತಂಡದ ಮೊತ್ತವು ಕೇವಲ 30 ರನ್‌ಗಳಾಗಿದ್ದವು. ಈ ಹಂತದಲ್ಲಿ ಶ್ರೇಯಸ್ ಅಯ್ಯರ್ (79; 98ಎ), ಅಕ್ಷರ್ ಪಟೇಲ್ (42; 61ಎ) ಮತ್ತು ಹಾರ್ದಿಕ್ ಪಾಂಡ್ಯ (45; 45ಎ) ತಂಡಕ್ಕೆ ಬಲ ತುಂಬಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 249 ರನ್ ಗಳಿಸಿತು.


ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ತಂಡವನ್ನು 205 ರನ್‌ಗಳಿಗೆ ಕಟ್ಟಿಹಾಕುವಲ್ಲಿ ವರುಣ ಚಕ್ರವರ್ತಿ (42ಕ್ಕೆ5) ಯಶಸ್ವಿಯಾದರು. ಕಿವೀಸ್ ಬಳಗದ ಅನುಭವಿ ಬ್ಯಾಟರ್ ಕೇನ್ ವಿಲಿಯಮ್ಸನ್ (81; 120ಎ) ತಾಳ್ಮೆಯ ಬ್ಯಾಟಿಂಗ್ ಮೂಲಕ ತಂಡದ ಜಯಕ್ಕಾಗಿ ಪ್ರಯತ್ನಿಸಿದರು. ಆದರೆ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಬೆಂಬಲ ಅವರಿಗೆ ಸಿಗಲಿಲ್ಲ. ಕೇನ್ ಅವರು 17 ರನ್ ಗಳಿಸಿದ್ದ ಸಂದರ್ಭದಲ್ಲಿ ಅಕ್ಷರ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ರಾಹುಲ್ ಅವರಿಂದ ಜೀವದಾನ ಪಡೆದಿದ್ದರು.

ನ್ಯೂಜಿಲೆಂಡ್ ತಂಡದಲ್ಲಿರುವ ಸಮರ್ಥ ಬ್ಯಾಟರ್‌ಗಳಿಗೆ 250 ರನ್‌ಗಳ ಗುರಿ ದೊಡ್ಡದಾಗಿರಲಿಲ್ಲ. ಆದರೆ ಅವರೆಲ್ಲರೂ ಭಾರತದ ಸ್ಪಿನ್ನರ್‌ಗಳ ಮುಂದೆ ಆಡಲು ಪರದಾಡಿದರು. ಅದರಲ್ಲಿಯೂ ಚಕ್ರವರ್ತಿ ಎಸೆತಗಳಿಗೆ ನಿರುತ್ತರರಾದರು. ರವೀಂದ್ರ ಜಡೇಜ (36ಕ್ಕೆ1), ಕುಲದೀಪ್ ಯಾದವ್ (56ಕ್ಕೆ1) ಹಾಗೂ ಅಕ್ಷರ್ ಪಟೇಲ್ (22ಕ್ಕೆ2) ಅವರ ಎಸೆತಗಳು ಉತ್ತಮ ವಾಗಿ ಸ್ಪಿನ್ ಆಗುತ್ತಿದ್ದವು. ಈ ಟೂರ್ನಿಯಲ್ಲಿ ಚಕ್ರವರ್ತಿ ಆಡಿದ ಮೊದಲ ಪಂದ್ಯ ಇದಾಗಿದೆ.

ಹೆನ್ರಿಗೆ 5 ವಿಕೆಟ್: ಭಾರತದ ಬ್ಯಾಟಿಂಗ್‌ನಲ್ಲಿ ಕಿವೀಸ್ ವೇಗಿ ಮ್ಯಾಟ್ ಹೆನ್ರಿ (42ಕ್ಕೆ5) ಮಿಂಚಿದರು. ಅವರು ಮತ್ತು ಕೈಲ್ ಜೆಮಿಸನ್ ಅವರ ಬೌಲಿಂಗ್‌ನಿಂದ ಮೂರು ವಿಕೆಟ್‌ಗಳು ಬೇಗನೆ ಪತನವಾದರು. ಇದರಿಂದಾಗಿ ಬೌಲರ್‌ಗಳು ಭಾರತದ ರನ್ ಗಳಿಕೆಯ ವೇಗಕ್ಕೆ ಕಡಿವಾಣ ಹಾಕಿದರು.

ಈ ನಡುವೆ ಶ್ರೇಯಸ್ ಮತ್ತು ಅಕ್ಷರ್ 4ನೇ ವಿಕೆಟ್ ಜೊತೆಯಾಟದಲ್ಲಿ 98 ರನ್ ಸೇರಿಸಿದರು. ಅರ್ಧಶತಕದ ಅಂಚಿನಲ್ಲಿ ಅಕ್ಷರ್ ಔಟಾದರು. ಕೆ.ಎಲ್. ರಾಹುಲ್ ಮತ್ತು ಶ್ರೇಯಸ್ ಜೊತೆ ಯಾಟದಲ್ಲಿ 44 ರನ್ ಸೇರಿಸಿದರು. ಶತಕ ಗಳಿಸುವತ್ತ ಹೆಜ್ಜೆ ಇಟ್ಟಿದ್ದ ಶ್ರೇಯಸ್ ಅವರನ್ನು ವಿಲಿಯಂ ಓರೂರ್ಕೆ ಔಟ್ ಮಾಡಿದರು.

ನಂತರ ಹಾರ್ದಿಕ್ ಅವರು ಎರಡು ಸಿಕ್ಸರ್‌ಗಳನ್ನೂ ಹೊಡೆದು ರನ್ ವೇಗ ಹೆಚ್ಚು ಮಾಡಿದರು. ಕಿವೀಸ್ ಫೀಲ್ಡಿಂಗ್ ಕೂಡ ಉತ್ತಮವಾಗಿತ್ತು.


ವಿಕೆಟ್ ಪಡೆದ ಸಂಭ್ರಮದಲ್ಲಿ ವರುಣ್ ಚಕ್ರವರ್ತಿ –ಪಿಟಿಐ ಚಿತ್ರಗಳು


ಅರ್ಧ ಶತಕ ಸಿಡಿಸಿ ಸಂಭ್ರಮಿಸಿದ ಶ್ರೇಯಸ್ ಅಯ್ಯರ್

ಸೆಮಿಫೈನಲ್ ಮುಖಾಮುಖಿ

ಭಾರತ–ಆಸ್ಟ್ರೇಲಿಯಾ
ಮಾರ್ಚ್ 4, ಸ್ಥಳ: ದುಬೈ

ನ್ಯೂಜಿಲೆಂಡ್–ದಕ್ಷಿಣ ಆಫ್ರಿಕಾ
ಮಾರ್ಚ್ 5, ಸ್ಥಳ: ಲಾಹೋರ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್ ಆರ್ ಆರ್
ಗುಂಪು ಎ						
ಭಾರತ	3	3	0	0	6	0.576
ನ್ಯೂಜಿಲೆಂಡ್	3	2	1	0	4	0.433
ಬಾಂಗ್ಲಾದೇಶ	3	0	2	1	1	-0.443
ಪಾಕಿಸ್ತಾನ	3	0	2	1	1	-1087
ಗುಂಪು ಬಿ						
ದಕ್ಷಿಣ ಆಫ್ರಿಕಾ	3	2	0	1	5	2.395
ಆಸ್ಟ್ರೇಲಿಯಾ	3	1	0	2	4	0.475
ಅಫ್ಗಾನಿಸ್ತಾನ	3	1	1	1	3	-0.990
ಇಂಗ್ಲೆಂಡ್	3	0	3	0	0	-1.159

ಸ್ಕೋರ್ ಕಾರ್ಡ್

ಭಾರತ 9ಕ್ಕೆ 249 (50 ಓವರ್‌ಗಳಲ್ಲಿ)
ರೋಹಿತ್ ಸಿ ಯಂಗ್ ಬಿ ಜೇಮಿಸನ್ 15 (17ಎ, 4x1, 6x1)
ಶುಭಮನ್ ಎಲ್‌ಬಿಡಬ್ಲ್ಯು ಬಿ ಹೆನ್ರಿ 2 (7ಎ)
ವಿರಾಟ್ ಸಿ ಫಿಲಿಪ್ಸ್ ಬಿ ಹೆನ್ರಿ 11 (14ಎ, 4x2)
ಶ್ರೇಯಸ್ ಸಿ ಯಂಗ್ ಬಿ ಒ ರೂರ್ಕಿ 79 (98ಎ, 4x2, 6x2)
ಅಕ್ಷರ್ ಸಿ ವಿಲಿಯಮ್ಸನ್ ಬಿ ರಚಿನ್ 42 (61ಎ, 4x3, 6x1)
ರಾಹುಲ್ ಸಿ ಲಥಾಮ್ ಬಿ ಸ್ಯಾಂಟನರ್ 23 (29ಎ, 4x1)
ಹಾರ್ದಿಕ್ ಸಿ ರಚಿನ್ ಬಿ ಹೆನ್ರಿ 45 (45ಎ, 4x4, 6x2)
ಜಡೇಜ ಸಿ ವಿಲಿಯಮ್ಸನ್ ಬಿ ಹೆನ್ರಿ 16 (20ಎ, 4x1)
ಶಮಿ ಸಿ ಫಿಲಿಪ್ಸ್ ಬಿ ಹೆನ್ರಿ 5 (8ಎ)
ಕುಲದೀಪ್ ಯಾದವ್ ಔಟಾಗದೇ 1 (1ಎ)
ಇತರೆ: 10 (ಬೈ 1, ವೈಡ್ 9)
ವಿಕೆಟ್ ಪತನ: 1-15 (ಶುಭಮನ್ ಗಿಲ್, 2.5), 2-22 (ರೋಹಿತ್ ಶರ್ಮಾ, 5.1), 3-30 (ವಿರಾಟ್ ಕೊಹ್ಲಿ, 6.4), 4-128 (ಅಕ್ಷರ್ ಪಟೇಲ್, 29.2), 5-172 (ಶ್ರೇಯಸ್ ಅಯ್ಯರ್ 36.2), 6-182 (ಕೆ. ಎಲ್. ರಾಹುಲ್, 39.1), 7-223 (ರವೀಂದ್ರ ಜಡೇಜ, 45.5), 8-246 (ಹಾರ್ದಿಕ್ ಪಾಂಡ್ಯ, 49.3), 9-249 (ಮೊಹಮ್ಮದ್ ಶಮಿ, 49.6)
ಬೌಲಿಂಗ್: ಮ್ಯಾಟ್ ಹೆನ್ರಿ 8–0–42–5, ಕೈಲ್ ಜೇಮಿಸನ್ 8–0–31–1, ವಿಲ್ ಒ ರೂರ್ಕಿ 9–0–47–1, ಮಿಚೆಲ್ ಸ್ಯಾಂಟನರ್ 10–1–41–1, ಮಿಚೆಲ್ ಬ್ರೇಸ್‌ವೆಲ್ 9–0–56–0, ರಚಿನ್ ರವೀಂದ್ರ 6–0–31–1.

ನ್ಯೂಜಿಲೆಂಡ್: 205 (45.3 ಓವರ್‌ಗಳಲ್ಲಿ)
ಯಂಗ್ ಬಿ ವರುಣ್ 22 (35ಎ, 4x3)
ರಚಿನ್ ಸಿ ಪಟೇಲ್ ಬಿ ಪಾಂಡ್ಯ 6 (12ಎ)
ವಿಲಿಯಮ್ಸನ್ ಸ್ಟಂಪ್ ರಾಹುಲ್ ಬಿ ಪಟೇಲ್ 81 (120 ಎ, 4x7)
ಡ್ಯಾರಿಲ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 17 (35ಎ, 4x1)
ಲೇಥಮ್ ಎಲ್‌ಬಿಡಬ್ಲ್ಯು ಬಿ ಜಡೇಜ 14 (20ಎ)
ಫಿಲಿಪ್ಸ್ ಎಲ್‌ಬಿಡಬ್ಲ್ಯು ಬಿ ವರುಣ್ 12 (8ಎ, 6x1)
ಬ್ರೇಸ್‌ವೆಲ್ ಎಲ್‌ಬಿಡಬ್ಲ್ಯು ಬಿ ವರುಣ್ 2 (3ಎ)
ಸ್ಯಾಂಟನರ್ ಬಿ ವರುಣ್ 28 (31ಎ, 4x1, 6x2)
ಹೆನ್ರಿ ಸಿ ಕೊಹ್ಲಿ ಬಿ ವರುಣ್ 2 (4ಎ)
ಕೈಲ್ ಜೇಮಿಸನ್ ಔಟಾಗದೇ 9 (4ಎ, 6x1)
ಒ ರೂರ್ಕಿ ಬಿ ಕುಲದೀಪ್ 1 (2ಎ)
ಇತರೆ: 11 (ಲೆಗ್‌ಬೈ 2, ನೋಬಾಲ್ 1, ವೈಡ್ 8)
ವಿಕೆಟ್ ಪತನ: 1-17 (ರಚಿನ್ ರವೀಂದ್ರ, 3.6), 2-49 (ವಿಲ್ ಯಂಗ್, 11.3), 3-93 (ಡ್ಯಾರಿಲ್ ಮಿಚೆಲ್, 25.1), 4-133 (ಟಾಮ್ ಲಥಾಮ್, 32.2), 5-151 (ಗ್ಲೆನ್ ಫಿಲಿಪ್ಸ್, 35.4), 6-159 (ಮೈಕಲ್ ಬ್ರೇಸ್‌ವೆಲ್, 37.1), 7-169 (ಕೇನ್ ವಿಲಿಯಮ್ಸನ್, 40.6), 8-195 (ಮಿಚೆಲ್ ಸ್ಯಾಂಟನರ್, 44.2), 9-196 (ಮ್ಯಾಟ್ ಹೆನ್ರಿ, 44.4), 10-205 (ವಿಲ್ ಒ ರೂರ್ಕಿ, 45.3).
ಬೌಲಿಂಗ್: ಮೊಹಮ್ಮದ್ ಶಮಿ 4–0–15–0, ಹಾರ್ದಿಕ್ ಪಾಂಡ್ಯ 4–0–22–1, ಅಕ್ಷರ್ ಪಟೇಲ್ 10–0–32–1, ವರುಣ್ ಚಕ್ರವರ್ತಿ 10–0–42–5, ಕುಲದೀಪ್ ಯಾದವ್ 9.3–0–56–2, ರವೀಂದ್ರ ಜಡೇಜ 8–0–36–
ಪಂದ್ಯದ ಆಟಗಾರ: ವರುಣ್ ಚಕ್ರವರ್ತಿ

ಫಲಿತಾಂಶ: ಭಾರತಕ್ಕೆ 44 ರನ್‌ಗಳ ಜಯ

ಅಕ್ಷಯ್ ಪಡೆಗೆ ರಣಜಿ ಟ್ರೋಫಿ

ವಿದರ್ಭ 3ನೇ ಬಾರಿ ಚಾಂಪಿಯನ್: ಕರುಣ್ ಶತಕ; ಕೇರಳ ರನ್ನರ್ಸ್ ಅಪ್

ನಾಗ್ಪುರ (ಪಿಟಿಐ): ವಿದರ್ಭ ಕ್ರಿಕೆಟ್ ತಂಡವು 3ನೇ ಬಾರಿ ರಣಜಿ ಟ್ರೋಫಿ ಜಯಿಸಿತು.

ಈ ವರ್ಷದ ಟೂರ್ನಿಯುದ್ದಕ್ಕೂ ಅಮೋಘವಾಗಿ ಆಡಿದ ವಿದರ್ಭ ಪಡೆಯು ಫೈನಲ್‌ನಲ್ಲಿ ಕೇರಳ ತಂಡದ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ 37 ರನ್ ಗಳ ಮುನ್ನಡೆ ಗಳಿಸಿ, ಚಾಂಪಿಯನ್ ಪಟ್ಟ ಕ್ಕೇರಿತು. ಕೇರಳ ತಂಡವು ಟೂರ್ನಿಯ ಇತಿಹಾಸದಲ್ಲಿ ಇದೇ ಮೊದಲ ಸಲ ಫೈನಲ್ ಪ್ರವೇಶಿಸಿತ್ತು.

ಆದರೆ ವಿದರ್ಭ ತಂಡವು ಈ ಬಾರಿಯ ದೇಶಿ ಋತುವಿನಲ್ಲಿ ತೋರಿದ ಶಿಸ್ತು ಮತ್ತು ಬದ್ಧತೆಗೆ ಜಯ ಒಲಿಯಿತು. ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ವಿದರ್ಭ ರನ್ನರ್ಸ್ ಅಪ್ ಆಗಿತ್ತು. 2017–18 ಮತ್ತು 2018–19ರಲ್ಲಿ ರಣಜಿ ಟ್ರೋಫಿ ಜಯಿ ಸಿದ್ದ ವಿದರ್ಭ ತಂಡವು ಮತ್ತೊಮ್ಮೆ ಕಿರೀಟ ಧರಿಸಿದೆ. ಹೋದ ಸಲ ರಣಜಿ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿತ್ತು. ನಾಯಕ ಅಕ್ಷಯ್ ವಾಡಕರ್ ಮತ್ತು ಮುಖ್ಯ ಕೋಚ್ ಉಸ್ಮಾನ್ ಗಣಿ ಅವರ ಮಾರ್ಗ ದರ್ಶನದಲ್ಲಿ ತಂಡವು ಅಮೋಘ ಸಾಧನೆ ಮಾಡಿದೆ. ಇದ ರೊಂದಿಗೆ ದೇಶಿ ಕ್ರಿಕೆಟ್‌ನಲ್ಲಿ ಪ್ರತಿಷ್ಠಿತ ತಂಡಗಳ ಸಾಲಿಗೆ ಸೇರಿದೆ.

ಈ ಟೂರ್ನಿಯಲ್ಲಿ ವಿದರ್ಭ ತಂಡವು ಲೀಗ್ ಹಂತದಲ್ಲಿ 8 ಪಂದ್ಯಗಳಲ್ಲಿ 7ರಲ್ಲಿ ಗೆದ್ದಿತ್ತು. ಒಟ್ಟು 46 ಅಂಕ ಗಳಿಸಿತ್ತು. ಕ್ವಾರ್ಟರ್‌ಫೈನಲ್‌ನಲ್ಲಿ ತಮಿಳುನಾಡು ಮತ್ತು ಸೆಮಿಫೈನಲ್‌ನಲ್ಲಿ ಹೋದ ಬಾರಿಯ ಚಾಂಪಿಯನ್ ಮುಂಬೈ ತಂಡಗಳನ್ನು ಸೋಲಿಸಿದ್ದ ವಿದರ್ಭ ಫೈನಲ್‌ಗೆ ತಲುಪಿತ್ತು.

ಆದರೆ ಕೇರಳಕ್ಕೆ ಅದೃಷ್ಟ ಹೆಚ್ಚು ಜೊತೆ ಯಾಗಿತ್ತು. ಕ್ವಾರ್ಟರ್‌ಫೈನಲ್‌ನಲ್ಲಿ ಜಮ್ಮು–ಕಾಶ್ಮೀರ ಎದುರು 1 ರನ್ ಮುನ್ನಡೆ ಹಾಗೂ ಸೆಮಿಫೈನಲ್‌ನಲ್ಲಿ ಗುಜರಾತ್ ಎದುರು ನಡೆದ ರೋಚಕ ಹೋರಾಟದಲ್ಲಿ 2 ರನ್ ಇನಿಂಗ್ಸ್ ಮುನ್ನಡೆ ಪಡೆದು ಪ್ರಶಸ್ತಿ ಸನಿಹ ಬಂದಿತ್ತು.

ಆದರೆ ಫೈನಲ್‌ನಲ್ಲಿ ವಿದರ್ಭ ತಂಡ ಮೇಲುಗೈ ಸಾಧಿಸಿತು. ವಿದರ್ಭ ಮೊದಲ ಇನಿಂಗ್ಸ್‌ನಲ್ಲಿ 379 ರನ್ ಗಳಿಸಿತ್ತು. ಕೇರಳವು 342 ರನ್ ಗಳಿಸುವಲ್ಲಿ ಯಶಸ್ವಿಯಾಗಿತ್ತು. ಎರಡನೇ ಇನಿಂಗ್ಸ್‌ನಲ್ಲಿ ವಿದರ್ಭ ತಂಡವು 143.5 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 375 ರನ್ ಗಳಿಸಿತು.

ಪಂದ್ಯದ ಕೊನೆಯ ದಿನವಾದ ಭಾನುವಾರ ಕರುಣ್ ನಾಯರ್ (135; 295 ಎಸೆತ, 4X10, 6X2) ಶತಕ ಪೂರೈಸಿದರು. ಮೊದಲ ಇನಿಂಗ್ಸ್‌ನಲ್ಲಿ ಶತಕ ಹೊಡೆದಿದ್ದ ದಾನಿಶ್ ಈ ಇನಿಂ ಗ್ಸ್‌ನಲ್ಲಿ 73 ಮತ್ತು ದರ್ಶನ್ ನಲ್ಕಂಡೆ (ಔಟಾಗದೇ 51) ಅರ್ಧಶತಕ ದಾಖಲಿಸಿದರು.

21 ವರ್ಷದ ದಾನಿಶ್ ಅವರು ಪಂದ್ಯ ದ ಆಟಗಾರ ಗೌರವಕ್ಕೆ ಪಾತ್ರ ರಾದರು. ಇದೊಂದೇ ರಣಜಿ ಋತುವಿನಲ್ಲಿ ಒಟ್ಟು 69 ವಿಕೆಟ್ ಗಳಿಸಿದ ಎಡಗೈ ಸ್ಪಿನ್ನರ್ ಹರ್ಷ ದುಬೆ ಅವರು ಸರಣಿಯ ಆಟಗಾರ ಪ್ರಶಸ್ತಿ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 123.1 ಓವರ್‌ಗಳಲ್ಲಿ 379. ಕೇರಳ: 125 ಓವರ್‌ಗಳಲ್ಲಿ 342. ಎರಡನೇ ಇನಿಂಗ್ಸ್: ವಿದರ್ಭ: 143.5 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 375 (ದಾನಿಶ್ ಮಾಲೆವರ್ 73, ಕರುಣ್ ನಾಯರ್ 135, ಯಶ್ ರಾಥೋಡ್ 24, ಅಕ್ಷಯ್ ವಾಡಕರ್ 25, ಅಕ್ಷಯ್ ಕರ್ಣೇವರ್ 30, ದರ್ಶನ್ ನಲ್ಕಂಡೆ ಔಟಾಗದೇ 51, ಆದಿತ್ಯ ಸರವಟೆ 96ಕ್ಕೆ4) **ಫಲಿತಾಂಶ:** ಪಂದ್ಯ ಡ್ರಾ. **ಪಂದ್ಯದ ಆಟಗಾರ:** ದಾನಿಶ್ ಮಾಲೆವರ್. **ಸರಣಿ ಆಟಗಾರ:** ಹರ್ಷ ದುಬೆ.


ರಣಜಿ ಟ್ರೋಫಿಯೊಂದಿಗೆ ಸಂಭ್ರಮಿಸಿದ ವಿದರ್ಭ ತಂಡದ ಆಟಗಾರರು –ಪಿಟಿಐ ಚಿತ್ರ

ಪಾಕ್ –ಭಾರತ ದ್ವಿಪಕ್ಷೀಯ ಸರಣಿ ಆಡಲಿ: ಸಕ್ಲೇನ್

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆತಿಥೇಯ ಪಾಕಿಸ್ತಾನವು ಸೆಮಿಫೈನಲ್ ಪ್ರವೇಶಿಸುವಲ್ಲಿ ವಿಫಲವಾಗಿ ಹೊರ ಬಿದ್ದಿದೆ. ಗುಂಪು ಹಂತದಲ್ಲಿ ಭಾರತ ತಂಡದ ವಿರುದ್ಧವೂ ಸೋತಿತ್ತು.



ಸೋಲಿನ ಹತಾಶೆಯಿಂದಾಗಿ ಪಾಕ್ ತಂಡದ ಕೆಲವು ಮಾಜಿ ಆಟಗಾರರು ಭಾರತದ ವಿರುದ್ಧ ಟೀಕಾಪ್ರಹಾರ ಆರಂಭಿಸಿದ್ದಾರೆ. ಭಾರತವು ಪಾಕ್ ತಂಡದ ಎದುರು ದ್ವಿಪಕ್ಷೀಯ ಸರಣಿಗಳನ್ನು ಆಡಿ ತನ್ನ ಸಾಮರ್ಥ್ಯ ಸಾಬೀತುಪಡಿಸಬೇಕು ಎಂದು ಮಾಜಿ ಸ್ಪಿನ್ ದಿಗ್ಗಜ ಸಕ್ಲೇನ್ ಮುಷ್ತಾಕ್ ಸವಾಲು ಹಾಕಿದ್ದಾರೆ. ಇನ್ನೊಂದೆಡೆ ಪಾಕ್ ಮಾಜಿ ನಾಯಕ ಇಂಜಮಾಮ್ ಉಲ್ ಹಕ್ ಅವರು, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆಡಲು ಯಾವುದೇ ದೇಶವು ಆಟಗಾರರನ್ನು ಕಳಿಸಬಾರದು ಎಂದು ಹೇಳಿದ್ದಾರೆ.

'ಪಾಕಿಸ್ತಾನ ತಂಡದ ವಿರುದ್ಧ ಭಾರತವು ಕ್ರಿಕೆಟ್‌ನ ಎಲ್ಲ ಮಾದರಿಗಳಲ್ಲಿಯೂ ದ್ವಿಪಕ್ಷೀಯ ಸರಣಿಗಳನ್ನು ಆಡಬೇಕು. ಅದರಲ್ಲಿ ತಾನು ಪಾಕಿಸ್ತಾನಕ್ಕಿಂತ ಬಲಿಷ್ಠ ತಂಡ ಎಂಬುದನ್ನು ಸಾಬೀತು ಮಾಡಬೇಕು. 10 ಟೆಸ್ಟ್, ಏಕದಿನ ಮತ್ತು ಟಿ20 ಪಂದ್ಯಗಳನ್ನು ತವರು ಮತ್ತು ಹೊರಗಿನ ತಾಣಗಳಲ್ಲಿ ಆಡಬೇಕು' ಎಂದು ಸಕ್ಲೇನ್ ಸವಾಲು ಹಾಕಿದ್ದಾರೆ.

ಬೆಂಗಳೂರು ಓಪನ್ ಟೆನಿಸ್: ಶಿಂಟಾರೊ ರನ್ನರ್ ಅಪ್

ಹೋಲ್ಟ್ ಸಿಂಗಲ್ಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರನೇ ಶ್ರೇಯಾಂಕದ ಬ್ರ್ಯಾಂಡನ್ ಹೋಲ್ಟ್ ಅವರು ಭಾನುವಾರ ಮುಕ್ತಾಯಗೊಂಡ ಬೆಂಗಳೂರು ಓಪನ್ ಎಟಿಪಿ 125 ಚಾಲೆಂಜರ್ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಕಬ್ಬನ್ ಪಾರ್ಕ್‌ನ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಕೋರ್ಟ್‌ನಲ್ಲಿ ನಡೆದ ಒಂಬತ್ತನೇ ಆವೃತ್ತಿಯ ಫೈನಲ್ ಹಣಾಹಣಿಯಲ್ಲಿ ಅಮೆರಿಕದ ಹೋಲ್ಟ್ 6-3, 6-3ರ ನೇರ ಸೆಟ್‌ಗಳಿಂದ ಏಳನೇ ಶ್ರೇಯಾಂಕದ ಶಿಂಟಾರೊ ಮೊಚಿಝುಕಿ ಅವರನ್ನು ಸೋಲಿಸಿದರು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿ ಟ್ರೇಸಿ ಆಸ್ಟಿನ್ ಅವರ ಪುತ್ರನಾಗಿರುವ ಹೋಲ್ಟ್ ಈ ಗೆಲುವಿನೊಂದಿಗೆ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ 111ನೇ ಸ್ಥಾನಕ್ಕೆ ಬಡ್ತಿ ಪಡೆದರು. ಟೂರ್ನಿಗೆ ಬರುವ ಮುನ್ನ 144ನೇ ಕ್ರಮಾಂಕ ಹೊಂದಿದ್ದರು.

ಕಳೆದ ವಾರ ಪುಣೆ ಓಪನ್‌ನಲ್ಲಿ ಫೈನಲ್ ತಲುಪಿದ್ದ ಹೋಲ್ಟ್ 7-6 (3), 6-1ರಿಂದ ಝೆಕ್ ಗಣರಾಜ್ಯದ ದಾಲಿಬೋರ್ ಸ್ವರ್ಸಿನಾ ವಿರುದ್ಧ ಮುಗ್ಗರಿಸಿದ್ದರು. ಅದಾದ ಒಂದೇ ವಾರದಲ್ಲಿ ಮತ್ತೊಂದು ಚಾಲೆಂಜರ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದಾರೆ. ಆಕರ್ಷಕ ಟ್ರೋಫಿಯೊಂದಿಗೆ ₹24.84 ಲಕ್ಷ ನಗದು ಬಹುಮಾನ ಮತ್ತು 125 ಎಟಿಪಿ ಅಂಕಗಳನ್ನು ಹೋಲ್ಟ್ ತಮ್ಮದಾಗಿಸಿಕೊಂಡರು. ರನ್ನರ್ ಅಪ್ ಜಪಾನ್‌ನ ಶಿಂಟಾರೊ ₹14.60 ಲಕ್ಷ ಮತ್ತು 75 ಎಟಿಪಿ ಅಂಕ ಗೆದ್ದರು. ಟೂರ್ನಿಯು ಒಟ್ಟು ₹1.73 ಕೋಟಿ ಬಹುಮಾನ ಮೊತ್ತ ಒಳಗೊಂಡಿತ್ತು.

26 ವರ್ಷ ವಯಸ್ಸಿನ ಹೋಲ್ಟ್ ಆಕರ್ಷಕ ಸರ್ವ್, ಉತ್ತಮವಾದ ಬ್ಯಾಕ್‌ಹ್ಯಾಂಡ್ ಮತ್ತು ಶರವೇಗದ ರಿಟರ್ನ್‌ಗಳ ಮೂಲಕ ಆರಂಭದಿಂದಲೇ ಹಿಡಿತ ಸಾಧಿಸಿದರು. 21 ವರ್ಷ ವಯಸ್ಸಿನ ಶಿಂಟಾರೊ ಸರ್ವ್‌ನಲ್ಲೇ ಪದೇ ಪದೇ ಎಡವಿದರು.

ಎರಡನೇ ಸೆಟ್ ವೇಳೆ ಒಂದು ಹಂತದಲ್ಲಿ ತಾಳ್ಮೆ ಕಳೆದುಕೊಂಡ ಅವರು ರಾಕೆಟ್ ಅನ್ನು ಕೋರ್ಟ್‌ನಲ್ಲೇ ಎಸೆದು ಹತಾಶೆ ವ್ಯಕ್ತಪಡಿಸಿದರು. ಜಪಾನ್ ಆಟಗಾರನಿಗೆ ಪ್ರೇಕ್ಷಕರ ಬೆಂಬಲ ಹೆಚ್ಚು ಲಭಿಸಿತ್ತಾದರೂ ಎದುರಾಳಿಯ ನಿಖರ ಆಟದ ಎದುರು ನಿರುತ್ತರರಾದರು.


ಚಾಂಪಿಯನ್ ಬ್ರ್ಯಾಂಡನ್ ಹೋಲ್ಟ್ (ಎಡ) ಮತ್ತು ರನ್ನರ್ ಅಪ್ ಶಿಂಟಾರೊ ಮೊಚಿಝುಕಿ
–ಪ್ರಜಾವಾಣಿ ಚಿತ್ರ: ಎಸ್‌ಕೆ. ದಿನೇಶ್

ಐಎಸ್‌ಎಲ್: ಬಿಎಫ್‌ಸಿ ಸೋಲು ತಪ್ಪಿಸಿದ ಚೆಟ್ರಿ

ಕೋಲ್ಕತ್ತ (ಪಿಟಿಐ): ನಾಯಕ ಸುನಿಲ್ ಚೆಟ್ರಿ ಕಾಲ್ಚಳಕದಿಂದಾಗಿ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ಸೋಲು ತಪ್ಪಿತು. ಈಸ್ಟ್ ಬೆಂಗಾಲ್ ಎದುರಿನ ಪಂದ್ಯವು 1–1ರಲ್ಲಿ ಡ್ರಾ ಆಯಿತು.

ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬೆಂಗಾಲ್ ತಂಡದ ರಫೇಲ್ ಮೆಸ್ಸಿ ಬೌಲಿ 11ನೇ ನಿಮಿಷದಲ್ಲಿ ಗೋಲು ಗಳಿಸಿದರು.

ನಂತರದ ಆಟದಲ್ಲಿ ಆತಿಥೇಯ ತಂಡದ ರಕ್ಷಣಾ ಪಡೆಯು ಬಿಎಫ್‌ಸಿಯ ದಾಳಿಯನ್ನು ಹಿಮ್ಮೆಟ್ಟಿಸಿತು. ಇದರಿಂದಾಗಿ 90 ನಿಮಿಷಗಳ ಅವಧಿಯಲ್ಲಿ ಬಿಎಫ್‌ಸಿಗೆ ಗೋಲು ಒಲಿಯಲಿಲ್ಲ. ಆದರೆ 90 + 1ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶದಲ್ಲಿ ಚೆಟ್ರಿ ಗೋಲು ಗಳಿಸಿದರು. ಇದರಿಂದಾಗಿ ಪಂದ್ಯ ಸಮವಾಯಿತು. ಅಂಕ ಪಟ್ಟಿಯಲ್ಲಿ ಬಿಎಫ್‌ಸಿ 3ನೇ ಸ್ಥಾನದಲ್ಲಿದೆ.

ವಿದರ್ಭ ತಂಡಕ್ಕೆ ₹3 ಕೋಟಿ ಬಹುಮಾನ

ನಾಗ್ಪುರ (ಪಿಟಿಐ): ಕೇರಳ ತಂಡವನ್ನು ಫೈನಲ್‌ನಲ್ಲಿ ಸೋಲಿಸಿ ಭಾನುವಾರ ರಣಜಿ ಟ್ರೋಫಿ ಗೆದ್ದ ವಿದರ್ಭ ತಂಡದ ಆಟಗಾರರಿಗೆ ವಿದರ್ಭ ಕ್ರಿಕೆಟ್ ಸಂಸ್ಥೆ ₹3 ಕೋಟಿ ಬಹುಮಾನ ಪ್ರಕಟಿಸಿದೆ. ನೆರವು ಸಿಬ್ಬಂದಿಗೆ ಪ್ರತ್ಯೇಕವಾಗಿ ನಗದು ಬಹುಮಾನ ಘೋಷಿಸಿದೆ. ಪ್ರಥಮ ದರ್ಜೆ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಅಕ್ಷಯ್ ವಾಖರೆ ಅವರನ್ನು ವಿದರ್ಭ ಕ್ರಿಕೆಟ್ ಸಂಸ್ಥೆ ಸನ್ಮಾನಿಸಿತು. ವಿದರ್ಭ ಮೂರನೇ ಬಾರಿ ರಣಜಿ ಟ್ರೋಫಿ ಗೆಲ್ಲುತ್ತಿದೆ. ಈ ಹಿಂದೆ 2017–18ರಲ್ಲಿ, 2018–19ರಲ್ಲಿ ಜಯಿಸಿತ್ತು. ಇದೇ ವೇಳೆ ಒಂದೇ ಋತುವಿನಲ್ಲಿ ಅತಿ ಹೆಚ್ಚು (69) ವಿಕೆಟ್ ಪಡೆದ ದಾಖಲೆಗೆ ಪಾತ್ರರಾದ ಹರ್ಷ ದುಬೆ ಅವರಿಗೆ ₹25 ಲಕ್ಷ ನಗದು ಬಹುಮಾನ ನೀಡಲಾಯಿತು. ಕರುಣ್ ನಾಯರ್ (53.93 ಸರಾಸರಿಯಲ್ಲಿ 863 ರನ್) ಮತ್ತು ಯಶ್ ರಾಥೋಡ್ (53.33 ಸರಾಸರಿಯಲ್ಲಿ 960 ರನ್) ಅವರಿಗೆ ತಲಾ 10 ಲಕ್ಷ ₹ ಬಹುಮಾನ ಹೆಚ್ಚುವರಿಯಾಗಿ ನೀಡಲಾಗಿದೆ.

ಯುಪಿ ವಾರಿಯರ್ಸ್‌ಗೆ ಜೈಂಟ್ಸ್ ಸವಾಲು ಇಂದು

ಲಖನೌ (ಪಿಟಿಐ): ಆಲ್‌ರೌಂಡರ್ ದೀಪ್ತಿ ಶರ್ಮಾ ನಾಯಕತ್ವದ ಯು.ಪಿ. ವಾರಿಯರ್ಸ್ ತಂಡವು ತನ್ನ ತವರಿನಂಗಳದಲ್ಲಿ ಜಯದ ಲಯಕ್ಕೆ ಮರಳುವ ಛಲದಲ್ಲಿದೆ.

ಸೋಮವಾರ ಇಲ್ಲಿ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ವಾರಿಯರ್ಸ್ ತಂಡವು ಗುಜರಾತ್ ಜೈಂಟ್ಸ್ ಬಳಗವನ್ನು ಎದುರಿಸಲಿದೆ.

ವಡೋದರಾದಲ್ಲಿ ನಡೆದಿದ್ದ ಟೂರ್ನಿಯ ಮೊದಲ ಸುತ್ತಿನಲ್ಲಿ ಉಭಯ ತಂಡಗಳು (ಫೆ.16ರಂದು) ಮುಖಾಮುಖಿಯಾಗದ್ದವು. ಅದರಲ್ಲಿ ಗುಜರಾತ್ ತಂಡವು 6 ವಿಕೆಟ್‌ಗಳಿಂದ ಜಯಿಸಿತ್ತು. ಅದರ ನಂತರದ ಪಂದ್ಯಗಳಲ್ಲಿ ಗುಜರಾತ್ ತಂಡವು ಸತತ ಸೋಲು ಅನುಭವಿಸಿತ್ತು. ಇದೀಗ ವಾರಿಯರ್ಸ್ ತಂಡಕ್ಕೆ ಗುಜರಾತ್ ಎದುರು ಮುಯ್ಯಿ ತೀರಿಸಿಕೊಳ್ಳುವ ಅವಕಾಶ ಒದಗಿಬಂದಿದೆ.


ಗುಜರಾತ್ ತಂಡವು ಈಚೆಗೆ ಬೆಂಗಳೂರಿನಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿಯನ್ನು ಸೋಲಿಸುವ ಮೂಲ ಕ ತನ್ನ ನಾಕೌಟ್ ಪ್ರವೇಶ ದ ಆಸೆಗೆ ಮರುಜೀವ ನೀಡಿತ್ತು. ಸದ್ಯ ಪಾಯಿಂಟ್ ಪಟ್ಟಿಯ ಕೊನೆಯ ಸ್ಥಾನದಲ್ಲಿರುವ ಆ್ಯಷ್ಲೆ ಗಾರ್ಡನರ್ ಬಳಗವು ತನ್ನ ಪಾಲಿನಲ್ಲಿ ಉಳಿದಿರುವ ಮೂರು ಪಂದ್ಯಗಳಲ್ಲಿಯೂ ಗೆದ್ದರೆ ನೌಕಾಟ್ ಅವಕಾಶ ಒಲಿ ಯುವ ಸಾಧ್ಯತೆ ಇದೆ.

ಅಂಕಪಟ್ಟಿಯಲ್ಲಿ ವಾರಿಯರ್ಸ್, ಆರ್‌ಸಿಬಿ ಮತ್ತು ಗುಜರಾತ್ ತಂಡ ಗಳು ತಲಾ 4 ಅಂಕ ಗಳನ್ನು ಪಡೆದಿವೆ.

ಗುಜರಾತ್ ತಂಡದಲ್ಲಿ ಗಾರ್ಡನರ್ ಅವರು ಬ್ಯಾಟಿಂಗ್ ವಿಭಾಗದ ಪ್ರಮುಖ ಶಕ್ತಿಯಾಗಿದ್ದಾರೆ. ಉಳಿದ ಬ್ಯಾಟರ್‌ಗಳು ಲಯಕ್ಕೆ ಮರಳಿದರೆ ಗೆಲುವು ಸುಲಭವಾಗಬಹುದು. ಬೌಲಿಂಗ್‌ನಲ್ಲಿ ದಿಯಾಂದ್ರ ಡಾಟಿನ್ ಅವರ ಮೇಲೆ ಹೆಚ್ಚಿನ ಹೊಣೆ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್


ದೀಪ್ತಿ ಶರ್ಮಾ


ಗಾರ್ಡನರ್

ಮಹಿಳಾ ಕ್ರಿಕೆಟ್: ದಾಖಲೆ ಬರೆದ ಬೆಂಗಳೂರು ಕ್ರಿಕೆಟ್ ಪ್ರೇಮಿಗಳು

ಡಬ್ಲ್ಯುಪಿಎಲ್ ಪಂದ್ಯಗಳಿಗೆ ಅಭಿಮಾನದ ಹೊಳೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಉದ್ಯಾನನಗರಿಯ ಕ್ರಿಕೆಟ್ ಪ್ರೇಮಿಗಳು ಈ ಬಾರಿಯ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಗೆ ಹೊಸ ರಂಗು ತುಂಬಿ ದರು. ಭಾರತದಲ್ಲಿಯೇ ಮಹಿಳಾ ಕ್ರಿಕೆಟ್ ಪಂದ್ಯಗಳಿಗೆ ಹಿಂದೆಂದೂ ಸಿಗದಷ್ಟು ಜನಪ್ರಿಯತೆ ತಂದುಕೊಟ್ಟಿದ್ದಾರೆ.

ಫೆಬ್ರುವರಿ 21 ರಿಂದ ಮಾರ್ಚ್ 1ರವರೆಗೆ ಇಲ್ಲಿ ನಡೆದ ಡಬ್ಲ್ಯುಪಿಎಲ್ ಟೂರ್ನಿಯ 8 ಪಂದ್ಯಗಳಿಗೂ ಜನರು ಕಿಕ್ಕಿರಿದು ಸೇರಿದ್ದರು. ಕೇವಲ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಆಡಿದ ಪಂದ್ಯಗಳಿಗಷ್ಟೇ ಅಲ್ಲ. ಬೇರೆ ತಂಡಗಳು ಮುಖಾಮುಖಿಯಾದಾಗಲೂ ಜನರು ಗ್ಯಾಲರಿಗಳಲ್ಲಿ ತುಂಬಿದ್ದರು. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಹಾಗೂ ಆರ್‌ಸಿಬಿ ಫ್ರ್ಯಾಂಚೈಸಿ ಮೂಲಗಳ ಪ್ರಕಾರ ಒಟ್ಟು 1.60 ಲಕ್ಷಕ್ಕೂ ಹೆಚ್ಚು ಮಂದಿ ಈ ಪಂದ್ಯಗಳನ್ನು ವೀಕ್ಷಿಸಿದ್ದಾರೆ.

ಪ್ರತಿದಿನ ರಾತ್ರಿ 7.30ಕ್ಕೆ ಆರಂಭವಾಗುತ್ತಿದ್ದ ಪಂದ್ಯ ವೀಕ್ಷಣೆಗಾಗಿ ಒಂದೂವರೆ ಗಂಟೆ ಮುಂಚಿತವಾಗಿಯೇ ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್‌ಗಳ ಮುಂದೆ ಸರದಿ ಸಾಲಿನಲ್ಲಿ ಜನರು ನಿಂತಿರುತ್ತಿದ್ದರು. ಅದರಲ್ಲಿ ಬಹುತೇಕರು ಆರ್‌ಸಿಬಿಯ ಜೆರ್ಸಿಗಳನ್ನು ಹಾಕಿಕೊಂಡು ಸಂಭ್ರಮಿಸುತ್ತಿದ್ದರು. ಹೀಗಾಗಿ ಇಡೀ ಕ್ರೀಡಾಂಗಣವೇ ಕೆಂಪುಮಯವಾಗಿರುತ್ತಿತ್ತು.

'ನಾವು ಈ ಬಾರಿ ಎರಡನೇ ಪಂದ್ಯ ವೀಕ್ಷಿಸಲು ಬರುತ್ತಿದ್ದೇವೆ. ಮೂರುವರೇ, ನಾಲ್ಕು ಗಂಟೆಗಳ ಮನರಂಜನೆ ಖಚಿತ. ಒಳಗಡೆ ಡಿಜೆ, ಸೆಲ್ಫಿ ಮತ್ತು ಪಾಪ್ ನೃತ್ಯ ತಂಡಗಳ ಪ್ರದರ್ಶನಗಳೂ ಇರುತ್ತವೆ. ಕಚೇರಿ ಕೆಲಸ ಮುಗಿದ ಮೇಲೆ ಮನೋಲ್ಲಾಸಕ್ಕಾಗಿ ಕ್ರಿಕೆಟ್ ಆಟವನ್ನು ನೋಡುವುದೇ ಮಜ. ಮೆಟ್ರೊ ಮತ್ತಿತರ ಸಾರಿಗೆಗಳೂ ಸಿಗುವುದರಿಂದ ಅನುಕೂಲ. ಆದರೆ ನಮ್ಮ ಆರ್‌ಸಿಬಿಯವರು ಗೆದ್ದರೆ ಹೆಚ್ಚು ಖುಷಿಯಾಗತ್ತೆ' ಎಂದು ಶನಿವಾರದ ಪಂದ್ಯ ವೀಕ್ಷಿಸಲು ಸಾಲಿನಲ್ಲಿದ್ದ ಕಾರ್ತಿಕ್ ಮತ್ತು ಸ್ನೇಹಿತರು ಅಭಿಪ್ರಾಯಪಟ್ಟರು.

ಈ ಬಾರಿ ಡಬ್ಲ್ಯುಪಿಎಲ್ ಪಂದ್ಯಗಳು ನಾಲ್ಕು ತಾಣಗಳಲ್ಲಿ ನಡೆಯುತ್ತಿವೆ. ಬೆಂಗಳೂರಿಗಿಂತ ಮೊದಲು ವಡೋದರಾದಲ್ಲಿ ಪಂದ್ಯಗಳು ನಡೆದಿದ್ದವು. ಆದರೆ ಅಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಜನರು ಇರಲಿಲ್ಲ.

'ನಮ್ಮೂರಿನ ಜನರ ಪ್ರೋತ್ಸಾಹವನ್ನು ನೋಡಿ ಪುಳಕಿತಗೊಂಡಿದ್ದೇನೆ. ಆದರೆ ಅವರ ಮುಂದೆ ನಾನು ಕಣಕ್ಕಿಳಿದು ಆಡಲಾಗುತ್ತಿಲ್ಲ ಎನ್ನುವ ದುಃಖ ಕಾಡುತ್ತಿದೆ. ಇಂತಹ ಪರಿಸ್ಥಿತಿಯನ್ನು ಎದುರಿಸುವುದು ಎಷ್ಟು ಕಷ್ಟ ಎಂಬುದನ್ನು ಹೇಳಲು ನನ್ನಲ್ಲಿ ಪದಗಳಿಲ್ಲ. ಐ ಎಲ್ ಯೂ ಬೆಂಗಳೂರು' ಎಂದು ಆರ್‌ಸಿಬಿ ತಂಡದ ಆಟಗಾರ್ತಿ, ಬೆಂಗಳೂರಿನ ಶ್ರೇಯಾಂಕಾ ಪಾಟೀಲ ಇನ್ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಹಾಕಿದ್ದಾರೆ. ಅವರು ಗಾಯದಿಂದಾಗಿ ಈ ಬಾರಿ ಡಬ್ಲ್ಯುಪಿಎಲ್‌ನಲ್ಲಿ ಆಡುತ್ತಿಲ್ಲ. ಹೋದ ಬಾರಿ ಆರ್‌ಸಿಬಿ ಚಾಂಪಿಯನ್ ಆಗುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಕಳೆದ ಆವೃತ್ತಿಯ ಪಂದ್ಯಗಳು ಇಲ್ಲಿ ನಡೆದಿದ್ದವು. ಆದರೆ ಆಗ ಇಷ್ಟೊಂದು ಸಂಖ್ಯೆಯಲ್ಲಿ ಜನರು ಸೇರಿರಲಿಲ್ಲ.

'ಬೆಂಗಳೂರಿನ ಕ್ರಿಕೆಟ್‌ಪ್ರೇಮಿಗಳ ವೈಶಿಷ್ಟವೇ ಅಂತಹದ್ದು. ಆಟವನ್ನು ಪ್ರೀತಿಸುತ್ತಾರೆ. ಎರಡೂ ತಂಡಗಳನ್ನು ಹುರಿದುಂಬಿಸುತ್ತಾರೆ. ಡಬ್ಲ್ಯುಪಿಎಲ್‌ಗೆ ಈ ಮಟ್ಟದಲ್ಲಿ ಜನ ಸೇರಿದ್ದು ದಾಖಲೆ. ಮಹಿಳಾ ಕ್ರಿಕೆಟ್ ಬಗ್ಗೆ ಜನರಲ್ಲಿ ಪ್ರೀತಿ ಹೆಚ್ಚುತ್ತಿರುವುದರ ಶುಭಸಂಕೇತ ಇದು. ಆರ್‌ಸಿಬಿ ಫ್ರ್ಯಾಂಚೈಸಿ ಜನಪ್ರಿಯತೆಯೂ ಇದಕ್ಕೆ ಕಾರಣ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ್ ಭಟ್ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಬಾರಿ ಡಬ್ಲ್ಯುಪಿಎಲ್ ಪಂದ್ಯಗಳಿಗೆ ₹ 100ರಿಂದ ₹ 400ರವರೆಗೂ ಇದ್ದವು ಎಂದು ಮೂಲಗಳು ತಿಳಿಸಿವೆ.

'ಟಿಕೆಟ್ ದರ ಮತ್ತು ಮಾರಾಟಗಳೆಲ್ಲವನ್ನೂ ಆರ್‌ಸಿಬಿ ಫ್ರ್ಯಾಂಚೈಸಿಯೇ ನೋಡಿಕೊಳ್ಳುತ್ತದೆ. ನಾವೇನಿದ್ದರೂ ಮೈದಾನ ಮತ್ತು ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆ. ಅದಕ್ಕಾಗಿ ಫ್ರ್ಯಾಂಚೈಸಿಯಿಂದ ಭಾಡಿಗೆ ಪಡೆಯುತ್ತೇವೆ. ಐಪಿಎಲ್ ಮತ್ತು ಡಬ್ಲ್ಯುಪಿಎಲ್‌ಗಳಿಗೆ ದರ ಬೇರೆ ಬೇರೆ ಇದೆ' ಎಂದೂ ರಘುರಾಮ್ ಭಟ್ ತಿಳಿಸಿದರು.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂ ಪಿಎಲ್) ಬೆಂಗಳೂರು ರಾಯಲ್ ಚಾಲೆಂಜರ್ಸ್ ಪಂದ್ಯ ವೀಕ್ಷಿಸಲು ಸೇರಿದ್ದ ಜನರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಡಬ್ಲ್ಯುಪಿಎಲ್: ಬೆಂಗಳೂರಿನಲ್ಲಿ ವೀಕ್ಷಿಸಿದ ಪ್ರೇಕ್ಷಕರ ಸಂಖ್ಯೆ

ದಿನಾಂಕ	ಪಂದ್ಯ	ಪ್ರೇಕ್ಷಕರ ಸಂಖ್ಯೆ
ಫೆ.21	ಆರ್‌ಸಿಬಿ–ಮುಂಬೈ	25,397
ಫೆ.22	ಡೆಲ್ಲಿ–ವಾರಿಯರ್ಸ್	18,548
ಫೆ.24	ಆರ್‌ಸಿಬಿ–ವಾರಿಯರ್ಸ್	24,376
ಫೆ.25	ಡೆಲ್ಲಿ–ಜೈಂಟ್ಸ್	10,219
ಫೆ.26	ಮುಂಬೈ–ವಾರಿಯರ್ಸ್	13,476
ಫೆ.27	ಆರ್‌ಸಿಬಿ–ಜೈಂಟ್ಸ್	24,450
ಫೆ.28	ಡೆಲ್ಲಿ–ಮುಂಬೈ	21,134
ಮಾ.1	ಆರ್‌ಸಿಬಿ–ಡೆಲ್ಲಿ	25,012

ಯೂಕಿ–ಅಲೆಕ್ಸಿ ಜೋಡಿಗೆ ಕಿರೀಟ

ದುಬೈ (ಪಿಟಿಐ): ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ಯೂಕಿ ಭಾಂಬ್ರಿ ಅವರು ಆಸ್ಟ್ರೇಲಿಯಾದ ಜೊತೆಗಾರ ಅಲೆಕ್ಸಿ ಪಾಪಿರಿನ್ ಅವ ರೊಂದಿಗೆ ದುಬೈ ಓಪನ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಡಬಲ್ಸ್ ಕಿರೀಟ ಮುಡಿಗೇರಿಸಿಕೊಂಡರು.

ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ಶ್ರೇಯಾಂಕರಹಿತ ಭಾರತ–ಆಸ್ಟ್ರೇಲಿಯನ್ ಜೋಡಿಯು 3-6, 7-6(12), 10-8ರ ಮೂರು ಸೆಟ್‌ಗಳ ರೋಚಕ ಹೋರಾಟದಲ್ಲಿ ಎರಡನೇ ಶ್ರೇಯಾಂಕದ ಹ್ಯಾರಿ ಹೆಲಿಯೊವಾರಾ ಮತ್ತು ಹೆನ್ರಿ ಪ್ಯಾಟನ್ ಅವರನ್ನು ಮಣಿಸಿತು.

32 ವರ್ಷ ವಯಸ್ಸಿನ ಯೂಕಿಗೆ ಇದು ಚೊಚ್ಚಲ ಎಟಿಪಿ 500 ಪ್ರಶಸ್ತಿಯಾಗಿದೆ. ಈ ಗೆಲುವಿನೊಂದಿಗೆ ಯೂಕಿ– ಅಲೆಕ್ಸಿ ಜೋಡಿಯು ಎಟಿಪಿ ರ‍್ಯಾಂಕಿಂ ಗ್‌ನಲ್ಲಿ ಜೀವನಶ್ರೇಷ್ಠ 40ನೇ ಸ್ಥಾನಕ್ಕೆ ಬಡ್ತಿ ಪಡೆಯಿತು.

ಗ್ರೀಸ್‌ನ ಸ್ಟಿಫಾನೊಸ್ ಸಿಟ್ಸಿಪಾಸ್ 6-3, 6-3ರಿಂದ ಕೆನಡಾದ ಫೆಲಿಕ್ಸ್ ಆಗರ್ ಅಲಿಸಿಮೆ ಅವರನ್ನು ಸೋಲಿಸಿ ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.


ಪ್ರಶಸ್ತಿಯೊಂದಿಗೆ ಭಾರತದ ಯೂಕಿ ಭಾಂಬ್ರಿ ಮತ್ತು ಆಸ್ಟ್ರೇಲಿಯಾದ ಅಲೆಕ್ಸಿ ಪಾಪಿರಿನ್ –ಎಕ್ಸ್ ಚಿತ್ರ

ರಿತ್ವಿಕ್– ನಿಕೋಸ್ ಜೋಡಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ರಿತ್ವಿಕ್ ಚೌಧರಿ ಬೊಲ್ಲಿಪಳ್ಳಿ ಮತ್ತು ಕೊಲಂಬಿಯಾದ ನಿಕೋಸ್ ಬ್ಯಾರಿಂಟೋಸ್ ಜೋಡಿ ಚಿಲಿ ಓಪನ್ ಎಟಿಪಿ 250 ಟೆನಿಸ್ ಟೂರ್ನಿಯ ಡಬಲ್ಸ್ ಫೈನಲ್‌ನಲ್ಲಿ 6-3 6-2ರಿಂದ ಮ್ಯಾಕ್ಸಿಮೊ ಗೊನ್ಜಾಲೆಜ್ ಮತ್ತು ಆ್ಯಂಡ್ರೆಸ್ ಮೊಲ್ಟೆನಿ (ಅರ್ಜೆಂಟೀನಾ) ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು.

ಪ್ರಜ್ಞಾನಂದಗೆ ಸತತ 2ನೇ ಗೆಲುವು

ಪ್ರಾಗ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಸತತ ಎರಡನೇ ಗೆಲುವಿನೊಂದಿಗೆ ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ನಂತರ ಸ್ವದೇಶದ ಅರವಿಂದ ಚಿದಂಬರಮ್ ಅವರೊಂದಿಗೆ ಅಗ್ರಸ್ಥಾನವನ್ನು ಹಂಚಿಕೊಂಡರು.



ಈ ಟೂರ್ನಿಯನ್ನು ಗೆಲ್ಲುವ ನೆಚ್ಚಿನ ಆಟಗಾರ ಎನಿಸಿರುವ 19 ವರ್ಷ ವಯಸ್ಸಿನ ಪ್ರಜ್ಞಾನಂದ, ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ (2) ಅವರನ್ನು ಮಣಿಸಿ ಒಟ್ಟು 3 ಅಂಕಗಳನ್ನು ಸಂಗ್ರಹಿಸಿದರು.

ಅರವಿಂದ (3) ಅವರು ಅಮೆರಿಕದ ಸ್ಯಾಮ್ ಶಂಕ್ಲಾಂಡ್ (2) ಅವರೊಂದಿಗೆ ಡ್ರಾಗೆ ಸಮ್ಮತಿಸುವ ಮುನ್ನ ಆತಂಕದ ಕ್ಷಣವನ್ನು ಎದುರಿಸಿದರು. ಅಗ್ರಶ್ರೇಯಾಂಕದ ಚೀನಾದ ವೀ ಯಿ (1.5) ಅವರು ಝೆಕ್ ಗಣರಾಜ್ಯದ ಡೇವಿಡ್ ನವಾರ (1.5) ಅವರನ್ನು ಸೋಲಿಸುವ ಮೂಲಕ ಗೆಲುವಿನ ಹಳಿಗೆ ಮರಳಿದರು. ನೆದರ್ಲೆಂಡ್ಸ್‌ನ ಅನೀಶ್ ಗಿರಿ (2) ಟರ್ಕಿಯ ಗುರೆಲ್ ಎಡಿಝ್ (2) ಅವರೊಂದಿಗೆ ಡ್ರಾ ಮಾಡಿಕೊಂಡರು. ಝೆಕ್ ಗಣರಾಜ್ಯದ ಗುಯೆನ್ ಥಾಯ್ ವಾನ್ (1.5) ಅವರು ವಿಯೆಟ್ನಾಂನ ಕ್ವಾಂಗ್ ಲೀಮ್ ಲೆ (2) ಜೊತೆ ಪಾಯಿಂಟ್ಸ್ ಹಂಚಿಕೊಂಡರು.